ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮತ್ತೆ ಬಂದ ಸಾಂಟಾ ಕ್ಲಾಸ್

ಕ್ರಿಸ್‌ಮಸ್‌ಗೆ ಪೂರ್ವಭಾವಿಯಾಗಿ ಮಧ್ಯಪ್ರದೇಶದ ಜಬಲ್‌ಪುರದಲ್ಲಿ ಮಹಿಳೆಯೊಬ್ಬರು ಶನಿವಾರ ಸಾಂಟಾ ಕ್ಲಾಸ್ ಮುಖವಾಡಗಳ ಮಾರಾಟದಲ್ಲಿ ನಿರತರಾಗಿದ್ದರು

ನೆಚ್ಚಿನ ಲೇಖಕರ ಹಸ್ತಾಕ್ಷರ, ಸೆಲ್ಫಿ ಪಡೆದು ಸಂಭ್ರಮಿಸಿದ ಆಸಕ್ತರು • ವರ್ಚುವಲ್ ಆಗಿ ನಡೆದ ಕೆಲವು ಗೋಷ್ಠಿಗಳು

ಸಾಹಿತ್ಯದ ಹೊನಲಿನಲ್ಲಿ ಚಿಂತನೆಗಳ ಹಾಯಿದೋಣಿ

• ಅಭಿಲಾಷಾ ಬಿ.ಸಿ.

ಬೆಂಗಳೂರು: ಭಾಷೆ, ವಿಜ್ಞಾನ, ಸಿನಿಮಾ, ರಾಜಕೀಯ, ವಾಸ್ತುಶಿಲ್ಪ, ನೃತ್ಯ... ಜನರ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಹತ್ತು ಹಲವು ವಿಚಾರಗಳ ಮರುಚಿಂತನೆಯೇ ಇಲ್ಲಿ ನಡೆಯಿತು. ಒಂದೊಂದು ಗೋಷ್ಠಿಯೂ ಸಾಹಿತ್ಯ ಹೊನಲಿನಲ್ಲಿ ಹರಿದು ಬಂದ ಚಿಂತನೆಗಳ ಹಾಯಿದೋಣಿಗಳಂತಿದ್ದವು.

ದೊಮ್ಮಲೂರಿನ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಶನಿವಾರ ಆರಂಭವಾದ ಬೆಂಗಳೂರು ಸಾಹಿತ್ಯ ಉತ್ಸವ ವಿವಿಧ ಕ್ಷೇತ್ರಗಳ ಹೊಸ ಬೆಳವಣಿಗೆಗಳತ್ತ ಬೆಳಕು ಚೆಲ್ಲುವ ಮೂಲಕ ಜಿಜ್ಞಾಸುಗಳ ಮನಸುಗಳಲ್ಲಿ ಹೊಸತನದ ಸಿಂಚನಕ್ಕೆ ಬೀಜವು ಮಾಡಿತು.

ಬಹುತೇಕ ಸಂವಾದಗಳಲ್ಲಿ ಲೇಖಕರು ನೇರವಾಗಿ ಪಾಲ್ಗೊಂಡರೆ, ಇನ್ನು ಕೆಲವು ಗೋಷ್ಠಿಗಳು ವರ್ಚುವಲ್ ರೂಪದಲ್ಲಿ, ಮತ್ತೆ ಕೆಲವು ಮಿಶ್ರ ರೂಪದಲ್ಲಿ ನಡೆದವು. ಆದರೆ, ಉತ್ಸವಕ್ಕೆ ಭೇಟಿ ನೀಡಿದವರಿಗೆಲ್ಲ ಅವುಗಳನ್ನು ವೀಕ್ಷಿಸುವ ಅವಕಾಶವಿತ್ತು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ದಾಮೋದರ್ ಮೌಜೊ ಅವರು ಸೇರಿದಂತೆ ಅನೇಕ ಖ್ಯಾತ ಸಾಹಿತಿಗಳ ಹಾಗೂ ಉದಯೋನ್ಮುಖ ಬರಹಗಾರರ ಜೊತೆ ಮಾತನಾಡುವ ಹಾಗೂ ಅವರ ಜೊತೆ ಒಂದು ಸೆಲ್ಫಿ ತೆಗೆಸಿಕೊಳ್ಳುವ ಅವಕಾಶವನ್ನು ಈ ಸಾಹಿತ್ಯ ಜಾತ್ರೆ ಒದಗಿಸಿತು.

ಸಾಹಿತ್ಯ ಉತ್ಸವದಲ್ಲಿ ಪಾಲ್ಗೊಂಡಿದ್ದ ಅನೇಕರು ನೆಚ್ಚಿನ ಲೇಖಕ, ಲೇಖಕಿಯನ್ನು ಕಣ್ತುಂಬಿಕೊಳ್ಳುವ ಕಾತರದಲ್ಲಿದ್ದರು. ಸಂವಾದ ಮುಗಿಸಿ ಲೇಖಕರು ಹೊರಬರುತ್ತಿದ್ದಂತೆ ಪುಸ್ತಕಗಳಿಗೆ ಲೇಖಕರ ಹಸ್ತಾಕ್ಷರ ಪಡೆದು, ಜೊತೆಗೊಂದು ಸೆಲ್ಫಿ ಕ್ಲಿಕ್ಕಿಸಿ ಸಂಭ್ರಮಿಸಿದರು.

ನಗರದ ವಿವಿಧ ಕಾಲೇಜುಗಳ ಅನೇಕ ವಿದ್ಯಾರ್ಥಿಗಳು ಪಾಲ್ಗೊಂಡು, ವಾರಾಂತ್ಯದಲ್ಲಿ ಸಾಹಿತ್ಯದ ಸಂವಾದಗಳಿಗೆ ಕಿವಿಯಾದರು. ಯುವಜನರ ಪಾಲ್ಗೊಳ್ಳುವಿಕೆಯಿಂದಾಗಿ ಉತ್ಸವದಲ್ಲಿ ಹೊಸ ಹುರುಪು ಮೂಡಿತ್ತು.

ಸಾಹಿತ್ಯಾಸಕ್ತರಿಗೆ ಪುಸ್ತಕಗಳ ಖರೀದಿಗೂ ಭರಪೂರ ಆಯ್ಕೆಗಳಿತ್ತು. ನಾಡಿನ ವಿವಿಧ ಲೇಖಕರ ಪುಸ್ತಕಗಳು ಮಾರಾಟಕ್ಕಿದ್ದವು. ಉತ್ಸವದಲ್ಲಿ ಪಾಲ್ಗೊಂಡವರು ಆಸ್ಥೆಯಿಂದಲೇ ಪುಸ್ತಕಗಳತ್ತ ಕಣ್ಣು ಹಾಯಿಸಿದರು. ಇಷ್ಟದ ಹೊತ್ತಿಗೆಗಾಗಿ ಹುಡುಕಾಡಿದರು. ಮಕ್ಕಳಿಗೆ ಇಷ್ಟವಾಗುವ ಪುಸ್ತಕಗಳಿಗೂ ಕೊರತೆ ಇರಲಿಲ್ಲ.

ಉತ್ಸವದ ಗೋಷ್ಠಿಯಲ್ಲಿ ಪಾಲ್ಗೊಂಡಿದ್ದ ಸಾಹಿತ್ಯ ಆಸಕ್ತರು —ಪ್ರಜಾವಾಣಿ ಚಿತ್ರ

ಸಿನಿಮಾದಲ್ಲಿ ಅರಳಿದ ಸೃಜನಶೀಲತೆ

ಬೆಂಗಳೂರು: ಸಿನಿಮಾ ಕ್ಷೇತ್ರದ ಸೃಜನಶೀಲತೆ, ಕಲಾತ್ಮಕತೆ ಜಾಗೃತಗೊಂಡಿದೆ. ಸಿನಿ ಪ್ರೇಕ್ಷಕರು ತಮ್ಮ ಆಯ್ಕೆಯನ್ನು ಗಟ್ಟಿದನಿಯಲ್ಲಿ ಹೇಳುತ್ತಿದ್ದಾರೆ. ತಾರಪಟ್ಟಗಳು ಹುಸಿಯಾಗಿವೆ. ನಿಜದ ನಾಯಕರ ಪರಿಚಯವಾಗಿದೆ. ಕೋವಿಡೋತ್ತರ ಕಾಲ ಚಿತ್ರ ಜಗತ್ತಿಗೆ ಬಹಳಷ್ಟನ್ನು ಕಲಿಸಿದೆ...

‘ಲೈಟ್ಸ್ ಕ್ಯಾಮೆರಾ ಕೋವಿಡ್’ ಕುರಿತ ಸಂವಾದದಲ್ಲಿ ಚರ್ಚೆಯಾದ ಸಂಗತಿಗಳಿವು.

ಸಿನಿಮಾ ಕ್ಷೇತ್ರದಲ್ಲಿ ಸೃಜನಾತ್ಮಕತೆ ಎಚ್ಚರಗೊಂಡಿದೆ ಎಂದು ಪ್ರತಿಪಾದಿಸಿದ ಲೇಖಕಿ ಗೀತಾ ಅರವಮುದನ್ ಅದಕ್ಕೆ ಪೂರಕವಾಗಿ ಮಲೆಯಾಳಂನ ‘ಸೀ ಯೂ ಸೂನ್’ ಚಿತ್ರದ ನಿದರ್ಶನ ನೀಡಿದರು.

ಓವರ್ ದಿ ಟಾಪ್ (ಒಟಿಟಿ) ಎಲ್ಲರಿಗೂ ಅವಕಾಶಗಳನ್ನ ನೀಡಿದೆ. ಮಹಿಳೆಯರು ಸೇರಿದಂತೆ ಹೊಸಬರಿಗೆ ಅವಕಾಶಗಳ ಬಾಗಿಲನ್ನೇ ತೆರೆದಿಟ್ಟಿದೆ. ಒಟಿಟಿ ಗಟ್ಟಿಯಾಗಿ ನೆಲೆಯೂರಲು ಕೋವಿಡ್ ಕಾಲ ನೆರವಾಗಿದೆ. ಅದು ಕೋವಿಡ್ ನಂತರದಲ್ಲೂ ಬಲವಾಗಿ ಬೇರೂರಲಿದೆ ಎಂದರು.

ಕೋವಿಡ್ ಹಾಗೂ ಲಾಕ್‌ಡೌನ್ ಜನರನ್ನು ಮಾನಸಿಕವಾಗಿ ಬಹಳಷ್ಟು ಕುಗ್ಗಿಸಿದೆ. ಅದರ ಜೊತೆಗೆ ಬದುಕಿನ ಸೌಂದರ್ಯ ಹಾಗೂ ಮೌಲ್ಯವನ್ನೂ ತಿಳಿಸಿದೆ. ಅದು ಸಿನಿಮಾ ಕ್ಷೇತ್ರವನ್ನೂ ಪ್ರಭಾವಿಸಿದೆ ಎಂದು ನಿರ್ಮಾಪಕ ಹಾಗೂ ಲೇಖಕ ಮನೀಶ್ ಮುಂದ್ರಾ ಪ್ರತಿಪಾದಿಸಿದರು.

ಕೋವಿಡೋತ್ತರ ಕಾಲ ಸಿನಿಮಾ ನೋಡುಗರನ್ನು ಸಾಕಷ್ಟು ಬದಲಾಯಿಸಿದೆ. ಎಲ್ಲವನ್ನು ಒಪ್ಪಿಕೊಳ್ಳುವ ಮನಸ್ಥಿತಿಯಿಂದ ಹೊರಬಂದು ತಮ್ಮ ಆಯ್ಕೆಯನ್ನು ಗಟ್ಟಿ ನಿಲುವಿನೊಂದಿಗೆ ಹೇಳುವ ದಿಟ್ಟತನ ಪ್ರದರ್ಶಿಸುತ್ತಿದ್ದಾರೆ ಎಂದರು.

ಕೊರೊನಾ ಕಾಲಘಟ್ಟದಲ್ಲಿ ಈಗಿನ ಪೀಳಿಗೆ ಸಾವಿಗೆ ಹತ್ತಿರವಾಗಿ ಹೊರಬಂದಿದೆ. ಪ್ರೀತಿಪಾತ್ರರ ಸಾವಿನಲ್ಲೂ ಏನು ಮಾಡಲಾಗದ ಸ್ಥಿತಿ ಸಾಕಷ್ಟು ಬದಲಾವಣೆಗಳಿಗೆ ಪ್ರೇರಕವಾಗಿದೆ. ತಾರಪಟ್ಟಗಳ ಭ್ರಮೆಯಿಂದ ಹೊರ ಬಂದಿದ್ದಾರೆ. ತೆರೆಯ ಹೀರೊಗಳು ನಿಜದ ನಾಯಕರಲ್ಲ ಎಂಬ ವಾಸ್ತವ ಅರಿತಿದ್ದಾರೆ. ಈ ಬೆಳವಣಿಗೆಗಳು ಚಲನಚಿತ್ರ ಕ್ಷೇತ್ರದಲ್ಲಿ ವಿಷಯಾಧಾರಿತ ಸಿನಿಮಾಗಳಿಗೆ ವೇದಿಕೆ ಕಲ್ಪಿಸಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಚಿತ್ರ ನಿರ್ದೇಶಕ ಹಾಗೂ ನಿರ್ಮಾಪಕ ನಿರಂಜನ್ ತಾಡೆ ಮಾತನಾಡಿ, ಚಿತ್ರಮಂದಿರಗಳಲ್ಲಿ ಒಟ್ಟಾಗಿ ಕುಳಿತು ಸಿನಿಮಾ ನೋಡುವ ಸಂಸ್ಕೃತಿಯನ್ನು ಕೊರೊನಾ ಕಾಲಘಟ್ಟ ಕಣ್ಮರೆಯಾಗಿಸಿದೆ. ಇದರಿಂದಾಗಿ ಸಿನಿಮಾ ನೋಡುವಾಗಿನ ಸಾಮಾಜಿಕ ಸಾಧ್ಯತೆಗಳು ದೂರವಾಗಿವೆ. ಮನೆಯ ಟಿವಿ ಪರದೆಗಳು ಹಿಗ್ಗಿವೆ. ಅದೇ ವೇಳೆ ಚಿತ್ರಮಂದಿರದ ಪರದೆ ಕುಗ್ಗಿದೆ ಎಂದರು.

‘ಪ್ರತಿ ಕೃತಿಯಲ್ಲೂ ಹೊಸತನಕ್ಕೆ ಯತ್ನ’

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ‘ಪ್ರತಿ ಬಾರಿ ಬರೆಯುವಾಗ ಮೊದಲ ಕೃತಿ ಬರೆಯುತ್ತಿದ್ದೇನೆ ಎಂದೇ ಭಾವಿಸಿಕೊಳ್ಳುತ್ತೇನೆ. ಬದಲಾಗುತ್ತಿರುವ ಕಾಲಘಟಕ್ಕೆ ತಕ್ಕಂತೆ ಅಧ್ಯಯನ ನಡೆಸಿದಾಗ ಮಾತ್ರ ಹೊಸತನದ ಕೃತಿಗಳನ್ನು ರಚಿಸಲು ಸಾಧ್ಯ...’

ಚೇತನ್ ಭಗತ್

ಬೆಂಗಳೂರು ಸಾಹಿತ್ಯ ಉತ್ಸವದ ಮೊದಲ ದಿನವಾದ ಶನಿವಾರ ಕೃತಿಗಳ ರಚನೆ ಮತ್ತು ವ್ಯಕ್ತಿತ್ವ ಕುರಿತು ತಮ್ಮದೇ ಆದ ಶೈಲಿಯಲ್ಲಿ ಅನುಭವಗಳನ್ನು ಹಂಚಿಕೊಂಡ ಲೇಖಕ ಚೇತನ್ ಭಗತ್ ಅವರು, ‘ಬರೆಯುವುದು ಸುಲಭದ ಕೆಲಸ ಅಲ್ಲ. ಆದರೆ, ಬರವಣಿಗೆಯಿಂದಲೇ ಹೆಚ್ಚು ಜನರನ್ನು ತಲುಪಲು ನನಗೆ ಸಾಧ್ಯವಾಗಿದೆ’ ಎಂದು ವಿವರಿಸಿದರು.

ಯುವಕರು ನಿಮ್ಮ ಕೃತಿಗಳನ್ನು ಏಕೆ ಹೆಚ್ಚು ಇಷ್ಟಪಡುತ್ತಾರೆ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, ‘ನಾನು ಯುವಕನಿದ್ದೇನೆ. ಹೀಗಾಗಿ, ಇಷ್ಟಪಡುತ್ತಾರೆ. ಯುವ ಸಮುದಾಯಕ್ಕೆ ಸಂಬಂಧಿಸಿದ ವಿದ್ಯಮಾನಗಳನ್ನು ತಿಳಿದುಕೊಂಡು ಪುಸ್ತಕಗಳಲ್ಲಿ ಉಲ್ಲೇಖಿಸುತ್ತೇನೆ. ಆಧುನಿಕ ತಂತ್ರಜ್ಞಾನದ ವಿಷಯಗಳನ್ನು ಸಹ ಬಳಸಿಕೊಳ್ಳುತ್ತೇನೆ. ಬದಲಾವಣೆಗಳನ್ನು ಗಮನದಲ್ಲಿರಿಸಿಕೊಂಡು ಯುವ ಮನಸ್ಸುಗಳನ್ನು ತಲುಪುವ ಪ್ರಯತ್ನ ಮಾಡುತ್ತೇನೆ’ ಎಂದು ವಿವರಿಸಿದರು.

‘ಎಲ್ಲರ ಗಮನಸೆಳೆಯುವ ಪ್ರಯತ್ನ ಮಾಡುವುದೇ ಇಂದು ಪ್ರಾಮುಖ್ಯತೆ ಪಡೆಯುತ್ತಿದೆ. ಇದಕ್ಕೆ ಸಾಮಾಜಿಕ ಮಾಧ್ಯಮಗಳು ವೇದಿಕೆಯಾಗಿವೆ. ಪುಸ್ತಕಗಳು ಸಹ ಗಮನಸೆಳೆಯುವಂತಾಗಬೇಕು. ಉತ್ತಮ ಪುಸ್ತಕಗಳು ಹೊಸ ಕಲ್ಪನಾ ಲೋಕಕ್ಕೆ ಕೊಂಡೊಯ್ಯುತ್ತವೆ’ ಎಂದು ಹೇಳಿದರು.

‘ಪುಸ್ತಕಗಳು ಎಂದಿಗೂ ನಶಿಸಲು ಸಾಧ್ಯವಿಲ್ಲ. ಪುಸ್ತಕಗಳ ಸ್ಥಾನವನ್ನು ಯಾವುದೇ ರೀತಿಯ ಅತ್ಯಾಧುನಿಕ ಡಿಜಿಟಲ್ ಸಾಧನಗಳು ಭರ್ತಿ ಮಾಡಲು ಸಾಧ್ಯವಿಲ್ಲ’ ಎಂದರು.

ವ್ಯಕ್ತಿತ್ವ ವಿಕಸನ ಕುರಿತು ಮಾತನಾಡಿದ ಅವರು, ‘ಮೊದಲು ನಿಮ್ಮನ್ನು ನೀವು ಪ್ರೀತಿಸಿಕೊಳ್ಳಿ. ನೀವು ಸಂತೋಷವಾಗಿದ್ದರೆ ಮಾತ್ರ ಇತರರನ್ನು ಸಂತೋಷವಾಗಿರಿಸಲು ಸಾಧ್ಯ’ ಎಂದರು.

ಸುದ್ದಿ 2 ನಿಮಿಷ

ಬರಹಗಾರ–ಅಂತರಂಗದಲ್ಲಿ ಹೋರಾಟಗಾರ: ದಾಮೋದರ್

ಬೆಂಗಳೂರು: ‘ಬರಹಗಾರ ಎಂದರೆ ಅಂತರಂಗದಲ್ಲಿ ಅವನೊಬ್ಬ ಹೋರಾಟಗಾರ. ಅದೇ ರೀತಿ ನಾನು ಸಹ ಬರಹದ ಮೂಲಕ ಜನ ಸಾಮಾನ್ಯರ ಧ್ವನಿಯಾಗಿರುತ್ತೇನೆ’ ಎಂದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಗೋವಾದ ಕೊಂಕಣಿ ಸಾಹಿತಿ ದಾಮೋದರ್ ಮೌಜೊ ಅಭಿಪ್ರಾಯಪಟ್ಟರು.

‘ಕೊಂಕಣಿ; ಒಂದು ಭಾಷೆ ಹಲವು ಲಿಪಿ’ ಗೋಷ್ಠಿಯಲ್ಲಿ ವರ್ಚುವಲ್ ರೂಪದಲ್ಲಿ ಪಾಲ್ಗೊಂಡ ಅವರು, ‘ಸಾಮಾನ್ಯ ಜನರು ಸಹ ಪ್ರಭುತ್ವದ ತಪ್ಪುಗಳ ವಿರುದ್ಧ ದನಿ ಎತ್ತಬೇಕು’ ಎಂದರು.

‘ಜ್ಞಾನಪೀಠ ಪ್ರಶಸ್ತಿ ದೊರೆತಾಗ ಮುಖ್ಯಮಂತ್ರಿಯೇ ನನ್ನ ಮನೆಗೆ ಬಂದು ಅಭಿನಂದಿಸಿದ್ದರು. ಅಷ್ಟು ಮಾತ್ರಕ್ಕೆ ಸರ್ಕಾರದ ತಪ್ಪುಗಳ ವಿರುದ್ಧ ಮಾತನಾಡದಿರಲು ಆಗುವುದಿಲ್ಲ’ ಎಂದು ಹೇಳಿದರು.

‘ಕೊಂಕಣಿಯನ್ನು ಗೋವಾ ಸರ್ಕಾರ ರಾಜ್ಯದ ಅಧಿಕೃತ ಭಾಷೆ ಎಂದು 1996–97ರಲ್ಲಿ ಘೋಷಿಸಿದೆ. ಗೋವಾ, ಕೇರಳ, ಕರ್ನಾಟಕ ಹಾಗೂ ಇತರ ರಾಜ್ಯಗಳಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಪದಗಳ ಅರ್ಥದಲ್ಲಿ ವ್ಯತ್ಯಾಸವಿದೆ. ಭಾಷಿಕರು ಯಾವುದೇ ರಾಜ್ಯದಲ್ಲಿ ಇದ್ದರೂ, ಸಂಸ್ಕೃತಿ ಒಂದೇ ಆಗಿದೆ’ ಎಂದರು.

‘ಬೇರೆ ಬೇರೆ ಭಾಷೆಗಳಲ್ಲಿ ಸಾಹಿತ್ಯ ರಚನೆ ಮಾಡಿದ್ದೇನೆ. ಆದರೆ, ಕೊಂಕಣಿಯೇ ನನ್ನ ಅಚ್ಚುಮೆಚ್ಚಿನ ಭಾಷೆ. ಮಾತೃ ಭಾಷೆಯಲ್ಲಿ ಮಾತ್ರ ಭಾವನೆಗಳನ್ನು ಪರಿಪೂರ್ಣವಾಗಿ ವ್ಯಕ್ತಪಡಿಸಲು ಸಾಧ್ಯ’ ಎಂದು ಪ್ರತಿಪಾದಿಸಿದರು.

‘ವೈರಾಣು ಇಲ್ಲದಿದ್ದರೆ ಮನುಕುಲಕ್ಕೂ ಉಳಿಗಾಲವಿಲ್ಲ’

ಬೆಂಗಳೂರು: ಕೊರೊನಾ ವೈರಾಣು ಸೋಂಕು ಕಾಣಿಸಿಕೊಂಡ ಬಳಿಕ ಸೃಷ್ಟಿಯಾದ ಬಿಕ್ಕಟ್ಟುಗಳು, ಅದರ ರೂಪಾಂತರ ತಳಿ ಓಮೈಕ್ರಾನ್ ಹರಡುವಿಕೆಯಿಂದ ಎದುರಾಗಿರುವ ತಲ್ಲಣಗಳಿಂದಾಗಿ ವೈರಸ್‌ಗಳನ್ನು ಹಲುಬುವವರ ಸಂಖ್ಯೆ ಜಾಸ್ತಿ ಆಗಿರಬಹುದು. ಆದರೆ, ಭೂಮಿಯಲ್ಲಿ ವೈರಸ್‌ಗಳೇ ಇಲ್ಲವಾಗಿಬಿಟ್ಟರೆ ಮನುಕುಲವೂ ಉಳಿಯುವುದಿಲ್ಲ ಎನ್ನುತ್ತಾರೆ ವಿಜ್ಞಾನ ಲೇಖಕ ಪ್ರಣಯ್ ಲಾಲ್.

ಲೇಖಕ ಪ್ರಣಯ್ ಲಾಲ್ ತಮ್ಮ ‘ಇನ್‌ವಿಸಿಬಲ್ ಎಂಪೈರ್: ಎ ನ್ಯಾಚುರಲ್ ಹಿಸ್ಟರಿ ಆಫ್ ವೈರಸಸ್’ ಕೃತಿಯ ಕುರಿತು ರಾಹುಲ್ ಮಥಾನ್ ಜೊತೆ ನಡೆಸಿದ ಚರ್ಚೆಯಲ್ಲಿ ವೈರಸ್‌ಗಳ ಮಹತ್ವ ಹಾಗೂ ಅವುಗಳ ನಿಗೂಢ ಜಗತ್ತಿನ ರೋಚಕ ಸಂಗತಿಗಳನ್ನು ತೆರೆದಿಟ್ಟರು.

‘ವೈರಸ್, ಬ್ಯಾಕ್ಟೀರಿಯಾ ಸೇರಿದಂತೆ 1.3 ಲಕ್ಷ ಕೋಟಿ ಸೂಕ್ಷ್ಮಾಣುಜೀವಿಗಳು ಮನುಷ್ಯನ ದೇಹದಲ್ಲಿರುತ್ತವೆ. ಅವುಗಳಿಂದ ಸೃಷ್ಟಿಯಾಗಿರುವ ಮೈಕ್ರೊ ಬಯೋಮ್‌ಗಳೂ ನಮ್ಮದೇಹದ ಕಾರ್ಯನಿರ್ವಹಣೆಯಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ. ಭೂಮಿಯ ಹುಟ್ಟು ಮತ್ತು ಜೀವವಿಕಾಸದ ಹಾದಿಯಲ್ಲೂ ಅವುಗಳ ಪಾತ್ರ ಮಹತ್ತರವಾದುದು’ ಎಂದರು.

‘ಜೀವ ಸಂಕುಲಗಳು ಎದುರಿಸುವ ಎಲ್ಲ ಸಮಸ್ಯೆಗಳಿಗೂ ನಿಸರ್ಗದಲ್ಲೇ ಪರಿಹಾರವೂ ಇದೆ. ವೈರಾಣು ಸೋಂಕುಗಳನ್ನು ಎದುರಿಸಲು ಅಗತ್ಯವಿರುವ ಪ್ರತಿರೋಧ ಶಕ್ತಿಯು ನಮ್ಮ ದೇಹದಲ್ಲಿ ಸ್ವಾಭಾವಿಕವಾಗಿ ಬೆಳವಣಿಗೆ ಹೊಂದಿದರೆ ಒಳ್ಳೆಯದು’ ಎಂದು ಅಭಿಪ್ರಾಯಪಟ್ಟರು.

ಮಡಿವಂತಿಕೆಯಿಂದ ಕೊರಗ ಭಾಷೆ ಅಳಿವು: ಶ್ರೀಧರ ನಾಡ

• ಕೆ.ಎಚ್. ಓಬಳೇಶ್

ಬೆಂಗಳೂರು: ‘ಸಮುದಾಯದಲ್ಲಿನ ಮಡಿವಂತಿಕೆಯ ಧೋರಣೆಯೇ ಕೊರಗ ಭಾಷೆ ನಶಿಸಲು ಮೂಲ ಕಾರಣವಾಗಿದೆ’ ಎಂದು ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟದ ಸದಸ್ಯ ಶ್ರೀಧರ ನಾಡ ವಿಷಾದಿಸಿದರು.

ಶ್ರೀಧರ ನಾಡ

‘ಕೊರಗ’ ಭಾಷೆ ಕುರಿತು ಶನಿವಾರ ನಡೆದ ಗೋಷ್ಠಿಯಲ್ಲಿ ಮಾತನಾಡಿದರು.

ಜಾತಿಯ ಶ್ರೇಣೀಕರಣದಲ್ಲಿಯೂ ಕೊರಗ ಸಮುದಾಯ ತಳಹಂತದಲ್ಲಿದೆ. ಸಮಾಜದಲ್ಲಿ ಈ ಸಮುದಾಯವನ್ನು ಇಂದಿಗೂ ಅಸ್ಪೃಶ್ಯತೆಯಿಂದ ಕಾಣಲಾಗುತ್ತಿದೆ. ಮತ್ತೊಂದೆಡೆ ಕೊರಗರು ತಮ್ಮ ಭಾಷೆ ಬಗ್ಗೆ ನಿಗೂಢತೆ ಕಾಯ್ದುಕೊಂಡಿದ್ದಾರೆ. ಇತರೇ ಸಮುದಾಯದ ಜನ ರೊಟ್ಟಿಗಿರುವಾಗ ಕೊರಗ ಭಾಷೆ ಮಾತನಾಡಿದರೆ ಕೀಳುಮಟ್ಟದಲ್ಲಿ ನೋಡುವ ಪ್ರವೃತ್ತಿ ಇದೆ. ಇದರಿಂದ ಭಾಷೆಯ ಜೊತೆಗೆ ಆ ಜನರ ಬದುಕು ಕೂಡ ಅವನತಿಯತ್ತ ಸಾಗುತ್ತಿದೆ ಎಂದು ವಿಷಾದಿಸಿದರು.

ಪ್ರಾಂತೀಯವಾಗಿ ಕೊರಗ ಜನಾಂಗದಲ್ಲಿ ನಾಲ್ಕು ಉಪ ಪಂಗಡಗಳಿವೆ. ನಾಲ್ಕು ಉಪ ಭಾಷೆಗಳಿವೆ. ಈ ಪಂಗಡಗಳ ನಡುವೆ ಪ್ರಾದೇಶಿಕ ಭಿನ್ನತೆಯೂ ಇದೆ. ಈಗಾಗಲೇ, ಕುಂಟು ಕೊರಗ ಪಂಗಡದ ಭಾಷೆ ನಾಶವಾಗಿದೆ ಎಂದು ಹೇಳಿದರು.

ಕೊರಗ ಜನಸಂಖ್ಯೆ ಕ್ರಮೇಣ ಇಳಿಮುಖವಾಗುತ್ತಿದೆ. ಇದು ಅವರ ಭಾಷೆಯ ಅಳಿವಿಗೆ ನಾಂದಿ ಹಾಡಿದೆ ಎಂದರು.

ವಿದ್ವಾಂಸ ಪುರುಷೋತ್ತಮ ಬಿಳಿಮಲೆ ಮಾತನಾಡಿ, ‘ವಿನಾಶದ ಅಂಚಿಗೆ ತಲುಪಿರುವ ಭಾಷೆಗಳ ಉಳಿವಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ನಿರ್ಲಕ್ಷ್ಯ ಧೋರಣೆ ತಳೆದಿವೆ. ಕೊರಗ ಭಾಷೆಯೂ ಇದರಿಂದ ಹೊರತಲ್ಲ’ ಎಂದು ಹೇಳಿದರು.

1961ರಲ್ಲಿ ರಾಜ್ಯದಲ್ಲಿ ಕೊರಗರ ಜನಸಂಖ್ಯೆ 61 ಸಾವಿರ ಇತ್ತು. 2011ರ ಜನಗಣತಿ ಪ್ರಕಾರ 11 ಸಾವಿರಕ್ಕೆ ಇಳಿದಿದೆ. ಭಾಷೆ ಮಾತನಾಡುವವರು ಕಡಿಮೆಯಾದಂತೆ ಆ ಭಾಷೆಯೂ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತದೆ ಎಂದು ಎಚ್ಚರಿಸಿದರು.

‘ಹಾಲಕ್ಕಿ ಸಮುದಾಯವೇ ಉತ್ತರ ಕನ್ನಡಕ್ಕೆ ಮೂಲ’

• ವಿಜಯ ಕುಮಾರ್ ಎಸ್.ಕೆ.

ಬೆಂಗಳೂರು: ಉತ್ತರ ಕನ್ನಡ ಜಿಲ್ಲೆಯ ಮೂಲ ನಿವಾಸಿಗಳೆಂದರೆ ಅದು ಹಾಲಕ್ಕಿ ಸಮುದಾಯ ಎಂದು ಪ್ರಾಧ್ಯಾಪಕ ಡಾ. ಫಾಲ್ಗುಣಗೌಡ ತಿಳಿಸಿದರು.

ಹಾಲಕ್ಕಿ ಕನ್ನಡ ಕುರಿತ ಗೋಷ್ಠಿಯಲ್ಲಿ ‘ಹಾಲಕ್ಕಿ ಸಂಸ್ಕೃತಿ ಮತ್ತು ಭಾಷೆ’ ಕುರಿತು ಮಾತನಾಡಿದ ಅವರು, ‘ಉತ್ತರ ಕನ್ನಡ ಜಿಲ್ಲೆಯಲ್ಲಿ ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ಸಮುದಾಯ ನಮ್ಮದು. ಅಶಿಕ್ಷಿತರು ಮತ್ತು ಮುಗ್ಧರಾಗಿದ್ದ ಸಮುದಾಯದವರಿಂದ ಹೆಬ್ಬೆಟ್ಟಿನ ಸಹಿ ಪಡೆದು ಮೇಲ್ವರ್ಗದವರು ಭೂಮಿ ಕಸಿದುಕೊಂಡರು. ಅವರ ಮನೆಯಲ್ಲಿ ಕೃಷಿ ಕೂಲಿ ಕಾರ್ಮಿಕರಾಗಿ, ಜೀತದಾಳಾಗಿ ದುಡಿಯಲು ನೇಮಿಸಿಕೊಂಡರು. ವರ್ಷಕ್ಕೊಮ್ಮೆ ಒಂದು ಕಚ್ಚೆ ಮತ್ತು ರುಮಾಲು ಬಿಟ್ಟರೆ ಬೇರೇನನ್ನೂ ನೀಡದೆ ದುಡಿಸಿಕೊಳ್ಳಲಾಗಿದೆ. ಇದೆಲ್ಲವನ್ನೂ ಸಮುದಾಯದವರು ಪದಗಳನ್ನು ಕಟ್ಟಿ ಹಾಡಿದ್ದಾರೆ’ ಎಂದು ಹೇಳಿದರು.

‘ಸಮುದಾಯದವರು 1.60 ಲಕ್ಷ ಜನಸಂಖ್ಯೆ ಹೊಂದಿದ್ದು, ಮಹಿಳೆಯರು ಇಂದಿಗೂ ಕಾಡಿನಿಂದ ಕಟ್ಟಿಗೆ ತಂದು ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಅವರ ಕಷ್ಟ ಕೊನೆಯಾಗಬೇಕು. ಸಮುದಾಯದ ಜನರನ್ನು ಬಡತನದಿಂದ ಮೇಲೆತ್ತಲು ಸರ್ಕಾರ ಯೋಜನೆಗಳನ್ನು ರೂಪಿಸಬೇಕು.’ ಎಂದರು.

‘ಹಾಲಕ್ಕಿ ಮಹಿಳಾ ಸಂಸ್ಕೃತಿ ಮತ್ತು ಭಾಷೆ’ ಕುರಿತು ಮಾತನಾಡಿದ ಕವಯಿತ್ರಿ ಅಕ್ಷತಾ ಕೃಷ್ಣಮೂರ್ತಿ, ‘ಕಡು ಬಡತನದಲ್ಲೇ ಹುಟ್ಟಿ ಬೆಳೆವ ಅವರು ಬದುಕಿನ ಎಲ್ಲ ಸವಾಲುಗಳನ್ನು ಬದಿಗೊತ್ತಿ ಜಾನಪದ ಕ್ಷೇತ್ರಕ್ಕೆ ಕೊಡುಗೆ ನೀಡುತ್ತಿದ್ದಾರೆ’ ಎಂದರು.

‘ಉತ್ತರ ಕನ್ನಡ ಜಿಲ್ಲೆಯ ಸಾಂಸ್ಕೃತಿಕ ಬೇರುಗಳನ್ನು ವಿಶ್ವಮಟ್ಟದಲ್ಲಿ ಗುರುತಿಸಲು ಹಾಲಕ್ಕಿ ಮಹಿಳಾ ಹಾಡುಗಾರರು ಪ್ರಮುಖ ಕೊಡುಗೆ ನೀಡಿದ್ದಾರೆ. ಸುಕ್ರಿ ಬೊಮ್ಮಗೌಡ ಮತ್ತು ತುಳಸಿ ಗೋವಿಂದಗೌಡ ಅವರು ಪದ್ಮಶ್ರೀ ಪ್ರಶಸ್ತಿ ಪಡೆದಿರುವುದೇ ಇದಕ್ಕೆ ಸಾಕ್ಷಿ’ ಎಂದು ವಿವರಿಸಿದರು.

‘ಬಹುತ್ವ ನಿಭಾಯಿಸುವ ಸಾಹಿತ್ಯ ಅವಶ್ಯ’

‘ಪೂರ್ಣಚಂದ್ರ ತೇಜಸ್ವಿ ಅವರ ಬರಹದಲ್ಲಿ ಕಾಣಿಸುವಂತೆ ಪರಿಸರದ ಸಮಗ್ರ ಜ್ಞಾನ ಇರುವುದು ಸಮಾಜದ ಅತೀ ಅಂಚಿನಲ್ಲಿರುವ ವ್ಯಕ್ತಿಗಳಲ್ಲಿ. ಅಲ್ಲದೆ, ಈ ಪರಿಸರ ಜ್ಞಾನವು ಸ್ಥಳೀಯವಾದ ಭಾಷೆ ಮತ್ತು ನುಡಿಗಟ್ಟಿನಲ್ಲಿ ಇರುತ್ತದೆ’ ಎಂದು ಚಿಂತಕ ಪ್ರೊ. ರಾಜೇಂದ್ರ ಚೆನ್ನಿ ಅಭಿಪ್ರಾಯಪಟ್ಟರು.



ಡಾ.ರಾಜೇಂದ್ರ ಚೆನ್ನಿ

‘ಸಕಲ ಜೀವಾತ್ಮಗಳ ಲೇಸನ್ನೇ ಬಯಸುತ್ತಾ’ ಎಂಬ ಗೋಷ್ಠಿಯಲ್ಲಿ ‘ಕನ್ನಡ ಸಾಹಿತ್ಯ ಮತ್ತು ಪರಿಸರ ಪ್ರಜ್ಞೆ’ ಕುರಿತು ಅವರು ಮಾತನಾಡಿದರು.

‘ಇವುಗಳಿಗೆ ಕನ್ನಡದ ಪ್ರಧಾನಧಾರೆಯ ಸಾಹಿತ್ಯ ಸಮರ್ಪಕವಾದ ಅವಕಾಶ ಕೊಟ್ಟಿಲ್ಲವಾದ್ದರಿಂದ ನಮ್ಮ ಪರಿಸರ ಪ್ರಜ್ಞೆ ಅಸಮಗ್ರವಾಗಿಯೇ ಉಳಿದಿದೆ’ ಎಂದರು.

‘ಸಾಮಾಜಿಕ ವ್ಯವಸ್ಥೆಗೆ ಧಕ್ಕೆ ತರುವ ಯತ್ನ’

ಬೆಂಗಳೂರು: ‘ಅಲ್ಪಸಂಖ್ಯಾತರನ್ನು ಗುರಿಯಾಗಿರಿಸಿಕೊಂಡಿರುವ ನೀತಿ ಮತ್ತು ಧೋರಣೆಗಳಿಂದ ದೇಶದ ಸಾಮಾಜಿಕ ವ್ಯವಸ್ಥೆಗೆ ಧಕ್ಕೆ ತರುವ ಪ್ರಯತ್ನ ಮಾಡಲಾಗುತ್ತಿದೆ’ ಎಂದು ಅಂಕಣಕಾರ ಆಕಾರ್ ಪಟೇಲ್ ಕಳವಳ ವ್ಯಕ್ತಪಡಿಸಿದರು.

ಆಕಾರ ಪಟೇಲ್

ದೇಶದಲ್ಲಿನ ಪ್ರಸ್ತುತ ವಿದ್ಯಮಾನಗಳ ಕುರಿತು ವಿಶ್ಲೇಷಿಸಿದ ಅವರು, ‘ಆಹಾರ ಸೇವಿಸಲು ಮತ್ತು ಪ್ರಾರ್ಥನೆ ಮಾಡಲು ನಿರ್ಬಂಧಗಳನ್ನು ವಿಧಿಸಲಾಗುತ್ತಿದೆ. ನಾಗರಿಕರ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಪ್ರಯತ್ನ ಇದಾಗಿದೆ’ ಎಂದರು.

‘ಸರ್ಕಾರವೇ ಹಿಂಸಾಚಾರಕ್ಕೆ ಕುಮ್ಮಕ್ಕು ನೀಡುತ್ತಿದೆ. ಹೀಗಾಗಿಯೇ, ಗುಂಪು ಹತ್ಯೆಗಳು ನಡೆಯುತ್ತಿವೆ. 2015ರ ನಂತರ ಶೇಕಡ 90ರಷ್ಟು ಗುಂಪು ಹಲ್ಲೆಗಳು ಅಲ್ಪಸಂಖ್ಯಾತರ ಮೇಲೆ ನಡೆದಿವೆ. ಅಲ್ಪಸಂಖ್ಯಾತರ ವಿರುದ್ಧ ನಡೆದಿರುವ ದೌರ್ಜನ್ಯಗಳ ಕುರಿತು ಸಾಕಷ್ಟು ಸಾಕ್ಷ್ಯಾಧಾರಗಳಿವೆ. ಮಾನವ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದ ಸಂಸ್ಥೆಗಳು ಈ ಬಗ್ಗೆ ಗಮನ ಹರಿಸಬೇಕಾಗಿದೆ’ ಎಂದು ಹೇಳಿದರು.

‘ಈಗಾಗಲೇ ಬಿಜೆಪಿ ಆಡಳಿತ ಇರುವ ಐದು ರಾಜ್ಯಗಳಲ್ಲಿ ಮತಾಂತರ ನಿಷೇಧ ಕಾಯ್ದೆ ಜಾರಿಗೊಳಿಸಲಾಗಿದೆ. ಕರ್ನಾಟಕದಲ್ಲೂ ಜಾರಿಯಾಗುವ ಸಾಧ್ಯತೆ ಇದೆ’ ಎಂದರು.

’ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಆರ್ಥಿಕತೆ ಮೇಲೆ ಅಪಾರ ಪರಿಣಾಮ ಬೀರಿದೆ. ಆರ್ಥಿಕತೆ ಚೇತರಿಸಿಕೊಳ್ಳುವ ನೀತಿಗಳನ್ನು ಸರ್ಕಾರ ರೂಪಿಸಿಲ್ಲ. ಮೇಕ್ ಇನ್ ಇಂಡಿಯಾ ನೀತಿ ಜಾರಿಯಾದ ಬಳಿಕ ತಯಾರಿಕಾ ವಲಯದಲ್ಲಿ ಒಟ್ಟು ಆಂತರಿಕ ಉತ್ಪಾದನೆ (ಜಿಡಿಪಿ) ಕುಸಿದಿದೆ’ ಎಂದು ವಿವರಿಸಿದರು.

ಗುತ್ತಿನ ಮನೆಯ ಗತ್ತು ಗೈರತ್ತು

• ವಿಠಲ

ಬೆಂಗಳೂರು: ಕರಾವಳಿಯಲ್ಲಿ ಕಂಡು ಬರುವ ಗುತ್ತಿನ ಮನೆಯ ಗತ್ತು ಗೈರತ್ತು ಹೇಗಿರುತ್ತವೆ, ಅವುಗಳ ವೈಶಿಷ್ಟ್ಯ ಏನು, ಅವುಗಳ ಚರಿತ್ರೆ ಏನು ಎಂಬುದನ್ನು ಸಾಯಿಗೀತಾ ಹೆಗ್ಡೆ ಕಟ್ಟಿಕೊಟ್ಟರು.

ಬೆಂಗಳೂರಿನಲ್ಲಿ ಶನಿವಾರ ನಡೆದ ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ‘ತುಳುನಾಡಿನ ಪೂರ್ವಿಕರ ಬಂಟರ ಮನೆ’ ಕುರಿತ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಗುತ್ತು ಮನೆತನಕ್ಕೆ ಹಕ್ಕು ಮತ್ತು ಜವಾಬ್ದಾರಿ ಮುಖ್ಯವಾಗಿತ್ತು. ಊರಿಗೆ ಅಪಾಯ ಬಂದಾಗ, ಯುದ್ಧದ ಸಂದರ್ಭದಲ್ಲಿ ಮನೆಗೊಬ್ಬರಂತೆ ಎಲ್ಲ ಪಂಗಡದವರು ಆಯುಧ ಹಿಡಿದು ಗುತ್ತಿನ ಚಾವಡಿಗೆ ಬರಲೇಬೇಕಿತ್ತು. ನಂತರ ದೇವಸ್ಥಾನದಲ್ಲಿ ಪ್ರಾರ್ಥಿಸಿ ಗುತ್ತಿನ ಮನೆಯವರು ಹೇಳಿದಂತೆ ಅಥವಾ ಅರಮನೆಗೋ ಹೋಗಬೇಕಾಗಿತ್ತು. ಗ್ರಾಮ ಗುತ್ತು, ಹೋಬಳಿ ಗುತ್ತು, ಮಾಗಣೆ ಗುತ್ತು, ಸೀಮೆಗುತ್ತು ಎಂದು ಮನೆತನಗಳನ್ನು ಗುರುತಿಸಲಾಗುತ್ತದೆ ಎಂದರು.

ಗುತ್ತುಮನೆತನದ ಕೋಣೆಗಳ ಹೆಸರುಗಳೂ ಮುಖ್ಯವಾಗುತ್ತವೆ. ಭತ್ತವನ್ನು ಶೇಖರಿಸುವ ತುಪ್ಪೆಸ್ಥಳ, ಹೆಬ್ಬಾಗಿಲು, ಚಾವಡಿ, ಭಂಡಾರದ ಮನೆ, ತುಂಡುಕೊಟ್ಯ ಇರುತ್ತಿತ್ತು. ಸರ್ಕಾರಿ ದಾಖಲೆಗಳನ್ನು ಇಡಲು ಪಟೇಲರಿಗೆ ತುಂಡುಕೊಟ್ಯ ಮೀಸಲಾಗುತ್ತಿತ್ತು. 80ರಿಂದ 100 ಜನ ಒಂದೊಂದು ಮನೆಯಲ್ಲಿ ಇರುತ್ತಿದ್ದರು. ಮನೆಯ ಉತ್ತರ ಭಾಗದಲ್ಲಿ ಸತ್ತವರನ್ನು ಸುಡುವುದಕ್ಕೆ ಜಾಗ ಮೀಸಲಿರಿಸಲಾಗುತ್ತಿತ್ತು. ಮನೆಗಳು ಎತ್ತರದ ಜಾಗದಲ್ಲಿ ಇರುತ್ತಿದ್ದವು ಎಂದು ತಿಳಿಸಿದರು.

ಗುತ್ತಿನ ಮನೆಯನ್ನು ಕಟ್ಟಲು ಬೆಲ್ಲ, ಸುಣ್ಣಗಳ ಮಿಶ್ರಣ, ಅನ್ನ ಬಸಿದ ಗಂಜಿಯ ನೀರು, ಮುಳಿ ಹುಲ್ಲನ್ನು ಹಾಕಿ ಹುಳಿಬರಿಸಿ ಒಂದೂವರೆ ಅಡಿ ಅಗಲದ ಗೋಡೆ ಕಟ್ಟಲಾಗಿತ್ತು. ಕೆತ್ತನೆ ಇರುವ ವಿವಿಧ ಬಗೆಯ ಮರದ ಕಂಬಗಳನ್ನು ಬಳಸಲಾಗುತ್ತಿತ್ತು. ಇದು ಗುತ್ತಿನ ಮನೆಯ ವೈಭವವನ್ನು ಸಾರುತ್ತಿತ್ತು ಎಂದು ವಿವರಿಸಿದರು.

ಬಲಭಾಗದಿಂದ ಹಾಲು ತರಬೇಕು, ಎಡಭಾಗದಿಂದ ನೀರು ತರಬೇಕು ಎಂಬ ನಿಯಮವೂ ಇತ್ತು. ಬಲ ಬದಿಯಲ್ಲಿ ದನಗಳನ್ನು ಕಟ್ಟುವ ದನದ ಹಟ್ಟಿ, ಈಶಾನ್ಯ ಭಾಗದಲ್ಲಿ ಬಾವಿ ಇರುತ್ತಿತ್ತು ಎಂದರು. ಗಾಯತ್ರಿ ಶೆಟ್ಟಿ ಇದ್ದರು.

‘ನೀರಾವರಿ ಕ್ಷೇತ್ರಕ್ಕೆ ಗೌಡರ ಕೊಡುಗೆ ಅನನ್ಯ’

• ನವೀನ್ ಕುಮಾರ್ ಜಿ.

ಬೆಂಗಳೂರು: ‘ದೂರದೃಷ್ಟಿ ಹಾಗೂ ಅಭಿವೃದ್ಧಿಯ ಕಲ್ಪನೆಯೊಂದಿಗೆ ರಾಜಕೀಯ ಕ್ಷೇತ್ರ ಪ್ರವೇಶಿಸಿದ ಎಚ್.ಡಿ. ದೇವೇಗೌಡ ಅವರು ಪ್ರಧಾನಿಯಾಗಿದ್ದಾಗ ನೀರಾವರಿ ಯೋಜನೆಗಳಿಗೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ’ ಎಂದು ಪತ್ರಕರ್ತ ಸುಗತ ಶ್ರೀನಿವಾಸರಾಜು ಅವರು ಹೇಳಿದರು.

ಸುಗತ ಶ್ರೀನಿವಾಸರಾಜು

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಜೀವನ ಚರಿತ್ರೆ ‘ಫರೋಸ್ ಇನ್ ಎ ಫೀಲ್ಡ್’ ಕೃತಿಯ ಲೇಖಕರೂ ಆಗಿರುವ ಅವರು ಕೃತಿಯ ಕುರಿತ ಸಂವಾದದಲ್ಲಿ ಮಾತನಾಡಿದರು.

‘ಕಾವೇರಿಗಿಂತಲೂ ಕೃಷ್ಣಾ ಮೇಲ್ದಂಡೆ ಯೋಜನೆಗೆ ಗೌಡರ ಯೋಗದಾನವನ್ನು ಯಾರೂ ಮರೆಯುವಂತಿಲ್ಲ. ಈ ಯೋಜನೆಯ ಪುನರ್ವಸತಿಗಾಗಿ ಅವರು ಕೈಗೊಂಡಿರುವ ಕ್ರಮಗಳು ದಕ್ಷಿಣ ಏಷ್ಯಾದ ದೇಶಗಳಿಗೆ ಮಾದರಿಯಾಗಿವೆ. ಗುಜರಾತ್‌ನ ನರ್ಮದಾ ನದಿ ಯೋಜನೆಯ ಶ್ರೇಯಸ್ಸನ್ನು ಪ್ರಧಾನಿ ನರೇಂದ್ರ ಮೋದಿ ಅವರು ಪಡೆದುಕೊಂಡರೂ ಈ ಯೋಜನೆಯ ಅಣೆಕಟ್ಟನ್ನು ಎತ್ತರಿಸುವ ಕಲ್ಪನೆ ದೇವೇಗೌಡರದ್ದು’ ಎಂದರು.

‘ಈಶಾನ್ಯ ರಾಜ್ಯಗಳು, ಪಂಜಾಬ್ ಮತ್ತು ಕಾಶ್ಮೀರದ ಅಭಿವೃದ್ಧಿಗೂ ಗೌಡರು ಪ್ರಧಾನಿಯಾಗಿದ್ದಾಗ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಅವರು, 'ಕಾಶ್ಮೀರದ ಜನರು ನಂಬಿದ್ದ ಏಕೈಕ ಪ್ರಧಾನಿ ದೇವೇಗೌಡರು’ ಎಂದು ಹೇಳಿದ್ದು ಈ ಕಾರಣಕ್ಕಾಗಿಯೇ’ ಎಂಬುದನ್ನೂ ಸುಗತ ಅವರು ಸ್ಮರಿಸಿದರು. ‘ಹಲವಾರು ಅಭಿವೃದ್ಧಿ ಯೋಜನೆಗಳನ್ನು ತಂದಿದ್ದರೂ ಗೌಡರು ಅವುಗಳ ಪ್ರಚಾರಕ್ಕಾಗಿ ಚಿಕ್ಕಾಸನ್ನೂ ಖರ್ಚು ಮಾಡಿದವರಲ್ಲ. ಅವರನ್ನು ಕೇವಲ ಒಂದು ಜಾತಿಯ ನಾಯಕನಂತೆ ಚಿತ್ರಿಸುತ್ತಿರುವುದು ವಿಪರ್ಯಾಸ’ ಎಂದರು. ಲೇಖಕ ಕಾರ್ತಿಕ್ ವೆಂಕಟೇಶ್, ಪತ್ರಕರ್ತ ವಿಕಾರ್ ಅಹಮ್ಮದ್ ಸಯೀದ್ ಇದ್ದರು.

ಗೃಹಿಣಿಯರ ಬರವಣಿಗೆಗೆ ‘ಪ್ರತಿಲಿಪಿ’ ಒತ್ತಾಸೆ

• ಸುಕೃತ ಎಸ್.

ಬೆಂಗಳೂರು: ಸಾಹಿತ್ಯ ರಚನೆಯೇ ಬಿಡುಗಡೆಯ ಹಾದಿ ಎಂಬುದರಲ್ಲಿ ನಂಬಿಕೆ ಇಟ್ಟಿರುವ ಗೃಹಿಣಿಯರು ತಮ್ಮ ಬರಹಗಳನ್ನು ನವ ತಂತ್ರಜ್ಞಾನದ ಸಹಾಯದಿಂದ ಜಗತ್ತಿನ ಮುಂದಿಡುತ್ತಿದ್ದಾರೆ.



ಶೈನಾ ಶ್ರೀನಿವಾಸ ಶೆಟ್ಟಿ

ರೋಹಿಣಿ ರಂಗನಾಥನ್

ಬನಶಂಕರಿ ಕುಲಕರ್ಣಿ

ಕೆ.ವಿ. ಕಸ್ತೂರಿ ರಾಮ್

ಇಂಥ ನಾಲ್ವರು ಗೃಹಿಣಿಯರ ಸಾಹಿತ್ಯ ಪಯಣದ ಮಾತುಗಳಿಗೆ ಲೇಖಕಿ ಪ್ರತಿಭಾ ನಂದಕುಮಾರ್ ನಡೆಸಿಕೊಟ್ಟ ‘ಡಿಜಿಟಲ್ ಸಾಹಿತ್ಯ ಕ್ರಾಂತಿ– ಲೇಖಕರಾದ ಓದುಗರು’ ಗೋಷ್ಠಿ ಸಾಕ್ಷಿಯಾಯಿತು.

ಬನಶಂಕರಿ ಕುಲಕರ್ಣಿ, ಶೈನಾ ಶ್ರೀನಿವಾಸ ಶೆಟ್ಟಿ, ರೋಹಿಣಿ ರಂಗನಾಥನ್ ಮತ್ತು ಕೆ.ವಿ. ಕಸ್ತೂರಿ ರಾಮ್ ತಮ್ಮ ಅನುಭವಗಳನ್ನು ಈ ಗೋಷ್ಠಿಯಲ್ಲಿ ಹಂಚಿಕೊಂಡರು. ಇವರೆಲ್ಲರೂ ತಾವು ಬರೆದ ಕಾದಂಬರಿ, ಕಥೆ, ಕವನಗಳನ್ನು ‘ಪ್ರತಿಲಿಪಿ’ ಎನ್ನುವ ಡಿಜಿಟಲ್ ವೇದಿಕೆಯ ಮೂಲಕ ಪ್ರಕಟಿಸಿದ್ದಾರೆ. ಲಕ್ಷಗಟ್ಟಲೆ ಓದುಗರನ್ನೂ ಹೊಂದಿದ್ದಾರೆ.

‘ಬರೆದದ್ದನ್ನು ಜಗತ್ತಿಗೆ ತೋರಿಸುವ ಧೈರ್ಯ ಮತ್ತು ಅವಕಾಶ ಎರಡೂ ಇರಲಿಲ್ಲ. ಪತ್ರಿಕೆಗಳಿಗೆ ಬರಹಗಳನ್ನು ಕಳುಹಿಸಿದರೂ ಅವು ಪ್ರಕಟಗೊಳ್ಳಲೇ ಇಲ್ಲ. ಜೊತೆಗೆ ಎಲ್ಲ ಹೆಣ್ಣು ಮಕ್ಕಳಂತೆ ಕುಟುಂಬದ ಕರ್ತವ್ಯ ನಿರ್ವಹಣೆಯ ಒತ್ತಡವೂ ನಮ್ಮ ಮೇಲಿತ್ತು. ಈ ಎಲ್ಲ ಒತ್ತಡಗಳಿಂದ ಸಾಹಿತ್ಯ ರಚನೆ ಮೂಲಕ ಬಿಡುಗಡೆ ಸಿಕ್ಕಿತು. ಬರೆದದ್ದನ್ನು ಪ್ರಕಟಿಸಲು ‘ಪ್ರತಿಲಿಪಿ’ ಎನ್ನುವ ಡಿಜಿಟಲ್ ವೇದಿಕೆ ನೆರವಾಯಿತು’ ಎಂದು ತಮ್ಮ ಸಾಹಿತ್ಯ ಪಯಣವನ್ನು ಮೆಲುಕು ಹಾಕಿದರು.

ತಂತ್ರಜ್ಞಾನದಿಂದ ಲಿಪಿಗಳ ಉಳಿವು ಸಾಧ್ಯ

ಬೆಂಗಳೂರು: ‘ಆಧುನಿಕ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಅಳಿವಿನಂಚಿನಲ್ಲಿರುವ ಸ್ಥಳೀಯ ಭಾಷೆಗಳ ಲಿಪಿಯನ್ನು ಉಳಿಸುವ ಕಾರ್ಯವಾಗಬೇಕಿದೆ’ ಎಂದು ಕಥೆಗಾರ ವಿವೇಕ ಶಾನಭಾಗ ಸಲಹೆ ನೀಡಿದರು.

‘ಅಳಿವಿನಂಚಿನ ಭಾಷೆಗಳ ಲಿಪಿಯ ಭವಿಷ್ಯ’ ಕುರಿತು ನಡೆದ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಪ್ರತಿಯೊಂದು ಜನಾಂಗದ ಭಾಷೆ ಮತ್ತು ಅದರ ಲಿಪಿಯೊಟ್ಟಿಗೆ ಅವರ ಜೀವನಶೈಲಿ, ಸಂಸ್ಕೃತಿ ಮೇಳೈಸಿರುತ್ತದೆ. ಸ್ಥಳೀಯ ಭಾಷೆಗಳ ಸೊಗಡು ಭಿನ್ನವಾಗಿರುತ್ತದೆ. ಹಾಗಾಗಿ, ಆ ಭಾಷೆಗಳನ್ನು ಉಳಿವಿನ ಜೊತೆಗೆ ಲಿಪಿಯನ್ನೂ ಜತನದಿಂದ ಉಳಿಸುವ ಕಾರ್ಯವಾಗಬೇಕಿದೆ ಎಂದು ಪ್ರತಿಪಾದಿಸಿದರು.

ಲೇಖಕಿ ಕಾವೇರಿ ಪೊನ್ನಪ್ಪ ಮಾತನಾಡಿ, ‘ಕೊಡವ ಭಾಷೆಯು ವಿಭಿನ್ನ ಮತ್ತು ಶ್ರೀಮಂತಿಕೆಯಿಂದ ಕೂಡಿದೆ. ಇದರ ಲಿಪಿಯನ್ನು ಉಳಿಸುವ ಕಾರ್ಯವೂ ನಡೆಯುತ್ತಿದೆ. ಕೊಡವ ಭಾಷೆಯ ಪದ ಸಂಪತ್ತನ್ನು ವೃದ್ಧಿಸುವ ಕಾರ್ಯಕ್ಕೆ ಒತ್ತು ನೀಡಲಾಗಿದೆ. ಇದರ ಭಾಗವಾಗಿ ಈ ಭಾಷೆಯಲ್ಲಿ ದಶಕಗಳ ಹಿಂದೆ ಮುದ್ರಿಸಿರುವ ಪುಸ್ತಕಗಳ ಮರುಮುದ್ರಣ ಕಾರ್ಯವೂ ನಡೆಯುತ್ತಿದೆ’ ಎಂದು ಹೇಳಿದರು.

ಮಂಗಳೂರು ವಿ.ವಿಯ ತುಳು ಅಧ್ಯಯನ ಕೇಂದ್ರದ ಮುಖ್ಯಸ್ಥೆ ಸಾಯಿಗೀತಾ ಹೆಗ್ಡೆ ಮಾತನಾಡಿದರು.

‘ವೀರ ಸಾವರ್ಕರ್’ ಇಂಗ್ಲಿಷ್ ಪುಸ್ತಕ ಬಿಡುಗಡೆ

‘ಸಾವರ್ಕರ್ ಅರ್ಥವಾದರೆ ಕೊಳಕು ವಿಚಾರ ಸ್ವಚ್ಛವಾಗುತ್ತವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬ್ರಿಟಿಷರ ಪಾಲಿಗೆ ಅಣ್ವಸ್ತ್ರದಂತಿದ್ದ ಪ್ರಖರ ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಅವರು 14 ವರ್ಷಗಳ ಕಾಲ ಕರಿನೀರಿನ ಶಿಕ್ಷೆ ಅನುಭವಿಸಿದರು ಎಂಬುದನ್ನು ಆಳವಾಗಿ ಅರ್ಥಮಾಡಿಕೊಂಡಿದ್ದೇ ಆದರೆ, ಅವರನ್ನು ವಿವಾದ ಮಾಡಲು ಹೊರಡುವವರ ಕೊಳಕು ವಿಚಾರಗಳು ಸ್ವಚ್ಛಗೊಳ್ಳುತ್ತವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ಕೇಂದ್ರ ಮಾಹಿತಿ ಆಯುಕ್ತ ಉದಯ ಮಹೂರ್ಕರ್ ಹಾಗೂ ಚಿರಾಯು ಪಂಡಿತ್ ಬರೆದಿರುವ ‘ವೀರ್ ಸಾವರ್ಕರ್’ ಇಂಗ್ಲಿಷ್ ಪುಸ್ತಕವನ್ನು ಶನಿವಾರ ಬಿಡುಗಡೆ ಮಾಡಿ ಮಾತನಾಡಿದ ಬೊಮ್ಮಾಯಿ, ‘ಜಗತ್ತಿನ ಕೆಲ ಧರ್ಮಗಳು ಹಿಂಸೆಯಿಂದಲೇ ಸಾಮ್ರಾಜ್ಯ ಸ್ಥಾಪನೆ ಮಾಡಿದ್ದರೆ ಹಿಂದೂ ಧರ್ಮ ಮಾತ್ರ ಇವತ್ತಿನ ಜಾಗತೀಕರಣ, ಖಾಸಗೀಕರಣದ ಯುಗದಲ್ಲೂ ಅಂತಃಕರಣದ ಸಂಸ್ಕೃತಿಯ ಆಧಾರದಲ್ಲಿ ಮುನ್ನಡೆದಿದೆ’ ಎಂದರು.



ನಗರದ ಪುರಭವನದಲ್ಲಿ ಶನಿವಾರ ‘ನಿಲುಮೆ’ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ವೀರ ಸಾವರ್ಕರ್’ ಇಂಗ್ಲಿಷ್ ಪುಸ್ತಕವನ್ನು ಬಿಡುಗಡೆ ಮಾಡಿದರು. (ಎಡದಿಂದ) ಪುಸ್ತಕದ ಲೇಖಕ ಉದಯ್ ಮಹೂರ್ಕರ್, ಬಿ.ಎಲ್.ಸಂತೋಷ್, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠದ ಮಾದಾರ ಚನ್ನಯ್ಯ ಸ್ವಾಮೀಜಿ, ಎನ್.ಮಹೇಶ್ ಮತ್ತು ಪತ್ರಕರ್ತೆ ಲಕ್ಷ್ಮಿ ರಾಜಕುಮಾರ್ ಇದ್ದಾರೆ ಪ್ರಜಾವಾಣಿ ಚಿತ್ರ

‘ಬ್ರಿಟಿಷರ ಹೊಡೆತದ ನಡುವೆಯೂ ಸಾವರ್ಕರ್ ತಮ್ಮ ಆಲೋಚನೆಗಳ ಮೂಲಕ ಹಿಂದೂತ್ವದ ವೈಚಾರಿಕತೆಯನ್ನು ಬೆಳೆಸಿದರು. ಅವರ ಶಕ್ತಿ ಬಹಳ ಅಗಾಧವಾದ್ದು. ಹಾಗಾಗಿಯೇ ಇವರನ್ನು ರಾಷ್ಟ್ರೀಯ ಚಳವಳಿಯಿಂದ ದೂರ ಇರಿಸಬೇಕೆಂಬ ಏಕೈಕ ಉದ್ದೇಶದಿಂದ ಬ್ರಿಟಿಷರು ಕರಿನೀರಿನ ಶಿಕ್ಷೆ ವಿಧಿಸಿದ್ದರು. ಸ್ವಾತಂತ್ರ್ಯ ಹೋರಾಟಗಾರರಲ್ಲೇ ಸಾವರ್ಕರ್ ಒಬ್ಬ ಬಂಡಾಯಗಾರನಾಗಿದ್ದರು’ ಎಂದು ಬಣ್ಣಿಸಿದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್.ಸಂತೋಷ್ ಮಾತನಾಡಿ, ‘ಬೇರೆ ಬೇರೆ ಕಾರಣಕ್ಕಾಗಿ ಜೈಲಿಗೆ ಹೋದವರು ಸ್ವಾತಂತ್ರ್ಯಕ್ಕಾಗಿ ಜೈಲಿಗೆ ಹೋಗಿ ತಮ್ಮ ಜೀವನವನ್ನೇ ಮುಡಿಪಿಟ್ಟ ಸಾವರ್ಕರ್ ಅವರನ್ನು ಟೀಕಿಸುತ್ತಾರೆ’ ಎಂದು ಗೇಲಿ ಮಾಡಿದರು.

‘ಇವತ್ತಿನ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳು ಬಂದಿರುವುದು ಅಸಲು ಇದ್ದಂತೆ. ಅವರ ಅತ್ಯಂತ ಸ್ಫೂರ್ತಿದಾಯಕ ಮಾತುಗಳು ಬಡ್ಡಿಯಿದ್ದಂತೆ. ನಿರ್ಮಲಾನಂದನಾಥ ಸ್ವಾಮೀಜಿಯವರ ಜೊತೆಗೆ ಮಾದಾರ ಚನ್ನಯ್ಯ ಸ್ವಾಮೀಜಿ ಆಹ್ವಾನವಿಲ್ಲದೇ ಇಲ್ಲಿಗೆ ಬಂದಿರುವುದನ್ನು ನೋಡಿದರೆ ಸಾಮಾಜಿಕ ಮಾಧ್ಯಮಗಳಲ್ಲಿ ಟೀಕಿಸುವವರಿಗೆ ಇದರಿಂದ ಬೆಂಕಿ ಬಿದ್ದಂತಾಗಿರುತ್ತದೆ. ಈ ಪುಸ್ತಕ ಕರ್ನಾಟಕದ ತರುಣರ ನಡುವೆಯೇ ಆಗಬೇಕೆಂಬ ಇರಾದೆಯೊಂದಿಗೆ ಇಲ್ಲಿ ಬಿಡುಗಡೆಯಾಗುತ್ತಿದೆ’ ಎಂದರು.

ಕೊಳ್ಳೇಗಾಲ ಶಾಸಕ ಎನ್. ಮಹೇಶ್ ಮಾತನಾಡಿ, ‘ಅಂಬೇಡ್ಕರ್ ಮತ್ತು ಸಾವರ್ಕರ್ ದೂರ ದೂರ ಇದ್ದು ಸ್ವಾತಂತ್ರ್ಯ ಹೋರಾಟ ನಡೆಸಿದ ಪರಿಣಾಮವನ್ನು ನಾವಿವತ್ತು ಅನುಭವಿಸುತ್ತಿದ್ದೇವೆ. ಅವರು ತಮ್ಮ ಕಾಲಘಟ್ಟದಲ್ಲಿ ಒಟ್ಟಿಗೇ ಕಲೆತು ಕೆಲಸ ಮಾಡಬೇಕಿತ್ತು’ ಎಂದರು.

ಪತ್ರಕರ್ತೆ ಲಕ್ಷ್ಮಿ ರಾಜಕುಮಾರ್ ಕೃತಿ ಪರಿಚಯ ಮಾಡಿದರು.

ಪುರಭವನಕ್ಕೆ ನುಗ್ಗಲು ಯತ್ನ; 25ಕ್ಕೂ ಹೆಚ್ಚು ಮಂದಿ ವಶಕ್ಕೆ

ಪುಸ್ತಕ ಬಿಡುಗಡೆ ಕಾರ್ಯಕ್ರಮ ಆರಂಭಕ್ಕೂ ಮುನ್ನ ಪುರಭವನಕ್ಕೆ ನುಗ್ಗಲು ಯತ್ನಿಸಿದ್ದ ಕಸ್ತೂರಿ ಕರ್ನಾಟಕ ಜನಪರ ವೇದಿಕೆಯ 25ಕ್ಕೂ ಹೆಚ್ಚು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬರುವ ಮಾಹಿತಿ ತಿಳಿದಿದ್ದ ವೇದಿಕೆ ಕಾರ್ಯಕರ್ತರು, ಪುರಭವನ ಎದುರು ಸೇರಿದ್ದರು.

‘ಬೆಳಗಾವಿಯಲ್ಲಿ ಎಂಇಎಸ್ ಕಾರ್ಯಕರ್ತರು ಪುಂಡಾಟಿಕೆ ನಡೆಸುತ್ತಿದ್ದಾರೆ. ಆ ಸಂಘಟನೆಯನ್ನು ರಾಜ್ಯದಲ್ಲಿ ನಿಷೇಧಿಸಬೇಕು’ ಎಂದು ಒತ್ತಾಯಿಸಿ ಘೋಷಣೆ ಕೂಗಿದರು. ಪುರಭವನದೊಳಗೆ ನುಗ್ಗಲೂ ಯತ್ನಿಸಿದರು. ಪುರಭವನ ಎದುರಿನ ರಸ್ತೆಯಲ್ಲೇ ಅವರನ್ನು ಪೊಲೀಸರು ತಡೆದರು. ರಸ್ತೆ ಮೇಲೆ ಕುಳಿತು ಕಾರ್ಯಕರ್ತರು ಪ್ರತಿಭಟನೆ ಮುಂದುವರಿಸಿದರು. ಕಾರ್ಯಕ್ರಮ ಸಂಘಟಕರ ಗುಂಪು ಸಹ ಪುರಭವನದ ಮೆಟ್ಟಿಲು ಬಳಿ ಬಂತು, ಕಾರ್ಯಕ್ರಮದ ಪರ ಘೋಷಣೆ ಕೂಗಲಾರಂಭಿಸಿತು.

ಪರಿಸ್ಥಿತಿ ಕೈ ಮೀರುವ ಸೂಚನೆ ಸಿಗುತ್ತಿದ್ದಂತೆ ವೇದಿಕೆಯ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು, ವಾಹನದಲ್ಲಿ ಕರೆದೊಯ್ದರು. ಕೆಲ ಗಂಟೆಗಳ ನಂತರ ಮುಚ್ಚಳಿಕೆ ಬರೆಸಿಕೊಂಡು ಬಿಟ್ಟು ಕಳುಹಿಸಿದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭಾನುವಾರದ ಪುರವಣಿ
ಏನಾಗುತ್ತೋ ನೋಡಿಯೇ ಬಿಡೋಣ ಎನ್ನುವ ಧೈರ್ಯ ಹೊಂದಿದ ಹುಡುಗಿಯರ ಬಿಂದಾಸ್ ಲೋಕ...

ಅನುಕಂಪದ ಉದ್ಯೋಗಕ್ಕೆ ಸಾವಿನ ಸಂದರ್ಭದ ನಿಯಮವೇ ಅನ್ವಯ 4

ಪಾದಯಾತ್ರೆಯಲ್ಲಿ ಪ್ರಧಾನಿ ವಿರುದ್ಧ ರಾಹುಲ್ ವಾಗ್ದಾಳಿ

ನಾಳೆ ದೇಶದಾದ್ಯಂತ ಕೈಗಾರಿಕೆಗಳು ಸ್ಥಗಿತ 13

‘ಇಬ್ಬರು ಉದ್ಯಮಿಗಳಿಗೆ ದೇಶದ ಹಣ’ 12

ಮಧ್ಯವರ್ತಿಗಳಿಂದ ಭಾರಿ ಪ್ರಮಾಣದ ಅಡಿಕೆ ಖರೀದಿ, ಸಂಗ್ರಹವೇ ಧಾರಣೆ ಏರಿಳಿತದ ಮೂಲ

ಹವಾಲಾದಂತಾದ ಅಡಿಕೆ ವಹಿವಾಟು

• ಚಂದ್ರಹಾಸ ಹಿರೇಮಳಲಿ

ಒಳನೋಟ
ಏರಿಳಿತದ ಅಡಿಕೆ ಮಾರುಕಟ್ಟೆ
ಪ್ರತಿಕ್ರಿಯಿಸಿ: 9606038256
feedback@prajavani.co.in

ಶಿವಮೊಗ್ಗ: ಐದು ವರ್ಷಗಳಿಂದ ಕ್ವಿಂಟಲ್‌ಗೆ ₹ 40 ಸಾವಿರ ಆಸುಪಾಸಿನಲ್ಲೇ ಇದ್ದ ಅಡಿಕೆ ಧಾರಣೆ ನಾಲ್ಕು ತಿಂಗಳ ಹಿಂದೆ ಒಮ್ಮೆಲೇ ₹ 60 ಸಾವಿರಕ್ಕೆ ಜಿಗಿತ ಕಂಡಾಗ ಅಡಿಕೆ ಮಾರುಕಟ್ಟೆಯಲ್ಲಿ ಸಂಚಲನ ಸೃಷ್ಟಿಯಾಗಿತ್ತು. ದರ ಏರಿಕೆ ಕೆಲವು ಬೆಳೆಗಾರರಲ್ಲಿ ಸಂಭ್ರಮಕ್ಕೆ ಕಾರಣವಾದರೆ, ಅದಕ್ಕೆ ಮೊದಲೇ ಮಾರಾಟ ಮಾಡಿದ ರೈತರಲ್ಲಿ ನಿರಾಶೆ ಮೂಡಿಸಿತ್ತು.

ರಾಜ್ಯದಲ್ಲಿ ಪ್ರತಿವರ್ಷ ಸುಮಾರು ₹ 30 ಸಾವಿರ ಕೋಟಿ ಮೌಲ್ಯದ ಅಡಿಕೆ ವಹಿವಾಟು ನಡೆಯುತ್ತದೆ. ಉತ್ತರ ಭಾರತದ ಬೆರಳೆಣಿಕೆಯಷ್ಟು ಮಧ್ಯವರ್ತಿಗಳು ರಾಜ್ಯದ ಅಡಿಕೆ ಮಾರುಕಟ್ಟೆ ನಿಯಂತ್ರಿಸುತ್ತಾ ಬಂದಿದ್ದಾರೆ. ನಾಲ್ಕು ತಿಂಗಳ ಹಿಂದೆ ಹೆಲಿಕಾಪ್ಟರ್‌ನಲ್ಲಿ ಬಂದಿಳಿದ ಗುಜರಾತ್‌ನ ಒಬ್ಬ ಮಧ್ಯವರ್ತಿ, ಮಲೆನಾಡಿನ ಪ್ರಮುಖ ರಾಜಕಾರಣಿಯೊಬ್ಬರ ಕುಟುಂಬ ಹಾಗೂ ತೀರ್ಥಹಳ್ಳಿ ಮೂಲದ ಶ್ರೀಮಂತ ಉದ್ಯಮಿಯೊಬ್ಬರು ಒಮ್ಮೆಲೇ ಐದಾರು ಸಾವಿರ ಕೋಟಿ ರೂಪಾಯಿ ಮೌಲ್ಯದ ಅಡಿಕೆ ಖರೀದಿಗೆ ಮುಂದಾಗಿದ್ದೇ ದಿಢೀರ್ ಬೆಲೆ ಏರಿಕೆ ಕಾರಣ ಎನ್ನುವ ಸುದ್ದಿಗಳು ಮಲೆನಾಡಿನ ತುಂಬಾ ಹರಿದಾಡುತ್ತಿವೆ.

ರಾಶಿ ಕೆಂಪಡಿಕೆಯ ಧಾರಣೆ 2010ರವರೆಗೂ ಕ್ವಿಂಟಲ್‌ಗೆ ₹ 10 ಸಾವಿರದಿಂದ ₹ 15 ಸಾವಿರದ ಆಸುಪಾಸು ಇತ್ತು. 2014ರಲ್ಲಿ ₹ 1 ಲಕ್ಷದ ಗಡಿಮುಟ್ಟಿ ಸಾರ್ವಕಾಲಿಕ ದಾಖಲೆ ಸೃಷ್ಟಿಸಿತ್ತು. ನಂತರ ಮತ್ತೆ ಕುಸಿತ ಕಂಡಿತ್ತು. 2020ರಲ್ಲಿ ಗರಿಷ್ಠ ಧಾರಣೆ ₹ 42 ಸಾವಿರ ದಾಟಿತ್ತು. ನಾಲ್ಕು ತಿಂಗಳ ಹಿಂದೆ ₹ 60 ಸಾವಿರ ದಾಡಿದ ಧಾರಣೆಯ ಭಾರಿ ಜಿಗಿತ ಬೆಳೆಗಾರರು, ವರ್ತಕರಲ್ಲಿ ಸಂತಸ ಮೂಡಿಸುವುದಕ್ಕಿಂತ ಆತಂಕದ ಕಾರ್ಮೋಡ ಸೃಷ್ಟಿಸಿದೆ. ಇದಕ್ಕೆ ಕಾರಣ ಮಾರುಕಟ್ಟೆಯಲ್ಲಿ ಇಂತಹ ಬೆಲೆ ಏರಿಕೆಯ ‘ಸುನಾಮಿ’ಗಳು ಸೃಷ್ಟಿಸುವ ಅವಾಂತರಗಳು.

ಉತ್ತರ ಭಾರತವೇ ಪ್ರಮುಖ ಮಾರುಕಟ್ಟೆ: ಗುಜರಾತ್, ಮಹಾರಾಷ್ಟ್ರ ಜೊತೆಗೆ ದೆಹಲಿ ಸೇರಿದಂತೆ ಉತ್ತರ ಭಾರತದ ಗುಟ್ಕಾ, ಪಾನ್‌ಮಸಾಲ ಕಂಪನಿಗಳೇ ರಾಜ್ಯದ ಅಡಿಕೆಗೆ ಪ್ರಮುಖ ಮಾರುಕಟ್ಟೆ. ವಿಮಲ್, ಕಮಲಾ ಪಸಂದ್, ಮಾಣಿಕ್ ಚಂದ್, ಶಿಖರ್, ಎಂಆರ್‌ಡಿ ಮತ್ತಿ ತರ ಪಾನ್‌ಮಸಾಲಾ ಒಳಗೊಂಡಂತೆ ಏಳೆಂಟು ಕಂಪನಿಗಳು ರಾಜ್ಯದಲ್ಲಿ ಬೆಳೆಯುವ ಶೇ 80ರಷ್ಟು ಅಡಿಕೆ ಖರೀದಿಸುತ್ತವೆ. ಮೊದಲು ಮಲೆನಾಡಿನ ವರ್ತಕರೇ ಅಡಿಕೆ ಖರೀದಿಸಿ ಕಂಪನಿಗಳಿಗೆ ಕಳುಹಿಸುತ್ತಿದ್ದರು. ಈಗ ಮಧ್ಯವರ್ತಿಗಳ ಮೂಲಕವೇ ವಹಿವಾಟು ನಡೆಸುತ್ತಿವೆ. ಮಧ್ಯವರ್ತಿಗಳು ಇಲ್ಲಿನ ಸ್ಥಳೀಯ ವರ್ತಕರ ಮಂಡಿಗಳಲ್ಲಿ ಟೆಂಡರ್ ಬರೆಸಿ, ಅಡಿಕೆ ಖರೀದಿಸುತ್ತಾರೆ.

ಒಮ್ಮೆಲೆಗೇ ಭಾರಿ ಅಡಿಕೆ ಖರೀದಿ: ನಾಲ್ಕು ತಿಂಗಳ ಹಿಂದೆ ಐದಾರು ಬಾರಿ ಶಿವಮೊಗ್ಗಕ್ಕೆ ಬಂದಿದ್ದ ಅಹಮದಾಬಾದ್‌ನ ಮಧ್ಯವರ್ತಿಯೊಬ್ಬರು ಇಲ್ಲಿನ ಶ್ರೀಮಂತ ವರ್ತಕರೊಬ್ಬರ ಸಹಕಾರದಿಂದ ಭಾರಿ ಪ್ರಮಾಣದಲ್ಲಿ ಅಡಿಕೆ ಖರೀದಿಗೆ ಮುಂದಾಗಿದ್ದರು. ಅದಕ್ಕಾಗಿ ಸ್ವಲ್ಪ ಪ್ರಮಾಣದಲ್ಲಿ ಧಾರಣೆ ಹೆಚ್ಚಿಸಿದ್ದರು. ಇದರಿಂದ ಆತಂಕಕ್ಕೆ ಒಳಗಾದ ಇತರೆ ಮಧ್ಯವರ್ತಿಗಳು ಪೂರ್ವನಿಗದಿತ ಒಪ್ಪಂದಂತೆ ತಮ್ಮ ಕಂಪನಿಗಳಿಗೆ ಅಡಿಕೆ ಪೂರೈಸಲು ಸಾಧ್ಯವಾಗದು ಎಂದು ಆತಂಕಕ್ಕೆ ಒಳಗಾಗಿ ಅನೈತಿಕ ದರ ಸಮರ ಆರಂಭಿಸಿದ್ದರು. ಇದರಿಂದ ಎರಡು ವಾರಗಳಲ್ಲಿ ಅಡಿಕೆ ಧಾರಣೆ ₹ 20 ಸಾವಿರದಷ್ಟು ಜಿಗಿತ ಕಂಡಿತ್ತು.

ಹಲವು ಶ್ರೀಮಂತ ವರ್ತಕರು ದೊಡ್ಡ ಪ್ರಮಾಣದಲ್ಲಿ ಅಡಿಕೆ ಖರೀದಿಸಿ, ಸಂಗ್ರಹ ಮಾಡುತ್ತಿದ್ದಾರೆ. ರೈತರು ಸಹ ತಾವು ಬೆಳೆದ ಅಡಿಕೆಯನ್ನು ಅಗತ್ಯವಿದ್ದಷ್ಟೇ ಮಾರಾಟ ಮಾಡಿ, ಉಳಿದದ್ದನ್ನು ಕನಿಷ್ಠ ಎರಡು, ಮೂರು ವರ್ಷಗಳ ಕಾಲ ದಾಸ್ತಾನು ಮಾಡುತ್ತಿದ್ದಾರೆ. ಇದೂ ಅಡಿಕೆ ಬೆಲೆ ಕುಸಿಯದೆ ಸ್ಥಿರತೆ ಕಾಯ್ದುಕೊಳ್ಳಲು ಕಾರಣ ಎನ್ನುತ್ತಾರೆ ಮಾರುಕಟ್ಟೆ ವಿಶ್ಲೇಷಕರು.

ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತಂದ ನಂತರ ಮಾರುಕಟ್ಟೆ ಹೊರಗೆ ಖರೀದಿಸಿದರೆ ಶೇ 2 ಕಮಿಷನ್, ಶೇ 0.6 ಸೆಸ್ ಉಳಿಸುತ್ತಾರೆ. ಕೈ ವ್ಯಾಪಾರದ ಬಹುತೇಕ ಅಡಿಕೆ, ಶೇ 5ರಷ್ಟು ಜಿಎಸ್‌ಟಿ ವಂಚಿಸಿ, ಅಕ್ರಮವಾಗಿ ಸಾಗಣೆ ಮಾಡುತ್ತಿದ್ದಾರೆ. ಹಾಗಾಗಿಯೇ, ಮಾರುಕಟ್ಟೆ ಹೊರಗೆ ಅಧಿಕ ದರ ನೀಡಲಾಗುತ್ತಿದೆ ಎನ್ನುವ ಆರೋಪವೂ ಇದೆ.



ಅಂತರರಾಷ್ಟ್ರೀಯ ಮಾರುಕಟ್ಟೆಯಿಂದ ಅನಧಿಕೃತವಾಗಿ ಅಡಿಕೆ ದೇಶಕ್ಕೆ ನುಸುಳುವುದು ನಿಂತಿದೆ. ಕಳೆದ ವರ್ಷ ಶೇ 40ರಷ್ಟು ಬೆಳೆನಷ್ಟ ವಾಗಿದೆ. ಮಳೆಯ ಕಾರಣ ಹೊಸ ಚಾಲಿ ಮಾರುಕಟ್ಟೆಗೆ ಬರುವುದು ವಿಳಂಬವಾಗಿದೆ. ಇದು ಸಹಜವಾಗಿ ಬೆಲೆ ಏರಿಕೆಗೆ ಕಾರಣವಾಗಿದೆ.

ಕಿಶೋರ್‌ಕುಮಾರ್ ಕೊಡ್ಗಿ, ಕ್ಯಾಂಪ್ಕೊ ಅಧ್ಯಕ್ಷ



ಇನ್ನಷ್ಟು ಸುದ್ದಿಗಳು 6

ಬೆಳಗಾವಿ ಉದ್ವಿಗ್ನ, ನಿಷೇಧಾಜ್ಞೆ

ರಾಯಣ್ಣ ಪ್ರತಿಮೆ ಭಗ್ನ: ಹಲವು ವಾಹನಗಳ ಗಾಜು ಪುಡಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕನ್ನಡ ಬಾವುಟಕ್ಕೆ ಬೆಂಕಿ ಹಚ್ಚಿದ್ದಕ್ಕೆ ಪ್ರತಿಯಾಗಿ ಬೆಂಗಳೂರಿನಲ್ಲಿ ಶಿವಾಜಿ ಪ್ರತಿಮೆಗೆ ಮಸಿ ಬಳಿದ ಘಟನೆಗೆ ಆಕ್ರೋಶ ವ್ಯಕ್ತವಾಗಿದ್ದು, ಬೆಳಗಾವಿಯಲ್ಲಿ ಉದ್ವಿಗ್ನ ಸ್ಥಿತಿ ತಲೆದೋರಿದೆ. ಶಾಂತಿ ಕದಡುವ ಎಂಇಎಸ್ ಕೃತ್ಯದ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.

ಕಿಡಿಗೇಡಿಗಳು ಇಲ್ಲಿನ ಅನಗೋಳದ ಕನಕದಾಸ ಕಾಲೊನಿಯಲ್ಲಿದ್ದ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಶನಿವಾರ ನಸುಕಿನಲ್ಲಿ ಭಗ್ನಗೊಳಿಸಿದ್ದಾರೆ. ಮುಖದ ಭಾಗ ವಿರೂಪಗೊಂಡಿದೆ. ಖಡ್ಗ ಮತ್ತು ಗುರಾಣಿಯನ್ನು ಕಿತ್ತು ಹಾಕಿದ್ದಾರೆ. ನಗರದ ವಿವಿಧೆಡೆ ಕಲ್ಲು ತೂರಾಟ ನಡೆಸಿದ್ದು ಹಲವು ವಾಹನಗಳು ಜಖಂಗೊಂಡಿವೆ. ಪೊಲೀಸ್ ಜೀಪ್‌ಗೆ ಬೆಂಕಿ ಹಚ್ಚಲಾಗಿದೆ.

ಮುಂಜಾಗ್ರತೆ ಕ್ರಮವಾಗಿ ನಗರ ಸೇರಿದಂತೆ ತಾಲ್ಲೂಕಿನಾದ್ಯಂತ ಡಿ.20ರ ಬೆಳಿಗ್ಗೆ 6ರವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಕಲ್ಲುತೂರಾಟ, ಪ್ರತಿಭಟನೆಗೆ ಸಂಬಂಧಿಸಿದಂತೆ ಶ್ರೀರಾಮ ಸೇನಾ ಹಿಂದೂಸ್ತಾನ ಸಂಘಟನೆಯ ಅಧ್ಯಕ್ಷ ರಮಾಕಾಂತ ಕೊಂಡುಸ್ಕರ, ಎಂಇಎಸ್ ಯುವ ಘಟಕದ ಅಧ್ಯಕ್ಷ ಶುಭಂ ಶೆಳಕೆ ಸೇರಿದಂತೆ 27 ಮಂದಿಯನ್ನು ಬಂಧಿಸಲಾಗಿದೆ. ಕೋರ್ಟ್ ಇವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಹಿಂಡಲಗಾ ಜೈಲಿಗೆ ಕಳುಹಿಸಲಾಗಿದೆ. ಬಂಧಿತರಲ್ಲಿ ಬಹುತೇಕರು ಎಂಇಎಸ್ ಕಾರ್ಯಕರ್ತರು ಎಂದು ತಿಳಿದುಬಂದಿದೆ.

ಬೆಳಗಾವಿಯ ಅನಗೋಳದ ಕನಕದಾಸ ಕಾಲೊನಿಯಲ್ಲಿ ಕಿಡಿಗೇಡಿಗಳು ಸಂಗೊಳ್ಳಿರಾಯಣ್ಣ ಪ್ರತಿಮೆ ಭಗ್ನಗೊಳಿಸಿದ್ದಾರೆ

ಮುಖ್ಯಮಂತ್ರಿಯವರೇ, ಇದಕ್ಕೆಲ್ಲ ‘ಕ್ರಿಯೆಗೆ ಪ್ರತಿಕ್ರಿಯೆ’ ಎಂಬ ಮೊಂಡುವಾದ ಮಂಡಿಸಬೇಡಿ. ಇಂತಹ ಪುಂಡರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ

ಸಿದ್ದರಾಮಯ್ಯ
ವಿಧಾನಸಭೆ ವಿರೋಧಪಕ್ಷದ ನಾಯಕ

ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ಭಗ್ನಗೊಳಿಸಿರುವುದು ಕನ್ನಡಿಗರಿಗಷ್ಟೇ ಮಾಡಿದ ದ್ರೋಹವಲ್ಲ. ಇಡೀ ದೇಶಕ್ಕೇ ಬಗೆದ ದ್ರೋಹ. ಇದು ಅತ್ಯಂತ ಹೇಯ ಕೃತ್ಯ

ಎಚ್‌.ಡಿ. ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಸರ್ಕಾರಿ ವಾಹನಗಳೇ ಗುರಿ: ಸರ್ಕಾರಿ ವಾಹನಗಳನ್ನೇ ಗುರಿಯಾಗಿಸಿಕೊಂಡು ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿದ್ದಾರೆ.

7ನೇ ಪುಟ ನೋಡಿ

ಎಂಇಎಸ್ ವಿರುದ್ಧ ಕಠಿಣ ಕ್ರಮ: ಸಿ.ಎಂ



ಬೆಳಗಾವಿ: ‘ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ವಿಷಯದಲ್ಲಿ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬೆಂಗಳೂರಿಗೆ ತೆರಳಲು ಇಲ್ಲಿನ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ಬಂದಿದ್ದ ವೇಳೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಶನಿವಾರ ಅವರು ಮಾತನಾಡಿದರು.

‘ಕಲ್ಲುತೂರಿ ಪುಂಡಾಟ ನಡೆಸಿದವರ ವಿರುದ್ಧ ಪೊಲೀಸರು ಕ್ರಮಗೊಂಡಿದ್ದು, ಆರೋಪಿಗಳನ್ನು ಬಂಧಿಸಿದ್ದಾರೆ. ಪೊಲೀಸರ ವೈಫಲ್ಯದ ಪ್ರಶ್ನೆ ಇಲ್ಲ. ತನಿಖೆ ನಡೆಸಿ ಕ್ರಮ ಜರುಗಿಸಲು ಗೃಹಸಚಿವ ಆರಗ ಜ್ಞಾನೇಂದ್ರ ಅವರಿಗೆ ಸೂಚಿಸಿದ್ದೇನೆ’ ಎಂದರು.

‘ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ರಕ್ಷಣೆಗೆ ಸರ್ಕಾರ ಬದ್ಧವಾಗಿದೆ. ಎರಡೂ ರಾಜ್ಯಗಳ ಪೊಲೀಸ್ ಮಹಾನಿರ್ದೇಶಕರು ಮತ್ತು ಗೃಹ ಇಲಾಖೆಯ ಕಾರ್ಯದರ್ಶಿಗಳು ಚರ್ಚೆ ನಡೆಸಲಿದ್ದಾರೆ. ಅಗತ್ಯ ಬಿದ್ದರೆ, ನಾನೂ ಮಹಾರಾಷ್ಟ್ರದ ಮುಖ್ಯಮಂತ್ರಿ ಜತೆ ಮಾತನಾಡುತ್ತೇನೆ’ ಎಂದರು.

ವಿಶ್ವ ಬ್ಯಾಡ್ಮಿಂಟನ್: ಫೈನಲ್‌ಗೆ ಕಿದಂಬಿ ಶ್ರೀಕಾಂತ್

ಯುವೆಲಾ, ಸ್ಪೇನ್ (ಪಿಟಿಐ): ಕಿದಂಬಿ ಶ್ರೀಕಾಂತ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ಗೆ ಲಗ್ಗೆ ಇಟ್ಟರು. ಈ ಸಾಧನೆ ಮಾಡಿದ ಭಾರತದ ಮೊದಲ ಆಟಗಾರನೆಂಬ ಹೆಗ್ಗಳಿಕೆ ಅವರದ್ದಾಯಿತು.

ಕೆ. ಶ್ರೀಕಾಂತ್

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಶ್ರೀಕಾಂತ್ 17-21 21-14 21-17 ರಿಂದ ಭಾರತದವರೇ ಆದ ಲಕ್ಷ್ಯ ಸೇನ್ ವಿರುದ್ಧ ಜಯಿಸಿದರು. ಪುರುಷರ ವಿಭಾಗದಲ್ಲಿ ಈ ಹಿಂದೆ ಪ್ರಕಾಶ್ ಪಡುಕೋಣೆ, ಬಿ. ಸಾಯಿಪ್ರಣೀತ್ ಅವರು ಕಂಚಿನ ಪದಕ ಗೆದ್ದಿದ್ದರು. ಆದರೆ ಫೈನಲ್ ಪ್ರವೇಶಿಸಲು ಸಾಧ್ಯವಾಗಿರಲಿಲ್ಲ. ಶ್ರೀಕಾಂತ್ ಆ ಸಾಧನೆ ಮಾಡಿದರು. ಲಕ್ಷ್ಯ ಕಂಚು ಪಡೆಯಲಿದ್ದಾರೆ.

ವಿವರ 13

ಚಿನಕುರಳಿ
ಪ್ರಕಾಶ್ ಶೆಟ್ಟಿ

ರಾಜ್ಯದಲ್ಲಿ ಮತ್ತೆ ಆರು ಮಂದಿಗೆ ಓಮೈಕ್ರಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು/ಮಂಗಳೂರು: ರಾಜ್ಯದಲ್ಲಿ ಮತ್ತೆ ಆರು ಜನರಲ್ಲಿ ಕೊರೊನಾ ರೂಪಾಂತರಿ ವೈರಾಣು ಓಮೈಕ್ರಾನ್ ಪತ್ತೆಯಾಗಿದೆ. ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ (ಜೀನೋಮ್ ಸೀಕ್ವೆನ್ಸಿಂಗ್) ಪರೀಕ್ಷಾ ವರದಿಯಿಂದ ಇದು ದೃಢಪಟ್ಟಿದೆ.



ಇದರೊಂದಿಗೆ ರಾಜ್ಯದಲ್ಲಿ ಓಮೈಕ್ರಾನ್ ಸೋಂಕಿತರ ಸಂಖ್ಯೆ 14ಕ್ಕೆ ಏರಿದೆ.

ಬ್ರಿಟನ್‌ನಿಂದ ಕೋವಿಡ್ ಹೊಂದಿಲ್ಲ ಎಂಬ ವರದಿ ಪಡೆದು ಡಿ.10ರಂದು ಬೆಂಗಳೂರಿಗೆ ಬಂದಿದ್ದ 18 ವರ್ಷದ ಯುವತಿಯನ್ನು (ರೋಗಿ ಸಂಖ್ಯೆ-9) ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿತ್ತು. ಸೋಂಕು ದೃಢಪಟ್ಟಿದ್ದರಿಂದ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಯುವತಿಗೆ ಮೂವರು ನೇರ ಸಂಪರ್ಕಿತರು ಹಾಗೂ 16 ಮಂದಿ ಪರೋಕ್ಷ ಸಂಪರ್ಕಿತರಿದ್ದು, ಅವರನ್ನೆಲ್ಲಾ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿದೆ. ಯಾರಿಗೂ ಸೋಂಕು ತಗುಲಿಲ್ಲ. ಯುವತಿಯು ಫೈಜರ್ ಲಸಿಕೆಯ ಎರಡು ಡೋಸ್‌ಗಳನ್ನೂ ಬ್ರಿಟನ್‌ನಲ್ಲಿ ಪಡೆದಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಐವರಲ್ಲಿ ಓಮೈಕ್ರಾನ್ ದೃಢಪಟ್ಟಿದೆ. 19 ವರ್ಷದ ಯುವತಿಯನ್ನು (ರೋಗಿ ಸಂಖ್ಯೆ-10) ಡಿ.8ರಂದು ಮಂಗಳೂರಿನ ಕಾಲೇಜಿನಲ್ಲಿ ಪರೀಕ್ಷೆಗೆ ಒಳಪಡಿಸಲಾಗಿತ್ತು. ಉಳಿದ ನಾಲ್ವರು ವಿದ್ಯಾರ್ಥಿನಿಯರು 14 ವರ್ಷದೊಳಗಿನವರು. ಅವರನ್ನು ಬಂಟ್ವಾಳದ ಕಾಲೇಜಿನಲ್ಲಿ ಪರೀಕ್ಷೆಗೊಳಪಡಿಸಿದಾಗ ಸೋಂಕು ತಗುಲಿದ್ದು ಖಾತರಿ ಯಾಗಿತ್ತು. ಸೋಂಕಿತರು ಅಥವಾ ಅವರ ಪೋಷಕರು ಕೇರಳ ರಾಜ್ಯ ಅಥವಾ ಅಂತರ ರಾಷ್ಟ್ರೀಯ ಪ್ರಯಾಣ ಮಾಡಿರುವವರಲ್ಲ. 19 ವರ್ಷದ ಯುವತಿ ಲಸಿಕೆಯ ಎರಡೂ ಡೋಸ್ ಪಡೆದವರಾಗಿದ್ದಾರೆ. ಆಕೆಯಲ್ಲಿ ರೋಗ ಲಕ್ಷಣಗಳು ಇಲ್ಲ.

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4

‘ಸುಪ್ರೀಂ’ ನಿವೃತ್ತ ನ್ಯಾಯಮೂರ್ತಿ ನಾನಾವತಿ ವಿಧಿವಶ

ಅಹಮದಾಬಾದ್: ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಜಿ.ಟಿ.ನಾನಾವತಿ (87) ಅವರು ಹೃದಯಾಘಾತದಿಂದಾಗಿ ಅಹಮದಾಬಾದ್‌ನ ತಮ್ಮ ನಿವಾಸದಲ್ಲಿ ಶನಿವಾರ ನಿಧನರಾದರು ಎಂದು ಅವರ ಕುಟುಂಬದವರು ತಿಳಿಸಿದ್ದಾರೆ.

2002ರಲ್ಲಿ ಗುಜರಾತ್‌ನ ಗೋದ್ರಾ ಗಲಭೆಯ ಬಳಿಕ ನಡೆದ ಹಿಂಸಾಚಾರ ಮತ್ತು ದೆಹಲಿಯಲ್ಲಿ 1984ರಲ್ಲಿ ನಡೆದ ಸಿಖ್ ವಿರೋಧಿ ದಂಗೆಗಳ ಬಗ್ಗೆ ತನಿಖೆಗೆ ನಾನಾವತಿ ಅವರ ನೇತೃತ್ವದಲ್ಲಿ ಆಯೋಗ ರಚಿಸಲಾಗಿತ್ತು. 1935ರ ಫೆಬ್ರುವರಿಯಲ್ಲಿ ಜನಿಸಿದ ಅವರು, 1979ರಲ್ಲಿ ಗುಜರಾತ್ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡರು. ಬಳಿಕ, 1995ರಲ್ಲಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ಬಡ್ತಿ ಪಡೆದು, 2000ದಲ್ಲಿ ನಿವೃತ್ತರಾದರು.

ಗೋದ್ರಾ ಗಲಭೆಯ ಬಳಿಕ ನಡೆದ ಘಟನೆಗಳ ಬಗ್ಗೆ ಅಂತಿಮ ತನಿಖಾ ವರದಿಯನ್ನು ಅವರು 2014ರಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದರು. ಇದನ್ನು ಡಿಸೆಂಬರ್ 2019ರಲ್ಲಿ ಗುಜರಾತ್ ವಿಧಾನಸಭೆಯಲ್ಲಿ ಮಂಡಿಸಲಾಗಿತ್ತು. ಈ ವರದಿಯಲ್ಲಿ ಗುಜರಾತ್‌ನ ಆಗಿನ ಮುಖ್ಯಮಂತ್ರಿ ನರೇಂದ್ರ ಮೋದಿ ಮತ್ತು ಅವರ ಸಂಪುಟ ಸಹೋದ್ಯೋಗಿಗಳಿಗೆ ‘ಕ್ಲೀನ್ ಚಿಟ್’ ನೀಡಲಾಗಿತ್ತು.

ಭಾಷೆಗಳ ಬೆಳವಣಿಗೆ ಅಸಮತೋಲನ: ಕಳವಳ

50 ವರ್ಷಗಳಲ್ಲಿ ಕನ್ನಡದ ಬೆಳವಣಿಗೆ ಸ್ಥಗಿತ?

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ‘ದೇಶದಲ್ಲಿ ಭಾಷೆಗಳ ಬೆಳವಣಿಗೆ ಅಸಮತೋಲನದಿಂದ ಕೂಡಿದೆ. ಯುನೆಸ್ಕೊದ ಅಧ್ಯಯನ ವರದಿಯಂತೆ, 50 ವರ್ಷಗಳಲ್ಲಿ ಕನ್ನಡ ಭಾಷೆಯ ಬೆಳವಣಿಗೆಯೂ ಸ್ಥಗಿತಗೊಳ್ಳುವ ಅಪಾಯವಿದೆ’ ಎಂದು ವಿದ್ವಾಂಸ ಪುರುಷೋತ್ತಮ ಬಿಳಿಮಳೆ ಕಳವಳ ವ್ಯಕ್ತಪಡಿಸಿದರು.

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ‘ಭಾರತೀಯ ಬಹುಭಾಷೆಗಳ ಭವಿಷ್ಯ’ ಕುರಿತ ಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ದೇಶದಲ್ಲಿ ಸಮಗ್ರ ರಾಷ್ಟ್ರೀಯ ಭಾಷಾ ನೀತಿಯನ್ನು ಜಾರಿಗೊಳಿಸುವ ಅಗತ್ಯವಿದೆ’ ಎಂದು ಪ್ರತಿಪಾದಿಸಿದರು.

ಬೆಂಗಳೂರು ಸಾಹಿತ್ಯ ಉತ್ಸವದ ಗೋಷ್ಠಿಯಲ್ಲಿ ವಿದ್ವಾಂಸ ಪುರುಷೋತ್ತಮ ಬಿಳಿಮಲೆ ಅವರು ಶನಿವಾರ ಮಾತನಾಡಿದರು. ಶಕೀರಾ ಜಬೀನ್ ಬಿ. ಇದ್ದಾರೆ
–ಪ್ರಜಾವಾಣಿ ಚಿತ್ರ

‘1971ರಿಂದ 2011ರವರೆಗಿನ ಜನಗಣತಿ ಆಧಾರದಲ್ಲಿ ನಡೆಸಲಾದ ವಿಶ್ಲೇಷಣೆ ಪ್ರಕಾರ ಹಿಂದಿ ಮಾತನಾಡುವವರ ಸಂಖ್ಯೆ ಶೇ 56ರಷ್ಟು ಬೆಳವಣಿಗೆಯಾಗಿದೆ. ಆದರೆ, ಕನ್ನಡ ಮಾತನಾಡುವವರ ಸಂಖ್ಯೆ ಶೇ 3.75ರಷ್ಟು ಮಾತ್ರ ಹೆಚ್ಚಳವಾಗಿದೆ. ತಮಿಳು ಮತ್ತು ತೆಲುಗು ಭಾಷಿಕರ ಪ್ರಮಾಣ ಶೇ 9ರಷ್ಟು ಹಾಗೂ ತುಳು ಭಾಷಿಕರ ಪ್ರಮಾಣ ಶೇ 7ರಷ್ಟು ಏರಿಕೆ ಆಗಿದೆ. ಹಿಂದಿ ಭಾಷೆಗೆ ಹೋಲಿಸಿದಾಗ ಕನ್ನಡದ ಬೆಳವಣಿಗೆ ಪ್ರಮಾಣ ತೀರಾ ಕಡಿಮೆ. ಇದೇ ಪರಿಸ್ಥಿತಿ ಮುಂದುವರಿದರೆ 100 ವರ್ಷಗಳ ಬಳಿಕ ಕನ್ನಡ ಅವನತಿಯತ್ತ ಸಾಗಲಿದೆ’ ಎಂದು ಅವರು ಎಚ್ಚರಿಸಿದರು.

‘ಎಂಟನೇ ತರಗತಿವರೆಗಿನ ಕಲಿಕೆ ಮಕ್ಕಳ ಆಡುಭಾಷೆಯಲ್ಲೇ ಆಗಬೇಕು ಎಂದು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (ಎನ್‌ಇಪಿ) ಹೇಳಲಾಗಿದೆ. ರಾಜ್ಯ ಸರ್ಕಾರ ಉನ್ನತ ಶಿಕ್ಷಣದ ಹಂತದಲ್ಲಿ ಎನ್‌ಇಪಿ ಜಾರಿಗೊಳಿಸುವ ಬದಲು ಈ ಮೂಲ ಅಂಶಗಳನ್ನು ಮೊದಲು ಜಾರಿಗೊಳಿಸಬೇಕು’ ಎಂದರು.

ಅಂಕಿ-ಅಂಶಗಳು

19,569
2011ರ ಜನಗಣತಿ ಪ್ರಕಾರ ದೇಶದಲ್ಲಿರುವ ಒಟ್ಟು ಭಾಷೆಗಳು

40
ಹತ್ತು ಲಕ್ಷಕ್ಕಿಂತಲೂ ಹೆಚ್ಚು ಜನರು ಮಾತನಾಡುವ ಭಾಷೆಗಳು

60
ಒಂದು ಲಕ್ಷಕ್ಕಿಂತ ಹೆಚ್ಚು ಜನರು ಮಾತನಾಡುವ ಭಾಷೆಗಳು

122
ಹತ್ತು ಸಾವಿರಕ್ಕಿಂತ ಹೆಚ್ಚು ಮಂದಿ ಬಳಸುವ ಭಾಷೆಗಳು

343
ಕೇಂದ್ರ, ರಾಜ್ಯ ಸರ್ಕಾರಗಳ ಮನ್ನಣೆ ಪಡೆದ ಒಟ್ಟು ಭಾಷೆಗಳು

7ನೇ ಪುಟ ನೋಡಿ

PhonePe ಇನ್ಶುರೆನ್ಸ್ ಬ್ರೋಕಿಂಗ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (IRDAI ನೋಂ. 766) ಡೈರೆಕ್ಟ್ ಬ್ರೋಕರ್ – ಲೈಫ್ ಮತ್ತು ಜನರಲ್ – ಆಗಸ್ಟ್ 10, 2024ರ ವರೆಗೆ ಮಾನ್ಯ. CIN - U66000KA2020FTC132814. ನೋಂದಾಯಿತ ಕಚೇರಿ – ಕಚೇರಿ-2, ಮಹಡಿ 4,5,6,7, ವಿಂಗ್ A, ಬ್ಲಾಕ್ A, ಸಲಾರ್ಪುರಿಯಾ ಸಾಫ್ಟ್ ಜೋನ್, ಸರ್ವೀಸ್ ರೋಡ್, ಗ್ರೀನ್ ಗ್ಲೆನ್ ಲೇಔಟ್, ಬೆಳ್ಳಂದೂರು, ಬೆಂಗಳೂರು, ಕರ್ನಾಟಕ – 560103. ಮಾರಾಟವನ್ನು ಮುಕ್ತಾಯ ಮಾಡುವುದಕ್ಕಿಂತ ಮೊದಲು ಸಂಬಂಧಿಸಿದ ವಿಮೆದಾರರ ಮಾರಾಟ ಕೈಪಿಡಿಯನ್ನು ದಯವಿಟ್ಟು ಗಮನವಿಟ್ಟು ಓದಿ. PhonePe ಟ್ರೇಡ್ ಲೋಗೋದ ಮಾಲೀಕತ್ವವನ್ನು PhonePe ಪ್ರೈವೇಟ್ ಲಿಮಿಟೆಡ್ ಹೊಂದಿದೆ ಮತ್ತು ಬಳಕೆದಾರರ ಲೈಸೆನ್ಸ್ ಕರಾರು ಅಡಿಯಲ್ಲಿ PhonePe ಇನ್ಶುರೆನ್ಸ್ ಬ್ರೋಕಿಂಗ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಬಳಸಿದೆ. ಜಾಹೀರಾತು ಕೋಡ್: PM/197
*ಸ್ವಂತ ಹಾನಿ ಕವರ್ ಮತ್ತು ಆಯ್ದ ಮೇಕ್ – ಮಾಡೆಲ್ ಗಳ ಮೇಲೆ ಹಿಂದಿನ ಟ್ಯಾರಿಫ್ ದರಗಳಿಗೆ ಉಲ್ಲೇಖಿಸಿದ ರಿಯಾಯಿತಿಯು ಇರುತ್ತದೆ ಮತ್ತು ಎಲ್ಲ ಮಾದರಿಗಳು ಈ ರಿಯಾಯಿತಿಯನ್ನು ಹೊಂದಿರುವುದಿಲ್ಲ.
#ಅವಧಿ ಮೀರಿದ ವಿಮೆ ಪಾಲಿಸಿಯ ನವೀಕರಣವಿದ್ದಲ್ಲಿ, 72 ಗಂಟೆಗಳ ನಂತರ ಕವರ್ ಆರಂಭವಾಗುತ್ತದೆ.

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಜಯಚಾಮರಾಜೇಂದ್ರ ಒಡೆಯರ ಜನಸೇವೆಗೆ ನಿದರ್ಶನ

‘ರಾಜಾಜಿನಗರ’ ಅಡಿಗಲ್ಲಿನ ‘ಸ್ತಂಭ’ಕ್ಕೆ 72 ವರ್ಷ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು ನಮ್ಮ ಹೆಮ್ಮೆ...

ಬೆಂಗಳೂರು: ನಗರದ ಪ್ರಮುಖ ಪ್ರದೇಶಗಳಲ್ಲಿ ಒಂದಾದ ‘ರಾಜಾಜಿನಗರ’, ಹಲವು ಪ್ರೇಕ್ಷಣೀಯ ಹಾಗೂ ವಾಣಿಜ್ಯ ಸ್ಥಳಗಳ ತಾಣ. ಇಸ್ಕಾನ್ ದೇವಸ್ಥಾನ, ವಿಶ್ವ ವ್ಯಾಪಾರ ಕೇಂದ್ರ ಹಾಗೂ ಹಲವು ವಿಶೇಷತೆಗಳ ಮೂಲಕ ಚಿರಪರಿಚಿತವಾದ ಪ್ರದೇಶವೂ ಹೌದು. ಇಂಥ ‘ರಾಜಾಜಿನಗರ’ ನಿರ್ಮಾಣ ಕಥೆ ಹೇಳುವ ‘ಸ್ತಂಭ’ಕ್ಕೀಗ 72 ವರ್ಷ.

ಇಂದು ಬೃಹತ್ ಆಕಾರದಲ್ಲಿ ಬೆಳೆದಿರುವ ರಾಜಾಜಿನಗರ, ಮೈಸೂರಿನ ರಾಜ ಜಯಚಾಮರಾಜೇಂದ್ರ ಅವರ ಜನಸೇವೆಗೆ ನಿದರ್ಶನ. ರಾಜಾಜಿನಗರ ನಿರ್ಮಿಸಿದ ಸವಿನೆನಪಿನ ಅಡಿಗಲ್ಲಾಗಿ ಸ್ತಂಭವನ್ನು ಒಡೆಯರ ಅವರು ನಿರ್ಮಿಸಿದ್ದು, ಈ ಸ್ಥಳವನ್ನು ಉದ್ಯಾನವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ.

ಮೈಸೂರು ಸ್ಯಾಂಡಲ್ ಸೋಪ್ ಫ್ಯಾಕ್ಟರಿ ಮೆಟ್ರೊ ನಿಲ್ದಾಣದ ಎದುರಿನ ರಾಜಾಜಿನಗರ ಫೌಂಡೇಷನ್ ಉದ್ಯಾನದಲ್ಲಿ ಸ್ತಂಭವಿದೆ. ‘ರಾಜಾಜಿ’ ಹೆಸರಿನಿಂದ ಆರಂಭವಾದ ಪ್ರದೇಶ, ‘ರಾಜಾಜಿನಗರ’ ಆಗಿ ಮಾರ್ಪಟ್ಟ ಇತಿಹಾಸವನ್ನು ಈ ಸ್ತಂಭ ತಿಳಿಸುತ್ತಿದೆ.

9ನೇ ಪಟ್ಟಾಭಿಷೇಕದ ಕೊಡುಗೆ: ಜನಪರವಾಗಿದ್ದ ಜಯಚಾಮರಾಜೇಂದ್ರ ಅವರು, ಶಾಶ್ವತವಾಗಿ ಉಳಿಯುವ ಯೋಜನೆಗಳ ಬಗ್ಗೆ ಹೆಚ್ಚು ಗಮನ ಹರಿಸುತ್ತಿದ್ದರು. ತಮ್ಮ ಪಟ್ಟಾಭಿಷೇಕದ 8ನೇ ವರ್ಷದ ನೆನಪಿನಲ್ಲಿ ಜಯನಗರ ನಿರ್ಮಿಸಿ, ಅದರ ಉದ್ಘಾಟನೆಗೆ ಅಶೋಕ ಸ್ತಂಭ ನಿಲ್ಲಿಸಿದ್ದರು. 1948ರಲ್ಲಿ ನಿರ್ಮಿಸಿದ್ದ ಸ್ತಂಭ ಇಂದು ಪ್ರವಾಸ ಸ್ಥಳವಾಗಿದೆ.

ಪಟ್ಟಾಭಿಷೇಕದ 9ನೇ ವರ್ಷದ ನೆನಪಿನಲ್ಲಿ 1,000 ಎಕರೆ ವಸತಿ ಪ್ರದೇಶ ಹಾಗೂ 500 ಎಕರೆ ಕೈಗಾರಿಕಾ ಪ್ರದೇಶ ನಿರ್ಮಿಸಲು ಜಯಚಾಮರಾಜೇಂದ್ರ ಒಡೆಯರ್ ತೀರ್ಮಾನಿಸಿದ್ದರು. ಅದರ ಫಲವಾಗಿಯೇ 1949ರಲ್ಲಿ ರಾಜಾಜಿನಗರ ನಿರ್ಮಾಣ ಶುರುವಾಯಿತೆಂದು ಇತಿಹಾಸ ತಜ್ಞರು ಹೇಳುತ್ತಾರೆ.

ರಾಜಾಜಿನಗರದ ಫೌಂಡೇಷನ್ ಉದ್ಯಾನದಲ್ಲಿರುವ ಸ್ತಂಭ

ಅಂದಿನ ಭಾರತದ ಗವರ್ನರ್ ಜನರಲ್ ಆಗಿದ್ದ ಚಕ್ರವರ್ತಿ ರಾಜಗೋಪಾಲಾಚಾರಿ ಹೆಸರನ್ನು ಈ ಪ್ರದೇಶಕ್ಕೆ ಇರಿಸಲು ಒಡೆಯರ್ ಇಚ್ಛಿಸಿದ್ದರು. ‘ರಾಜಾಜಿ’ ಎಂಬುದು ರಾಜಗೋಪಾಲಾಚಾರಿ ಅವರ ಮತ್ತೊಂದು ಹೆಸರಾಗಿತ್ತು. ಅದನ್ನೇ ಅವರು ಆ ಪ್ರದೇಶಕ್ಕೆ ನಾಮಕರಣ ಮಾಡಿದರು. ನಗರ ಬೆಳೆದಂತೆ, ‘ರಾಜಾಜಿ’ ಎಂಬ ಹೆಸರು ‘ರಾಜಾಜಿನಗರ’ ಆಗಿ ಮಾರ್ಪಟ್ಟಿದೆ.

ಉದ್ಯಾನದಲ್ಲಿ ಪ್ರವೇಶ: ಸ್ತಂಭ ಇರುವ ಜಾಗವನ್ನು ಅಭಿವೃದ್ಧಿಪಡಿಸಿ ಉದ್ಯಾನ ಮಾಡುವ ಕೆಲಸ ಪ್ರಗತಿಯಲ್ಲಿದೆ. ಈ ಭಾಗದಲ್ಲಿ ಹಾದು ಹೋಗುವ ಸಾರ್ವಜನಿಕರು, ಉದ್ಯಾನದೊಳಗೆ ಪ್ರವೇಶಿಸಿ ಸ್ತಂಭ ವೀಕ್ಷಿಸಲೂ ಅವಕಾಶವಿದೆ.

ರಾಜಾಜಿನಗರ ನಿರ್ಮಾಣ ಕೆಲಸದ ಉದ್ಘಾಟನೆಗಾಗಿ ನಿಲ್ಲಿಸಿರುವ ಈ ಸ್ತಂಭ, ನಮ್ಮ ಬೆಂಗಳೂರಿನ ಹೆಮ್ಮೆಯೂ ಹೌದು.

ಬೆಳಿಗ್ಗೆ 5ರಿಂದ ಮೆಟ್ರೊ ಸಂಚಾರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 20ರಿಂದ ಮೆಟ್ರೊ ರೈಲುಗಳ ಸಂಚಾರ ಬೆಳಿಗ್ಗೆ 5 ಗಂಟೆಯಿಂದ ಆರಂಭಗೊಳ್ಳಲಿದೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ತಿಳಿಸಿದೆ.

ಪ್ರಸ್ತುತ ಬೆಳಿಗ್ಗೆ 6 ಗಂಟೆಯಿಂದ ಮೆಟ್ರೊ ಸೇವೆ ಆರಂಭಗೊಳ್ಳುತ್ತಿತ್ತು. ಇದೇ 20ರಿಂದ ಒಂದು ಗಂಟೆ ಮುಂಚಿತವಾಗಿ ಮೆಟ್ರೊ ಸೇವೆ ಆರಂಭಗೊಳ್ಳಲಿದೆ.

ಸೋಮವಾರದಿಂದ ಶನಿವಾರದವರೆಗೆ ಬೆಳಿಗ್ಗೆ 5 ಗಂಟೆಯಿಂದಲೇ ಮೆಟ್ರೊ ರೈಲುಗಳು ಸಂಚರಿಸಲಿವೆ. ಭಾನುವಾರ ಎಂದಿನಂತೆ ಬೆಳಿಗ್ಗೆ 7 ಗಂಟೆಯಿಂದ ಮೆಟ್ರೊ ಸೇವೆ ಇರಲಿದೆ. ‘ನಾಗಸಂದ್ರ, ರೇಷ್ಮೆ ಸಂಸ್ಥೆ, ಕೆಂಗೇರಿ, ಬೈಯಪ್ಪನಹಳ್ಳಿ ನಿಲ್ದಾಣಗಳಿಂದ ಮೊದಲ ರೈಲುಗಳು ಬೆಳಿಗ್ಗೆ 5 ಗಂಟೆಯಿಂದ ಹೊರಡಲಿವೆ. ಎಲ್ಲ ಟರ್ಮಿನಲ್‌ಗಳಿಂದ ರಾತ್ರಿ 11 ಗಂಟೆಗೆ ಹಾಗೂ ನಾಡಪ್ರಭು ಕೆಂಪೇಗೌಡ ನಿಲ್ದಾಣದಿಂದ ರಾತ್ರಿ 11.30ಕ್ಕೆ ಕೊನೆಯ ರೈಲುಗಳು ಹೊರಡಲಿವೆ’ ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ಹಿಂದೂಸ್ತಾನಿ ಗಾಯಕ ಎಂ.ವಿ. ಹೆಗಡೆ ಅವರಿಗೆ ಸುರ್ ಸಂಗೀತ್ ಸಾಧಕ್ ಪ್ರಶಸ್ತಿ ಪ್ರದಾನ:ಎಚ್.ಎಸ್. ವೆಂಕಟೇಶ ಮೂರ್ತಿ, ಉದ್ಘಾಟನೆ–ಭಾಸ್ಕರ್ ಜೋಶಿ, ಅಧ್ಯಕ್ಷತೆ–ಅನಂತ್ ಭಾಗ್ವತ್, ಆಯೋಜನೆ–ಸುರ್ ಸಂಗೀತ್ ಅಕಾಡೆಮಿ, ಸ್ಥಳ–ಜಯರಾಮ ಸೇವಾ ಮಂಡಲಿ, ಜಯನಗರ, ಬೆಳಿಗ್ಗೆ 9

ಡಿಸೈನೂರು:ಇಂಟ್ಯಾಕ್ ಬೆಂಗಳೂರು ವತಿಯಿಂದ ‘ಇತಿಹಾಸ ಮತ್ತು ಸಂರಕ್ಷಣೆ’ ಕುರಿತು ಚರ್ಚೆ, ಆಯೋಜನೆ–ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಇಂಟೀರಿಯರ್ ಡಿಸೈನರ್ಸ್ (ಐಐಐಡಿ), ಸ್ಥಳ–ರಂಗೋಲಿ ಕೇಂದ್ರ, ಎಂ.ಜಿ.ರಸ್ತೆ, ಬೆಳಿಗ್ಗೆ 9ರಿಂದ

ಕನಕದಾಸ ಜಯಂತಿ ಹಾಗೂ ಬಹುಮಾನ ವಿತರಣೆ:ಸಾನ್ನಿಧ್ಯ–ಯೋಗೇಶ್ವರಾನಂದ ಸ್ವಾಮೀಜಿ, ಕಾಶೀನಾಥ ಸ್ವಾಮೀಜಿ, ರೇವಣಸಿದ್ಧೇಶ್ವರ ಸ್ವಾಮೀಜಿ, ಅತಿಥಿಗಳು–ಸಿದ್ದರಾಮಯ್ಯ, ಎಚ್.ಎಂ.ರೇವಣ್ಣ, ಬಂಡೆಪ್ಪ ಕಾಶಂಪೂರ, ಕಾ.ತಾ.ಚಿಕ್ಕಣ್ಣ, ಆಚಾರ್ಯ ನಾಗರಾಜು, ಹೇಮ ಶೇಖರ್, ಆರ್.ಕೆ.ರಮೇಶ್, ಚಿಕ್ಕರೇವಣ್ಣ, ಆರ್. ಶಿವಮಾದಯ್ಯ, ಆಯೋಜನೆ–ಚಂದ್ರಗುಪ್ತ ಮೌರ್ಯ ಸೇವಾ ಸಂಘ, ಸ್ಥಳ–ಜೆಎಸ್‌ಎಸ್ ಕನ್ವೆಂಷನ್ ಹಾಲ್, ಕೋಣನಕುಂಟೆ, ಬೆಳಿಗ್ಗೆ 9.30

ಭೀಮಸೇನ್ ಜೋಶಿ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ‘ಭೀಮಪಲಾಸ’ ಸಂಗೀತೋತ್ಸವ (ಬೆಳಿಗ್ಗೆ 9.45):ಅತಿಥಿಗಳು–ಬೆಂಗಳೂರು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಬಿ.ಆರ್.ರವಿಕಾಂತೇಗೌಡ, ಮುಂಬೈನ ಎಲ್‌ಐಸಿ ಹೌಸಿಂಗ್ ಫೈನಾನ್ಸ್ ವ್ಯವಸ್ಥಾಪಕ ನಿರ್ದೇಶಕ ವಿಶ್ವನಾಥ್ ಗೌಡ, ಹೈದರಾಬಾದ್ ವಲಯ ವ್ಯವಸ್ಥಾಪಕ ಎಂ.ಜಗನ್ನಾಥ್, ಮುಂಬೈ ವಲಯದ ಜಂಟಿ ಪ್ರಧಾನ ವ್ಯವಸ್ಥಾಪಕ ಎನ್.ಮಹೇಶ್, ಆಯೋಜನೆ–ಜಿ.ಬಿ. ಜೋಶಿ ಮೆಮೊರಿಯಲ್ ಟ್ರಸ್ಟ್, ಸ್ಥಳ–ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಬೆಳಿಗ್ಗೆ 10ರಿಂದ ಸಂಗೀತ ಕಾರ್ಯಕ್ರಮಗಳು ನಡೆಯಲಿವೆ.

ಸಂಸ್ಕೃತ ಸಿರಿ ಪ್ರಶಸ್ತಿ ಪ್ರದಾನ ಹಾಗೂ ಪುನೀತ್ ರಾಜ್‌ಕುಮಾರ್ ಅವರಿಗೆ ಗೀತಗಮನ:ಉದ್ಘಾಟನೆ–ನಾರಾಯಣ ನೇತ್ರಾಲಯದ ಅಧ್ಯಕ್ಷ ಕೆ.ಭುಜಂಗ ಶೆಟ್ಟಿ, ಪ್ರಶಸ್ತಿ ಪ್ರದಾನ–ಮಲ್ಲೇಪುರಂ ಜಿ.ವೆಂಕಟೇಶ್, ಅತಿಥಿಗಳು–ಬಿ.ಕೆ. ಶಿವರಾಂ, ಮಾಧವ, ಹಿ.ಚಿ. ಬೋರಲಿಂಗಯ್ಯ, ಅಧ್ಯಕ್ಷತೆ–ವೇಮಗಲ್ ನಾರಾಯಣಸ್ವಾಮಿ, ಪುರಸ್ಕೃತರು–ಮಂಜಮ್ಮ ಜೋಗತಿ, ವೈ.ಕೆ. ಮುದ್ದುಕೃಷ್ಣ, ಶ್ರೀನಿವಾಸ್ ಜಿ.ಕಪ್ಪಣ್ಣ, ಬಾನಂದೂರು ಕೆಂಪಯ್ಯ, ಲೀಲಾ ಸಂಪಿಗೆ, ರೋಹಿಣಿ ಮೋಹನ್, ಸಿರಿಗಂಧ ಶ್ರೀನಿವಾಸಮೂರ್ತಿ, ಕೆ.ರೇವಣ್ಣ, ಆಯೋಜನೆ–ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಪ್ರತಿಷ್ಠಾನ, ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10

ಸಿರಿಮೂರ್ತಿ ಕಾಸರವಳ್ಳಿ ಅವರ ‘ವಸುಂಧರೆ’ ಕಾದಂಬರಿ ಬಿಡುಗಡೆ:ಗಜಾನನ ಶರ್ಮ, ಅಧ್ಯಕ್ಷತೆ–ಅಶ್ವತ್ಥನಾರಾಯಣ ಅವಧಾನಿ, ಅತಿಥಿ–ಸಿ.ವಿ.ಗಿರಿಧರ ಶಾಸ್ತ್ರಿ, ಸ್ಥಳ–ನಗರ ಕೇಂದ್ರ ಗ್ರಂಥಾಲಯದ ಸಭಾಂಗಣ, ಹಂಪಿನಗರ, ಬೆಳಿಗ್ಗೆ 10

ಆರ್.ಜಯಕುಮಾರ್ ಸಂಪಾದಕತ್ವದ ‘ತುಳು–ಕೊಡವ ಭಾಷೆಗಳ ಅಳಿವು ಉಳಿವು’ ಪುಸ್ತಕ ಬಿಡುಗಡೆ:ಸಾಹಿತಿ ಪುರುಷೋತ್ತಮ ಬಿಳಿಮಲೆ, ಅತಿಥಿಗಳು–ಎಲ್.ಹನುಮಂತಯ್ಯ, ಕೊಡವ ನ್ಯಾಷನಲ್ ಕೌನ್ಸಿಲ್ ಆಯೋಗದ ಅಧ್ಯಕ್ಷ ಎನ್.ಯು.ನಾಚಪ್ಪ ಕೊಡವ, ಅಧ್ಯಕ್ಷತೆ–ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್, ಆಯೋಜನೆ–ಪ್ರಜಾ ಪ್ರಕಾಶನ, ಸ್ಥಳ–ಪರ್ಲ್ ಬ್ಯಾಂಕ್ವೆಟ್ ಹಾಲ್, ಕ್ವೀನ್ಸ್ ರಸ್ತೆ, ಬೆಳಿಗ್ಗೆ 10.30

ನ್ಯಾಷನಲ್ ಕಾಲೇಜು ಘಟಿಕೋತ್ಸವ: ಅತಿಥಿಗಳು–ಎಡಿಜಿಪಿ ಭಾಸ್ಕರ್ ರಾವ್, ಅಧ್ಯಕ್ಷತೆ–ಎ.ಎಚ್.ರಾಮರಾವ್, ಎಸ್.ಎನ್.ನಾಗರಾಜ ರೆಡ್ಡಿ, ಪಿ.ಸದಾನಂದ ಮಯ್ಯ, ಸ್ಥಳ–ಎಚ್.ಎನ್.ಕಲಾಕ್ಷೇತ್ರ, ಬೆಳಿಗ್ಗೆ 10.30

ಕಮಲಾ ಹಂಪನಾ ದತ್ತಿ ಉಪನ್ಯಾಸ: ಪ್ರಶಾಂತ ಜಿ.ನಾಯಕ್, ಅತಿಥಿಗಳು–ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ–ವನಮಾಲಾ ಸಂಪನ್ನಕುಮಾರ್, ಆಯೋಜನೆ–ಕರ್ನಾಟಕ ಲೇಖಕಿಯರ ಸಂಘ, ಸ್ಥಳ–ಜೆ.ಪಿ.ಸಭಾಂಗಣ, ಗಾಂಧಿ ಭವನ, ಬೆಳಿಗ್ಗೆ 10.30

ಭರತನಾಟ್ಯ ರಂಗಪ್ರವೇಶ: ರಂಜನಿ ವೀಣಾ ಬೆಳವಾಡಿ, ಅತಿಥಿಗಳು–ಗಾಯತ್ರಿ ಚಂದ್ರಶೇಖರ್, ವೈ.ಕೆ. ಸಂಧ್ಯಾಶರ್ಮ, ಲೂಯಿಸ್ ಡಿಯಾಸ್, ಆಯೋಜನೆ–ನಾಟ್ಯ ಸಂಕುಲ, ಸ್ಥಳ–ಜೆಎಸ್‌ಎಸ್ ಸಭಾಂಗಣ, ಜಯನಗರ 7ನೇ ಬ್ಲಾಕ್, ಸಂಜೆ 6

ರಂಜನಿ ವೀಣಾ ಬೆಳವಾಡಿ

‘ಸತ್ಯಜಿತ್ ರೇ ನಿರ್ದೇಶಿಸಿರುವ ಮಕ್ಕಳ ಚಿತ್ರಗಳು’ ಉಪನ್ಯಾಸ: ಉತ್ಥಾನ್ ಭಾರಿಘಾಟ್, ಆಯೋಜನೆ–ಸಮುದಾಯ ಕರ್ನಾಟಕ, ಸಹಯಾನ ಹಾಗೂ ವಿವಿಧ ಸಂಘಟನೆಗಳು, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಮಣ್ಣಿನ ದಿನದ ಅಂಗವಾಗಿ ವಿವಿಧ ರೀತಿಯ ಮಣ್ಣಿನ ಪ್ರದರ್ಶನ: ಆಯೋಜನೆ ಮತ್ತು ಸ್ಥಳ–ರಾಗಿ ಕಣ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11

ಎಸ್.ವಿ.ನಾರಾಯಣಸ್ವಾಮಿ ರಾವ್ ಸ್ಮಾರಕ ಅಂತರರಾಷ್ಟ್ರೀಯ ಸಂಗೀತ ಉತ್ಸವ:ಬೆಳಿಗ್ಗೆ 9.30ಕ್ಕೆ ಬಿ.ಕೆ. ಅನಂತರಾಮ್ ಅವರಿಂದ ಕೊಳಲು ವಾದನ, ಬೆಳಿಗ್ಗೆ 11.15ಕ್ಕೆ ಟಿ.ಎನ್. ಶೇಷಗೋಪಾಲನ್ ಅವರಿಂದ ಗಾಯನ, ಮಧ್ಯಾಹ್ನ 2.30ಕ್ಕೆ ಮುರಳೀಧರ ಕಂಚಿ, ಸಂಜೆ 4ಕ್ಕೆ ಜಿ.ರವಿಕಿರಣ್ ಹಾಗೂ 6.45ಕ್ಕೆ ಸಂದೀಪ್ ನಾರಾಯಣ್ ಅವರಿಂದ ಗಾಯನ, ಆಯೋಜನೆ–ಶ್ರೀರಾಮಸೇವಾ ಮಂಡಲಿ ಟ್ರಸ್ಟ್, ಸ್ಥಳ–ಬೆಂಗಳೂರು ಗಾಯನ ಸಮಾಜದ ಸಭಾಂಗಣ, ಕೆ.ಆರ್.ರಸ್ತೆ

ಸಂಗೀತೋತ್ಸವ ಹಾಗೂ ಗೌರವ ಸಮರ್ಪಣೆ:ಉದ್ಘಾಟನೆ–ವೂಡೇ ಪಿ.ಕೃಷ್ಣ, ಸಂಗೀತ ಸಾಧಕ ಪ್ರಶಸ್ತಿ ಪ್ರದಾನ–ಸಂತೋಷ್ ಹೆಗ್ಡೆ, ಪುರಸ್ಕೃತರು–ಪಂಡಿತ್ ಮೃತ್ಯುಂಜಯ ಶೆಟ್ಟರ್, ಅಧ್ಯಕ್ಷತೆ–ಸತೀಶ್ ಹಂಪಿಹೊಳಿ, ಅತಿಥಿ–ಸುಮನಾ ಕಡೇಕಾರ್, ಆಯೋಜನೆ–ಗುರು ಸಮರ್ಥ ಸಂಗೀತ ವಿದ್ಯಾಲಯ, ಸ್ಥಳ–ಪತ್ತಿ ಸಭಾಂಗಣ, ಎನ್.ಆರ್.ಕಾಲೊನಿ, ಸಂಜೆ 4

ನಟ ಪುನೀತ್ ರಾಜ್‌ಕುಮಾರ್ ಅವರ ನೆನಪಾರ್ಥ ಸುಗಮ ಸಂಗೀತ ಹಾಗೂ ಜಾನಪದ ಗೀತಗಾಯನ:ಅಧ್ಯಕ್ಷತೆ–ಸಚಿವ ವಿ.ಸೋಮಣ್ಣ, ಉದ್ಘಾಟನೆ–ಸಬ್ಬನಹಳ್ಳಿ ರಾಜು, ಆಯೋಜನೆ–ಭೈರವೇಶ್ವರ ಕಲಾ ವೇದಿಕೆ, ಸ್ಥಳ–ಅಗ್ರಹಾರ ದಾಸರಹಳ್ಳಿ, ಸಂಜೆ 4

ಯೋಗೀಂದ್ರ ಮರವಂತೆ ಅವರ ‘ಮುರಿದ ಸೈಕಲ್’ ಹಾಗೂ ಸತೀಶ್ ಚಪ್ಪರಿಕೆ ಅವರ ‘ಥೇಮ್ಸ್ ತಟದ ತವಕ ತಲ್ಲಣ’ ಪುಸ್ತಕಗಳ ಬಿಡುಗಡೆ:ಎಸ್. ಜನಾರ್ದನ, ಜೋಗಿ, ಕೆ.ಸಿ.ರಘು, ವಸಂತ ಶೆಟ್ಟಿ, ರಮೇಶ ಉಡುಪ, ಆಯೋಜನೆ–ನವಕರ್ನಾಟಕ ಪ್ರಕಾಶನ, ಸ್ಥಳ–ಸುಚಿತ್ರ ಫಿಲಂ ಸೊಸೈಟಿ, ಬಿ.ವಿ. ಕಾರಂತ ರಸ್ತೆ, ಬನಶಂಕರಿ ಎರಡನೇ ಹಂತ, ಸಂಜೆ 5

ಸುವರ್ಣ ಮಹೋತ್ಸವ ಸಂಗೀತೋತ್ಸವ:ನಾಗಮಣಿ ಶ್ರೀನಾಥ್ ಅವರಿಂದ ಗಾಯನ, ಆಯೋಜನೆ–ತ್ಯಾಗರಾಜ ಗಾನ ಸಭಾ ಟ್ರಸ್ಟ್, ಸ್ಥಳ–ಜೈಮಾರುತಿ ದೇವಸ್ಥಾನ, ಬಸವೇಶ್ವರ ನಗರ, ಸಂಜೆ 5

ಗುರುಸ್ಮರಣೆ:ಸಂಜೆ 6ಕ್ಕೆ ಭರತನಾಟ್ಯ, 6.45ಕ್ಕೆ ಸಂಚಲನ ವಿಡಿಯೊ ಬಿಡುಗಡೆ, ಅತಿಥಿಗಳು–ಕೆ.ಸಿ.ರಾಮಮೂರ್ತಿ, ಅಧ್ಯಕ್ಷತೆ–ವಿ.ಕೆ.ಆತ್ರೆ, ಆಯೋಜನೆ–ನೂಪುರ, ಭಾರತೀಯ ವಿದ್ಯಾಭವನ, ಸ್ಥಳ–ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6

ಮಾರ್ಗಶೀರ್ಷೋತ್ಸವ:ಶಿವಶ್ರೀ ಸ್ಕಂದ ಪ್ರಸಾದ್ ಮತ್ತು ತಂಡದಿಂದ ನಾಮ ಸಂಕೀರ್ತನೆ, ಆಯೋಜನೆ ಮತ್ತು ಸ್ಥಳ–ಸುರಭಾರತಿ ಸಂಸ್ಕೃತ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಎಚ್‌ಆರ್‌ಬಿಆರ್ ಬಡಾವಣೆ, ಸಂಜೆ 6.30

ಎಂಇಎಸ್ ಪುಂಡಾಟಿಕೆ: ಖಂಡನೆ

ಬೆಂಗಳೂರು: ಎಂ.ಇ.ಎಸ್.ಗೆ ಸೇರಿದ ಕೆಲ ಕಿಡಿಗೇಡಿಗಳು ಸಂಗೊಳ್ಳಿ ರಾಯಣ್ಣ ಪ್ರತಿಮೆ ವಿರೂಪಗೊಳಿಸಿ ದಾಂದಲೆ ಮಾಡಿರುವುದನ್ನು ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ ಖಂಡಿಸಿದೆ.

‘ಶಾಂತಿ ಮತ್ತು ಸಾಮರಸ್ಯವನ್ನು ಕದಡುವ ಇಂತಹ ಪುಂಡಾಟಿಕೆಯು ಸಂವಿಧಾನವು ಕೊಡಮಾಡಿದ ಮೌಲ್ಯಗಳ ವಿರೋಧಿ. ಹೊರ ರಾಜ್ಯದಲ್ಲಿ ವಾಸಿಸುತ್ತಿರುವ ಕನ್ನಡಿಗರು ಸೌಹಾರ್ದಕ್ಕೆ ಆದ್ಯತೆ ನೀಡಿ ಬದುಕುತ್ತಿರುವುದು, ಕರ್ನಾಟಕದಲ್ಲಿ ನೆಲೆಸಿರುವ ಇಂತಹ ಕಿಡಿಗೇಡಿಗಳಿಗೆ ಮಾದರಿಯಾಗಬೇಕು’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಸರ್ಕಾರವು ಈಗಾಗಲೇ ಕೆಲವರನ್ನು ಬಂಧಿಸಿದ್ದು ಸ್ವಾಗತಾರ್ಹ. ಸರ್ಕಾರ ಮತ್ತು ಸಮಾಜದ ನೇತಾರರು ಸೇರಿ ಶಾಂತಿ, ಸೌಹಾರ್ದದ ವಾತಾವರಣ ನೆಲೆಗೊಳಿಸಲು ಮುಂದಾಗುವುದೂ ಅಗತ್ಯ ಎಂದು ಬಂಡಾಯ ಸಾಹಿತ್ಯ ಸಂಘಟನೆ ಭಾವಿಸುತ್ತದೆ’ ಎಂದು ಹೇಳಿದ್ದಾರೆ.

‘ರಂಗಾಯಣ ಉಳಿಸಿ’ ಸಂವಾದ ಇಂದು

ಬೆಂಗಳೂರು: ‘ಸಮುದಾಯ ಕರ್ನಾಟಕ’ ನೇತೃತ್ವದಲ್ಲಿ ವಿವಿಧ ಸಮಾನ ಆಸಕ್ತ ಸಂಘಟನೆಗಳು ಭಾನುವಾರ ಸಂಜೆ 5ಕ್ಕೆ ‘ರಂಗಾಯಣ ಉಳಿಸಿ’ ಸಂವಾದ ಹಮ್ಮಿಕೊಂಡಿದ್ದಾರೆ.

ಕರ್ನಾಟಕದ ಸಾಂಸ್ಕೃತಿಕ ಬಹುತ್ವವನ್ನು ಬೆಂಬಲಿಸಲು ಹಮ್ಮಿಕೊಂಡಿರುವ ಈ ‘ಆನ್‌ಲೈನ್ ಪ್ರತಿರೋಧ’ ಕಾರ್ಯಕ್ರಮದಲ್ಲಿ ರಂಗಭೂಮಿಯ ಆಸಕ್ತರು ಭಾಗವಹಿಸಬೇಕು ಎಂದು ಸಂಘಟಕರು ಕೋರಿದ್ದಾರೆ.

ಝೂಮ್ ಮೀಟಿಂಗ್ ಐಡಿ: 812 3281 6597; **ಪಾಸ್ ಕೋಡ್:** 756289

ಅಮ್ಮ ಅನುಭವಿಸಿದ ನೋವುಗಳು ಇಂದಿಗೂ ಕಾಡುತ್ತಿವೆ: ಸೇತುರಾಮ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮದು ಕೂಡು ಕುಟುಂಬ. ಮನೆಯ ಕೊನೆಯ ಸೊಸೆಯಾಗಿದ್ದ ಅಮ್ಮ ಸಾಕಷ್ಟು ಯಾತನೆ ಅನುಭವಿಸುತ್ತಿದ್ದಳು. ಆಕೆ ಪಡುತ್ತಿದ್ದ ಕಷ್ಟ, ಅನುಭವಿಸುತ್ತಿದ್ದ ನೋವುಗಳು ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಅವು ನನ್ನನ್ನು ಸದಾ ಕಾಡುತ್ತಿರುತ್ತವೆ’...

ರಂಗಕರ್ಮಿ, ಕಿರುತೆರೆ ನಟ ಎಸ್.ಎನ್.ಸೇತುರಾಮ್ ಅವರ ನುಡಿಗಳಿವು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಆಯೋಜಿಸಿದ್ದ ‘ಮನೆಯಂಗಳದಲ್ಲಿ ಮಾತುಕತೆ’ ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಭಾಗವಹಿಸಿದ್ದ ಅವರು ಶನಿವಾರ ಹಲವು ನೆನಪುಗಳನ್ನು ಬಿಚ್ಚಿಟ್ಟರು.

‘ಅಮ್ಮ ಮದುವೆಯಾದಾಗ ಆಕೆಗೆ 16 ವರ್ಷ ವಯಸ್ಸು. ಮನೆಯ ಕೊನೆಯ ಸೊಸೆಯಾಗಿದ್ದ ಆಕೆಯೊಂದಿಗೆ ನನ್ನ ನಾಲ್ವರು ದೊಡ್ಡಮ್ಮಂದಿರೂ ಅತ್ತೆಯರಂತೆಯೇ ನಡೆದುಕೊಳ್ಳುತ್ತಿದ್ದರು. ನಾನು ಜನಿಸಿದಾಗ ಆಕೆಗೆ 18 ವರ್ಷವೂ ಆಗಿರಲಿಲ್ಲ ಎನಿಸುತ್ತದೆ. ಮನೆಯ ಅಷ್ಟೂ ಮಂದಿಗೂ ಅಡುಗೆ ಮಾಡುವ ಹೊಣೆ ಹೊತ್ತಿದ್ದ ಆಕೆ, ಎಲ್ಲರ ಊಟ ಮುಗಿದ ಬಳಿಕವೇ ಊಟಕ್ಕೆ ಕೂರುತ್ತಿದ್ದಳು. ಪಾತ್ರೆ ತೊಳೆಯುವ ಕೆಲಸವೂ ಆಕೆಯದ್ದೆ. ಮರುದಿನ ಮುಂಜಾನೆ ಆಕೆಯೇ ಎಲ್ಲರಿಗಿಂತಲೂ ಮುಂಚೆ ಎದ್ದು ಒಲೆ ಹಚ್ಚಬೇಕಿತ್ತು. ಆಕೆಯ ಮೊಗದಲ್ಲಿ ಮೂಡಿರುತ್ತಿದ್ದ ನಿರ್ಲಿಪ್ತ ಭಾವ ನನ್ನ ಮನಸ್ಸಿನಲ್ಲಿ ಢಾಳಾಗಿ ಕೂತುಬಿಟ್ಟಿದೆ’ ಎಂದು ಭಾವುಕರಾದರು.



ಎಸ್‌.ಎನ್‌.ಸೇತುರಾಮ್ ಮಾತನಾಡಿದರು ಪ್ರಜಾವಾಣಿ ಚಿತ್ರ

ಮನೆಯಂಗಳದಲ್ಲಿ ಮಾತುಕತೆ

‘ತಿಂಗಳಿಗೊಮ್ಮೆ ಋತು ಚಕ್ರವಾದಾಗ ಆಕೆ, ಮೂರು ದಿನ ಹಿತ್ತಲಿನಲ್ಲೇ ವಾಸಿಸಬೇಕಿತ್ತು. ಪಾತ್ರೆಯಲ್ಲಿ ತಳ ಹಿಡಿದಿರುವ ಅನ್ನವನ್ನು ಆಕೆ ಸೇವಿಸುತ್ತಿದ್ದುದ್ದನ್ನು ಮರೆಯುವುದಕ್ಕೆ ಆಗುವುದೇ ಇಲ್ಲ’ ಎಂದರು.

‘ನನ್ನಮ್ಮ ಅನುಭವಿಸಿದ ನೋವುಗಳನ್ನು ಜಗದ ಯಾವ ಹೆಣ್ಣು ಮಕ್ಕಳೂ ಅನುಭವಿಸುವುದು ಬೇಡ. ಹೆಣ್ಣು ಮಕ್ಕಳ ವಿವಾಹದ ವಯಸ್ಸನ್ನು 21ಕ್ಕೆ ಹೆಚ್ಚಿಸಿರುವುದು ವೈಯಕ್ತಿಕವಾಗಿ ನನಗೆ ತುಂಬಾ ಖುಷಿ ನೀಡಿದೆ’ ಎಂದು ಹೇಳಿದರು.

‘ಹಣವಿಲ್ಲದೆ ಬದುಕುವುದು ಅಸಾಧ್ಯ. ಆದರೆ ಹಣವೇ ಎಲ್ಲವೂ ಅಲ್ಲ. ರಂಗಭೂಮಿಗೆ ಹೋದರೆ ಹಾಳಾಗುತ್ತಾರೆ ಎಂದು ಬಹಳಷ್ಟು ಮಂದಿ ಹೇಳುತ್ತಾರೆ. ಅದು ಸುಳ್ಳು. ರಂಗಭೂಮಿಯನ್ನು ಗಂಭೀರವಾಗಿ ಪರಿಗಣಿಸಿದವರೇ ಪರಿಪೂರ್ಣ ಮನುಷ್ಯರಾಗುತ್ತಾರೆ. ಇನ್ನೆರಡು ಕಥಾ ಸಂಕಲನ ಹೊರತರಬೇಕು. 75ನೇ ವಯಸ್ಸಿನವರೆಗೂ ನಾಟಕಗಳಲ್ಲಿ ಅಭಿನಯಿಸಬೇಕೆಂಬ ಆಸೆ ಇದೆ. ಏನಾಗಲಿದೆಯೋ ನೋಡೋಣ’ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್.ರಂಗಪ್ಪ ಇದ್ದರು.

ರೈಲು ಗಾಲಿ ಕಾರ್ಖಾನೆ

ಆಜಾದೀ ಕಾ ಅಮೃತ ಮಹೋತ್ಸವ

ವೆಬ್‌ಸೈಟ್: www.rwf.indianrailways.gov.in

ಟೆಂಡರ್ ಪ್ರಕಟಣೆ ಸಂ. ಆರ್‌ಡಬ್ಲ್ಯುಎಫ್/ಎಸ್/ಪಿ1/016/2021–22 ದಿನಾಂಕ : 16–12–2021

ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು ಕೆಳಕಂಡ ಐಟಂಗಳ ಸರಬರಾಜಿಗಾಗಿ ಭಾರತೀಯ ರೈಲ್ವೆ ಇ–ಪೋರ್ಟಲ್ www.ireps.gov.in ನಲ್ಲಿ ಆಸಕ್ತ ಮಾರಾಟಗಾರರಿಂದ ಎಲೆಕ್ಟ್ರಾನಿಕ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್ ದಾಖಲೆಗಳು ಮತ್ತು ತಿದ್ದುಪಡಿಗಳು ಪೋರ್ಟಲ್‌ನಲ್ಲಿ ಮಾತ್ರವೇ ಲಭ್ಯವಿರುತ್ತದೆ.

ಕ್ರ.ಸಂ.	ಟೆಂಡರ್ ಸಂ.	ಮುಕ್ತಾಯದ ದಿನಾಂಕ	ಸಂಕ್ಷಿಪ್ತ ವಿವರಣೆ	ಪ್ರಮಾಣ
1	ಪಿ1211323ಪಿ	03.01.2022	ರೈಲು ಗಾಲಿ ಕಾರ್ಖಾನೆಯ ನಿರ್ದಿಷ್ಟತೆಗೆ ಅನುಸಾರವಾಗಿ ಏರ್ ಸೆಟ್ಟಿಂಗ್ ಮಾರ್ಟರ್	2000 ಕೆಜಿಗಳು
2	ಪಿ1211521ಎ	06.01.2022	ರೈಲು ಗಾಲಿ ಕಾರ್ಖಾನೆಯ ನಿರ್ದಿಷ್ಟತೆಗೆ ಅನುಸಾರವಾಗಿ ಮ್ಯಾಗ್ನಸೈಟ್ ವೆಟ್ ರಾಮಿಂಗ್ ಮಾಸ್	1042800 ಕೆಜಿಗಳು
3	ಪಿ1211993	07.01.2022	ರೈಲು ಗಾಲಿ ಕಾರ್ಖಾನೆಯ ನಿರ್ದಿಷ್ಟತೆಗೆ ಅನುಸಾರವಾಗಿ ಲ್ಯಾಡಲ್ ಬ್ರಿಕ್ಸ್	221 ಸೆಟ್‌ಗಳು
4	ಪಿ1212055	07.01.2022	ರೈಲು ಗಾಲಿ ಕಾರ್ಖಾನೆಯ ನಿರ್ದಿಷ್ಟತೆಗೆ ಅನುಸಾರವಾಗಿ ಸ್ಟೀಲ್ ಬ್ಲೂಮ್ಸ್ 300 ಎಂಎಂ ಎಸ್‌ಕ್ಯು ಆರ್	39734 ಎಂಟಿ

ಟೆಂಡರ್ ವಿವರಗಳನ್ನು ನಮ್ಮ ವೆಬ್‌ಸೈಟ್ www.ireps.gov.in ಅಥವಾ www.rwf.indianrailways.gov.in ನಲ್ಲಿ ವೀಕ್ಷಿಸಬಹುದು.

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಭರವಸೆಯ ಮುನ್ನುಡಿ 1917 ರಿಂದ......... ಯಶಸ್ವಿ 105 ವರ್ಷಗಳು

ಶ್ರೀ ಸೀತಾರಾಮ ಮಂದಿರಂ ಸೌಹಾರ್ದ ಸಹಕಾರಿ ನಿ.

ನೋಂದಾಯಿತ ಕಛೇರಿ : ನಂ 1067, ಪಿ.ಆರ್. ಶಾಸ್ತ್ರಿ ಲೇನ್, ಅಲಸೂರುಪೇಟೆ, ಬೆಂಗಳೂರು–560002

ಆಡಳಿತ ಕಛೇರಿ : ನಂ. 15 & 15/1 ,1ನೇ ಮಹಡಿ, ನರಸಿಂಹರಾಜ ಕಾಲೋನಿ ಬೆಂಗಳೂರು–560019

ಮಾನ್ಯ ಸದಸ್ಯರ ಗಮನಕ್ಕೆ 2020–21ನೇ ಸಾಲಿನ

ಸರ್ವಸದಸ್ಯರ ಸಭೆಯನ್ನು ಸರ್ಕಾರದ ಆದೇಶದಂತೆ “Video Conference/Virtual Meeting” ಮುಖಾಂತರ ದಿನಾಂಕ 19.12.2021ರ ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಅಧ್ಯಕ್ಷರಾದ ಶ್ರೀಮಾನ್ **ಡಾ|| ಯು.ಗಣೇಶ್** ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ಎಲ್ಲಾ ಸದಸ್ಯರುಗಳಿಗೆ ಈಗಾಗಲೇ ಸಭೆಯ ನೋಟೀಸುಗಳನ್ನು ಕಳುಹಿಸಲಾಗಿದ್ದು, ತಲುಪದಿದ್ದಲ್ಲಿ ಸದಸ್ಯರುಗಳು ಇದನ್ನೇ ಸಭೆಯ ನೋಟೀಸ್ ಎಂದು ಪರಿಗಣಿಸಬೇಕಾಗಿ ವಿನಂತಿ.

ವಾಸ್ತವ (ವರ್ಚುಯಲ್) ಸಭೆಯ ಸಂಪರ್ಕಜಾಲ http://sriseetharamasoc-agm.sahakarisoft.com/

ತಮ್ಮ 12 ಅಂಕಿಯ ಸದಸ್ಯತ್ವದ ಸಂಖ್ಯೆಯ ಮೂಲಕ ಲಾಗಿನ್ ಆಗಬೇಕೆಂದು ಕೋರಲಾಗಿದೆ.

ದಿನಾಂಕ : 20.11.2021 ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

ಶಾಖೆಗಳು: ಅಲಸೂರುಪೇಟೆ / ಬಸವನಗುಡಿ / ಶ್ರೀನಿವಾಸನಗರ – ಮೈಸೂರು ಬ್ಯಾಂಕ್ ಕಾಲೋನಿ / ರಾಜಾಜಿನಗರ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕಾಮಗಾರಿ ವಿಭಾಗ, ಬೆಂಗಳೂರು.

ಸಂಖ್ಯೆ: ಕರಾಸ/ಕಾನಿಅ/ಬೆಂ/ಕಿಅ/377/2021–22 ದಿನಾಂಕ: 18–12–2021

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 07/2021–22

ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಕೆ.ಪಿ.ಡಬ್ಲ್ಯೂ.ಡಿ/ ಸಿ.ಪಿ.ಡಬ್ಲ್ಯೂ.ಡಿ/ ಎಂ.ಇ.ಎಸ್ ನಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿ ಕೆಲಸಕ್ಕೆ ಏಕ ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರುಗಳು ಇ–ಆಡಳಿತ ರವರೊಡನೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಲು ಕೋರಲಾಗಿದೆ.

ಕೆಲಸದ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಹಣ (ರೂ.ಗಳಲ್ಲಿ)
ಕ.ರಾ.ರ.ಸಾ. ನಿಗಮದ ಕೇಂದ್ರ ಕಛೇರಿ ಆವರಣದಲ್ಲಿರುವ ಹಳೆಯ ಬ್ಯಾಂಕ್ ಕಟ್ಟಡವನ್ನು ವಿ.ಟಿ.ಎಂ.ಎಸ್ ಕೇಂದ್ರವನ್ನಾಗಿ ಪರಿವರ್ತಿಸುವುದು.	8.75	21,875.00

ಕಾಲಾವಧಿ (ಮಳೆಗಾಲ ಒಳಗೊಂಡು): 02 ತಿಂಗಳು

ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: http://www.eproc.karnataka.gov.in ಗೆ ಲಾಗ್‌ಆನ್ ಮಾಡಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕ.ರಾ.ರ.ಸಾ. ನಿಗಮ, ಕಾಮಗಾರಿ ವಿಭಾಗ, ಬೆಂಗಳೂರು.

ವಾಸಾಸಂಇ/ಬೆಂ.ನ/ಅಡ್ವರ್ಟೋ/2444/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಖಾದಿ ಗ್ರಾಮೋದ್ಯೋಗ ವಿಭಾಗ, ಉಪನಿರ್ದೇಶಕರು (ಖಾಗ್ರಾ)ರವರ ಕಛೇರಿ, ಮೊದಲನೇ ಮಹಡಿ, KSTID ಅಗಾರ್ಮೆಂಟ್ ತರಬೇತಿ ಕಟ್ಟಡ ಬಾಂಬೆ ರೇಯನ್ ಫ್ಯಾಕ್ಟರಿ ಬಳಿ, KIADB APPAREAL PARK, ದೊಡ್ಡಬಳ್ಳಾಪುರ–561203, ದೂ.ಸಂಖ್ಯೆ: 080–23347008, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಂಖ್ಯೆ: ಉನಿ(ಖಾಗ್ರಾ)/ಬೆಂಗ್ರಾಜಿಪಂ/ಸು.ಉ/2021–22 ದಿನಾಂಕ: 08.12.2021

ಟೆಂಡರ್ ಪ್ರಕಟಣೆ

2021–22ನೇ ಸಾಲಿನಲ್ಲಿ ವೃತ್ತಿನಿರತ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ಕಿಟ್‌ಗಳನ್ನು ವಿತರಿಸುವ ಸಲುವಾಗಿ ಸದರಿ ಸುಧಾರಿತ ಉಪಕರಣಗಳ ಕಿಟ್‌ಗಳನ್ನು ಸರಬರಾಜು ಮಾಡುವ ನೊಂದಾಯಿತ ಅರ್ಹ ಮತ್ತು ಈ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ನುರಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಟೆಂಡರ್ ಇ–ಪ್ರೊಕ್ಯೂರ್‌ಮೆಂಟ್ Government of Karnataka e-procurement portal webiste http://eproc.karnataka.gov.in ಮುಖಾಂತರ Download ಮಾಡಿಕೊಳ್ಳಬಹುದಾಗಿದೆ. Online ಮೂಲಕ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 10.01.2022 ಸಂಜೆ 4 ಗಂಟೆಯವರೆಗೆ.** ಹೆಚ್ಚಿನ ವಿವರಗಳನ್ನು ಕಛೇರಿಯ ಕೆಲಸದ ಅವಧಿಯಲ್ಲಿ ಪಡೆಯಬಹುದು.

ಸಹಿ/– ಉಪನಿರ್ದೇಶಕರು (ಖಾಗ್ರಾ) ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ವಾಸಾಸಂಇ/ಉನಿಕ/ಬೆಂಗ್ರಾಜಿ/ಶಿರಡಿ ಸಾಯಿ/313/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಖಾದಿ ಗ್ರಾಮೋದ್ಯೋಗ ವಿಭಾಗ, ಉಪನಿರ್ದೇಶಕರು (ಖಾಗ್ರಾ)ರವರ ಕಛೇರಿ, ಮೊದಲನೇ ಮಹಡಿ, KSTID ಅಗಾರ್ಮೆಂಟ್ ತರಬೇತಿ ಕಟ್ಟಡ ಬಾಂಬೆ ರೇಯನ್ ಫ್ಯಾಕ್ಟರಿ ಬಳಿ, KIADB APPAREAL PARK, ದೊಡ್ಡಬಳ್ಳಾಪುರ–561203, ದೂ.ಸಂಖ್ಯೆ: 080–23347008, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಂಖ್ಯೆ: ಉನಿ(ಖಾಗ್ರಾ)/ಬೆಂಗ್ರಾಜಿಪಂ/ಸು.ಉ/2021–22 ದಿನಾಂಕ: 08.12.2021

ಟೆಂಡರ್ ಪ್ರಕಟಣೆ

2021–22ನೇ ಸಾಲಿನಲ್ಲಿ ಹೊಲಿಗೆ ಯಂತ್ರಗಳನ್ನು ವಿತರಿಸುವ ಸಲುವಾಗಿ ಸರಬರಾಜು ಮಾಡುವ ನೊಂದಾಯಿತ ಅರ್ಹ ಮತ್ತು ಈ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ನುರಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಟೆಂಡರ್ ಇ–ಪ್ರೊಕ್ಯೂರ್‌ಮೆಂಟ್ Government of Karnataka e-procurement portal webiste http://eproc.karnataka.gov.in ಮುಖಾಂತರ Download ಮಾಡಿಕೊಳ್ಳಬಹುದಾಗಿದೆ. Online ಮೂಲಕ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 10.01.2022 ಸಂಜೆ 4 ಗಂಟೆಯವರೆಗೆ.** ಹೆಚ್ಚಿನ ವಿವರಗಳನ್ನು ಕಛೇರಿಯ ಕೆಲಸದ ಅವಧಿಯಲ್ಲಿ ಪಡೆಯಬಹುದು.

ಸಹಿ/– ಉಪನಿರ್ದೇಶಕರು (ಖಾಗ್ರಾ) ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ವಾಸಾಸಂಇ/ಉನಿಕ/ಬೆಂಗ್ರಾಜಿ/ಶಿರಡಿ ಸಾಯಿ/314/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜವಾಹರ್ ನವೋದಯ ವಿದ್ಯಾಲಯ

ಬಾಗಲೂರು–562149, 562149, (ಯಲಹಂಕ ಹತ್ತಿರ) ಬೆಂಗಳೂರು ನಗರ ಜಿಲ್ಲೆ, ಕರ್ನಾಟಕ

ಶಿಕ್ಷಣ ಸಚಿವಾಲಯ (ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ವಿಭಾಗ, ಭಾರತ ಸರ್ಕಾರ)

ಟೆಂಡರು ಪ್ರಕಟಣೆ

ನಮ್ಮ ವಿದ್ಯಾಲಯಕ್ಕೆ 2021–22ನೇ ಸಾಲಿಗಾಗಿ ಈ ಕೆಳಕಂಡ ಕೆಲಸ/ಸಾಮಾನುಗಳ ಸರಬರಾಜಿಗಾಗಿ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

(1) Provide LT line of 1.1KV class-3 Phase Aerial Bunched Cable of size 3x95+1x16+1x70 sqmm. (2) CC Cameras & Installation. (3) Eggs, Chicken & Mutton.

ಇದಕ್ಕೆ ಸಂಬಂಧಿಸಿದ ಟೆಂಡರು ಫಾರಂಗಳನ್ನು ದಿನಾಂಕ: 21.12.2021 ರಿಂದ 31.12.2021ರವರೆಗೆ ಜವಾಹರ್ ನವೋದಯ ವಿದ್ಯಾಲಯ, ಬಾಗಲೂರು, ಕಛೇರಿಯ ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ 9.00 ಘಂಟೆಯಿಂದ ಸಾಯಂಕಾಲ 4.00 ಗಂಟೆಯವರೆಗೆ ವಿತರಿಸಲಾಗುವುದು. ಸದರೀ ಫಾರಂಗಳ ಬೆಲೆ ರೂಪಾಯಿ 200/– ರೂ ಆಗಿದ್ದು, ಇದನ್ನು ವಿದ್ಯಾಲಯಕ್ಕೆ ಪಾವತಿಸುವುದರ ಮೂಲಕ ಪಡೆಯಬಹುದು. ಈ ಹಣವನ್ನು ವಿದ್ಯಾಲಯವು ಮರುಪಾವತಿಸುವುದಿಲ್ಲ. ಅಥವಾ ವಿದ್ಯಾಲಯದ ವೆಬ್‌ಸೈಟ್: https://www.navodaya.gov.in/nvs/nvs-school/BANGALORE URBAN/en/home/ ಅಥವಾ ಸಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಫಾರಂಗಳನ್ನು ತೆಗೆದುಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್ ಲಕೋಟೆಗಳನ್ನು ದಿನಾಂಕ: 01.01.2022ರ ಸಂಜೆ 4.00 ಘಂಟೆಯವರೆಗೆ ಸ್ವೀಕರಿಸಲಾಗುವುದು. ಸೀಲು ಮಾಡಿದ ಲಕೋಟೆಗಳನ್ನು ನಿಗದಿಪಡಿಸಿದ ದಿನಾಂಕದೊಳಗಾಗಿ ಖುದ್ದಾಗಿ ಅಂಚೆ ಮೂಲಕ ಅಥವಾ (ತ್ವರಿತ ಅಂಚೆ ಅಥವಾ ರಿಜಿಸ್ಟರ್ ಪೋಸ್ಟ್) ಮೂಲಕ ವಿದ್ಯಾಲಯಕ್ಕೆ ಕಳುಹಿಸತಕ್ಕದ್ದು.

ಸೀಲು ಮಾಡಿದ ಲಕೋಟೆಗಳನ್ನು ಪ್ರಾಂಶುಪಾಲರ ಕೊಠಡಿ, ಜವಾಹರ್ ನವೋದಯ ವಿದ್ಯಾಲಯ, ಬಾಗಲೂರು–562149, ಬೆಂಗಳೂರು ನಗರ ಜಿಲ್ಲೆಯಲ್ಲಿ ದಿನಾಂಕ: 03.01.2022ರಂದು ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವುದು.

ಸಹಿ/– ಪ್ರಾಂಶುಪಾಲರು

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎನ್/11/2021 ದಿನಾಂಕ : 16–12–2021

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಐಟಂಗಳ ಸರಬರಾಜಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಸಂಕ್ಷಿಪ್ತ ವಿವರಣೆ : ಆರ್‌ಡಿಎಸ್‌ಓ/ಎಸ್‌ಪಿಎನ್/165/2012 ಆವೃತ್ತಿ 3.0 ಇತ್ಯಾದಿಗೆ ಅನುಸಾರವಾಗಿ ಆರ್‌ಇ ಪ್ರದೇಶದಲ್ಲಿ 4 ಲೈನ್‌ಗಳವರೆಗೆ ಎಸ್‌ಎಂಪಿಎಸ್ ಆಧಾರಿತ ಸಮಗ್ರ ವಿದ್ಯುತ್ ಸರಬರಾಜು (ಐಪಿಎಸ್). (ಪ್ರಮಾಣ : 15 ಸಂಖ್ಯೆಗಳು) (ಟೆಂಡರ್ ಸಂ. 95215504)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 11–01–2022 ರಂದು 14.00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು, ನಿರ್ಮಾಣ ಬೆಂಗಳೂರು ದಂಡು

ಪಿಯುಬಿ/342/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22

S.W.Railways SWRRLY SWRRLY

ಸಾರ್ವಜನಿಕ ಪ್ರಕಟಣೆ

ಶ್ರೀಮತಿ ನಂದಿನಿ ಎಸ್.ಪಿ. ಕೋಂ ಚಿಕ್ಕಮೂರ್ತಿ ಬಿ.ಸಿ., ನಂ.32/ಎ, 10ನೇ ಅಡ್ಡರಸ್ತೆ, ದುರ್ಗಾದೇವಿ ದೇವಸ್ಥಾನದ ಹತ್ತಿರ, ವೇಣುಗೋಪಾಲನಗರ, ದೊಡ್ಡಬಿದರುಕಲ್ಲು, ನಾಗಸಂದ್ರ ಅಂಚೆ, ಬೆಂಗಳೂರು–560073 ಆದ ನಾನು ಸಾರ್ವಜನಿಕರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುವ ಅಂದ್ರಹಳ್ಳಿ ಗ್ರಾಮದ ಸ್ವತ್ತಿನ ನಂ.114/1 ಮತ್ತು 116/2ನೇ ನಂಬರ್‌ನಲ್ಲಿರುವ 840 ಚದುರ ಅಡಿಗಳುಳ್ಳ ಉತ್ತರಾರ್ಧ ಭಾಗದ 4ನೇ (ನಾಲ್ಕು) ನಂಬರುಳ್ಳ ಖಾಲಿ ಸ್ವತ್ತು ದಾನಪತ್ರದ ಮೂಲಕ ನನ್ನ ತಾಯಿಯಾದ ಶ್ರೀಮತಿ ಕಮಲಮ್ಮನವರಿಂದ ನನಗೆ ಬಂದಿದ್ದು, ನನ್ನ ಹೆಸರಿಗೆ ಖಾತೆ, ಕಂದಾಯ ಮತ್ತು ಇತರೆ ದಾಖಲಾತಿಗಳನ್ನು ವರ್ಗಾಯಿಸಿಕೊಂಡು ಅನುಭವಿಸಿಕೊಂಡು ಬಂದಿರುತ್ತೇನೆ. ಮುಂದೆ ಮನೆ ಕಟ್ಟುವ ಸಲುವಾಗಿ ಬ್ಯಾಂಕಿನಲ್ಲಿ ಸಾಲ ತೆಗೆದುಕೊಳ್ಳುವ ಉದ್ದೇಶ ಹೊಂದಿದ್ದು ಈ ದಾಖಲಾತಿಗಳನ್ನು ಪರಿಶೀಲನೆ ಮಾಡಿಕೊಳ್ಳುವಾಗ ತಾ:11.06.2007 ರಂದು ಬೆಂಗಳೂರು ಲಗ್ಗೆರೆ ಉಪ ನೋಂದಾಣಾಧಿಕಾರಿಗಳ ಕಛೇರಿಯಲ್ಲಿ 1ನೇ ಪುಸ್ತಕ, ಎಲ್‌ಎಜಿಡಿ 3ನೇ ನಂಬರ್ ಸಿ.ಡಿ.ಯಲ್ಲಿ ದಾಖಲಾಗಿರುವ, ಎಲ್‌ಎಜಿ–1–01201/ 2007–08ನೇ ನಂಬರಾಗಿ ನೋಂದಣಿಯಾಗಿರುವ ಶುದ್ಧ ಕ್ರಯಪತ್ರ ಮೂಲಕ ಶ್ರೀ ಎನ್.ಆರ್. ಮೋಹನ್ ರವರ ಪತ್ನಿ ಶ್ರೀಮತಿ ಕೆ.ಎನ್. ಭಾಗೀರಥಿರವರಿಂದ ನನ್ನ ತಾಯಿ ಶ್ರೀಮತಿ ಕಮಲಮ್ಮನವರ ಹೆಸರಿಗೆ ನೋಂದಣಿಯಾಗಿರುವ ಕ್ರಯಪತ್ರದ ಅಸಲು ಪ್ರತಿಯು ಆಕಸ್ಮಿಕವಾಗಿ ಇತ್ತೀಚಿಗೆ ಕಳೆದು ಹೋಗಿರುತ್ತದೆ. ಈ ಬಗ್ಗೆ ಪೋಲೀಸ್ ಠಾಣೆಗೂ ದೂರನ್ನು ಸಲ್ಲಿಸಿದ್ದು, ಸದರಿ ಮೂಲ ಕ್ರಯಪತ್ರ ಯಾರಿಗಾದರೂ ಸಿಕ್ಕಿದಲ್ಲಿ ದಯಮಾಡಿ ಮೇಲ್ಕಂಡ ವಿಳಾಸಕ್ಕೆ ತಲುಪಿಸಬೇಕಾಗಿ ಕೋರುತ್ತೇನೆ. ಮೊ: 9964722058

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಬೆಂಗಳೂರು–560058, ಲಗ್ಗೆರೆ ವಾಸಿ ಶ್ರೀ ಬಿ. ಅಂದಾನಪ್ಪ ಬಿನ್ ದಿವಂಗತ ಬೈರಪ್ಪ ರವರು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರ ಮಾಲೀಕತ್ವಕ್ಕೆ ಒಳಪಟ್ಟಿದ್ದ ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಗೋಪಾಲಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿರುವ ಕುಕ್ಕನಹಳ್ಳಿ ಗ್ರಾಮದ ಭೂ ಪರಿವರ್ತಿತ ಸರ್ವೆ ನಂ. 140/1, 140/2, 140/4 ರಲ್ಲಿರುವ ಜಮೀನು ಸ್ವತ್ತನ್ನು ಹಾಗೂ ಭೂ ಪರಿವರ್ತಿತವಲ್ಲದ ಸರ್ವೆ ನಂ. 140/1ರಲ್ಲಿರುವ ಜಮೀನು ಸ್ವತ್ತನ್ನು ದಿನಾಂಕ: 30–9–2019 ರಂದು ಬೆಂಗಳೂರು, ಮಾದನಾಯಕನಹಳ್ಳಿ, ಸಬ್ ರಿಜಿಸ್ಟ್ರಾರ್ ರವರ ಆಫೀಸಿನ 1ನೇ ಪುಸ್ತಕದಲ್ಲಿ ಕ್ರಮವಾಗಿ ಎಂ.ಡಿ.ಎಲ್–1–04326/2019–20, 04329/2019–20 ಹಾಗೂ 04331/2019–20ನೇ ನಂಬರಾಗಿ ನೋಂದಣಿಯಾಗಿರುವ ಕ್ರಯ ಪತ್ರಗಳ ಮೂಲಕ (1) ಶ್ರೀ ರವಿಕುಮಾರ್ .ಎಸ್.ಆರ್ ಬಿನ್ ಶ್ರೀ ರಂಗಪ್ಪ, (2) ಶ್ರೀ ಕುಮಾರ್ ಎಂ. ಬಿನ್ ಶ್ರೀ ಮಂಜಪ್ಪ, (3) ಶ್ರೀ ಸುರೇಶ್ .ಪಿ.ಎನ್ ಬಿನ್ ದಿವಂಗತ ನರಸಿಂಹಯ್ಯ, (4) ಶ್ರೀ ಅಚ್ಯುತ .ಎ.ಹೆಚ್ ಬಿನ್ ಹಿರಿಯಣ್ಣ ಹಾಗೂ (5) ಶ್ರೀ ಸತೀಶ್ ಎಂ. ಬಿನ್ ದಿವಂಗತ ಮಲ್ಲಯ್ಯ ಎಂಬುವವರುಗಳಿಗೆ ಕ್ರಯ ಮಾಡಿದ್ದು, ಸದರಿ ವ್ಯಕ್ತಿಗಳು ಕ್ರಯಕ್ಕೆ ಪಡೆದ ಮೇಲ್ಕಂಡ ಕ್ರಯ ಪತ್ರಗಳ ಮೂಲಕ ನನ್ನ ಕಕ್ಷಿದಾರರಿಗೆ ಕೊಟ್ಟಿದ್ದ ಕ್ರಯದ ಹಣದ ಎಲ್ಲಾ ಚೆಕ್ಕುಗಳು ಬ್ಯಾಂಕಿನಲ್ಲಿ ನಗದೀಕರಣವಾಗದೇ ತಿರಸ್ಕೃತವಾಗಿದ್ದು, ಅವರುಗಳ ವಿರುದ್ಧ ನನ್ನ ಕಕ್ಷಿದಾರರು ಬೆಂಗಳೂರು, 20ನೇ ಆಡಿಷನಲ್ ಚೀಫ್ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ರವರ ನ್ಯಾಯಾಲಯದಲ್ಲಿ ಸಿ.ಸಿ. 5054/2020, 5056/2020, 5057/2020 ಹಾಗೂ 5058/2020ರ ಮೂಲಕ ದಾವೆ ದಾಖಲಿಸಿರುತ್ತಾರೆ ಹಾಗೂ ಅವರುಗಳು ನನ್ನ ಕಕ್ಷಿದಾರರಿಂದ ಖರೀದಿಸಿರುವ ಮೇಲ್ಕಂಡ ಜಮೀನು ಸ್ವತ್ತುಗಳ ಮೇಲೆ ಬೆಂಗಳೂರು ಗ್ರಾಮಾಂತರ, ನೆಲಮಂಗಲ 1ನೇ ಆಡಿಷನಲ್ ಪ್ರಿನ್ಸಿಪಲ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯದಲ್ಲಿ ಓ.ಎಸ್. 471/2021ರ ಮೂಲಕ ಸಿವಿಲ್ ದಾವೆ ದಾಖಲಿಸಿ ತಡೆಯಜ್ಞೆ ಪಡೆದಿರುತ್ತಾರೆ. ಆದ್ದರಿಂದ ಸಾರ್ವಜನಿಕರಿಗೆ/ ನಿವೇಶನಗಳ ಖರೀದಿದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಇದುವರೆವಿಗೂ ಅಂದರೆ 2019–20ನೇ ಸಾಲಿನಿಂದ 2021–22ನೇ ಸಾಲಿನವರೆವಿಗೂ ಯಾರಾದರೂ ಸದರಿ ವ್ಯಕ್ತಿಗಳಿಂದ ನಿವೇಶನಗಳನ್ನು ಖರೀದಿಸಿದ್ದರೆ/ಇನ್ನು ಮುಂದೆ ಖರೀದಿಸಲು ಮುಂದಾದರೆ ಅದರಿಂದ ಉಂಟಾಗಬಹುದಾದ ವಿಶೇಷ್ಟ ಖರ್ಚು ವೆಚ್ಚ ನಷ್ಟ ಎಲ್ಲಕ್ಕೂ ಹಾಗೂ ಎಲ್ಲಾ ಕಾನೂನಾತ್ಮಕ ಪ್ರಕ್ರಿಯೆಗಳಿಗೂ ಸದರಿ ಮೇಲ್ಕಂಡ ಜಮೀನುಗಳ ಖರೀದಿದಾರರುಗಳು ಹಾಗೂ ಸದರಿ ಖರೀದಿದಾರರುಗಳಿಂದ ಕ್ರಯಕ್ಕೆ ಪಡೆದಿರುವ ನಿವೇಶನಗಳ ಖರೀದಿದಾರೂ/ಇನ್ನು ಮುಂದೆ ಕ್ರಯಕ್ಕೆ ಪಡೆಯುವ ಖರೀದಿದಾರರುಗಳು ಮಾತ್ರವೇ ಸಂಪೂರ್ಣ ಹೊಣೆಗಾರರೂ ಹಾಗೂ ಜವಾಬ್ದಾರರೂ ಆಗಿರುತ್ತಾರೆ. ಆದ್ದರಿಂದ ಇನ್ನು ಮುಂದೆ ಸಾರ್ವಜನಿಕರು/ ಖರೀದಿದಾರರು ಮೇಲ್ಕಂಡ ವ್ಯಕ್ತಿಗಳಿಂದ ಯಾವುದೇ ರೀತಿಯಲ್ಲೂ ವ್ಯವಹರಿಸಬಾರದೆಂದು ಈ ಮೂಲಕ ನನ್ನ ಕಕ್ಷಿದಾರರ ಪರವಾಗಿ ತಿಳಿಯಪಡಿಸುತ್ತೇನೆ.

ಈ.ಸಿ. ಪಟೇಲ್, ವಕೀಲರು, ಪನ್ನಗ ಲಾ ಅಸೋಸಿಯೇಟ್ಸ್, ನಂ. 199/ಬಿ, 56ನೇ ಅಡ್ಡರಸ್ತೆ, 10ನೇ ಮುಖ್ಯರಸ್ತೆ, 4ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560 010. ಮೊಬೈಲ್: 9844284222

ನಗರಸಭಾ ಕಾರ್ಯಾಲಯ, ಮುಳಬಾಗಿಲು

CITY MUNICIPAL COUNCIL MULBAGAL, KOLAR DISTRICT - 563131

Phone No:08159-242044 E mail: itstaff_ulb_mulabagal@yahoo.co.in

Website: www.mulbagalcity.mrc.gov.in

ಸಂಖ್ಯೆ:ನಸಮು/ತಾಂತ್ರಿಕ/ಇತರೆ/ಸಿಆರ್/15/2021–22 ದಿನಾಂಕ:15.12.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಿಸಲಾಗಿದೆ.)

ಮುಳಬಾಗಿಲು ನಗರಸಭೆ 2021–22ನೇ 15ನೇ ಹಣಕಾಸು ಯೋಜನೆಯಡಿ ಮತ್ತು ನಗರಸಭಾ ನಿಧಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕತೆ ಆಧ್ಯಾದ್ಯೇಶ 2000ರಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ/06/ಪಿಸಿಎಲ್/2006, ಬೆಂಗಳೂರು ರಂತೆ ದ್ವಿಲಕೋಟೆ ಪದ್ಧತಿಯಲ್ಲಿ ಇ-ಪ್ರಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರುಗಳನ್ನು ಮತ್ತು ವಾಹನವನ್ನು ಪಡೆಯಲು ಅರ್ಹ ಏಜೆನ್ಸಿದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ http//eproc.karnataka.gov.in ಮೂಲಕ ಈ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರವಾಗಿರುತ್ತದೆ. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಕ್ರ.ಸಂ.	ಕಾಮಗಾರಿಯ ಇಂಡೆಂಟ್ ನಂಬರ್	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	DMA/2021-22/WS/WORK_INDENT121602	46.50
2	DMA/2021-22/WS/WORK_INDENT121604	34.80
3	DMA/2021-22/EL/WORK_INDENT121624	12.00
4	CMC/MBL/TECH/CR/14/2021-22	4.00
5	CMC/MBL/TECH/CR/17/2021-22	12.08
6	DMA/2021-22/WS/WORK_INDENT123043	5.00

(1) ಖಾಲಿ ಟೆಂಡರ್ ಫಾರಂಗಳಿಗೆ ಇ–ಪ್ರಕ್ಯೂರ್ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ:30.12.2021ರ ಸಮಯ:17.00 ಗಂಟೆಯವರೆಗೆ.** (2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ:31.12.2021ರ ಸಮಯ:17.30 ಗಂಟೆಗೆ.** (3) ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ:03.01.2022ರ ಸಮಯ: 11.00 ಗಂಟೆಗೆ.**

ಸಹಿ/– ಪೌರಾಯುಕ್ತರು, ನಗರಸಭೆ ಮುಳಬಾಗಿಲು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:270/ಎಂ.ಸಿ.ಎ/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾಮಗಾರಿ ವಿಳಂಬ: ತೇಜಸ್ವಿ ಸೂರ್ಯ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈಜಿಪುರ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ವಿಳಂಬವು ಬಿಬಿಎಂಪಿಯ ನಿರ್ಲಕ್ಷ್ಯ ಹಾಗೂ ಅಸಮರ್ಪಕ ಕಾರ್ಯನಿರ್ವಹಣೆಗೆ ಸಾಕ್ಷಿ' ಎಂದು ಸಂಸದ ತೇಜಸ್ವಿ ಸೂರ್ಯ ಕಿಡಿಕಾರಿದ್ದಾರೆ.

ವಿಧಾನಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ ಜೊತೆ ಶನಿವಾರ ಕಾಮಗಾರಿ ಪರಿಶೀಲಿಸಿದ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. '2.5 ಕಿ.ಮೀ ಉದ್ದದ ಈ ಮೇಲ್ಸೇತುವೆಯು ಕೇಂದ್ರೀಯ ಸದನದಿಂದ ಸೋನಿ ವರ್ಲ್ಡ್ ವೃತ್ತ ಮಾರ್ಗವಾಗಿ ಈಜಿಪುರಕ್ಕೆ ಸಂಪರ್ಕ ಕಲ್ಪಿಸಲಿದೆ. ₹203 ಕೋಟಿ ವೆಚ್ಚದ ಈ ಕಾಮಗಾರಿ 2018ರಲ್ಲಿ ಶುರುವಾಗಿತ್ತು. ಇದಕ್ಕೆ 30 ತಿಂಗಳ ಕಾಲಮಿತಿ ನಿಗದಿಪಡಿಸಲಾಗಿತ್ತು. ಹೀಗಿದ್ದರೂ ಇದು ಪೂರ್ಣಗೊಂಡಿಲ್ಲ. ಗುತ್ತಿಗೆ ಪಡೆದಿರುವ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆ ಹಾಗೂ ಬಿಬಿಎಂಪಿಯ ನಿರ್ಲಕ್ಷ್ಯಕ್ಕೆ ಇದು ಸಾಕ್ಷಿ' ಎಂದರು.

'ಕಾಮಗಾರಿ ವಿಳಂಬದಿಂದ ಕೋರಮಂಗಲದ 100 ಅಡಿ ರಸ್ತೆಯಲ್ಲಿ ಸಂಚರಿಸಲು ಪ್ರಯಾಸ ಪಡುವಂತಾಗಿದೆ. ಇದಕ್ಕೆ ಗುತ್ತಿಗೆದಾರರ ಬೇಜವಾಬ್ದಾರಿತನವೇ ಕಾರಣ. 3 ವರ್ಷದಲ್ಲಿ ಶೇ 45ರಷ್ಟು ಕೆಲಸಗಳಷ್ಟೇ ಮುಗಿದಿವೆ. 2023ರ ಜನವರಿಯೊಳಗೆ ಉಳಿದ ಕೆಲಸ ಮುಗಿಸಲು ಸಾಧ್ಯವೆ' ಎಂದು ಪ್ರಶ್ನಿಸಿದರು.

ಅಪ್ಪು ಅಗಲಿಕೆಯ ನೋವು ಹಂಚಿಕೊಂಡ ಶಿವಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುನೀತ್ ಅಗಲಿಕೆಯ ನೋವನ್ನು ಎಲ್ಲರೂ ಸಮಾನವಾಗಿ ಸ್ವೀಕರಿಸಿ, ಕುಟುಂಬದವರ ಭಾರವನ್ನು ಕಡಿಮೆ ಮಾಡಿದ್ದಾರೆ. ಇದರಿಂದಾಗಿ 'ಅಪ್ಪು' ಜೀವಂತವಾಗಿದ್ದಾನೆ ಎನ್ನುವ ಭಾವನೆ ಮೂಡಿದೆ' ಎಂದು ನಟ ಶಿವರಾಜ್‌ಕುಮಾರ್ ಹೇಳಿದರು.

ಶಿವ ರಾಜ್ ಕುಮಾರ್

ಅಮೆರಿಕ ಕನ್ನಡ ಕೂಟಗಳ ಆಗರ ಸಂಸ್ಥೆ(ಅಕ್ಕ) ಆನ್‌ಲೈನ್ ಮೂಲಕ ಆಯೋಜಿಸಿದ್ದ 'ಪುನೀತ ನಮನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪುನೀತ್ ಎಲ್ಲರ ಜತೆ ಹೃದಯವಂತಿಕೆ ಮೆರೆದಿದ್ದ. ಅಪ್ಪುವನ್ನು ಒಂದೇ ಮಾತಿನಲ್ಲಿ ಹೇಳುವುದಾದರೆ 'ಹೃದಯ' ಎಂದು ಕರೆಯುತ್ತೇನೆ. ಅದೇ ರೀತಿ ಇಂದು ಅಪ್ಪು ಎಲ್ಲರ ಹೃದಯಗಳನ್ನು ಗೆದ್ದಿದ್ದಾನೆ' ಎಂದು ಹೇಳಿದರು.

ನಟ ರಾಘವೇಂದ್ರ ರಾಜ್‌ಕುಮಾರ್, 'ಪುನೀತ್ ಆಡುವ ವಯಸ್ಸಿನಲ್ಲಿ ಸಾಧನೆ ಮಾಡಿದ, ದುಡಿಯುವ ವಯಸ್ಸಿನಲ್ಲಿ ದಾನ ಮಾಡಿದ. ಅಪ್ಪು ಜೀವನದಲ್ಲಿ ಎಲ್ಲವೂ ಬೇಗನೆ ನಡೆಯಿತು. ಹತ್ತಾರು ವರ್ಷ ಹಂದಿಯಂತೆ ಬದುಕುವುದಕ್ಕಿಂತ, ಎರಡು ವರ್ಷ ನಂದಿಯಂತೆ ಬದುಕಬೇಕು ಎನ್ನುವಂತೆ ಎಲ್ಲರಿಗೂ ಮಾರ್ಗದರ್ಶಕನಾಗಿದ್ದಾನೆ. ಪುನೀತ್‌ಗೆ ಅಣ್ಣನಾಗಿರುವುದೇ ನನಗೆ ಸಿಕ್ಕಿರುವ ಗೌರವ' ಎಂದರು.

'ಅಕ್ಕ' ಸಂಸ್ಥೆಯ ಅಧ್ಯಕ್ಷ ಅಮರ್‌ನಾಥ ಗೌಡ ಅವರು ಪುನೀತ್ ರಾಜ್‌ಕುಮಾರ್ ಅವರೊಂದಿಗಿನ ನೆನಪುಗಳನ್ನು ಮೆಲುಕು ಹಾಕಿದರು. ಸಂಸ್ಥೆಯ ಉಪಾಧ್ಯಕ್ಷೆ ಅನುರಾಧ ಹಾಗೂ ಪದಾಧಿಕಾರಿಗಳು ಮಾತನಾಡಿದರು.

ರಾಜಾಜಿನಗರದ ಗ್ಲೋಬಲ್ ಮಾಲ್‌ನಲ್ಲಿ ಕಲ್ಯಾಣ್ ಜುವೆಲರ್ಸ್ ಮಳಿಗೆ

ಬೆಂಗಳೂರು: ಕಲ್ಯಾಣ್ ಜುವೆಲರ್ಸ್ ಕಂಪನಿಯು ರಾಜಾಜಿನಗರದ ಲುಲು ಸಮೂಹದ ಗ್ಲೋಬಲ್ ಮಾಲ್‌ನಲ್ಲಿ ತನ್ನ ಮಳಿಗೆಯನ್ನು ತೆರೆದಿದೆ. ಇದು ಬೆಂಗಳೂರಿನಲ್ಲಿ ಕಂಪನಿ ತೆರೆದಿರುವ ಏಳನೇ ಮಳಿಗೆ.

ರಾಜ್ಯದಲ್ಲಿ ಆರಂಭ ಆಗಿರುವ 16ನೇ ಮಳಿಗೆ ಇದಾಗಿದೆ. ಈ ಮಳಿಗೆಯ ಆರಂಭದ ಸಂಭ್ರಮಾಚರಣೆಯ ಸಲುವಾಗಿ ಗ್ರಾಹಕರು ಖರೀದಿಸುವ ವಜ್ರದ ಆಭರಣಗಳಿಗೆ ಶೇ 25ರವರೆಗೆ, ಅತ್ಯಮೂಲ್ಯ ಹರಳುಗಳ ಖರೀದಿ ಮೇಲೆ ಶೇ 20ರವರೆಗೆ ವಿನಾಯಿತಿ ಇರಲಿದೆ. ಚಿನ್ನದ ಆಭರಣಗಳಿಗೆ ಮೇಕಿಂಗ್ ಚಾರ್ಜ್‌ನಲ್ಲಿ ಭಾರಿ ರಿಯಾಯಿತಿ ಇರಲಿದೆ ಎಂದು ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ರಮೇಶ್ ಕಲ್ಯಾಣರಾಮನ್ ತಿಳಿಸಿದರು.

'ಬಿಗ್ ಬಚತ್' ಕೊಡುಗೆಯಲ್ಲಿ ₹2.5 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಖರೀದಿಗೆ ಪ್ರತಿ ಗ್ರಾಂಗೆ ₹225ರಷ್ಟು ರಿಯಾಯಿತಿ ಇರಲಿದೆ. ರಾಜ್ಯದಲ್ಲಿರುವ ಎಲ್ಲಾ ಮಳಿಗೆಗಳಲ್ಲೂ ಈ ತಿಂಗಳ ಅಂತ್ಯದ ವರೆಗೆ ಈ ಕೊಡುಗೆಗಳು ಲಭ್ಯ ಇರಲಿವೆ.

ಕೆಂಪೇಗೌಡ ಪ್ರತಿಮೆ ಕಾಮಗಾರಿ ವೀಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರತಿಷ್ಠಾಪಿಸಲು ಉದ್ದೇಶಿಸಿರುವ 108 ಅಡಿ ಎತ್ತರದ ಕೆಂಪೇಗೌಡರ ಕಂಚಿನ ಪ್ರತಿಮೆ ನಿರ್ಮಾಣದ ಕಾಮಗಾರಿಯನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ಶನಿವಾರ ವೀಕ್ಷಿಸಿದರು.

ಕೆಂಪೇಗೌಡ ಪ್ರತಿಮೆ ಕಾಮಗಾರಿಯನ್ನು ಸಿ.ಎನ್.ಅಶ್ವತ್ಥನಾರಾಯಣ ವೀಕ್ಷಿಸಿದರು

'ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರಿಗೆ ಸಂಬಂಧಿಸಿದ ಪರಂಪರೆ ಸಂರಕ್ಷಿಸಲು ಸರ್ಕಾರ ತೀರ್ಮಾನಿಸಿದೆ. ಈ ಯೋಜನೆ ಅನ್ವಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶದಲ್ಲಿ 23 ಎಕರೆ ಪ್ರದೇಶದಲ್ಲಿ ಹೆರಿಟೇಜ್ ಪಾರ್ಕ್ ನಿರ್ಮಿಸಲಾಗುತ್ತಿದೆ' ಎಂದರು.

'ಕೆಂಪೇಗೌಡರ ಪ್ರತಿಮೆ ಮತ್ತು ಪಾರಂಪರಿಕ ಉದ್ಯಾನ ನಿರ್ಮಾಣಕ್ಕೆ 2020ರಲ್ಲೇ ಅಡಿಗಲ್ಲು ಹಾಕಲಾಗಿದೆ. ಕೋವಿಡ್–19 ಸಾಂಕ್ರಾಮಿಕದ ಕಾರಣಕ್ಕಾಗಿ ಪ್ರತಿಮೆ ನಿರ್ಮಾಣ ತಡವಾಗಿದೆ. ಗುಜರಾತ್‌ನ ಏಕತಾ ಪ್ರತಿಮೆ ಮತ್ತು ಬೆಂಗಳೂರಿನಲ್ಲಿ ಮಹಾತ್ಮ ಗಾಂಧಿ ಪ್ರತಿಮೆ ನಿರ್ಮಿಸಿರುವ ಶಿಲ್ಪಿಗಳಾದ ರಾಮ್ ವಾನಜಿ ಸುತರ್ ಅವರು ದೆಹಲಿ ಸಮೀಪದ ನೊಯಿಡಾದಲ್ಲಿ ಕೆಂಪೇಗೌಡರ ಪ್ರತಿಮೆ ನಿರ್ಮಿಸುತ್ತಿದ್ದಾರೆ. ಇದಕ್ಕಾಗಿ ₹85 ಕೋಟಿ ವಿನಿಯೋಗಿಸಲಾಗುತ್ತಿದೆ' ಎಂದು ಅವರು ಹೇಳಿದರು

'ಕೆಂಪೇಗೌಡ ಸಮಾಧಿ ಸ್ಥಳವು ಮಾಗಡಿ ತಾಲ್ಲೂಕಿನಲ್ಲಿದ್ದು, ಅದನ್ನು ಕೂಡ ಸಂರಕ್ಷಿಸಲಾಗುತ್ತಿದೆ. ಕೆಂಪೇಗೌಡರಿಂದಾಗಿ ಬೆಂಗಳೂರಿಗೆ ಇಂದು ಜಾಗತಿಕ ಮಟ್ಟದಲ್ಲಿ ಹೆಸರು ಬಂದಿದೆ' ಎಂದರು.

ಈ ಸಂದರ್ಭದಲ್ಲಿ ಅವರು, ಕಾಮಗಾರಿ ನಡೆಸುತ್ತಿರುವ ಸಿಬ್ಬಂದಿ ವರ್ಗದಿಂದ ಅಗತ್ಯ ಮಾಹಿತಿ ಪಡೆದುಕೊಂಡು, ಕೆಲಸವನ್ನು ತ್ವರಿತಗೊಳಿಸುವಂತೆ ಸೂಚಿಸಿದರು.

ಕನ್ನಡ ವಿ.ವಿ: ಸಮಸ್ಯೆ ಪರಿಹಾರಕ್ಕೆ ಆಗ್ರಹ

ಬರಗೂರು ರಾಮಚಂದ್ರಪ್ಪ

ಬೆಂಗಳೂರು: ಹಂಪಿ ಕನ್ನಡ ವಿಶ್ವವಿದ್ಯಾಲಯ ಎದುರಿಸುತ್ತಿರುವ ವಿವಾದಗಳನ್ನು ಪರಿಹರಿಸಿ, ಅಗತ್ಯವಿರುವ ಅನುದಾನ ಒದಗಿಸಲು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರಿಗೆ ಪತ್ರ ಬರೆದಿದ್ದಾರೆ.

'ಕನ್ನಡ ವಿಶ್ವವಿದ್ಯಾಲಯವು ಇತ್ತೀಚಿನ ದಿನಗಳಲ್ಲಿ ವೈಯಕ್ತಿಕ ಮತ್ತು ಸಾಂಸ್ಥಿತ ವಿವಾದಗಳಿಂದಲೇ ಹೆಚ್ಚು ಸುದ್ದಿಯಾಗುತ್ತಿದೆ. ಇದು ಕನ್ನಡ ಸಾಂಸ್ಕೃತಿಕ ಲೋಕವು ತಲೆ ತಗ್ಗಿಸುವಂತೆ ಮಾಡಿದೆ. ವಿವಾದದಿಂದ ವಿಶ್ವವಿದ್ಯಾಲಯದ ಘನತೆ ಕುಸಿಯುತ್ತಿದೆ. ವಿವಾದಿತ ವಿದ್ಯಮಾನಗಳನ್ನು ಪರಿಶೀಲಿಸಿ, ಪರಿಹಾರ ಸೂಚಿಸಲು ಸೂಕ್ತ ಸಮಿತಿಯೊಂದನ್ನು ನೇಮಿಸಬೇಕು' ಎಂದು ಬರಗೂರು ಅವರು ಪತ್ರದಲ್ಲಿ ಒತ್ತಾಯಿಸಿದ್ದಾರೆ.

'ಕನ್ನಡ ವಿಶ್ವವಿದ್ಯಾಲಯಕ್ಕೆ ಅನುದಾನದ ಕೊರತೆ ಉಂಟಾಗಿರುವುದರಿಂದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಆರ್ಥಿಕ ಸಮಸ್ಯೆಯನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ ತಕ್ಷಣವೇ ಪೂರ್ಣ ಪ್ರಮಾಣದಲ್ಲಿ ಬಿಡುಗಡೆ ಮಾಡಬೇಕು. ಈ ಸಂಬಂಧ ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಸರ್ಕಾರದ ಕನ್ನಡ ಪರ ವಿಶ್ವಾಸಾರ್ಹತೆಗೆ ಧಕ್ಕೆಯಾಗುತ್ತದೆ' ಎಂದು ಬರಗೂರು ರಾಮಚಂದ್ರಪ್ಪ ಅವರು ತಿಳಿಸಿದ್ದಾರೆ.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿಕೆ

'ಪುಸ್ತಕ ಸೌಧ' ನಿರ್ಮಾಣ: ಸಿ.ಎಂ ಜತೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓದುಗರ ಅನುಕೂಲಕ್ಕಾಗಿ ನಗರದಲ್ಲಿ 'ಪುಸ್ತಕ ಸೌಧ' ನಿರ್ಮಿಸುವ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚೆ ನಡೆಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘವು ಶನಿವಾರ ಆಯೋಜಿಸಿದ್ದ ಪುಸ್ತಕಗಳ ಬಿಡುಗಡೆ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗಣನೆ ಒಳ್ಳೆಯದಲ್ಲ. ಪುಸ್ತಕ ಖರೀದಿ ಮೊತ್ತ ಹೆಚ್ಚಳ ಸೇರಿದಂತೆ ಹಲವು ಬೇಡಿಕೆಗಳನ್ನು ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ಮುಂದಿಟ್ಟಿದೆ.

ಪ್ರಕಾಶಕರ ಸಮಸ್ಯೆಗಳಿಗೆ ಸರ್ಕಾರದಿಂದ ಆಗಬೇಕಿರುವ ಪರಿಹಾರ ಕ್ರಮಗಳ ಬಗ್ಗೆ ಚರ್ಚಿಸಲು ಜನವರಿ ಎರಡನೇ ವಾರದೊಳಗೆ ಪ್ರಕಾಶಕರೊಂದಿಗೆ ಸಭೆ ನಡೆಸಲಾಗುವುದು ಎಂದೂ ಭರವಸೆ ನೀಡಿದರು.

ಓದುವ ಹವ್ಯಾಸ ಹೆಚ್ಚಿಸುವ ಉದ್ದೇಶದೊಂದಿಗೆ ಗ್ರಾಮ ಪಂಚಾಯಿತಿಗೊಂದು ಗ್ರಂಥಾಲಯ ತೆರೆದು, ಅಲ್ಲಿ ಪುಸ್ತಕಗಳ ಸಂಗ್ರಹ ಇರುವಂತೆ ಸೂಚನೆ ನೀಡಲಾಗಿದೆ. ಸದ್ಯ 5 ಸಾವಿರಕ್ಕೂ ಹೆಚ್ಚು ಪಂಚಾಯಿತಿ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ನಿರ್ವಹಣೆಗಾಗಿ ಸಿಬ್ಬಂದಿ ನೇಮಿಸುವ ಕೆಲಸವೂ ನಡೆದಿದೆ. ಇವುಗಳ ನಿರ್ವಹಣಾ ಹೊಣೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ನೀಡಲಾಗಿದೆ ಎಂದರು.

ಬರಹಗಾರರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ,'ಪುಸ್ತಕ ಸಗಟು ಖರೀದಿಯ ಬಾಕಿ ಹಣವನ್ನು ಸರ್ಕಾರ ಬಿಡುಗಡೆ ಮಾಡಬೇಕು. ವಾರ್ಷಿಕವಾಗಿ ಖರೀದಿಸುವ ಪುಸ್ತಕ ಪ್ರತಿಗಳ ಸಂಖ್ಯೆಯನ್ನು 300ರಿಂದ 500ಕ್ಕೆ ಹೆಚ್ಚಿಸಬೇಕು. ಗ್ರಂಥಾಲಯ ಇಲಾಖೆಗೆ ಪ್ರತಿ ಬಜೆಟ್‌ನಲ್ಲಿ ₹25 ಕೋಟಿ ಅನುದಾನ ಮೀಸಲಿಡಬೇಕು' ಎಂದು ಒತ್ತಾಯಿಸಿದರು.

ಪ್ರಶಸ್ತಿಗಳ ಪ್ರದಾನ: ಸಂಘದ ವತಿಯಿಂದ ಪತ್ರಕರ್ತ ಜೋಗಿ ಅವರಿಗೆ 'ಸಾಹಿತ್ಯ ರತ್ನ ಪ್ರಶಸ್ತಿ', ಲೇಖಕಿ ಮಂಜುಳಾ ಹಿರೇಮಠ್ ಅವರಿಗೆ 'ಚಿಗುರು ಪ್ರಶಸ್ತಿ', ಪತ್ರಕರ್ತ ಜಿ.ಎನ್.ಮೋಹನ್ ಅವರಿಗೆ ಪುಸ್ತಕ ರತ್ನ ಪ್ರಶಸ್ತಿ' ಹಾಗೂ ಲಕ್ಷ್ಮೀ ಮುದ್ರಣಾಲಯದ ಬಿ.ಆರ್. ಅಶೋಕ್ ಕುಮಾರ್ ಅವರಿಗೆ 'ಮುದ್ರಣ ರತ್ನ' ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ವತಿಯಿಂದ (ಕುಳಿತವರು ಎಡದಿಂದ) ಬಿ.ಆರ್.ಅಶೋಕ್ ಕುಮಾರ್ (ಮುದ್ರಣ ರತ್ನ), ಜಿ.ಎನ್.ಮೋಹನ್ (ಪುಸ್ತಕ ರತ್ನ), ಜೋಗಿ (ಸಾಹಿತ್ಯ ರತ್ನ) ಹಾಗೂ ಮಂಜುಳಾ ಹಿರೇಮಠ್ (ಚಿಗುರು) ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. (ನಿಂತವರು ಎಡದಿಂದ) ವಸಂತ ಪ್ರಕಾಶನದ ಮುರಳಿ, ವಿಶ್ವೇಶ್ವರ ಭಟ್, ಸಚಿವ ಬಿ.ಸಿ.ನಾಗೇಶ್, ನಿಡಸಾಲೆ ಪುಟ್ಟಸ್ವಾಮಯ್ಯ, ಸಿ.ಸೋಮಶೇಖರ್, ಸಂಘದ ಕಾರ್ಯದರ್ಶಿ ಆರ್.ದೊಡ್ಡೇಗೌಡ ಮತ್ತು ಉಪಾಧ್ಯಕ್ಷೆ ಮಾಲತಿ ಶೆಟ್ಟಿ ಇದ್ದಾರೆ – ಪ್ರಜಾವಾಣಿ ಚಿತ್ರ

ಗಡಿಭಾಗಗಳಲ್ಲಿ ಪುಸ್ತಕ ಜಾತ್ರೆ

'ಕರ್ನಾಟಕದ ಗಡಿಗೆ ಹೊಂದಿಕೊಂಡಿರುವ ಬೇರೆ ರಾಜ್ಯದ ಪ್ರಮುಖ ನಗರಗಳು ಹಾಗೂ ಗಡಿ ಭಾಗಗಳಲ್ಲಿ ಕನ್ನಡದ ಕಂಪನ್ನು ಹರಿಸಲು 'ಕನ್ನಡ ಪುಸ್ತಕ ಜಾತ್ರೆ' ಆಯೋಜಿಸುವ ಉದ್ದೇಶವಿದೆ. ಗಡಿ ಪ್ರದೇಶದ ಶಾಲೆಗಳಿಗೆ ಪುಸ್ತಕಗಳನ್ನು ಹಂಚಲು ಪ್ರಾಧಿಕಾರದಿಂದ ₹50 ಲಕ್ಷ ಮೀಸಲಿಡಲಾಗುವುದು' ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್ ಹೇಳಿದರು.

8 ಪುಸ್ತಕಗಳ ಬಿಡುಗಡೆ

ವಿವಿಧ ಪ್ರಕಾಶನ ಸಂಸ್ಥೆಗಳು ಪ್ರಕಟಿಸಿರುವ 'ಎಲವೋ ವಿಭೀಷ' (ಪ್ರದೀಪ್ ಬೇಲೂರ್), 'ಧೈರ್ಯಂ ಸರ್ವತ್ರ ಸಾಧನಂ' (ಸಂತೋಷ್ ರೈ ಪೆರ್ಮುಡ), 'ನಿಗೂಢ ಜೀವಿಗಳು' (ಪ.ನಾ. ಹಳ್ಳಿ ಹರೀಶ್ ಕುಮಾರ್), 'ಭಾರತೀಯ ಸಂಸ್ಥಾನಗಳ ಏಕೀಕರಣ' (ಸೊಂದಲಗೆರೆ ಲಕ್ಷ್ಮೀಪತಿ), 'ಎಪ್ಪತ್ತರ ಅರಿವು' (ಎಂ.ಎನ್.ಮಂಜೇಗೌಡ), 'ಗಿಳಿಯು ಪಂಜರದೊಳಗಿಲ್ಲ' (ಟಿ.ಡಿ.ರಾಜಣ್ಣ ತಗ್ಗಿ), 'ಕಾವ್ಯ ಗಂಗೆ' (ಪ್ರಶ್ನಾ ನಾರಾಯಣ ರೈ), 'ಭಾರತದ ಸುಭಾಷಿತಗಳು' (ಸಂಪಟೂರು ವಿಶ್ವನಾಥ್) ಪುಸ್ತಕಗಳನ್ನು ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಬಿಡುಗಡೆ ಮಾಡಿದರು.

ವಕೀಲರ ಸಂಘದ ಚುನಾವಣೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಷ್ಯಾದಲ್ಲೇ ಅತಿ ದೊಡ್ಡ ವಕೀಲರ ಸಂಘ ಎನಿಸಿರುವ ಬೆಂಗಳೂರು ವಕೀಲರ ಸಂಘಕ್ಕೆ (ಎಎಬಿ) ಡಿ.19ರ ಭಾನುವಾರ ಚುನಾವಣೆ ನಡೆಯಲಿದ್ದು, ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ಮತದಾನ ನಡೆಯಲಿದೆ.

ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಖಜಾಂಚಿ ಸ್ಥಾನಗಳು, ಹೈಕೋರ್ಟ್‌ನ 7, ಮೇಯೊ ಹಾಲ್ ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟ್ ಘಟಕಗಳ ತಲಾ 5 ಮತ್ತು ಸಿಟಿ ಸಿವಿಲ್ ಕೋರ್ಟ್‌ನ 12 ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನಗಳಿಗೂ ಇದೇ ವೇಳೆ ಮತದಾನ ನಡೆಯಲಿದೆ.

ಅಧ್ಯಕ್ಷ ಸ್ಥಾನಕ್ಕೆ ಹಾಲಿ ಅಧ್ಯಕ್ಷ ಎ.ಪಿ.ರಂಗನಾಥ್, ಮಾಜಿ ಅಧ್ಯಕ್ಷ ಎಚ್.ಸಿ. ಶಿವರಾಂ, ವಕೀಲ ವಿವೇಕ ಸುಬ್ಬಾರೆಡ್ಡಿ ಹಾಗೂ ರಾಜ್ಯ ವಕೀಲರ ಪರಿಷತ್ ಸದಸ್ಯ ಆರ್. ರಾಜಣ್ಣ ಸ್ಪರ್ಧಾ ಕಣದಲ್ಲಿದ್ದರೆ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ 8 ಮಂದಿ ಆಕಾಂಕ್ಷಿಗಳಿದ್ದಾರೆ. ಖಜಾಂಚಿ ಸ್ಥಾನಕ್ಕೆ 10 ಮಂದಿ, ಆಡಳಿತ ಮಂಡಳಿಯ 29 ಸದಸ್ಯ ಸ್ಥಾನಗಳಿಗೆ ಒಟ್ಟು 112 ಮಂದಿ ಇದ್ದು, ಸಂಘದ ಒಟ್ಟು 32 ಸ್ಥಾನಗಳಿಗೆ 134 ವಕೀಲರು ಅದೃಷ್ಟ ಪರೀಕ್ಷೆ ನಡೆಸಿದ್ದಾರೆ.

ಸಂಘದ ನಾಲ್ಕೂ ಘಟಕಗಳಿಂದ ಒಟ್ಟು 16,568 ವಕೀಲರು ಮತ ಚಲಾಯಿಸಲಿದ್ದಾರೆ. ಈ ಬಾರಿ ಮತದಾನಕ್ಕೆ ಇವಿಎಂ ಯಂತ್ರಗಳನ್ನು ಬಳಸಲಾಗುತ್ತಿದ್ದು, ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ.

ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ನೆಲದಡಿಯಲ್ಲಿ ಕೇಬಲ್ ಅಳವಡಿಸುವ ಕಾಮಗಾರಿ ಕೈಗೊಂಡಿರುವುದರಿಂದ ಡಿ.19ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಕಬ್ಬನ್‌ಪೇಟೆ, ಆರ್‌ಬಿಐ, ನೃಪತುಂಗ ರಸ್ತೆ, ಸರ್ಕಾರಿ ಕಲಾ ಕಾಲೇಜು, ಮಾರ್ಥಾಸ್ ಹಾಸ್ಪಿಟಲ್, ಸುಂಕಲ್‌ಪೇಟೆ, ಕೆ.ಜಿ. ರಸ್ತೆ, ಓಟಿಸಿ ರಸ್ತೆ, ಶಾರದಾ ಚಿತ್ರಮಂದಿರ ಹಿಂಭಾಗ, ಎಸ್. ಪಿ. ರಸ್ತೆ, ಧರ್ಮರಾಯಸ್ವಾಮಿ ದೇವಸ್ಥಾನದ ರಸ್ತೆ ಸುತ್ತಮುತ್ತ ಪ್ರದೇಶಗಳು

ಸಿಗದ ಸೀಟು: ತಾಯಿ ಆತ್ಮಹತ್ಯೆಗೆ ಯತ್ನ

ಕೊರಟಗೆರೆ: ಇಲ್ಲಿಯ ಹುಲಿಕುಂಟೆ ಬಳಿ ಇರುವ ಕಿತ್ತೂರರಾಣಿ ಚನ್ನಮ್ಮ ವಸತಿ ಶಾಲೆಯ 6ನೇ ತರಗತಿ ಪರೀಕ್ಷೆ ಬರೆದ ಮಗಳಿಗೆ ಪ್ರವೇಶ ಸಿಗಲಿಲ್ಲ ಎಂದು ಆಶಾ ಎಂಬುವವರು ವಿಷಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. .

ಐದು ವರ್ಷಗಳ ಎಲ್‌ಎಲ್‌ಬಿ ಪರೀಕ್ಷೆ: ಮಾಹಿತಿ ಕೇಳಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇದೇ 15ರಿಂದ ಆರಂಭವಾಗಿರುವ ಐದು ವರ್ಷದ ಕಾನೂನು ಪದವಿಯ ಎರಡು ಮತ್ತು ನಾಲ್ಕನೇ ಸೆಮಿಸ್ಟರ್ ಪರೀಕ್ಷೆಗೆ ಎಷ್ಟು ಮಂದಿ ವಿದ್ಯಾರ್ಥಿಗಳು ಹಾಜರಾಗಿದ್ದರು ಎಂಬ ಬಗ್ಗೆ ಮಾಹಿತಿ ನೀಡಿ' ಎಂದು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ಹೈಕೋರ್ಟ್ ಸೂಚಿಸಿದೆ.

ಕೋಲಾರದ ಕೆ.ಪಿ. ಪ್ರಭುದೇವ್ ಸೇರಿದಂತೆ ಒಟ್ಟು ಒಂಬತ್ತು ವಿದ್ಯಾರ್ಥಿಗಳು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ವಿಶ್ವವಿದ್ಯಾಲಯಕ್ಕೆ ಸೂಚಿಸಿದೆ.

ವಿಚಾರಣೆ ವೇಳೆ ಅರ್ಜಿದಾರ ಪರ ವಕೀಲ ಎಂ.ಪಿ.ಶ್ರೀಕಾಂತ್, 'ಮೂರು ವರ್ಷದ ಕಾನೂನು ಪದವಿಯ ಎರಡು ಮತ್ತು ನಾಲ್ಕನೇ ಸೆಮಿಸ್ಟರ್ ಪರಿಕ್ಷೆ ನಡೆಸಲು ವಿಶ್ವವಿದ್ಯಾಲಯ ಹೊರಡಿಸಿದ ಸುತ್ತೋಲೆಯನ್ನು ಇದೇ 14ರಂದು ಧಾರವಾಡ ಹೈಕೋರ್ಟ್ ಪೀಠ ರದ್ದುಪಡಿಸಿದೆ. ಇದೇ ಮಾದರಿಯಲ್ಲಿ ಐದು ವರ್ಷದ ಕಾನೂನು ಪದವಿಯ ಎರಡು ಮತ್ತು ನಾಲ್ಕನೇ ಸೆಮಿಸ್ಟರ್ ಪರೀಕ್ಷೆಯನ್ನೂ ರದ್ದುಪಡಿಸಬೇಕು.

ಐದು ಮತ್ತು ಮೂರು ವರ್ಷದ ಕಾನೂನು ಪದವಿ ವಿದ್ಯಾರ್ಥಿಗಳ ನಡುವೆ ತಾರತಮ್ಯ ಮಾಡಬಾರದು' ಎಂದು ಮನವಿ ಮಾಡಿದರು.

ಇದಕ್ಕೆ ವಿಶ್ವವಿದ್ಯಾಲಯದ ಪರ ವಕೀಲ ವಿ.ಶೇಷು, 'ಈಗಾಗಲೇ ಇದೇ 15ರಿಂದ ಎರಡು ಮತ್ತು ನಾಲ್ಕನೇ ಸೆಮಿಸ್ಟರ್ ಪರೀಕ್ಷೆ ಆರಂಭವಾಗಿದ್ದು, ಶೇ 90ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ. ಪರೀಕ್ಷೆ ವಿಚಾರದಲ್ಲಿ ನ್ಯಾಯಾಲಯ ಮಧ್ಯಪ್ರವೇಶ ಮಾಡಬಾರದು.

ಈ ಕುರಿತಂತೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಇದನ್ನಿನು ಮಾನ್ಯ ಮಾಡಿದ ನ್ಯಾಯಪೀಠ, 'ಐದು ವರ್ಷದ ಕಾನೂನು ಪದವಿಯ ಎರಡು ಮತ್ತು ನಾಲ್ಕನೇ ಸೆಮಿಸ್ಟರ್ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು ಎಷ್ಟು ಸಂಖ್ಯೆಯಲ್ಲಿದ್ದರು ಎಂಬ ಮಾಹಿತಿ ನೀಡಿ' ಎಂದು ಸೂಚಿಸಿ ವಿಚಾರಣೆಯನ್ನು ಇದೇ 20 ಕ್ಕೆ ಮುಂದೂಡಿದೆ.



ಓಮೈಕ್ರಾನ್: ನಗರದಲ್ಲಿ 9ನೇ ಪ್ರಕರಣ ಪತ್ತೆ

ಬೆಂಗಳೂರು: ಕೊರೊನಾ ವೈರಾಣು ರೂಪಾಂತರ ತಳಿ ಓಮೈಕ್ರಾನ್ ಸೋಂಕಿರುವ 9ನೇ ಪ್ರಕರಣ ನಗರದಲ್ಲಿ ಪತ್ತೆಯಾಗಿದೆ.

'ಕೇಂದ್ರ ಸರ್ಕಾರದ ಮಾರ್ಗಸೂಚಿ ಆಧರಿಸಿ ಕ್ರಮಗಳನ್ನು ಮುಂದುವರಿಸಲಾಗಿದೆ.

ಕೇರಳದಿಂದ ಬರುವ ವಿದ್ಯಾರ್ಥಿಗಳು ಮತ್ತು ಜನರ ಮೇಲೆ ಹೆಚ್ಚು ನಿಗಾ ವಹಿಸಲಾಗುತ್ತಿದೆ. ನರ್ಸಿಂಗ್ ಕಾಲೇಜುಗಳ ಮೇಲೆ ಹೆಚ್ಚು ಕಣ್ಣಿಡಲಾಗಿದೆ.

ಇತರ ಹೊರ ರಾಜ್ಯ ಮತ್ತು ಹೊರ ದೇಶಗಳಿಂದ ಬರುವ ವಿದ್ಯಾರ್ಥಿಗಳನ್ನೂ ತಪಾಸಣೆಗೆ ಒಳಪಡಿಸಲಾಗುತ್ತಿದೆ'ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಕೆ.ವಿ. ತ್ರಿಲೋಕಚಂದ್ರ ಹೇಳಿದರು.

'ಓಮೈಕ್ರಾನ್ ಸೋಂಕಿತರು ಮತ್ತು ಶಂಕಿತರ ಪ್ರತ್ಯೇಕ ವಾಸದ ಮೇಲೂ ನಿಗಾ ವಹಿಸಲಾಗುತ್ತಿದೆ.

ಮನೆಯಿಂದ ಹೊರಗೆ ಬಾರದಂತೆ ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗಿದೆ' ಎಂದು ಅವರು ವಿವರಿಸಿದರು.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,59,963 ಒಟ್ಟು ಪ್ರಕರಣಗಳು ▲ (12,59,738 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
5,640 ▲	12,37,945 ▲	16,377 ▲

ದಿನದ ಏರಿಕೆ	
ಹೊಸ ಪ್ರಕರಣ	225 ▲
ಗುಣಮುಖ	180 ▼
ಸಾವು	01 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಚಾರ್ಮಾಡಿ ಘಾಟ್: ಭಾರಿ ವಾಹನ ನಿಷೇಧ

ಮಂಗಳೂರು: ರಾಷ್ಟ್ರೀಯ ಹೆದ್ದಾರಿ-73 ಮಂಗಳೂರು-ತುಮಕೂರು ರಸ್ತೆಯ 75 ಕಿ.ಮೀ.ಯಿಂದ (ಚಾರ್ಮಾಡಿ ಗ್ರಾಮ) 86.20 ಕಿ.ಮೀ.ವರೆಗಿನ (ದಕ್ಷಿಣ ಕನ್ನಡ ಜಿಲ್ಲಾ ಗಡಿ) ಚಾರ್ಮಾಡಿ ಘಾಟ್ ರಸ್ತೆಯಲ್ಲಿ ಡಿ.18 ರಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ದಿನದ 24 ಗಂಟೆ ಲಘು ವಾಹನಗಳ ಸಂಚಾರಕ್ಕೆ ಅನುಮತಿ ನೀಡಿ, ಭಾರಿ ವಾಹನಗಳ ಸಂಚಾರವನ್ನು ನಿರ್ಬಂಧಿಸಿ ಜಿಲ್ಲಾಧಿಕಾರಿ ಡಾ. ರಾಜೇಂದ್ರ ಕೆ.ವಿ. ಆದೇಶ ಹೊರಡಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED
Qualified and Experienced Candidates for our Institutions.
CAMPUS MANAGER
(Male / Female) Graduation/Post Graduation in any discipline. Experience minimum 5 years and above in handling CBSE and Aided Schools. Proficiency in Language - Fluent in English and Kannada.
Asst. HEAD MISTRESS
Post Graduation with BEd. Experiance - Minimum 5 years and above in handling Aided / Unaided Schools. Proficiency in Language - Fluent in English and Kannada.
ENGLISH TEACHER
Trained Graduate / Post Graduate teacher with BEd.
SECURITY GUARD
Qualification - Minimum 10th std Pass. Experience - 3 Years and above. Proficiency - Fluent in English and Kannada.
Interested Candidates may apply with in 7 days.
To, The Secretary & Correspondent Kairalee Nilayam Institutions, Vimanapura, HAL, Bangalore-17, Ph No 080 25236608.
Email : kksvimanapura@gmail.com

Dr. Sri. Sri. Sri. Shivakumara Mahaswamy College of Engineering & Polytechnic
(Affiliated to VTU, Belagum & Approved by AICTE, New Delhi)
Byranayakanahalli, Nelamangala Taluk, Bengaluru Rural District - 562132
Website: www.drsmce.org
Email: recruitdrsmce2211@gmail.com
WALK-IN ON 27-12-2021 FOR FOLLOWING POSITIONS
Applications are invited for the post of PRINCIPAL (with minimum 5 years experience as Principal) Professors, Associate Professors & Asst. Professors in the following Disciplines
- Civil Engineering.
- Mechanical Engineering.
- Electrical & Electronics Engineering.
- Electronics & Communication Engineering.
- Computer Science & Engineering.
- Information Scicnce & Engineering
- Basic Science department: Physics, Chemistry and Mathematics.
- MBA (Marketing Finance, HR)
- Physical Education Director
- Librarian and Asst. Librarian

Non Teaching Posts
- Placement officer.
- Office Superintendent FDA , SDA, Accountants
- Typists (Kannada & English)
- Wardens : Boys Hostel & Girls Hostel
- Receptionist, Drivers
- Foremen, Instructors and Attenders in the above departments

Qualification and Pay Scale As per AICTE norms
Note : For the posts of PRINCIPAL (with minimum 5 years experience as Principal and directly apply to Chairman email id), Professor & Associate Professor, candidates having Ph.D are only eligible. Apply Via email and hard copy so as to reach before 7days from the date of advertisement along with your detailed CV & supporting documents.
Dr. H. D. Ramesh, Principal, Mob: 7411083856
Sri D. C. Venugopal, Chairman, Chairman email id : dcvenugopal2665@gmail.com

WANTED TRAINED LADY TEACHERS to teach General Science, Chemistry and Biology in English Medium Primary and Highschools. Walk-in Interview on 20-12-2021 between 11.00 AM and 1.00 PM at 'PRATHIBHA SHIKSHANA SAMITHI', #9, 18th Main, BSK II Stage, Bangalore-70. Phone: 080-26710170/ 74833-77387

MATH TEACHERS (High School) needed for Chitrakoota CBSE School in Nagarbhavi, Kengeri Ring Road, with high salary. Immediately or for the next academic year. Call: 7829647333

WANTED PU LECTURERS for Computer Science and Commerce. Contact: Sri Maruthi PU College, Hoskote. Mob: 9731244533.

WANTED BE / Diploma in Electrical, Mechanical to take part time/Full time Diploma classes and M.Sc in Bio-chemistry to take Paramedical classes. PUC fail for Marketing Assistants. Contact personally with resume and original documents between 9 AM to 11 AM . Nadgir Institute Near Modi Hospital Rajajinagar Bangalore -560010. Ph: 23387333, 8867065525.

PE TEACHERS needed for Chitrakoota CBSE School in Nagarbhavi, Kengeri Ring Road, with high salary. Immediately or for the next academic year. Call: 7829647333 WALK-IN WELCOME.

WANTED EXPERIENCED LECTURERS- MCA/ M.Sc (CS)/ M.Tech (CS) Reservation as per Government Norms, Attractive Salary, Contact Principal with Original Certificates Between-10.00 am and 1.00 pm, SREE VENKATESHWARA DEGREE COLLEGE, Krishnarajapuram, Bangalore-36. CONTACT: 9036068144, 7411135627

SRI.RAMAKRISHNA EDUCATION Society, Halasuru, Requires Expd Lady TEACHERS BSc/ MSc,BEd Science,Maths & BA/ MA,BEd for English, Social Studies. 8861248642/ 9845048824 Mail: srkes1963@gmail.com

SREE VENKATESHWARA ENGLISH SCHOOL, #1, V.S.Layout, Krishnarajapuram, Bangalore-36. WANTED TEACHERS: B.Sc. B.Ed. (CBZ), MCA Attend with Original Certificates between 10.00 am to 1.00 pm. Contact: 080 25611873, 7411135627

WANTED CANDIDATES WITH MASTERS DEGREE, M.Ed/P.hd WITH 10 YEARS OF TEACHING EXPERIENCE. WHATSAPP CV 9980167814

ST.SOPHIA CONVENT School, Nagarabhavi, requires Experienced English and Social Science teachers for Primary &.High School Good salary immediate appointment: principal@ stsophiaconvent.org Contact: 9243031872

ST. MARTIN'S HIGH SCHOOL, 7th Cross, Behind Anjan Theatre, Magadi Road, Bengaluru-23. Wanted COMPUTER TEACHERS and other faculties for teaching High School. Phone: 9742388088 /080- 23101999/ 9591990199

Engg/ Production Technical

URGENTLY WANTED experienced QA, QC personnel for Electromagnetic products supplied for Defence and Aerospace. Minimum experience of 10 years. Very competitive remuneration. Vita Technology Pvt. Ltd., Contact: 7899752257 / 9686203434 vitatech@vitatechindia.com

REQUIRED EXPERIENCED Lady Candidate Civil Engineer, Computer Engineer, B.Com For Construction Office Work Vijayanagar. 9448396682

Factory

A FABRICATION/ galvanising Unit at Harohalli requires: Manager- Quality Control: Engineering Graduate Aged 35-50 years,with 8-10years experience in quality control Dept. Working knowledge of QMS is essential. Logistics/ Dispatch Supervisor: Graduate,aged 30-40years with 5-7years experience in similar activities with good communication skills. Salary shall commensurate with experience,send your resume to:- hrd@metcraft.in OR Call:8971216369

General

EARN 75000/-PM Required. Salesexecutive for Selling Petroleum Products Call:6366028889 9742245241 7338084555 & Walk-in for Interview Mail: glprojects7889 @gmail.com

WANTED EXPERIENCED Interior Related Works QUANTITY SURVEYOR & ACCOUNTANT for Komal Interiors. 9632229305/ 9886102678

MORE Classifieds IN SUPPLEMENT

MOBILE PHONE Retail Sales Executive- prefer candidate with relevant 2+ year experience. Whatsapp: 9433422115.

WANTED FRONT Office Assistant for CA office at Madhavanagar near Shivananda Circle. Contact: 080 41136800.

REQUIRE CANDIDATES for inventory management at Sadashivanagar. Contact no. - 6364506665/ 08043705741

Marketing & Sales

EXPERIENCED MARKETING PERSON capable of getting orders from Govt. Tenders, Sugar, Cement, Paper Engg Industries from South India required on commission cum salary basis. Email: accuratebearing@yahoo.co.in Whatsapp: 9341211791.

PUBLISHING HOUSE require marketing executive experienced/ fresher who can promote children books in school having own vehicle packages start from 240,000/- yearly. Whatsapp or call.8800865591

WANTED FRESHERS/ Exp Marketing Executives for a leading Book Publisher in Bangalore. Part Time or Full Time. Call: 9611185999

WANTED SALESMAN for Wedding cards Experience min 3 years in Retail Languages known Kannada & Hindi. Call: 9902856444

Multiple Vacancy

WANTED ELECTRICAL Engineer, Supervisor & Accountant (Full-time) Mob: 9880201335 lalithaelectricals01@gmail.com

Security & Detectives

WANTED Field Officer, House keeping Supervisor, for Security agency at KR Puram, MG road, Jayanagar 6363523802/ 9844434996

Situation Required

Wanted Foreman
- Expereienced Foreman for Bolt Machine in Madurai,Tamilnadu.
- Accommodation will be arranged.
Contact
99942 27456
94422 04551

Wanted

HINDUSTAN PHARMA Distributor Pvt. Ltd. Required for Part Time/ Full Time DELIVERY BOYS, Attractive Salary with P.F. and E.S.I. Address: 76/1, Aruna Complex, above Union Bank, J.C.Road, Bangalore-02. Contact: 9980120613.

Walk-in

SWIGGY FOOD DELIVERY APP
EXCITING JOB OPPORTUNITY IN BANGALORE !
₹ 20,000 to 25,000 Per Month
We want Delivery Executives
Full Time & Part Time
Weekly Payouts
Flexible Working Hours
Walk-in Interview
#6, AVS Compound, 80 ft Road, Koramangala, Blr-34
Near Sony Signal, GKB Opticals
Interested? Call: 080-45687736

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ADMISSION CORNER

The Mysore Education Society
M.E.S. COLLEGE OF ARTS, COMMERCE & SCIENCE
15th Cross, Malleswaram, Bangalore – 560 003
Ph: 23347045, 23341225
P. G. Admissions (only few seats are available)
ADMISSION FOR THE ACADEMIC YEAR 2021-22
(for Management Seats only, Other State students can also apply)
M.Sc. (Mathematics) & M.A. (Kannada) (Affiliated to Bengaluru City University)
Eligibility: 40% in the aggregate and 50% in the cognate subjects at the Bachelor's Degree
Issue of Applications: 10:30 AM and 1:30 PM Last date: 25-12-2021

CONNECT

BHAGWAN ADINATH HOSPITAL SERVICES
No. 182Y, 2nd & 3rd Floor, 3rd Block, 12th Main, Bashyam Circle, Rajajinagar, (Above ICICI Bank), Bengaluru-560010
TODAY OFFER
VITAMIN B12 VITAMIN D3 Tests ~~1500/-~~
for Just 750/- only
for first 100 Patients only
Call and Book your slot
Call: 080-42111313/ 414/ 515/ 09362244777

STOCK CLEARANCE SALE!
From 18-12-2021 to 31-12-2021
Or Until Stocks last
50% to 70%
Kids, Men & Women's Readymade Garments and Sarees
at Silverstar Hotel
126, 6th Cross, Gandhinagar, Bengaluru-560 009.
Timings : 10.30 a.m. to 8.30 p.m.
Organised by : S. G. & Sons, Bangalore

‘ಶಾಲಾ ಹಂತದಲ್ಲಿ ಸಂಗೀತ ಕಲಿಕೆಗೆ ಒತ್ತು ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಲಾ ಹಂತದಲ್ಲಿ ಮಕ್ಕಳಿಗೆ ಸಂಗೀತ ಕಲಿಸಲು ಒತ್ತು ನೀಡಬೇಕು. ಎಳವೆಯಲ್ಲೇ ಅವರಲ್ಲಿ ಸಂಗೀತ ಪ್ರೀತಿ ಹಾಗೂ ಸಂಸ್ಕಾರ ಬೆಳೆಸಲು ಇದು ಸಹಕಾರಿಯಾಗಲಿದೆ’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅಭಿಪ್ರಾಯಪಟ್ಟರು.

ಶ್ರೀ ರಾಮಸೇವಾ ಮಂಡಲಿ ಟ್ರಸ್ಟ್ ಹಮ್ಮಿಕೊಂಡಿರುವ 27ನೇ ವರ್ಷದ ಎಸ್.ವಿ.ನಾರಾಯಣಸ್ವಾಮಿ ರಾವ್ ಸ್ಮಾರಕ ಸಂಗೀತ ಉತ್ಸವದಲ್ಲಿ ವಿದ್ವಾನ್ ಮಧುರೈ ಟಿ.ಎನ್.ಶೇಷಗೋಪಾಲನ್ ಅವರಿಗೆ 2021ನೇ ಸಾಲಿನ ‘ಎಸ್.ವಿ.ನಾರಾಯಣಸ್ವಾಮಿ ರಾವ್ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ ಮಾಡಿ ಶನಿವಾರ ಮಾತನಾಡಿದರು.

‘ಸಂಗೀತವು ಎಲ್ಲರಿಗೂ ಪ್ರೇರಣೆ ನೀಡುತ್ತದೆ. ಮನಸ್ಸನ್ನು ಪ್ರಫುಲ್ಲಗೊಳಿಸುತ್ತದೆ. ಹೀಗಾಗಿ ದಿನವೊಂದರಲ್ಲಿ 20 ಶಸ್ತ್ರಚಿಕಿತ್ಸೆಗಳನ್ನು ನಡೆಸುತ್ತಿದ್ದ ಪರಿಚಿತ ವೈದ್ಯರೊಬ್ಬರು ಮುಂಜಾನೆ 4 ಗಂಟೆಗೆ ಎದ್ದು ಸಂಗೀತ ಅಭ್ಯಾಸ ಮಾಡುತ್ತಿದ್ದರು’ ಎಂದು ಹೇಳಿದರು.

ಸಂಗೀತ ಉತ್ಸವದ ಎರಡನೇ ದಿನವಾದ ಶನಿವಾರ ಒಟ್ಟು ನಾಲ್ಕು ಸಂಗೀತ ಕಛೇರಿಗಳು ನಡೆದವು. ಗಾಯನ ಸಮಾಜದ ಸಭಾಂಗಣದಲ್ಲಿ ಬೆಳಿಗ್ಗೆ 9.30ಕ್ಕೆ ನಡೆದ ಕಛೇರಿಯಲ್ಲಿ ವಿದ್ವಾನ್ ಎಸ್.ವಿ. ರಮಣಕುಮಾರ್ ಅವರು ಸುಮಧುರ ಗಾಯನದ ಮೂಲಕ ನೆರೆದಿದ್ದವರನ್ನು ರಂಜಿಸಿದರು. ವಿದ್ವಾನ್ ಮುದ್ದು ಮೋಹನ್ ಅವರ ಹಿಂದೂಸ್ತಾನಿ ಗಾನ ಮಾಧುರ್ಯಕ್ಕೂ ಸಂಗೀತ ಪ್ರಿಯರು ತಲೆದೂಗಿದರು. ವಿದ್ವಾನ್ ಶ್ರೀಧರ ಸಾಗರ್ ಹಾಗೂ ಸಂಗಡಿಗರ ಸ್ಯಾಕ್ಸೊಫೋನ್ ವಾದನವೂ ಗಮನ ಸೆಳೆಯಿತು.

ಮುಸ್ಸಂಜೆ ಹೊತ್ತಿನಲ್ಲಿ ನಿಗದಿಯಾಗಿದ್ದ ಮೈಸೂರಿನ ಸಹೋದರರಾದ ವಿದ್ವಾನ್ ಎಂ.ನಾಗರಾಜ್ ಹಾಗೂ ವಿದ್ವಾನ್ ಎಂ.ಮಂಜುನಾಥ್ ಅವರ ವಯಲಿನ್ ಜುಗಲ್‌ಬಂದಿ ಸಭಾಂಗಣದಲ್ಲಿದ್ದವರನ್ನು ಮೂಕವಿಸ್ಮಿತರನ್ನಾಗಿಸಿತು.

ಭಾನುವಾರ ಬೆಳಿಗ್ಗೆ 9.30ಕ್ಕೆ ಕಛೇರಿಗಳು ಶುರುವಾಗಲಿವೆ. ಪ್ರಸಿದ್ಧ ಹಿಂದೂಸ್ಥಾನಿ ಹಾಗೂ ಕರ್ನಾಟಕ ಶಾಸ್ತ್ರೀಯ ಸಂಗೀತಗಾರರು, ವೀಣೆ, ಡೋಲು, ಪಿಟೀಲು, ಸ್ಯಾಕ್ಸೊಫೋನ್, ವಯಲಿನ್ ಹಾಗೂ ಕೊಳಲು ವಾದಕರು ಸಂಗೀತ ಕಛೇರಿಗಳನ್ನು ನಡೆಸಿಕೊಡಲಿದ್ದಾರೆ. ಆನ್‌ಲೈನ್‌ನಲ್ಲೂ (https://shaale.com/watch/svn) ನೇರ ಪ್ರಸಾರ ಇರಲಿದೆ.

ಸಚಿವ ಬಿ.ಸಿ.ನಾಗೇಶ್ (ಎಡದಿಂದ ಎರಡನೆಯವರು) ವಿದ್ವಾನ್ ಮಧುರೈ ಟಿ.ಎನ್.ಶೇಷಗೋಪಾಲನ್ ಅವರಿಗೆ 2021ನೇ ಸಾಲಿನ ‘ಎಸ್.ವಿ.ನಾರಾಯಣಸ್ವಾಮಿ ರಾವ್ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ ಮಾಡಿದರು. (ಎಡದಿಂದ) ನಿವೃತ್ತ ಐಎಎಸ್ ಅಧಿಕಾರಿ ಎ.ರವೀಂದ್ರ, ಕಲಾ ವಿಮರ್ಶಕ ಎಂ.ಸೂರ್ಯಪ್ರಸಾದ್, ರಾಜ್ಯಸಭಾ ಸದಸ್ಯ ಕೆ.ಸಿ. ರಾಮಮೂರ್ತಿ ಹಾಗೂ ಶ್ರೀ ರಾಮಸೇವಾ ಮಂಡಲಿ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಎಸ್.ಎನ್.ರಾಮಪ್ರಸಾದ್ ಇದ್ದರು– ಪ್ರಜಾವಾಣಿ ಚಿತ್ರ

ನಾಲ್ಕನೇ ಮಹಡಿಯಿಂದ ಬಿದ್ದು ಮಗು ಸಾವು

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಠಾಣೆ ವ್ಯಾಪ್ತಿಯ ನೀಲಾದ್ರಿ ಇನ್‌ವೆಸ್ಟ್‌ಮೆಂಟ್ ಬಡಾವಣೆಯಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ನಾಲ್ಕನೇ ಮಹಡಿಯಿಂದ ಬಿದ್ದು ದಿವ್ಯಾಂಶ್ ರೆಡ್ಡಿ ಎಂಬ ಮಗು ಮೃತಪಟ್ಟಿದೆ.

‘ಮಗುವಿನ ತಂದೆ–ತಾಯಿ ಹಾಗೂ ಅಜ್ಜಿ ಎಲೆಕ್ಟ್ರಾನಿಕ್ ಸಿಟಿಯಲ್ಲಿ ನೆಲೆಸಿದ್ದಾರೆ. ತಂದೆ, ಆ್ಯಪ್ ಆಧರಿತ ಕಂಪನಿಗಳಲ್ಲಿ ಆಹಾರ ಪೂರೈಸುವ ಕೆಲಸ ಮಾಡುತ್ತಿದ್ದಾರೆ. ತಾಯಿ, ಗೃಹಿಣಿ. ಮಗುವಿನ ಮರಣೋತ್ತರ ಪರೀಕ್ಷೆ ನಡೆಸಿ, ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಹಳೆಯ ಬಾಡಿಗೆ ಮನೆ ಬದಲಿಸಲು ತೀರ್ಮಾನಿಸಿದ್ದ ಕುಟುಂಬ, ಹೊಸ ಮನೆಗಾಗಿ ಹುಡುಕಾಟ ನಡೆಸುತ್ತಿತ್ತು. ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಫ್ಲ್ಯಾಟ್ ಬಾಡಿಗೆ ಇರುವುದನ್ನು ತಿಳಿದಿದ್ದ ಅಜ್ಜಿ, ವಿಚಾರಿಸಲೆಂದು ಗುರುವಾರ ಸಂಜೆ ಹೋಗಿದ್ದರು. ಅವರ ಜೊತೆಯಲ್ಲಿ ಮಗು ಸಹ ಇತ್ತು.’

‘ನಾಲ್ಕನೇ ಮಹಡಿಯಲ್ಲಿರುವ ಫ್ಲ್ಯಾಟ್ ಎದುರು ಮಗುವನ್ನು ಆಟವಾಡಲು ಬಿಟ್ಟಿದ್ದ ಅಜ್ಜಿ, ಫ್ಲ್ಯಾಟ್‌ನ ಒಳಗೆ- ಹೊರಗೆ ಓಡಾಡುತ್ತಿದ್ದರು. ಆಟವಾಡುತ್ತಿದ್ದ ಮಗು, ಆಯತಪ್ಪಿ ಬಿದ್ದು ಸ್ಥಳದಲ್ಲೇ ಮೃತಪಟ್ಟಿದೆ’ ಎಂದೂ ತಿಳಿಸಿವೆ.

‘ಮಹಡಿಯ ಅಂಚಿನಲ್ಲಿ ರಂಧ್ರಗಳಿದ್ದು, ಅದರ ಮೇಲೆ ಪ್ಲ್ಯಾಸ್ಟಿಕ್ ಹೊದಿಸಲಾಗಿದೆ. ಅದರ ಮೇಲೆ ಕಾಲಿಡುತ್ತಿದ್ದಂತೆ ಮಗು ಕೆಳಗೆ ಬಿದ್ದಿರುವುದು ಗೊತ್ತಾಗಿದೆ’ ಎಂದೂ ಹೇಳಿವೆ.

ಅಗತ್ಯವಿದ್ದರೆ ಪೂರ್ವ ಲಡಾಖ್‌ನಲ್ಲಿ ಸೇನೆ ನಿಯೋಜನೆ: ವಿವೇಕ್ ರಾಮ್

ಹೈದರಾಬಾದ್(ಪಿಟಿಐ): ‘ನೆರೆಯ ಚೀನಾದೊಂದಿಗಿನ ಬಿಕ್ಕಟ್ಟು ಇನ್ನೂ ಬಗೆಹರಿಯದ ಕಾರಣ ಭಾರತೀಯ ವಾಯುಪಡೆಯು ಪೂರ್ವ ಲಡಾಕ್‌ನಲ್ಲಿ ಸೇನಾ ನಿಯೋಜನೆಯನ್ನು ಮುಂದುವರಿಸಿದ್ದು, ಅಗತ್ಯಬಿದ್ದರೆ ಸೈನಿಕರ ಉಪಸ್ಥಿತಿಯನ್ನು ಮತ್ತಷ್ಟು ಹೆಚ್ಚಿಸಲು ಸಿದ್ಧ’ ಎಂದು ವಾಯುಪಡೆಯ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿವೇಕ್ ರಾಮ್ ಚೌಧರಿ ಶನಿವಾರ ಹೇಳಿದ್ದಾರೆ.

ವಿವೇಕ್ ರಾಮ್ ಚೌಧರಿ

ಇಲ್ಲಿಗೆ ಸಮೀಪದ ದುಂಡಿಗಲ್‌ನಲ್ಲಿನ ವಾಯುಪಡೆ ಅಕಾಡೆಮಿಯಲ್ಲಿ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಗಡಿ ಭಾಗದಲ್ಲಿ ಬಿಕ್ಕಟ್ಟು ಇನ್ನೂ ಮುಂದುವರಿದಿದೆ. ಪೂರ್ವ ಲಡಾಕ್‌ನ ಕೆಲವೆಡೆ ಮಾತ್ರ ಸೇನೆಯನ್ನು ಹಿಂತೆಗೆದುಕೊಳ್ಳಲಾಗಿದೆ. ಆದರೆ, ಸಂಪೂರ್ಣವಾಗಿ ಸೇನೆಯನ್ನು ಹಿಂತೆಗೆದುಕೊಂಡಿಲ್ಲ. ಅಗತ್ಯಬಿದ್ದರೆ ಮತ್ತಷ್ಟು ಸೇನೆಯನ್ನು ನಿಯೋಜಿಸಲಾಗುವುದು. ಈ ಪ್ರದೇಶದಲ್ಲಿ ನಮಗೆ ಎದುರಾಗಬಹುದಾದ ಯಾವುದೇ ಸವಾಲನ್ನು ಎದುರಿಸಲು ನಾವು ಸಿದ್ಧವಾಗಿದ್ದೇವೆ’ ಎಂದರು.

ಪೂರ್ವ ಲಡಾಕ್ ಪ್ರದೇಶದಲ್ಲಿ ಚೀನಾದೊಂದಿಗಿನ ಬಿಕ್ಕಟ್ಟಿನ ಪ್ರಶ್ನೆಗೆ ಉತ್ತರಿಸಿದ ಅವರು, ‘ಗಾಲ್ವಾನ್ ಘಟನೆಯ ನಂತರ ಈ ಪ್ರದೇಶದಲ್ಲಿ ಸೇನಾ ಪಡೆಗಳ ನಿಯೋಜನೆಗೆ ಸಂಬಂಧಿಸಿದಂತೆ ಯಥಾಸ್ಥಿತಿಯು ಕಳೆದ ಏಪ್ರಿಲ್‌ನಿಂದಲೂ ಅದೇ ಮಟ್ಟದಲ್ಲಿ ಮುಂದುವರಿದಿದೆ’ ಎಂದು ಅವರು ಹೇಳಿದರು.

‘ಹೆಲಿಕಾಪ್ಟರ್ ದುರಂತ– ತನಿಖೆಗೆ ಕಾಲಾವಕಾಶ’: ‘ತಮಿಳುನಾಡಿನಲ್ಲಿ ಈಚೆಗೆ ನಡೆದ ಹೆಲಿಕಾಪ್ಟರ್ ಪತನ ಪ್ರಕರಣದ ತನಿಖೆಗಾಗಿ ನ್ಯಾಯಾಲಯವು ಸೇನೆಯ ಮೂರೂ ಪಡೆಗಳ ಅಧಿಕಾರಿಗಳನ್ನೊಳಗೊಂಡ ತನಿಖಾ ತಂಡವನ್ನು ನೇಮಕ ಮಾಡಿದ್ದು, ತನಿಖೆ ನಿಷ್ಪಕ್ಷಪಾತವಾಗಿ ನಡೆಯುತ್ತಿದೆ. ಪ್ರತಿಯೊಂದು ಆಯಾಮದಲ್ಲೂ ವಿಚಾರಣೆ ನಡೆಲಾಗುತ್ತಿದೆ. ಇದಕ್ಕಾಗಿ ಕೆಲ ಸಮಯ ಹಿಡಿಯುತ್ತದೆ’ ಎಂದು ವಿವೇಕ್ ರಾಮ್ ಚೌಧರಿ ಹೇಳಿದ್ದಾರೆ.

ಕತ್ತು ಕೊಯ್ದುಕೊಂಡು ಉದ್ಯೋಗಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾರ್ಮೆಂಟ್ಸ್ ಕಾರ್ಖಾನೆಯೊಂದರ ಬಟ್ಟೆ ಮಾರಾಟ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದ ಮೋಹನ್ (29) ಎಂಬುವರು ಕತ್ತು ಕೊಯ್ದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಪೀಣ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ತುಮಕೂರಿನ ಮೋಹನ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಮಳಿಗೆಯಲ್ಲಿ ಕೆಲಸಕ್ಕೆ ಸೇರಿ, ಸಿದ್ದಾರ್ಥ್ ನಗರದಲ್ಲಿ ವಾಸವಿದ್ದರು. ಮೃತದೇಹದ ಬಳಿ ಮರಣಪತ್ರ ಸಿಕ್ಕಿದೆ. ಸಾವಿನ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ನನ್ನ ಸಾವಿಗೆ ನಾನೇ ಕಾರಣ’ ಎಂಬುದಾಗಿ ಮರಣಪತ್ರದಲ್ಲಿ ಬರೆಯಲಾಗಿದೆ. ಘಟನಾ ಸ್ಥಳ ಪರಿಶೀಲನೆ ನಡೆಸಿದಾಗ, ಇದೊಂದು ಆತ್ಮಹತ್ಯೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಕುಟುಂಬದವರೂ ಆತ್ಮಹತ್ಯೆ ಎಂಬುದಾಗಿ ಹೇಳಿಕೆ ನೀಡಿದ್ದಾರೆ’ ಎಂದೂ ವಿವರಿಸಿದರು.

‘ತಮ್ಮೂರಿನಲ್ಲಿ ಮನೆ ಕಟ್ಟಿಸಿದ್ದ ಮೋಹನ್, ಎರಡು ತಿಂಗಳ ಹಿಂದಷ್ಟೇ ಗೃಹಪ್ರವೇಶ ಕಾರ್ಯಕ್ರಮ ಮಾಡಿದ್ದರು. ಮನೆ ನಿರ್ಮಾಣಕ್ಕಾಗಿ ಸಾಲ ಮಾಡಿಕೊಂಡಿದ್ದರು. ವೇತನದ ಹಣದಲ್ಲಿ ಜೀವನ ನಡೆಸಿ, ಸಾಲದ ಕಂತು ತುಂಬುದು ಕಷ್ಟವಾಗಿತ್ತು. ಅದರಿಂದ ಮೋಹನ್ ಬೇಸತ್ತಿದ್ದರೆಂದು ತನಿಖೆಯಿಂದ ತಿಳಿದುಬಂದಿದೆ’ ಎಂದೂ ಪೊಲೀಸರು ಹೇಳಿದರು.

‘ಸಿಇಸಿಗೆ ಪತ್ರ ಬರೆದಿರಲಿಲ್ಲ’

ನವದೆಹಲಿ (ಪಿಟಿಐ): ಸಭೆಯೊಂದರಲ್ಲಿ ಪಾಲ್ಗೊಳ್ಳುವ ಸಲುವಾಗಿ ಪ್ರಧಾನ ಮಂತ್ರಿ ಕಚೇರಿಗೆ (ಪಿಎಂಒ) ಬರುವಂತೆ ಕೋರಿ ಮುಖ್ಯ ಚುನಾವಣಾ ಆಯುಕ್ತರನ್ನು ಉದ್ದೇಶಿಸಿ ಪತ್ರವನ್ನು ಬರೆದಿರಲಿಲ್ಲ ಎಂದು ಕಾನೂನು ಸಚಿವಾಲಯ ಶನಿವಾರ ಹೇಳಿದೆ.

‘ಈ ಸಂಬಂಧ ಚುನಾವಣಾ ಆಯೋಗದ ಕಾರ್ಯದರ್ಶಿ ಇಲ್ಲವೇ ಮುಖ್ಯ ಚುನಾವಣಾ ಆಯುಕ್ತರ (ಸಿಇಸಿ) ಪ್ರತಿನಿಧಿಯೊಬ್ಬರಿಗೆ ಆಹ್ವಾನ ನೀಡಿ ಪತ್ರ ಬರೆಯಲಾಗಿತ್ತು’ ಎಂದು ಸಚಿವಾಲಯ ಸ್ಪಷ್ಟನೆ ನೀಡಿದೆ.

ನಂತರ, ಸಿಇಸಿ ಹಾಗೂ ಇಬ್ಬರು ಚುನಾವಣಾ ಆಯುಕ್ತರೊಂದಿಗೆ ವರ್ಚುವಲ್ ಸಭೆ ನಡೆಸಿ, ಚುನಾವಣಾ ಸುಧಾರಣೆ ಕುರಿತು ಚರ್ಚಿಸಲಾಯಿತು ಎಂದೂ ಸಚಿವಾಲಯ ತಿಳಿಸಿದೆ.

ಡ್ರಗ್ಸ್: ಪೊಲೀಸರ ಕೈ ಸೇರಿದ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಪೆಡ್ಲರ್ ಜೊತೆ ನಂಟು ಹೊಂದಿದ್ದ ಆರೋಪದಡಿ ವಿಚಾರಣೆ ಎದುರಿಸಿದ್ದ ‘ಪ್ರೆಸ್ಟಿಜ್ ಗ್ರೂಪ್’ ಕಂಪನಿ ಕಾರ್ಯನಿರ್ವಾಹಕ ನಿರ್ದೇಶಕಿ ಅಂಜುಮ್ ಜುಂಗ್ ಅವರ ವೈದ್ಯಕೀಯ ಪರೀಕ್ಷೆ ವರದಿ ಗೋವಿಂದಪುರ ಠಾಣೆ ಪೊಲೀಸರ ಕೈ ಸೇರಿದೆ.

ಡ್ರಗ್ಸ್ ಸಾಗಣೆ ಹಾಗೂ ಮಾರಾಟ ಆರೋಪದಡಿ ನೈಜೀರಿಯಾ ಪ್ರಜೆ ಥಾಮಸ್ ಕಾಲು ಎಂಬಾತನನ್ನು ಪೊಲೀಸರು ಇತ್ತೀಚೆಗಷ್ಟೇ ಬಂಧಿಸಿದ್ದರು. ಆತನ ಬಳಿ ಡ್ರಗ್ಸ್ ಖರೀದಿಸುತ್ತಿದ್ದ ಆರೋಪ ಅಂಜುಮ್ ಮೇಲಿತ್ತು. ಪೊಲೀಸರು ನೋಟಿಸ್ ನೀಡಿದ್ದರಿಂದಾಗಿ ಅವರು ವಿಚಾರಣೆಗೆ ಹಾಜರಾಗಿ ಹೇಳಿಕೆ ನೀಡಿದ್ದರು.

‘ಡ್ರಗ್ಸ್ ಸೇವನೆ ಮಾಹಿತಿ ಇದ್ದಿದ್ದರಿಂದ ಅಂಜುಮ್ ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿತ್ತು. ರಕ್ತ, ಮೂತ್ರದ ಮಾದರಿ ಸಂಗ್ರಹಿಸಿದ್ದ ವೈದ್ಯರು, ಅದರ ವರದಿಯನ್ನು ಶುಕ್ರವಾರ ನೀಡಿದ್ದಾರೆ. ತನಿಖೆ ದೃಷ್ಟಿಯಿಂದ ವರದಿಯ ಅಂಶಗಳನ್ನು ಬಹಿರಂಗಪಡಿಸಲಾಗದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಅರಾಜಕತೆ, ಸಂಘರ್ಷ ಸೃಷ್ಟಿ ಸಂಚು: ಸಿ.ಟಿ.ರವಿ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ‘ಕೊಲ್ಹಾಪುರದಲ್ಲಿ ಕನ್ನಡ ಬಾವುಟ ಸುಡಲಾಗಿದೆ, ಕರ್ನಾಟಕದಲ್ಲಿ ಶಿವಾಜಿ ಪ್ರತಿಮೆಗೆ ಮಸಿ ಬಳಿಯಲಾಗಿದೆ. ಮಹಾರಾಷ್ಟ್ರ, ಕರ್ನಾಟಕದಲ್ಲಿ ಸಂಘರ್ಷವಾಗಲಿ ಎಂದು ಅರಾಜಕತಾವಾದಿಗಳು ಈ ಸಂಚು ರೂಪಿಸಿರುವ ಸಾಧ್ಯತೆ ಇದೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪ್ರತಿಕ್ರಿಯಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಅರಾಜಕತಾವಾದಿಗಳ ಕುಮ್ಮಕ್ಕಿಗೆ ಬಲಿಯಾಗದೆ ಶಾಂತಿ, ಸೌಹಾರ್ದ ಕಾಪಾಡಿಕೊಳ್ಳಬೇಕು. ಮಹಾರಾಷ್ಟ್ರದಲ್ಲಿ ಲಕ್ಷಾಂತರ ಕನ್ನಡಿಗರು, ಕರ್ನಾಟಕದಲ್ಲಿ ಲಕ್ಷಾಂತರ ಮರಾಠಿಗರು ಇದ್ದಾರೆ. ರಾಷ್ಟ್ರೀಯ ಹಿತಾಸಕ್ತಿಗೆ ಧಕ್ಕೆ ಮಾಡಲು ಕೆಲವರು ರೂಪಿಸುವ ಷಡ್ಯಂತ್ರಗಳಿಗೆ ಎರಡೂ ರಾಜ್ಯಗಳವರೂ ಕಿವಿಗೊಡಬಾರದು’ ಎಂದು ಮನವಿ ಮಾಡಿದರು.

ಆದೇಶ ವಾಪಸ್‌ಗೆ ಒತ್ತಾಯ: ‘ದತ್ತ ಜಯಂತಿ ನಿಟ್ಟಿನಲ್ಲಿ ಹಾಸನ ಜಿಲ್ಲಾಡಳಿತ ಹೊರಡಿಸಿರುವ ಪಾನ ನಿರೋಧ ಘೋಷಣೆ ಆದೇಶದಲ್ಲಿ ಬಳಸಿರುವ ಭಾಷೆ ಅವಹೇಳನಕಾರಿಯಾಗಿದೆ. ಸುತ್ತೋಲೆ ವಾಪಸ್ ಪಡೆಯಬೇಕು, ಹಾಸನ ಜಿಲ್ಲಾಧಿಕಾರಿ ಕ್ಷಮೆಯಾಚಿಸಬೇಕು’ ಎಂದು ರವಿ ಆಗ್ರಹಿಸಿದರು.

ನ್ಯಾ. ಸಂತೋಷ್ ಹೆಗ್ಡೆ ನೇತೃತ್ವದಲ್ಲಿ ತನಿಖೆಗೆ ಆಗ್ರಹ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಕಾಮಗಾರಿಗಳ ಗುತ್ತಿಗೆಯ ಟೆಂಡರ್ ಪ್ರಕ್ರಿಯೆಯಲ್ಲಿ ಶೇಕಡ 40ರಷ್ಟು ಲಂಚ ಪಡೆಯಲಾಗುತ್ತಿದೆ ಎಂಬುದಾಗಿ ರಾಜ್ಯ ಗುತ್ತಿಗೆದಾರರ ಸಂಘವು ಮಾಡಿರುವ ಆರೋಪದ ಕುರಿತು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ನೇತೃತ್ವದಲ್ಲಿ ತನಿಖೆಗೆ ಆದೇಶಿಸುವಂತೆ ಸಮಸ್ತ ಲಿಂಗಾಯತ ಹೋರಾಟ ವೇದಿಕೆ ಆಗ್ರಹಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಮನವಿ ಸಲ್ಲಿಸಿರುವ ವೇದಿಕೆಯ ಅಧ್ಯಕ್ಷ ಬಿ.ಎಂ. ಚಿಕ್ಕನಗೌಡರ, ‘2013ರಿಂದ ಈವರೆಗೆ ನಡೆದಿರುವ ಎಲ್ಲ ಕಾಮಗಾರಿಗಳಿಗೆ ಸಂಬಂಧಿಸಿದಂತೆಯೂ ತನಿಖೆ ನಡೆಸಬೇಕು. ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳ ಮೇಲೆ ಗುರುತರವಾದ ಆರೋಪ ಕೇಳಿಬಂದಿದೆ. ಈ ವಿಚಾರದಲ್ಲಿ ಅತ್ಯಂತ ಪಾರದರ್ಶಕ ರೀತಿಯಲ್ಲಿ ತನಿಖೆ ನಡೆಸಬೇಕು’ ಎಂದು ಒತ್ತಾಯಿಸಿದ್ದಾರೆ.

ಲಂಚ ಪ್ರಮಾಣ ಹೆಚ್ಚುತ್ತಿರುವುದರಿಂದ ಕಾಮಗಾರಿಗಳಲ್ಲಿ ಗುಣಮಟ್ಟ ಕಾಪಾಡಲು ಸಾಧ್ಯವಾಗುತ್ತಿಲ್ಲ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷರೇ ಹೇಳಿದ್ದಾರೆ. ಇದು ಅತ್ಯಂತ ಗಂಭೀರವಾದ ಸಮಸ್ಯೆ. ಸಾರ್ವಜನಿಕರ ತೆರಿಗೆಯ ಹಣದಿಂದ ಕೈಗೊಳ್ಳುವ ಕಾಮಗಾರಿಗಳು ಕಳಪೆಯಾದರೆ ಯಾರು ಹೊಣೆ ಎಂದು ಪ್ರಶ್ನಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯ
ಪಾವಟೆ ನಗರ, ಧಾರವಾಡ–580003 | www.kud.ac.in

ವಿಶ್ವವಿದ್ಯಾಲಯವು ಸೇವಾ ಪೂರೈಕೆದಾರ ಸಂಸ್ಥೆಯಾದ ಕಾಕಡೆ ಕರಿಯರ್ ಅಕಾಡೆಮಿಯ ಮೂಲಕ ಈ ಕೆಳಗಿನ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ Online ತರಗತಿಗಳನ್ನು ಕನ್ನಡ ಮಾಧ್ಯಮದಲ್ಲಿ ಪ್ರಾರಂಭಿಸುತ್ತಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿಶ್ವವಿದ್ಯಾಲಯವು ಕಡಿಮೆ ಶುಲ್ಕದಲ್ಲಿ online ತರಗತಿಗಳನ್ನು ಆಯೋಜಿಸಿದೆ. ಶುಲ್ಕವನ್ನು ‘Karnatak University’ App ಮೂಲಕ ಪಾವತಿಸಿ ಪ್ರವೇಶ ಪಡೆಯಿರಿ

ಶುಲ್ಕ ಕೇವಲ ರೂ. 900/-

ONLINE ಕೋರ್ಸ್‌ಗಳು
Live ತರಗತಿಗಳು, Recorded Video ತರಗತಿಗಳು ಮತ್ತು Online ಟೆಸ್ಟ್‌ಗಳು

Railway Group-D: ಬೋಧನಾ ವಿಷಯಗಳು : General Science, Maths, General Intelligence ಮತ್ತು Reasoning, General Awareness ಮತ್ತು Current Affairs. Group-D ಪರೀಕ್ಷೆಯ ಪ್ರಾರಂಭ ದಿನಾಂಕ : 23.02.2022

PSI: ಬೋಧನಾ ವಿಷಯ : ಪತ್ರಿಕೆ–2: ಸಾಮಾನ್ಯ ಪತ್ರಿಕೆ

PC: ಬೋಧನಾ ವಿಷಯ : ಸಾಮಾನ್ಯ ಪತ್ರಿಕೆ

KAS (ಪ್ರಿಲಿಮ್ಸ್): ಬೋಧನಾ ವಿಷಯಗಳು : (1) ಪತ್ರಿಕೆ–1 : ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಷಯಗಳು, ಇತಿಹಾಸ, ಭೂಗೋಳಶಾಸ್ತ್ರ, ಭಾರತೀಯ ಆರ್ಥಿಕತೆ ಮತ್ತು ಭಾರತದ ಸಂವಿಧಾನ (2) ಪತ್ರಿಕೆ–2: ರಾಜ್ಯದ ಪ್ರಾಮುಖ್ಯತೆ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಪರಿಸರ ವಿಜ್ಞಾನ

ಈ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ Online ತರಗತಿಗಾಗಿ ಪ್ರವೇಶವನ್ನು ಪಡೆಯಲು 'Karnatak University' App ಅನ್ನು Google Play Store ನಿಂದ download ಮಾಡಿಕೊಂಡು Appನಲ್ಲಿ 'Register' ಮಾಡಿಕೊಳ್ಳಿರಿ. ನಂತರ App ನ ಮೇಲ್ಭಾಗದಲ್ಲಿ ಇರುವ 'Store'ನ ಮುಖಾಂತರ ಪ್ರವೇಶಿಸಿದಾಗ ಎಲ್ಲಾ ತರಬೇತಿ ಪ್ಯಾಕೇಜ್‌ಗಳು ಲಭ್ಯವಾಗುತ್ತವೆ. ನಿಮಗೆ ಬೇಕಾದ ತರಬೇತಿಗೆ ಸೇರಲು ಮೇಲ್ಭಾಗದಲ್ಲಿ ಕಾಣುವ 'Buy Now' ಬಟನ್ ಅನ್ನು ಒತ್ತಿರಿ. ನಂತರ ತೆರೆದುಕೊಳ್ಳುವ ಪುಟದಲ್ಲಿ ಕೆಳಭಾಗದಲ್ಲಿ ಕಂಡು ಬರುವ 'Proceed' ಬಟನ್ ಅನ್ನು ಒತ್ತಿರಿ. ಶುಲ್ಕವನ್ನು ಪಾವತಿಸಿದ ನಂತರ ನಿಮಗೆ ನಿಮ್ಮ ಹೆಸರು ನೋಂದಣಿ ಆಗಿರುವ ಕುರಿತಾಗಿ ನಿಮ್ಮ ಮೊಬೈಲ್‌ಗೆ SMS ಬರುತ್ತದೆ

ಮೊಬೈಲ್ : 9916058305 / 06

ಸಂಯೋಜಕರು
ಔಪಚಾರಿಕವಲ್ಲದ ಶಿಕ್ಷಣ ಕಾರ್ಯಕ್ರಮಗಳು,
ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ವಿಭಾಗ
ಮಾನಸೋಲ್ಲಾಸ ಸಭಾಂಗಣ ಕಟ್ಟಡ, ಕವಿವಿ, ಧಾರವಾಡ

ರೋಗಿಗಳ ಸಂಖ್ಯೆಯಲ್ಲಿ ಹೆಚ್ಚಳ ಸಾಧ್ಯತೆ ● ಆಸ್ಪತ್ರೆಗಳ ಮೇಲೆ ಒತ್ತಡ– ಡಬ್ಲ್ಯೂಎಚ್‌ಒ ಎಚ್ಚರಿಕೆ

‘ಓಮೈಕ್ರಾನ್: ಮೂರು ದಿನಗಳಲ್ಲೇ ದ್ವಿಗುಣ’

ಜಿನಿವಾ (ರಾಯಿಟರ್ಸ್): ಕೊರೊನಾ ವೈರಸ್‌ನ ಓಮೈಕ್ರಾನ್ ತಳಿ ಸೋಂಕಿನ ಪ್ರಕರಣಗಳು ವಿಶ್ವದ 89 ರಾಷ್ಟ್ರಗಳಲ್ಲಿ ವರದಿಯಾಗಿವೆ.

ಸಮುದಾಯ ಮಟ್ಟದಲ್ಲಿ ಈ ತಳಿಯ ಸೋಂಕಿನ ಪ್ರಕರಣಗಳ ಸಂಖ್ಯೆ ಒಂದೂವರೆಯಿಂದ ಮೂರು ದಿನಗಳ ಅವಧಿಯಲ್ಲಿ ದ್ವಿಗುಣಗೊಳ್ಳುತ್ತಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯೂಎಚ್‌ಒ) ಶನಿವಾರ ಹೇಳಿದೆ.

ಓಮೈಕ್ರಾನ್ ಬಹಳ ವೇಗವಾಗಿ ಪ್ರಸರಣವಾಗುತ್ತಿದೆ. ಕೆಲ ದೇಶಗಳಲ್ಲಿ ರೋಗಿಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಾಗಿ, ಆಸ್ಪತ್ರೆಗಳ ಮೇಲೆ ಒತ್ತಡಕ್ಕೆ ಕಾರಣವಾಬಹುದು ಎಂದೂ ಡಬ್ಲ್ಯೂಎಚ್‌ಒ ಎಚ್ಚರಿಸಿದೆ.

ವ್ಯಕ್ತಿಯ ದೇಹದಲ್ಲಿನ ರೋಗ ನಿರೋಧಕ ಶಕ್ತಿಯಿಂದ ತಪ್ಪಿಸಿಕೊಳ್ಳುವ ಸಾಮರ್ಥ್ಯವನ್ನು ವೈರಸ್ ಹೊಂದಿರುವುದು, ವೇಗವಾಗಿ ಪ್ರಸರಣವಾಗುವ ಅದರ ಮೂಲಗುಣ ಅಥವಾ ಈ ಎರಡೂ ಗುಣಗಳು ವೈರಸ್ ವೇಗವಾಗಿ ಪ್ರಸರಣವಾಗಲು ಕಾರಣವಾಗಿರಬಹುದೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ ಎಂದು ಹೇಳಿದೆ.

‘ಓಮೈಕ್ರಾನ್‌ನಿಂದಾಗುವ ಸೋಂಕಿನ ತೀವ್ರತೆ ಕುರಿತು ಕ್ಲಿನಿಕಲ್ ಅಧ್ಯಯನದಿಂದ ಲಭಿಸಿರುವ ಮಾಹಿತಿ ಅತ್ಯಲ್ಪ. ವ್ಯಕ್ತಿಯ ದೇಹದಲ್ಲಿನ ರೋಗ ನಿರೋಧಕ ಶಕ್ತಿ ಹಾಗೂ ಲಸಿಕೆಯು ಸೋಂಕಿನ ತೀವ್ರತೆಯನ್ನು ಎಷ್ಟರ ಮಟ್ಟಿಗೆ ತಗ್ಗಿಸಲು ನೆರವಾಗಲಿದೆ ಎಂಬುದನ್ನು ವಿವರಿಸಲು ಇನ್ನಷ್ಟು ಮಾಹಿತಿಯ ಅಗತ್ಯ ಇದೆ’ ಎಂದೂ ಡಬ್ಲ್ಯೂಎಚ್‌ಒ ಅಭಿಪ್ರಾಯಪಟ್ಟಿದೆ.

- ಅತಿ ವೇಗವಾಗಿ ಪ್ರಸರಣ ಸಾಮರ್ಥ್ಯ ಹೊಂದಿರುವ ಓಮೈಕ್ರಾನ್ ಸೋಂಕು ಪ್ರಕರಣಗಳು ಹೆಚ್ಚುತ್ತಿರುವ ಕಾರಣ, ಯುರೋಪ್ ರಾಷ್ಟ್ರಗಳು ಕಠಿಣ ಕ್ರಮಗಳನ್ನು ಜಾರಿಗೊಳಿಸಲು ಮುಂದಾಗಿವೆ.
- ಆಸ್ಟ್ರಿಯಾ ಸರ್ಕಾರ ಪ್ರಯಾಣದ ಮೇಲೆ ನಿರ್ಬಂಧ ಹೇರಿದೆ. ಡೆನ್ಮಾರ್ಕ್‌ನಲ್ಲಿ ಥಿಯೇಟರ್‌ಗಳು, ಪಾರ್ಕ್, ಮ್ಯೂಸಿಯಂಗಳನ್ನು ಮುಚ್ಚಲಾಗಿದೆ.
- ಐರ್ಲೆಂಡ್‌ನಲ್ಲಿ ಒಳಾಂಗಣ,-ಹೊರಾಂಗಣ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಜನರ ಸಂಖ್ಯೆಯ ಮೇಲೆ ಮಿತಿ ಹೇರಲಾಗಿದೆ.
- ಓಮೈಕ್ರಾನ್ ಸೋಂಕು ಪ್ರಸರಣ ತಡೆಯುವ ಸಲುವಾಗಿ ಬ್ರಿಟನ್ ಸರ್ಕಾರ ಕ್ರಿಸ್‌ಮಸ್ ನಂತರ 2 ವಾರ ಕಾಲ ಲಾಕ್‌ಡೌನ್ ಜಾರಿಗೊಳಿಸಲು ಮುಂದಾಗಿದೆ.
- ಬ್ರಿಟನ್‌ನಲ್ಲಿ ಕೊರೊನಾ ವೈರಸ್‌ನ ಡೆಲ್ಟಾ ತಳಿ ಸೋಂಕು ವ್ಯಾಪಕವಾಗಿ ಹರಡಿದೆ. ಆದರೆ, ಲಂಡನ್ ಮತ್ತು ಸ್ಕಾಟ್ಲೆಂಡ್‌ನಲ್ಲಿ ಈಗ ಓಮೈಕ್ರಾನ್ ಪ್ರಕರಣಗಳು ಅಧಿಕವಾಗಿ ವರದಿಯಾಗುತ್ತಿವೆ.
- ಕ್ರಿಸ್‌ಮಸ್ ಹಾಗೂ ಹೊಸವರ್ಷಕ್ಕೂ ಮುನ್ನ ಎಲ್ಲರೂ ಲಸಿಕೆ ಹಾಕಿಸಿಕೊಳ್ಳುವಂತೆ ಜನರಿಗೆ ಫ್ರಾನ್ಸ್ ಸರ್ಕಾರ ಸೂಚಿಸಿದೆ. ಸಾರ್ವಜನಿಕ ಸಭೆಗಳನ್ನು, ಹೊಸ ವರ್ಷಾಚರಣೆ, ದೊಡ್ಡ ಸಂಖ್ಯೆಯಲ್ಲಿ ಜನರು ಒಂದೆಡೆ ಸೇರುವುದನ್ನು ನಿರ್ಬಂಧಿಸಲಾಗಿದೆ.
- ಈಜಿಪ್ಟ್‌ನಲ್ಲಿ ಕೊರೊನಾ ವೈರಸ್ ಓಮೈಕ್ರಾನ್ ತಳಿ ಸೋಂಕಿನ ಮೂರು ಪ್ರಕರಣಗಳು ವರದಿಯಾಗಿವೆ. ಇವು ದೇಶದಲ್ಲಿ ವರದಿಯಾದ ಈ ತಳಿ ಸೋಂಕಿನ ಮೊದಲ ಪ್ರಕರಣಗಳಾಗಿವೆ.

ಲಂಡನ್ ನಗರದ ಈಶಾನ್ಯ ಭಾಗದಲ್ಲಿ ಸ್ಥಾಪಿಸಿರುವ ಲಸಿಕಾ ಕೇಂದ್ರದಲ್ಲಿ ಕೋವಿಡ್ ಲಸಿಕೆ ಪಡೆಯಲು ಜನರು ಸರದಿಯಲ್ಲಿ ನಿಂತಿರುವುದು ಶನಿವಾರ ಕಂಡು ಬಂತು ಎಎಫ್‌ಪಿ ಚಿತ್ರ

ಕೋವಿಡ್: ಹೊಸ ಪ್ರಕರಣ ಹೆಚ್ಚಳ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಅಲ್ಪ ಏರಿಕೆಯಾಗಿದೆ. ಶನಿವಾರ 335 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದ್ದು, ಸೋಂಕಿಗೊಳಪಟ್ಟವರ ಒಟ್ಟು ಸಂಖ್ಯೆ 30.02 ಲಕ್ಷ ದಾಟಿದೆ. ಸೋಂಕು ದೃಢ ಪ್ರಮಾಣವು ಶೇ 0.28ಕ್ಕೆ ಹೆಚ್ಚಿದೆ.

ಐದು ಮಂದಿ ಕೋವಿಡ್‌ನಿಂದ ಮೃತರಾಗಿದ್ದಾರೆ. ಸಾವಿಗೀಡಾದವರ ಸಂಖ್ಯೆ 38,287ಕ್ಕೇರಿದ್ದು, ಮರಣ ಪ್ರಮಾಣ ದರವು ಶೇ 1.49ರಷ್ಟು ದಾಖಲಾಗಿದೆ. ಕೋವಿಡ್ ಪೀಡಿತರ ಪೈಕಿ 286 ಮಂದಿಗೆ ಕಾಯಿಲೆ ವಾಸಿಯಾಗಿದೆ. ಗುಣಮುಖರ ಒಟ್ಟು ಸಂಖ್ಯೆ 29.56 ಲಕ್ಷದಷ್ಟಿದ್ದು, ಸಕ್ರಿಯ ಪ್ರಕರಣಗಳು 7,120ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲೂ ಹೊಸ ಪ್ರಕರಣಗಳು ಹೆಚ್ಚಿವೆ. ಒಂದು ದಿನದಲ್ಲಿ 225 ಜನರಿಗೆ ಸೋಂಕು ತಗುಲಿರುವುದು ಖಾತರಿಯಾಗಿದೆ.

ಪ್ರಕರಣಗಳ ಸಂಖ್ಯೆ 134ಕ್ಕೆ ಏರಿಕೆ

ನವದೆಹಲಿ/ಮುಂಬೈ (ಪಿಟಿಐ): ದೇಶದಲ್ಲಿ ಕೊರೊನಾ ವೈರಸ್ ಓಮೈಕ್ರಾನ್ ಸೋಂಕಿನ ಪ್ರಕರಣಗಳ ಸಂಖ್ಯೆ ಶನಿವಾರ 134ಕ್ಕೆ ಏರಿಕೆಯಾಗಿದೆ.

ಸಮುದಾಯ ಮಟ್ಟದಲ್ಲಿ ಓಮೈಕ್ರಾನ್ ಸೋಂಕಿನ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. ಈ ತಳಿಯ ಸೋಂಕಿನ ಪ್ರಕರಣಗಳ ಸಂಖ್ಯೆ ಡೆಲ್ಟಾ ತಳಿಯ ಪ್ರಕರಣಗಳಿಗಿಂತ ಹೆಚ್ಚಾಗುವ ಸಾಧ್ಯತೆಗಳಿವೆ ಎಂದು ಕೇಂದ್ರ ಸರ್ಕಾರ ಎಚ್ಚರಿಸಿದೆ.

ಕೇರಳದಲ್ಲಿ ನಾಲ್ಕು ಪ್ರಕರಣಗಳು ವರದಿಯಾಗಿವೆ. ಮಹಾರಾಷ್ಟ್ರದಲ್ಲಿ ಓಮೈಕ್ರಾನ್ ಸೋಂಕಿನ 8 ಹೊಸ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ರಾಜ್ಯದಲ್ಲಿ ಒಟ್ಟು ಪ್ರಕರಣಗಳ ಸಂಖ್ಯೆ 48ಕ್ಕೇರಿದಂತಾಗಿದೆ.

ಉಗಾಂಡಾದಿಂದ ಮಹಾರಾಷ್ಟ್ರಕ್ಕೆ ಮರಳಿದ ದಂಪತಿ ಹಾಗೂ ಅವರ 13 ವರ್ಷದ ಮಗಳಿಗೆ ಕೊರೊನಾ ವೈರಸ್‌ನ ಓಮೈಕ್ರಾನ್ ಸೋಂಕು ತಗುಲಿರುವುದು ದೃಢಪಟ್ಟಿದೆ. ಅವರೊಂದಿಗೆ ಆಗಮಿಸಿದ್ದ 5 ವರ್ಷದ ಇನ್ನೊಬ್ಬಳು ಪುತ್ರಿಯಲ್ಲಿ ಕೋವಿಡ್–19 ದೃಢಪಟ್ಟಿದೆ. ಆದರೆ ಓಮೈಕ್ರಾನ್ ಪತ್ತೆಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದರು. ಡಿ. 9ರಂದು ಉಗಾಂಡಾದಿಂದ ದಂಪತಿ ತಮ್ಮ ಇಬ್ಬರು ಪುತ್ರಿಯರೊಂದಿಗೆ ಸತಾರ ಜಿಲ್ಲೆಯ ಪಲ್ಟಾನ್ ಜಿಲ್ಲೆಗೆ ಆಗಮಿಸಿದ್ದರು. ಕಿರಿಯ ಮಗಳನ್ನು ಹೊರತುಪಡಿಸಿ ಮೂವರಲ್ಲಿ ಕೋವಿಡ್–19 ದೃಢಪಟ್ಟಿತ್ತು.

ರಾಜ್ಯದಲ್ಲಿ ಮತ್ತೆ 6 ಮಂದಿಗೆ ಓಮೈಕ್ರಾನ್

ಒಂದನೇ ಪುಟದಿಂದ

‘ನಗರದ ಹೊರವಲಯದ ವಸತಿ ಶಾಲೆ ಹಾಗೂ ನಗರದ ನರ್ಸಿಂಗ್ ಕಾಲೇಜ್ ಒಂದನ್ನು ಈಗಾಗಲೇ ಕೋವಿಡ್ ನಿಯಂತ್ರಿತ ವಲಯ (ಕ್ಲಸ್ಟರ್) ಗಳಾಗಿ ಘೋಷಿಸಲಾಗಿದೆ. ವಸತಿ ಶಾಲೆಯಲ್ಲಿ ಕೋವಿಡ್ ಪಾಸಿಟಿವ್ ಬಂದಿದ್ದ 16 ಮಂದಿಯ ಮಾದರಿಯನ್ನು ಡಿ.10ರಂದು ಜಿನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸಲಾಗಿತ್ತು. ಅವರಲ್ಲಿ ನಾಲ್ವರಿಗೆ ಓಮೈಕ್ರಾನ್ ವೈರಾಣು ಇರುವುದು ದೃಢಪಟ್ಟದೆ’ ಎಂದು ಜಿಲ್ಲಾಧಿಕಾರಿ ಡಾ. ರಾಜೇಂದ್ರ ಕೆ.ವಿ ತಿಳಿಸಿದ್ದಾರೆ.

‘ನರ್ಸಿಂಗ್ ಕಾಲೇಜಿನಲ್ಲಿ ಕೋವಿಡ್ ಪಾಸಿಟಿವ್ ಬಂದಿದ್ದ 19 ಮಂದಿಯ ಮಾದರಿಯನ್ನು ಜಿನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸಲಾಗಿತ್ತು. ಅವರಲ್ಲಿ ಒಬ್ಬರಲ್ಲಿ ಓಮೈಕ್ರಾನ್ ವೈರಾಣು ಪತ್ತೆಯಾಗಿದೆ. ಎಲ್ಲರೂ ಆರೋಗ್ಯವಾಗಿದ್ದಾರೆ. ಐವರು ವಿದ್ಯಾರ್ಥಿಗಳಲ್ಲಿ ಈಗಾಗಲೇ ನಾಲ್ವರ ಮರು ತಪಾಸಣಾ ವರದಿ ನೆಗೆಟಿವ್ ಬಂದಿದೆ. ಒಬ್ಬರಿಗೆ ಸೋಂಕು ತಗುಲಿ ಒಂಬತ್ತು ದಿನಗಳಾಗಿವೆ’ ಎಂದು ಸ್ಪಷ್ಟಪಡಿಸಿದ್ದಾರೆ.

ಅನುಕಂಪದ ಉದ್ಯೋಗಕ್ಕೆ ಸಾವಿನ ಸಂದರ್ಭದ ನಿಯಮವೇ ಅನ್ವಯ

ಹೈಕೋರ್ಟ್, ಕೆಎಟಿ ಆದೇಶ ರದ್ದುಪಡಿಸಿದ ‘ಸುಪ್ರೀಂ’

ನವದೆಹಲಿ: ಅನುಕಂಪದ ಆಧಾರದಲ್ಲಿ ನೌಕರಿ ನೀಡುವುದಕ್ಕಾಗಿ ಕರ್ನಾಟಕವು ಪರಿಷ್ಕರಿಸಿರುವ ಯೋಜನೆಯ ಅನ್ವಯಕ್ಕೆ ಉದ್ಯೋಗಿಯ ಸಾವಿನ ದಿನಾಂಕದಂತಹ ಸ್ಪಷ್ಟವಾದ ಮತ್ತು ನಿಶ್ಚಿತವಾದ ಮಾನದಂಡ ಇರಬೇಕು. ಮೃತಪಟ್ಟ ಉದ್ಯೋಗಿಯ ಅವಲಂಬಿತರು ಅರ್ಜಿ ಸಲ್ಲಿಸಿದ ದಿನಾಂಕ ಅಥವಾ ಅದನ್ನು ಪರಿಗಣನೆಗೆ ತೆಗೆದುಕೊಂಡ ದಿನಾಂಕದಂತಹ ಮಾನದಂಡವನ್ನು ಅನ್ವಯಿಸುವುದು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಉದ್ಯೋಗಿಯ ಸಾವಿನ ನಂತರ ಪರಿಷ್ಕರಿಸಿದ ಯೋಜನೆಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಈ ಹಿಂದೆ ನೀಡಿದ್ದ ತೀರ್ಪುಗಳನ್ನು ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ವಿ. ರಾಮಸುಬ್ರಮಣಿಯನ್ ಅವರಿದ್ದ ಪೀಠವು ಉಲ್ಲೇಖಿಸಿತು. ಉದ್ಯೋಗಿಯ ಸಾವಿನ ಸಂದರ್ಭದಲ್ಲಿ ಜಾರಿಯಲ್ಲಿದ್ದ ಯೋಜನೆಯನ್ನು ಮಾತ್ರ ಅನ್ವಯಿಸಲು ಅವಕಾಶ ಇದೆ ಎಂದು ಪೀಠವು ಸ್ಪಷ್ಟಪಡಿಸಿದೆ.

ಭೀಮೇಶ್ ಅಲಿಯಾಸ್ ಭೀಮಪ್ಪ ಎಂಬವರ ನೇಮಕಾತಿಗೆ ಸಂಬಂಧಿಸಿ ಕರ್ನಾಟಕ ಹೈಕೋರ್ಟ್ ಮತ್ತು ರಾಜ್ಯ ಆಡಳಿತ ನ್ಯಾಯಮಂಡಳಿಯು ನೀಡಿದ್ದ ಆದೇಶಗಳನ್ನು ಪೀಠವು ರದ್ದು ಪಡಿಸಿದೆ. ಮೇಲ್ಮನವಿ ಸಲ್ಲಿಕೆಗೆ ಕರ್ನಾಟಕ ಸರ್ಕಾರಕ್ಕೆ ಅವಕಾಶ ಕೊಟ್ಟಿದೆ.

ಸಹಾಯಕ ಶಿಕ್ಷಕಿಯಾಗಿದ್ದ ತಮ್ಮ ಸಹೋದರಿ ಕೆಲಸ ನಿರ್ವಹಣೆಯ ಸಂದರ್ಭದಲ್ಲಿಯೇ 2010ರ ಡಿಸೆಂಬರ್ 8ರಂದು ಮೃತರಾದರು. ಅವರಿಗೆ ತಾಯಿ, ಇಬ್ಬರು ಸೋದರರು, ಇಬ್ಬರು ಸೋದರಿಯರು ಇದ್ದಾರೆ. ಸಹಾಯಕ ಶಿಕ್ಷಕಿಯಾಗಿದ್ದ ಸೋದರಿಯ ಆದಾಯವನ್ನು ಇಡೀ ಕುಟುಂಬವು ಅವಲಂಬಿಸಿತ್ತು. ಮೃತರು ಅವಿವಾಹಿತೆ ಆಗಿದ್ದರು. ಹಾಗಾಗಿ, ಅನುಕಂಪದ ಆಧಾರದಲ್ಲಿ ತಮಗೆ ಉದ್ಯೋಗ ನೀಡಬೇಕು ಎಂದು ಭೀಮೇಶ್ ಕೋರಿದ್ದರು.

ಸಂಬಂಧಪಟ್ಟ ಇಲಾಖೆಯು ಈ ಕೋರಿಕೆಯನ್ನು 2012ರ ನವೆಂಬರ್‌ನಲ್ಲಿ ತಿರಸ್ಕರಿಸಿತ್ತು. ಅವಿವಾಹಿತೆ ಉದ್ಯೋಗಿಯು ನೌಕರಿಯಲ್ಲಿದ್ದಾಗಲೇ ಮೃತಪಟ್ಟರೆ, ಅವರ ಅವಿವಾಹಿತ ಅವಲಂಬಿತ ಸೋದರನಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡಬಹುದು ಎನ್ನುವ ನಿಯಮಕ್ಕೆ 2012ರ ಜೂನ್ 20ರಂದು ತಿದ್ದುಪಡಿ ಮಾಡಲಾಗಿದೆ. ಹಾಗಾಗಿ, ಭೀಮೇಶ್ ಅವರಿಗೆ ಉದ್ಯೋಗ ನೀಡುವುದು ಸಾಧ್ಯವಿಲ್ಲ ಎಂದು ಇಲಾಖೆಯು ಹೇಳಿತ್ತು. ನಿಯಮಗಳಿಗೆ ತಿದ್ದುಪಡಿ ತರುವುದಕ್ಕೆ ಮೊದಲೇ ಸಹಾಯಕ ಶಿಕ್ಷಕಿಯು ಮೃತಪಟ್ಟಿದ್ದರು ಎಂಬುದನ್ನು ನ್ಯಾಯಾಲಯವು ಗಣನೆಗೆ ತೆಗೆದುಕೊಂಡಿದೆ.

ಮತಾಂತರಕ್ಕೆ ವಿರೋಧ: ನಾಳೆಯಿಂದ ವಿಎಚ್‌ಪಿ ದೇಶವ್ಯಾಪಿ ಆಂದೋಲನ

ನವದೆಹಲಿ (ಪಿಟಿಐ): ‘ಕಾನೂನು ಬಾಹಿರ ಮತಾಂತರ’ ವಿರುದ್ಧ ಕಠಿಣ ಕಾನೂನು ರೂಪಿಸುವಂತೆ ಒತ್ತಾಯಿಸಿ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ದೇಶದಾದ್ಯಂತ ಸೋಮವಾರದಿಂದ (ಡಿಸೆಂಬರ್ 20) 11 ದಿನಗಳ ಕಾಲ ಆಂದೋಲನ ಹಮ್ಮಿಕೊಂಡಿದೆ.

ಬುಡಕಟ್ಟು ಜನಾಂಗದವರು ಕ್ರೈಸ್ತ ಹಾಗೂ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡರೆ, ಪರಿಶಿಷ್ಟ ಪಂಗಡಗಳಿಗೆ ಸಂವಿಧಾನದಡಿ ನೀಡಲಾಗಿರುವ ಮೀಸಲಾತಿ ಹಾಗೂ ಇತರ ಸೌಲಭ್ಯಗಳನ್ನು ಅವರು ಪಡೆಯುವಂತಿಲ್ಲ ಎಂಬುದನ್ನು ಸಹ ಈ ಕಾನೂನು ಒಳಗೊಳ್ಳಬೇಕು ಎಂಬುದಾಗಿ ಒತ್ತಾಯಿಸಲಾಗುವುದು ಎಂದು ವಿಎಚ್‌ಪಿ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ಅವರು ಶನಿವಾರ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂಘಟನೆ ಹಮ್ಮಿಕೊಂಡಿರುವ ಈ ಆಂದೋಲನಕ್ಕೆ ಬೆಂಬಲ ನೀಡುವಂತೆ ಬಿಜೆಪಿ, ಕಾಂಗ್ರೆಸ್, ಜೆಡಿಯು, ಆರ್‌ಜೆಡಿ, ಎಎಪಿ, ಟಿಎಂಸಿ, ಸಿಪಿಎಂ ಹಾಗೂ ನ್ಯಾಷನಲ್ ಕಾನ್ಫರೆನ್ಸ್ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ 327 ಸಂಸದರನ್ನು ಭೇಟಿ ಮಾಡಿ, ಮನವಿ ಮಾಡಲಾಗಿದೆ ಎಂದು ಅವರು ಹೇಳಿದರು.

ಬಹು ಮಾಧ್ಯಮ ಪ್ರಜಾವಾಣಿ LIVE
ಪ್ರಜಾವಾಣಿ ಕನ್ನಡ ಧ್ವನಿ
Prajavani.net/podcast
ಪ್ರತೀ ದಿನ ಬೆಳಿಗ್ಗೆ 7 **ವಚನವಾಣಿ,** ಬೆ. 7.30 **ದಿನದ ಸೂಕ್ತಿ,** ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್,** ಬೆಳಿಗ್ಗೆ 9.30 **ಸಂಪಾದಕೀಯ,** ಬೆಳಿಗ್ಗೆ 9 **ಪ್ರಚಲಿತ**
Prajavani.net
Prajavani Prajavani

ಕೋರ್ಟ್‌ನಲ್ಲಿ ಸ್ಫೋಟಕವಿಟ್ಟ ಡಿಆರ್‌ಡಿಒ ವಿಜ್ಞಾನಿ ಸೆರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ತಮ್ಮ ನೆರೆಮನೆಯ ವಕೀಲರೊಬ್ಬರನ್ನು ಕೊಲ್ಲುವ ಉದ್ದೇಶದಿಂದ ದೆಹಲಿಯ ರೋಹಿಣಿ ನ್ಯಾಯಾಲಯದಲ್ಲಿ ಸ್ಫೋಟಕ ಇರಿಸಿದ್ದ ಆರೋಪದ ಮೇರೆಗೆ ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ)ದ ಹಿರಿಯ ವಿಜ್ಞಾನಿ ಭರತ್ ಭೂಷಣ್ ಕಟಾರಿಯಾ ಅವರನ್ನು ಬಂಧಿಸಲಾಗಿದೆ’ ಎಂದು ದೆಹಲಿ ಪೊಲೀಸರು ಶನಿವಾರ ತಿಳಿಸಿದ್ದಾರೆ.

ಡಿ.9ರಂದು ದೆಹಲಿ ರೋಹಿಣಿ ಜಿಲ್ಲಾ ನ್ಯಾಯಾಲಯದ ಕೊಠಡಿ ಸಂಖ್ಯೆ 102ರಲ್ಲಿ ಸಂಭವಿಸಿದ ಸ್ಫೋಟದಲ್ಲಿ ವ್ಯಕ್ತಿಯೊಬ್ಬರು ಗಾಯಗೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಭರತ್ ಅವರನ್ನು ಶುಕ್ರವಾರ ಬಂಧಿಸಲಾಗಿದೆ.

ಕಟಾರಿಯಾ ಹಾಗೂ ವಕೀಲರ ನಡುವೆ ದ್ವೇಷವಿತ್ತು. ನೆರೆಮನೆಯವನನ್ನು ಕೊಲ್ಲಲು ಸಂಚು ಹೂಡಿದ್ದ ವಿಜ್ಞಾನಿ ಕಟಾರಿಯಾ ನ್ಯಾಯಾಲಯದ ಒಳಗೆ ಟಿಫಿನ್ ಬಾಕ್ಸ್‌ನಲ್ಲಿ ಸುಧಾರಿತ ಸ್ಫೋಟಕ ಸಾಧನವನ್ನು ಅಳವಡಿಸಿದ್ದರು ಡಿಸೆಂಬರ್ 9ರ ಬೆಳಿಗ್ಗೆ 9.33ಕ್ಕೆ ಎರಡು ಚೀಲಗಳೊಂದಿಗೆ ನ್ಯಾಯಾಲಯಕ್ಕೆ ಪ್ರವೇಶಿಸಿದ್ದ ವಿಜ್ಞಾನಿ ಚೀಲಗಳ ಪೈಕಿ ಒಂದನ್ನು ನ್ಯಾಯಾಲಯದ ಕೊಠಡಿಯೊಳಗೆ ಬಿಟ್ಟು ಹೋಗಿದ್ದರು. ಬೆಳಿಗ್ಗೆ 10.35ಕ್ಕೆ ಕೋರ್ಟ್ ಆವರಣದಿಂದ ನಿರ್ಗಮಿಸಿದ್ದರು.

‘ಒಂದೇ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದ ಕಟಾರಿಯಾ ಮತ್ತು ವಕೀಲರ ನಡುವೆ ಪರಸ್ಪರ ಹಲವು ಪ್ರಕರಣಗಳು ಈ ಹಿಂದೆ ದಾಖಲಾಗಿವೆ. ಕಟಾರಿಯಾ, ವಕೀಲರ ವಿರುದ್ಧ 5 ಪ್ರಕರಣಗಳ ದಾಖಲಿಸಿದ್ದರೆ, ವಕೀಲ ವಿಜ್ಞಾನಿಯ ವಿರುದ್ಧ 7 ಪ್ರಕರಣಗಳನ್ನು ದಾಖಲಿಸಿದ್ದಾರೆ. ವಕೀಲ ನೆಲಮಹಡಿಯಲ್ಲಿ ವಾಸಿಸುತ್ತಿದ್ದರೆ, ವಿಜ್ಞಾನಿ ಅದೇ ಕಟ್ಟಡದ ಮೂರನೇ ಮಹಡಿಯಲ್ಲಿ ವಾಸಿಸುತ್ತಿದ್ದರು. ಮೇಲ್ನೋಟಕ್ಕೆ ಕಟಾರಿಯಾ ವಕೀಲರ ವಿರುದ್ಧ ದ್ವೇಷ ಹೊಂದಿದ್ದರು ಎಂಬುದು ತಿಳಿದುಬಂದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ನ್ಯಾಯಾಲಯದ ಕೊಠಡಿಯೊಳಗೆ ಸುಧಾರಿತ ಸ್ಫೋಟಕ ಸಾಮಗ್ರಿ ಅಳವಡಿಸಿದ್ದ ವಿಜ್ಞಾನಿ ಅದನ್ನು ಸರಿಯಾಗಿ ಜೋಡಿಸಿರಲಿಲ್ಲ. ಹಾಗಾಗಿ ಡಿಟೋನೇಟರ್ ಮಾತ್ರ ಸ್ಫೋಟಗೊಂಡಿತ್ತು’ ಎಂದೂ ಪೊಲೀಸರು ಮಾಹಿತಿ ನೀಡಿದ್ದಾರೆ.

‘ಸ್ಫೋಟಕ ತಯಾರಿಸಲು ಕಟಾರಿಯಾ ಬಳಸಿದ್ದಾರೆ ಎನ್ನಲಾದ ವಸ್ತುಗಳು ಮಾರುಕಟ್ಟೆಯಲ್ಲಿ ಸುಲಭವಾಗಿ ದೊರೆಯುವಂಥವು’ ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ.

‘ಉತ್ತಮ ಆಡಳಿತ ಸಪ್ತಾಹ’ಕ್ಕೆ ನಾಳೆ ಚಾಲನೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ದೇಶದಾದ್ಯಂತ ‘ಉತ್ತಮ ಆಡಳಿತ ಸಪ್ತಾಹ’ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮಕ್ಕೆ ಸೋಮವಾರ (ಡಿ.20) ಚಾಲನೆ ನೀಡಲಾಗುತ್ತಿದೆ.

ಕೇಂದ್ರ ಸಿಬ್ಬಂದಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಅವರು ಈ ಸಪ್ತಾಹಕ್ಕೆ ಚಾಲನೆ ನೀಡುವರು. ಸಪ್ತಾಹದ ಸಮಾರೋಪ ಸಮಾರಂಭ ಡಿ. 25 ವಿಜ್ಞಾನ ಭವನದಲ್ಲಿ ನಡೆಯಲಿದೆ.

ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸೇವೆಯ ಗುಣಮಟ್ಟ ಸುಧಾರಣೆಗೆ ಈ ಸಪ್ತಾಹದ ಅವಧಿಯಲ್ಲಿ ಒತ್ತು ನೀಡಲಾಗುತ್ತದೆ ಎಂದು ಈ ಕಾರ್ಯಕ್ರಮವನ್ನು ರೂಪಿಸಿರುವ ಸಿಬ್ಬಂದಿ, ಸಾರ್ವಜನಿಕ ಅಹವಾಲುಗಳು ಹಾಗೂ ಪಿಂಚಣಿ ಸಚಿವಾಲಯ ತಿಳಿಸಿದೆ.

ಕರಾಚಿ: ಚರಂಡಿಯಲ್ಲಿ ಅನಿಲ ಸ್ಫೋಟ 14 ಮಂದಿ ಸಾವು

ಕರಾಚಿ (ಎಪಿ): ಕರಾಚಿ ನಗರದ ಒಳಚರಂಡಿ ವ್ಯವಸ್ಥೆಯಲ್ಲಿ ಶನಿವಾರ ಅನಿಲ ಸ್ಫೋಟ ಸಂಭವಿಸಿದ ಕಾರಣ, ಕನಿಷ್ಠ 14 ಮಂದಿ ಸಾವಿಗೀಡಾಗಿದ್ದಾರೆ. ಇತರ 12 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕರಾಚಿಯ ಶೇರ್‌ಶಾ ಪ್ರದೇಶದಲ್ಲಿ ಈ ಘಟನೆ ಸಂಭವಿಸಿದೆ. ಒಳಚರಂಡಿ ಮೇಲೆ ಬ್ಯಾಂಕೊಂದರ ಕಟ್ಟಡ ನಿರ್ಮಿಸಲಾಗಿದೆ. ಒಳಚರಂಡಿಯಲ್ಲಿ ಶೇಖರಣೆಯಾಗಿದ್ದ ಅನಿಲಕ್ಕೆ ಬೆಂಕಿ ಹೊತ್ತಿಕೊಂಡ ಪರಿಣಾಮ ಭಾರಿ ಸ್ಫೋಟ ಸಂಭವಿಸಿದೆ. ಸ್ಫೋಟದ ತೀವ್ರತೆಗೆ ಕಟ್ಟಡ ಕುಸಿದಿದೆ ಎಂದು ಎಕ್ಸ್‌ಪ್ರೆಸ್ ಟ್ರಿಬ್ಯೂನ್ ದೈನಿಕ ವರದಿ ಮಾಡಿದೆ.

ತನಿಖೆ ಬಳಿಕದ ಸ್ಫೋಟಕ್ಕೆ ಏನು ಕಾರಣ ಎಂಬುದು ತಿಳಿಯಲಿದೆ ಎಂದು ಕರಾಚಿ ಆಡಳಿತಾಧಿಕಾರಿ ಮುರ್ತಜಾ ವಹಾಬ್ ಹೇಳಿದ್ದಾರೆ.

ಫಿಲಿಪ್ಪೀನ್ಸ್: ಚಂಡಮಾರುತ 19 ಮಂದಿ ಸಾವು

ಮನಿಲಾ, ಫಿಲಿಪ್ಪೀನ್ಸ್ (ಎಪಿ): ದ್ವೀಪ ರಾಷ್ಟ್ರದಲ್ಲಿ ಬೀಸಿದ ಪ್ರಬಲ ಚಂಡಮಾರುತದಿಂದಾಗಿ ಕನಿಷ್ಠ 19 ಮಂದಿ ಮೃತಪಟ್ಟಿದ್ದಾರೆ. ದಿಢೀರ್ ಪ್ರವಾಹ ಕಾರಣ, ದೇಶದ ಕೇಂದ್ರ ಭಾಗದಲ್ಲಿ ವಿದ್ಯುತ್ ಹಾಗೂ ಸಂವಹನ ಕಡಿತಗೊಂಡಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಅಡುಗೆ ಕೆಲಸಕ್ಕೆ (ಸಸ್ಯಾಹಾರಿ ಮತ್ತು ಮಾಂಸಹಾರಿ) 40 ವಯಸ್ಸಿನ ಒಳಗಿನ ಮಹಿಳೆ ಬೇಕಾಗಿದ್ದಾರೆ.ನಮ್ಮ ಮನೆಯಲ್ಲೇ ಇರಬೇಕು ಕನಕಪುರ ರಸ್ತೆ, ಬೆಂಗಳೂರು.9880839279

Engg/ Production Technical

URGENTLY WANTED experienced QA, QC personnel for Electromagnetic products supplied for Defence and Aerospace. Minimum experience of 10 years. Very competitive remuneration. Vita Technology Pvt. Ltd., Contact: 7899752257 / 9686203434 vitatech@vitatechindia.com

Drivers

ಪದ್ಮ ಫುಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಬೆಂಗಳೂರಿಗೆ ಡ್ರೈವರ್ ಕಮ್ ವ್ಯಾನ್ ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಕಮೀಷನ್ 8660882217

General

✓ ಬೇಕಾಗಿದ್ದಾರೆ **ಟಯೋಟಾ,** ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600-62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

ತಕ್ಷಣ ಬೇಕಾಗಿದ್ದಾರೆ: ಕರ್ನಾಟಕದಾದ್ಯಂತ ಕಂಪನಿ, ಆಫೀಸ್ ಕೆಲಸಗಳಿಗೆ ಯುವಕ ಯುವತಿಯರು. 10th, Degree. ವಸತಿಯೂಟದೊಂದಿಗೆ ಸಂಬಳ 17,800- 19,200. 8197389603

✓ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800/- 68,000/-. 8884666597, 8884666594.

ಬೆಂಗಳೂರಿನಲ್ಲಿರುವ ಗಾರ್ಮೆಂಟ್ಸ್, ಪ್ರಿಂಟಿಂಗ್ ಕೆಲಸಕ್ಕೆ ಹೆಲ್ಪರ್ ಬೇಕಾಗಿದ್ದಾರೆ. ವಸತಿ ಉಚಿತ, ಸಂಬಳ 10,000 - 15,000 ರೂ (ವಯಸ್ಸು-35 ವರ್ಷದೊಳಗೆ). 8217554932.

Hotel

ಹೊರನಾಡು ಕಳಸದ ಹತ್ತಿರವಿರುವ ರೆಸಾರ್ಟ್ ಗೆ ರೂಮ್ ಬಾಯ್ಸ್, ಪುರುಷ ಮತ್ತು ಮಹಿಳಾ ಸಹಾಯಕರು,ಅಡುಗೆ ಕೆಲಸದವರು ಬೇಕಾಗಿದ್ದಾರೆ ಸಂಪರ್ಕಿಸಿ: 9886789567/ 8217631509

Marketing & Sales

ಟೆಲಿಕಾಲರ್ಸ್ (ಮಹಿಳೆ) ಇಂಗ್ಲಿಷ್ ಭಾಷೆ, ಕಂಪ್ಯೂಟರ್ ಜ್ಞಾನವಿರುವ ಮತ್ತು ಬಿಸಿನೆಸ್ ಎಕ್ಸಿಕ್ಯೂಟಿವ್ (ಪುರುಷ) ಬೆಂಗಳೂರಿನ ಜಾಹೀರಾತು ಕಂಪನಿಗೆ ಬೇಕಾಗಿದ್ದಾರೆ: 9845411113

Multiple Vacancy

REQUIRED, TEAM Leader & Field executive For Banking Loan Collections. Contact: Timings (9 Am-6 Pm) 8951450742, 7019700755, 080-41155671.

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 28.12.2021 15ದಿನಗಳು 32,000 (ಇಂದೋರ್‌ನಿಂದ) ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ (ಅಮರಕಂಟಕ ಸಹಿತ). 28.12.2021 16ದಿನಗಳು 32,000 ಅಖಂಡ ಆಂಧ್ರ ತೆಲಂಗಾಣ ರಾಜ್ಯದ 49ಸ್ಥಳಗಳು. 21.01.2022 13ದಿನಗಳು 28,000 (ಅಹಮದಾಬಾದ್‌ನಿಂದ)ಅಖಂಡ ಗುಜರಾತ್ ರಾಜ್ಯ ಪ್ರವಾಸ (ಕಚ್‌ಬುಜ್ ಸಹಿತ). 15.02.2022 6ದಿನಗಳು 26,000 (ಡೆಹ್ರಾಡೂನ್‌ನಿಂದ) ಸ್ನೋಸ್ಪೆಷಲ್,ಔಲಿ,ನೈನಿತಾಲ್, ಭೀಮ್‌ತಾಲ್,ಅಲ್ಮೋರಾ, ಜಾಗೇಶ್ವರ,ಮುಕ್ತೇಶ್ವರ,ಜಿಮ್ ಕಾರ್ಬೆಟ್.22.02.2022 10ದಿನಗಳು 30,000 (ಬೆಂಗಳೂರಿನಿಂದ)ಪುರಿ, ಕೋನಾರ್ಕ್,ಭುವನೇಶ್ವರ, ಜಾಜ್‌ಪುರ,ಕಟಕ್,ಕೊಲ್ಕತ್ತಾ, ಗಂಗಾಸಾಗರ್. 01.03.2022 12ದಿನಗಳು 34,000 (ಬೆಂಗಳೂರಿನಿಂದ) ಚಂಡೀಗಢ್, ಸಿಮ್ಲಾ,ಕುಲುಮನಾಲಿ, 5ದೇವಿಯರು,ಡಾಲ್‌ಹೌಸಿ, ಕಟ್ರಾವೈಷ್ಣೋದೇವಿ,ಜಮ್ಮು, ಅಮೃತಸರ್,ಕುರುಕ್ಷೇತ್ರ. 01.03.2022 10ದಿನಗಳು 50,000 (ಬೆಂಗಳೂರಿನಿಂದ) ಅಖಂಡ ನೇಪಾಳರಾಷ್ಟ್ರ (ಮುಕ್ತಿನಾಥಸಹಿತ) 9743351212, 9206979202, 9902050065, 7406112334

ವ್ಯಾಪಾರ

Business Offers

Distributors

ಅಗತ್ಯವಿದೆ ಸುಗಂಧಭರಿತ ಅಗರಬತ್ತಿ ವಿತರಕರು/ಸಗಟು ಮಾರಾಟಗಾರರು ಉದ್ದೇಶ್ ಇಂಡಸ್ಟ್ರೀಸ್, 93, ವಿ ಆರ್ ಲೇಔಟ್, ಮತ್ತಿಕೆರೆ, ಬೆಂಗಳೂರು ಉತ್ತರ -54 ಸಂಪರ್ಕಿಸಿ : 6362680497

EDUCATION CORNER

ಸ್ಪರ್ಧಾ ಮಿತ್ರ Academy
IAS / KAS
PSI / FDA / SDA
IBPS - BANK
Online / Offline Classes - Admission Open
Near Attiguppe Metro Station, Opp. Maruthi Medicals, Vijayanagar, Blore-40
9535111133 / 9535111199

Finance

APERIO LOAN 8Crores to 150Crores @ 3-6% P.A Against Viable Projects, LAP, Working Capital, Business, SickUnits & Takeover 7305349141, aperiofunds@yahoo.com

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್, ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಭವಿಷ್ಯ

Astrology

★||ಶ್ರೀಅನ್ನಪೂರ್ಣೇಶ್ವರಿದೇವಿ ಆರಾಧನೆಯಿಂದ||★ ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಸಾಲಬಾದೆ,ಮಾಟಮಂತ್ರ ಯಾವುದೇ ಸಮಸ್ಯೆಗಳಿಗೆ ಕೇವಲ 30.ನಿಮಿಷದಲ್ಲಿ ಪರಿಹಾರ. ಬ್ರಹ್ಮಾನಂದ ಗುರೂಜಿ. 8050061378

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs. 1999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007/ 8892501007

★||ಕೆಲಸ ಆದ ನಂತರ ಕಾಣಿಕೆ||★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ, ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ,7ಗಂಟೆಗಳಲ್ಲಿ ಪರಿಹಾರ. 9482529984

ಕುಟ್ಟಿಚಾತನ್ ಮಹಿಮೆ: ವ್ಯಾಪಾರ, ಜಗಳ, ಜಾಗ ಮಾರಾಟ, ಮದುವೆ, ವಶೀಕರಣ, ಎಲ್ಲಾ ಸಮಸ್ಯೆಗಳಿಗೆ ಕೇರಳದ ಚಾತನ್ ಶಕ್ತಿಯಿಂದ ಪರಿಹಾರ ಮಾಡಲಾಗುವುದು. ಕೇರಳ 9037926310

ವಶೀಕರಣ ಸ್ಪೆಶಲಿಸ್ಟ್ ಕೊಳ್ಳೆಗಾಲದ ಪ್ರಖ್ಯಾತ ದೈವಾಂಶ ಮೋಡಿ ಮಾಂತ್ರಿಕರು ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಸಕಲ ಸಮಸ್ಯೆಗಳಿಗೆ ಪರಿಹಾರ ಅಸಾಧ್ಯವಾದುದ್ದು ಇಲ್ಲಿ ಸಾಧ್ಯ 9535883556

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್.(ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ. 9886755306

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ವೈಯಕ್ತಿಕ

Others

TRADITIONAL Namboodri's Astrology Ct- 9840102001/ 9500152427

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*
For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form



ಶ್ರೀ ಗೌಡರ ಚಿಕ್ಕಪ್ಪಯ್ಯಣ್ಣ
ಮಾಜಿ ಅಧ್ಯಕ್ಷರು, ದೊಡ್ಡಹುಲ್ಲೂರು ಗ್ರಾಮ ಪಂಚಾಯಿತಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದಿ.18.12.2021ರ ಶನಿವಾರ ಬೆಳಿಗ್ಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ 3ನೇ ದಿನದ ಹಾಲು–ತುಪ್ಪ ಕಾರ್ಯಕ್ರಮವನ್ನು ದಿ.20ರ ಸೋಮವಾರದಂದು ಸ್ವಗ್ರಾಮದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕೆಂದು ವಿನಂತಿ.
ಇಂತಿ ದುಃಖತಪ್ತರು: ಹನುಮಂತರೆಡ್ಡಿ, ಸದಸ್ಯರು, ಚೊಕ್ಕಹಳ್ಳಿ ಗ್ರಾಮ ಪಂಚಾಯಿತಿ ಸಿ.ಮಂಜುನಾಥ್, ಬೆಂಗಳೂರು ಹಾಲು ಒಕ್ಕೂಟದ ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು, ಒಕ್ಕಲಿಗರ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ, ನೀಲಾಂಜಿನಪ್ಪ, ಅಧ್ಯಕ್ಷರು, ದೊಡ್ಡಹುಲ್ಲೂರು ಗ್ರಾಮ ಪಂಚಾಯಿತಿ, ಕುಟುಂಬದವರು, ಮೊಮ್ಮಕ್ಕಳು, ಅಳಿಯಂದಿರು.

18th Year Remembrance

Dr. A.N. Raja Venkata Reddy
Expired on 19-12-2003
You will always live in our Hearts & Memories Guiding & Inspiring us at all times
Inserted By-
Wife:- Y.P. Hemamalini Reddy
Late. A.V. Narasimha Reddy Family

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ದರ ಏರಿಳಿತ: ಗುಟ್ಕಾ, ಪಾನ್ ಮಸಾಲ, ಸಿಗರೇಟ್ ಕಂಪನಿಗಳ ಲಾಬಿಯೆಂಬ ದೂರು

ಅಡಿಕೆ ಮಂಡಿಯಲ್ಲಿ ದಲ್ಲಾಳಿ ಹಾವಳಿ

● ಸದಾಶಿವ ಎಂ.ಎಸ್

ಕಾರವಾರ: 'ಅಡಿಕೆ ಮಾರುಕಟ್ಟೆ ಎನ್ನುವುದು ಹುಚ್ಚನ ಮದುವೆಯಲ್ಲಿ ಉಂಡವನೇ ಜಾಣ ಎನ್ನುವ ರೀತಿಯಾಗಿದೆ. ಅಡಿಕೆಯಿಂದ ತಯಾರಾಗುವ ಕೊನೆಯ ಉತ್ಪನ್ನವೇನು ಎಂಬುದಕ್ಕೆ ನೈತಿಕವಾಗಿ ಉತ್ತರಿಸಲು ಸಾಧ್ಯವಿಲ್ಲ...'

ಹೀಗೆಂದು ಮಾತು ಆರಂಭಿಸಿದವರು ಕರ್ನಾಟಕ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ ಕಮ್ಮರಡಿ.

ಅಡಿಕೆ ದರ ಏರಿಕೆಯಾದಾಗಲೆಲ್ಲ ಗುಟ್ಕಾ ನಿಷೇಧ, ಕ್ಯಾನ್ಸರ್‌ಕಾರಕ ಮುಂತಾದ 'ಗುಮ್ಮ'ಗಳು ಸದ್ದು ಮಾಡುತ್ತವೆ. ಇದರ ಹಿಂದೆ ಗುಟ್ಕಾ, ಪಾನ್‌ಮಸಾಲ ತಯಾರಕರು, ಸಿಗರೇಟ್ ಕಂಪನಿಗಳ ಕೈವಾಡ ಇದೆ ಎಂಬ ಆರೋಪ ಸಾಮಾನ್ಯ. ಅಡಿಕೆ ಮಾರುಕಟ್ಟೆಯಲ್ಲಿ ದರ ಏರಿಳಿತಕ್ಕೆ ಇದು ಕಾರಣವೇ ಎಂದು ಕೇಳಿದಾಗ ಅವರು ಹೀಗೆ ವಿವರಿಸಿದರು.

'ಅಡಿಕೆ ಮಾರುಕಟ್ಟೆಯೇ ತುಂಬ ವಿರೂಪವಾಗಿದೆ. ಅದರಿಂದ ತಯಾರಿಸಲಾಗುವ ಗುಟ್ಕಾವನ್ನು ಕೆಲವು ರಾಜ್ಯಗಳಲ್ಲಿ ನಿಷೇಧಿಸಲಾಗಿದೆ. ವಿವಿಧೆಡೆ ಹತ್ತಾರು ಕಾನೂನು ತೊಡಕುಗಳನ್ನು ಎದುರಿಸುತ್ತಿದೆ. ನಿಷೇಧಿತ ಸರಕು ಅಂತಿಮ ಉತ್ಪನ್ನವಾಗಲು ಸಾಧ್ಯವಿಲ್ಲ. ಹಾಗಾಗಿ, ಅಡಿಕೆಯ ಅಂತಿಮ ಉತ್ಪನ್ನ ಯಾವುದು ಎಂದು ನೈತಿಕವಾಗಿ ಹೇಳಲಾಗದು. ಆದರೂ ಈ ಮಾರುಕಟ್ಟೆಯಲ್ಲಿ ಇರುವಷ್ಟು ಸ್ಪರ್ಧೆ ಮತ್ತ್ಯಾವ ಕೃಷಿ ಉತ್ಪನ್ನಗಳಿಗೂ ಇಲ್ಲ. ದರ ಏರಿಳಿತದಲ್ಲಿ ಮಧ್ಯವರ್ತಿಗಳ ಕೈವಾಡವಂತೂ ದೊಡ್ಡ ಪ್ರಮಾಣದಲ್ಲಿದೆ' ಎಂದು ಹೇಳುತ್ತಾರೆ.

'ದರ ಮತ್ತಷ್ಟು ಏರಬಹುದು': ಶಿರಸಿಯ ತೋಟಗಾರ್ಸ್ ಸಹಕಾರ ಮಾರಾಟ ಸೊಸೈಟಿ (ಟಿ.ಎಸ್.ಎಸ್) ಪ್ರಧಾನ ವ್ಯವಸ್ಥಾಪಕ ರವೀಶ ಹೆಗಡೆ, 'ವಿದೇಶಗಳಿಂದ ಅಡಿಕೆಯ ಅಕ್ರಮ ಆಮದು ನಿಲ್ಲಿಸಲು ಸರ್ಕಾರ ಕ್ರಮ ಕೈಗೊಂಡಿದ್ದರಿಂದ ಸ್ಥಳೀಯ ಮಾರುಕಟ್ಟೆಗಳಲ್ಲಿ ದರ ಏರಿಕೆಯಾಗಿದೆ. ಬೆಳೆಗಾರರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಕ್ಕಂತಾಗಿದೆ' ಎಂದು ಪ್ರತಿಪಾದಿಸುತ್ತಾರೆ.

'ಹಿಂದಿನ ಕೆಲವು ವರ್ಷಗಳವರೆಗೆ ದೇಶದಲ್ಲಿ ಅಡಿಕೆ ಉತ್ಪಾದನೆಯು ವರ್ಷಕ್ಕೆ ಶೇ 15ರ ದರದಲ್ಲಿ ಹೆಚ್ಚುತ್ತಿತ್ತು. ಆದರೆ, ಅದರ ಉತ್ಪನ್ನಗಳ ಬಳಕೆಯೂ ಶೇ 20ರಿಂದ ಶೇ 21ರ ಪ್ರಮಾಣದಲ್ಲಿ ಏರಿಕೆಯಾಗುತ್ತಿತ್ತು. ಈ ಅಂತರವನ್ನು ಸರಿಪಡಿಸಲು ಹಾಗೂ ಸ್ಥಳೀಯ ಮಾರುಕಟ್ಟೆಯನ್ನು ಹಿಡಿತದಲ್ಲಿಡಲು, ಪಾನ್‌ಮಸಾಲ ಉತ್ಪಾದಕರು ಅಕ್ರಮ ದಾರಿಗಳನ್ನು ಕಂಡುಕೊಂಡಿದ್ದರು. ಇಂಡೋನೇಷ್ಯಾ, ಮಲೇಷ್ಯಾ ಹಾಗೂ ಥಾಯ್ಲೆಂಡ್‌ನಿಂದ ಕಳ್ಳಸಾಗಣೆ ಮಾಡಿಸುತ್ತಿದ್ದರು. ಅದಕ್ಕೆ ದಕ್ಷಿಣ ಏಷ್ಯಾ ಮುಕ್ತ ಮಾರುಕಟ್ಟೆ ಪ್ರದೇಶ (ಎಸ್.ಎ.ಎಫ್.ಟಿ.ಎ) ಒಪ್ಪಂದವನ್ನು ದುರ್ಬಳಕೆ ಮಾಡಿಕೊಂಡು ಶ್ರೀಲಂಕಾ, ಬಾಂಗ್ಲಾದೇಶ ಅಥವಾ ನೇಪಾಳದ ಮೂಲಕ ತರಿಸುತ್ತಿದ್ದರು' ಎಂದು ಹೇಳುತ್ತಾರೆ.

'ದೇಸೀ ಮಾರುಕಟ್ಟೆಯಲ್ಲಿ ದರ ಏರಿಕೆಯಾಗುತ್ತಿದ್ದಂತೆ ಇಂಥ ಪ್ರಕರಣಗಳು ಹೆಚ್ಚುತ್ತಿದ್ದವು. ಇದರ ವಿರುದ್ಧ ವಿವಿಧ ಸಂಘ, ಸಂಸ್ಥೆಗಳು ಸುಮಾರು 10 ವರ್ಷಗಳಿಂದ ನಿರಂತರ ಹೋರಾಡಿದ್ದವು. ಅದು ಈಗ ಫಲ ನೀಡುತ್ತಿದೆ. ಮುಂಬರುವ ವರ್ಷಗಳಲ್ಲಿ ಅಡಿಕೆ ದರವು ಪ್ರತಿ ವರ್ಷ ಕ್ವಿಂಟಲ್‌ಗೆ ₹ 4 ಸಾವಿರದಿಂದ ₹ 5 ಸಾವಿರ ಏರಿಕೆಯಾಗುತ್ತಲೇ ಇರಬಹುದು. ಕೆಲವೇ ವರ್ಷಗಳಲ್ಲಿ ₹1 ಲಕ್ಷಕ್ಕೇರಿದರೂ ಆಶ್ಚರ್ಯವಿಲ್ಲ' ಎಂದು ವಿಶ್ವಾಸ ವ್ಯಕ್ತಪಡಿಸುತ್ತಾರೆ.

ಶಿರಸಿಯ ಟಿಎಸ್‌ಎಸ್ ಸಂಸ್ಥೆಯ ವ್ಯಾಪಾರಿ ಅಂಗಳದಲ್ಲಿ ರಾಶಿ ಹಾಕಲಾಗಿರುವ ಕೆಂಪಡಿಕೆ ಮತ್ತು ಚಾಲಿ.

ವರ್ಗ	2001		2006		2011		2016		2021	
ರಾಶಿ	7,700	8,469	11,599	14,099	13,876	14,429	25,010	38,289	44,699	46,999
ಗೊರಬಲು	1,700	3,469	4,019	8,359	5,119	11,499	11,069	17,509	17,109	39,859
ಬೆಟ್ಟೆ	9,009	12,390	15,009	16,529	14,009	15,300	25,168	27,069	45,166	50,490
ಸರಕು	10,590	14,019	16,200	20,012	17,009	23,899	27,569	35,201	50,019	72,066
ಚಾಲಿ	5,400	5,800	8,100	8,600	10,000	11,800	23,000	25,500	50,000	53,000

ಕನಿಷ್ಠ | ಗರಿಷ್ಠ ಧಾರಣೆ (ಕ್ವಿಂಟಲ್‌ಗೆ ₹ ಗಳಲ್ಲಿ)

'ನಿಜವೆನ್ನಲು ಪುರಾವೆಯಿಲ್ಲ'



ವಿಜಯದೇವ್

'ಅಡಿಕೆ ಮಾರುಕಟ್ಟೆಯಲ್ಲಿ ದರ ಭಾರಿ ಪ್ರಮಾಣದಲ್ಲಿ ಏರಿಳಿತ ಕಾಣುವುದರಲ್ಲಿ ಗುಟ್ಕಾ ಮತ್ತು ಸಿಗರೇಟ್ ಕಂಪನಿಗಳ ಕೈವಾಡವಿದೆ ಎನ್ನುವುದು ಜನಾಭಿಪ್ರಾಯ. ಉತ್ತಮ ದರ ಬಂದಿದೆ ಎನ್ನುವ ಹಂತದಲ್ಲೇ ವಿವಿಧ ಅಪಪ್ರಚಾರಗಳು ಕೇಳಿಬರುತ್ತವೆ. ಆದರೆ, ಅದು ನಿಜ ಎಂದು ಖಚಿತವಾಗಿ ಹೇಳಲು ಯಾವುದೇ ಪುರಾವೆಗಳಿಲ್ಲ' ಎನ್ನುತ್ತಾರೆ ತೀರ್ಥಹಳ್ಳಿಯ ಸಹ್ಯಾದ್ರಿ ವಿವಿಧೋದ್ದೇಶ ಅಡಿಕೆ ಬೆಳೆಗಾರರ ಮಾರಾಟ ಸಹಕಾರ ಸಂಘದ ಅಧ್ಯಕ್ಷ ವಿಜಯದೇವ್.

'ಈ ಬಾರಿ ಅಡಿಕೆಗೆ ಬೇಡಿಕೆ ಹೆಚ್ಚಿದ್ದೇ ದರ ಏರಿಕೆಗೆ ಕಾರಣ ಎಂಬುದು ಮೇಲ್ನೋಟಕ್ಕೆ ಕಾಣುತ್ತಿದೆ. ಭದ್ರಾವತಿ, ಚನ್ನಗಿರಿ ಭಾಗದ ಉತ್ಪನ್ನ ಈಗಾಗಲೇ ಮಾರಾಟವಾಗಿದೆ. ಮಾರುಕಟ್ಟೆಗೆ ಸದ್ಯ ತೀರ್ಥಹಳ್ಳಿ, ಹೊಸನಗರ, ಶೃಂಗೇರಿ, ಕೊಪ್ಪ ಭಾಗದಿಂದ ಆವಕವಿದೆ. ಉತ್ತಮ ದರವಿರುವ ಕಾರಣ ಬೆಳೆಗಾರರು ತಕ್ಷಣ ಮಾರಾಟ ಮಾಡುತ್ತಿದ್ದಾರೆ' ಎಂದು ವಿವರಿಸುತ್ತಾರೆ.

'ಉಪ ಉತ್ಪನ್ನಕ್ಕೆ ಆದ್ಯತೆ ಬೇಕು'

'ಪೌಷ್ಟಿಕ ಆಹಾರಕ್ಕೆ, ಉಸಿರಿನ ಶುದ್ಧಿಗೆ, ಕೆಲವು ಕ್ಯಾನ್ಸರ್‌ಗಳನ್ನು ಗುಣಪಡಿಸಲು, ಅಲ್‌ಝೈಮರ್ ಕಾಯಿಲೆಗೆ ಔಷಧವಾಗಿ ಕೂಡ ಅಡಿಕೆ ನೆರವಾಗುತ್ತದೆ ಎಂದು ಅಧ್ಯಯನ ವರದಿಗಳಿವೆ. ಅದರ ಕೆಂಪು ಚೊಗರು ನೈಸರ್ಗಿಕವಾದ ಬಣ್ಣ ನೀಡುತ್ತದೆ. ಅದನ್ನು ಆಹಾರಕ್ಕೆ, ಬಟ್ಟೆಗೆ ಬಳಕೆ ಮಾಡಬಹುದು. ಮಾರುಕಟ್ಟೆಯಲ್ಲಿ ದರ ಸ್ಥಿರವಾಗಿರಲು ಇಂಥ ಉಪ ಉತ್ಪನ್ನಗಳನ್ನು ಮಾಡಬೇಕು' ಎನ್ನುತ್ತಾರೆ ಡಾ.ಟಿ.ಎನ್.ಪ್ರಕಾಶ ಕಮ್ಮರಡಿ.

'ನಮ್ಮ ಮಾರುಕಟ್ಟೆಗೆ ವಿದೇಶಗಳಿಂದ ಅಡಿಕೆ ಬಂದರೂ ಸ್ಥಳೀಯ ಮಾರುಕಟ್ಟೆ ಮೇಲೆ ಅಷ್ಟಾಗಿ ಪರಿಣಾಮ ಆಗದು. ಪ್ರಪಂಚದ ಶೇ 60ರಷ್ಟು ನಮ್ಮ ದೇಶದಲ್ಲೇ ಉತ್ಪಾದನೆಯಾಗುತ್ತದೆ. 700 – 800 ಲಕ್ಷ ಕ್ವಿಂಟಲ್ ಅಡಿಕೆ ಉತ್ಪಾದನೆಯಾಗುವ ನಮ್ಮ ದೇಶಕ್ಕೆ ಹೊರ ದೇಶಗಳಿಂದ 2–3 ಲಕ್ಷ ಕ್ವಿಂಟಲ್ ಆವಕವಾದರೆ ದರದಲ್ಲಿ ಭಾರಿ ಏರಿಳಿತ ಆಗದು' ಎಂದೂ ಅವರು ಪ್ರತಿಪಾದಿಸುತ್ತಾರೆ.

ದರ ಏರಿಳಿತವೇ ಮೌಲ್ಯವರ್ಧನೆಗೆ ಕರಿನೆರಳು

● ಸಂಧ್ಯಾ ಹೆಗಡೆ

ಮಂಗಳೂರು: ಎರಡು ದಶಕಗಳಿಂದ ಅಡಿಕೆಯ ಮೌಲ್ಯವರ್ಧಿತ ಉತ್ಪನ್ನಗಳು ಮಾರುಕಟ್ಟೆಗೆ ಬರುತ್ತಿದ್ದರೂ, ಗ್ರಾಹಕ ಸಮೂಹವನ್ನು ಸೆಳೆಯುವಲ್ಲಿ ಇವು ಹಿಂದೆ ಬಿದ್ದಿವೆ. ಮಾರುಕಟ್ಟೆಯಲ್ಲಿ ದರ ಏರಿಳಿತವೇ ಇದಕ್ಕೆ ಕರಿನೆರಳಾಗಿದೆ ಎನ್ನುವುದು ತಜ್ಞರ ವಿಶ್ಲೇಷಣೆ.

ಅಡಿಕೆಯಿಂದ ಚಹಾ, ಚಾಕೊಲೇಟ್, ಉಪ್ಪಿನಕಾಯಿ, ಹೋಳಿಗೆ, ಮಧುಮೇಹ ನಿಯಂತ್ರಣಕ್ಕೆ ಪೌಡರ್, ವೈನ್, ಸಾಬೂನು, ಸೊಳ್ಳೆಬತ್ತಿ ಮೊದಲಾದ ಉತ್ಪನ್ನಗಳ ಪ್ರಯೋಗಗಳು ನಡೆದಿವೆ. ಅವುಗಳಲ್ಲಿ 'ಅರೇಕಾ ಟೀ' ಹೊರತುಪಡಿಸಿ, ಇನ್ನುಳಿದ ಉತ್ಪನ್ನಗಳು ನಿರೀಕ್ಷಿತ ಮಟ್ಟದಲ್ಲಿ ಗ್ರಾಹಕರನ್ನು ಸೆಳೆದಿಲ್ಲ. ಬೆಳೆಯುವ ಪ್ರದೇಶಕ್ಕೆ ಸೀಮಿತಗೊಂಡು, ಅಡಿಕೆ ಅಗಿಯುವ ಉತ್ತರ ಭಾರತದ ರಾಜ್ಯಗಳಲ್ಲಿ ಈ ಉತ್ಪನ್ನಗಳು ಹೆಚ್ಚು ಪ್ರಚಾರಕ್ಕೆ ಬರದಿರುವುದು ಕೂಡ ಉಪ ಉತ್ಪನ್ನಗಳ ಮಾರುಕಟ್ಟೆ ವಿಸ್ತರಣೆಗೆ ಹಿನ್ನಡೆಯಾಗಿದೆ.

'ಬದನಾಜೆ ಶಂಕರ ಭಟ್ಟರು ಸ್ವಂತ ವೆಚ್ಚದಲ್ಲಿ, ಅನೇಕ ಉತ್ಪನ್ನಗಳನ್ನು ತಯಾರಿಸಿದ್ದಾರೆ. ಅಡಿಕೆ ಮೌಲ್ಯವರ್ಧನೆ ಕುರಿತು 2001ರಿಂದ ಪ್ರಯೋಗಗಳು ನಡೆಯುತ್ತಿವೆ. ಆದರೆ, ಅಡಿಕೆ ಮೇಲಿನ ಸಂಶೋಧನೆ ಮತ್ತು ಮಾರುಕಟ್ಟೆ ವಿಸ್ತರಣೆ ಪ್ರಯತ್ನಗಳು ಅಷ್ಟಾಗಿ ನಡೆದಿಲ್ಲ. ಧಾರಣೆ ಕುಸಿತ ಕಂಡಾಗ ಮಾತ್ರ ಇಂತಹ ಪ್ರಯತ್ನಗಳಾಗುತ್ತವೆ. ಧಾರಣೆ ಏರುಗತಿಯಲ್ಲಿದ್ದಾಗ ಸಹ ಇದು ಮುಂದುವರಿದರೆ, ಬೆಲೆ ಬಿದ್ದಾಗ ಲಾಭವಾಗಬಹುದು. ಉತ್ಪಾದನೆಯಾಗುವ ಪ್ರದೇಶಕ್ಕಿಂತ, ಬಳಕೆಯಾಗುವ ಪ್ರದೇಶ ಮಾರುಕಟ್ಟೆಗೆ ಹೆಚ್ಚು ಸೂಕ್ತ. ಗ್ರಾಹಕರ ಮನಸ್ಥಿತಿ ಅರಿತು ಮಾರುಕಟ್ಟೆ ಬಗ್ಗೆ ಯೋಚಿಸಬೇಕು' ಎನ್ನುತ್ತಾರೆ ಆರ್ಥಿಕ ತಜ್ಞ ಡಾ. ವಿಘ್ನೇಶ್ವರ ವರ್ಮುಡಿ.

'ಜರ್ಮನಿಯಲ್ಲಿ ರೇಸ್ ಕುದುರೆಗಳ ಆಹಾರಕ್ಕೆ ವಿಶೇಷ ಪೌಡರ್ ಬಳಸುತ್ತಾರೆ. ಅದೇ ಅಂಶಗಳು ಅಡಿಕೆಯಲ್ಲೂ ಇವೆ. ಈ ಉತ್ಪನ್ನದಿಂದ ಅಂತರರಾಷ್ಟ್ರೀಯ ಮಾರುಕಟ್ಟೆ ಪ್ರವೇಶ ಮತ್ತು ಅಡಿಕೆಯ ವ್ಯಾಪಕ ಬಳಕೆಯ ಸಾಧ್ಯತೆ ತೆರೆದುಕೊಳ್ಳುತ್ತದೆ. ಉತ್ಪಾದಕನಿಗೆ ಮಾರುಕಟ್ಟೆ ಕೌಶಲ ತಿಳಿಯದು. ಬಹುರಾಷ್ಟ್ರೀಯ ಕಂಪನಿಗಳ ಸಹಯೋಗವಿದ್ದರೆ, ಅಡಿಕೆ ಉತ್ಪನ್ನಗಳನ್ನು ಹೆಚ್ಚು ಪ್ರಚಲಿತಕ್ಕೆ ತರಬಹುದು' ಎಂಬುದು ಅವರ ಅಭಿಮತ.

ಆರ್ಥಿಕ ನೆರವು ಕಡಿತ: 'ತಿನಿಸುಗಳು ಮಾರುಕಟ್ಟೆಗೆ ಬಂದರೂ, ಅದಕ್ಕೆ ಬಳಕೆಯಾಗುವ ಅಡಿಕೆ ಪ್ರಮಾಣ ಕಡಿಮೆ. ಅಲ್ಲದೆ, ವೈಜ್ಞಾನಿಕ ಅಧ್ಯಯನ ನಡೆಯದ ವಿನಾ ಇವುಗಳ ಲಾಭವನ್ನು ನಿಖರವಾಗಿ ಹೇಳಲು ಆಗದು. 1970ರ ದಶಕದಲ್ಲಿ ಅಡಿಕೆ ಚೊಗರಿನಿಂದ ಬಣ್ಣ ತಯಾರಿಕೆಯ ಪ್ರಯೋಗ ನಡೆದಿತ್ತು. ಆದರೆ, ಇದು ವೆಚ್ಚದಾಯಕ. ಅಡಿಕೆಯಲ್ಲಿರುವ ಅಂಶಗಳ ಕುರಿತ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿದ ಮೇಲೆ, ಸಂಶೋಧನೆಗೆ ಸಿಗುತ್ತಿದ್ದ ಹಣಕಾಸಿನ ನೆರವು ತಗ್ಗಿದೆ. ಇದರಿಂದ ಸಂಶೋಧನೆಗೆ ಹಿನ್ನಡೆಯಾಗಿದೆ' ಎನ್ನುತ್ತಾರೆ ಕಾಸರಗೋಡು ಸಿಪಿಸಿಆರ್‌ಐ ವಿಜ್ಞಾನಿ ಡಾ. ರವಿ ಭಟ್.

ಅಡಿಕೆ ಆರೋಗ್ಯಕ್ಕೆ ಹಾನಿಕಾರಕವಲ್ಲ. ತಂಬಾಕು ಮಾರುಕಟ್ಟೆಯ ಮಾದರಿಯಲ್ಲೇ ಅಡಿಕೆ ಮಾರುಕಟ್ಟೆಯನ್ನೂ ವ್ಯವಸ್ಥೆಗೊಳಿಸಿದ್ದರೆ ಕೃಷಿಕ ಮತ್ತು ಸರ್ಕಾರಕ್ಕೆ ಆದಾಯ ಕೊರತೆಯಾಗುತ್ತಿರಲಿಲ್ಲ.

ರವೀಶ ಹೆಗಡೆ
ಪ್ರಧಾನ ವ್ಯವಸ್ಥಾಪಕ ಟಿ.ಎಸ್.ಎಸ್. ಶಿರಸಿ

ಹತ್ತಾರು ಒಳ್ಳೆಯ ಗುಣಗಳಿರುವ ಅಡಿಕೆಯನ್ನು ಗುಟ್ಕಾದಂಥ ಉತ್ಪನ್ನಗಳಿಗೆ ಯಾಕೆ ಬಳಸಬೇಕು? ಸಾಮಾಜಿಕವಾಗಿ ಒಪ್ಪಿತ ಮಾರುಕಟ್ಟೆ ಸಿಗಲು ಉಪ ಉತ್ಪನ್ನಗಳನ್ನು ಮಾಡಬೇಕು.

ಡಾ.ಟಿ.ಎನ್.ಪ್ರಕಾಶ ಕಮ್ಮರಡಿ
ಮಾಜಿ ಅಧ್ಯಕ್ಷ ಕರ್ನಾಟಕ ಕೃಷಿ ಬೆಲೆ ಆಯೋಗ

ಕೆಲವರು ಒಂದಷ್ಟು ಕಾಳಧನವನ್ನು ಅಡಿಕೆಯ ಮೇಲೆ ಹೂಡಿಕೆ ಮಾಡಿದ್ದರು. ಅದರಿಂದ ಕೆಲವೊಮ್ಮೆ ದರ ಭಾರಿ ಏರಿತ್ತು. ಮಾರುಕಟ್ಟೆಯಲ್ಲಿ ಗುಟ್ಕಾ ಮತ್ತು ಸಿಗರೇಟ್ ಕಂಪನಿಗಳ ಲಾಬಿ ಇದೆ.

ಪ್ರಸಾದ ಹೆಗಡೆ, ಅಡಿಕೆ ಬೆಳೆಗಾರ
ಕಾನಕೋಡ್ಲು, ಯಲ್ಲಾಪುರ

ಕಲಬೆರಕೆಗೆ ರೆಡ್‌ಆಕ್ಸೈಡ್ ಬಳಕೆ

ಶಿವಮೊಗ್ಗ: ಮಲೆನಾಡಿನ ರಾಶಿ ಪ್ರಕಾರದ ಕೆಂಪಡಿಕೆಗೆ ಸಾಕಷ್ಟು ಬೇಡಿಕೆ ಇದೆ. ಕೆಲವು ವರ್ತಕರು ಶ್ರೀಲಂಕಾ, ಮಲೇಷ್ಯಾ, ಮ್ಯಾನ್ಮಾರ್, ದೇಶದ ಅಸ್ಸಾಂ, ಕೇರಳ ಹಾಗೂ ಪಶ್ಚಿಮ ಬಂಗಾಳದ ಅರಣ್ಯದಲ್ಲಿ ಬೆಳೆಯುವ ಅಡಿಕೆಯನ್ನು ಕಡಿಮೆ ಬೆಲೆಗೆ ಖರೀದಿ ಮಾಡಿ, ಕಳಪೆ ಅಡಕೆಗೆ ಬಣ್ಣ ಹಚ್ಚಿ ಇಲ್ಲಿನ ಗುಣಮಟ್ಟದ ಅಡಿಕೆ ಜತೆ ಬೆರೆಸಿ ಸಾಗಣೆ ಮಾಡುತ್ತಿದ್ದರು.

ಕೆಲವು ವರ್ತಕರು ಮಿಶ್ರಣಕ್ಕಾಗಿ ಎಪಿಎಂಸಿ ಆವರಣದ ಮಳಿಗೆಗಳಲ್ಲೇ ಯಂತ್ರಗಳನ್ನು ಇಟ್ಟುಕೊಂಡಿದ್ದರು. ಅಡಿಕೆಗೆ ರೆಡ್‌ಆಕ್ಸೈಡ್ ಹಚ್ಚಿ, ರೈತರಿಂದ ಖರೀದಿಸಿದ ಅಡಿಕೆ ಜತೆ ಬೆರೆಸುತ್ತಿದ್ದರು. ಕಳಪೆ ಗುಣಮಟ್ಟದ ಅಡಿಕೆ ವಿರುದ್ಧ ಕ್ರಮಕ್ಕೆ ಮುಂದಾಗಿದ್ದ ಎಪಿಎಂಸಿ ಹಿಂದಿನ ಅಧ್ಯಕ್ಷ ದುಗ್ಗಪ್ಪ ಗೌಡ ಅವರಿಗೆ ಕೆಲವು ವರ್ತಕರು ಬೆದರಿಕೆ ಹಾಕಿದ್ದರು.

ಹಲವು ವರ್ಷಗಳಿಂದ ಸುಂಕ ಪಾವತಿಸದೆ ನಡೆಸುವ ವಹಿವಾಟಿನಿಂದಾಗಿ ₹ 16 ಸಾವಿರ ಕೋಟಿ ಅವ್ಯವಹಾರ ನಡೆದಿತ್ತು. ಈ ಪ್ರಕರಣವನ್ನು ಮುಂಬೈ ಹೈಕೋರ್ಟ್‌ನ ನಾಗಪುರ ಪೀಠ ಸಿಬಿಐ ತನಿಖೆಗೆ ಒಪ್ಪಿಸಿತ್ತು. ಇದಾದ ನಂತರ ಕೆಲವು ವರ್ತಕರು ಕಳುಹಿಸಿದ್ದ ಅಡಿಕೆಯನ್ನು ಕಂಪನಿಗಳು ತಿರಸ್ಕರಿಸಿದವು. ಈ ಎಲ್ಲ ಬೆಳವಣಿಗೆಗಳ ನಂತರ ಕಲಬೆರಕೆ ದಂಧೆ ಕ್ಷೀಣಿಸುತ್ತಿದೆ.

ಮಲೆನಾಡಿನ ಕೆಲವು ಭಾಗಗಳಲ್ಲಿ ರೈತರು ಸಹ ಅಡಿಕೆ ಉತ್ತಮ ಗುಣಮಟ್ಟದಂತೆ ಕಾಣಲು ಬೇಯಿಸುವಾಗಲೇ ರೆಡ್‌ಆಕ್ಸೈಡ್ ಮಿಶ್ರಣ ಮಾಡುತ್ತಿರುವ ಪ್ರಕರಣಗಳು ಬೆಳಕಿಗೆ ಬಂದಿವೆ.

ಧಾರಣೆ ಸ್ಥಿರತೆಗೆ ಹಲವು ಆಯಾಮಗಳಿದ್ದರೂ ಏರಿಳಿತಗಳಿಗೆ ಮಧ್ಯವರ್ತಿಗಳೇ ಕಾರಣ ಎನ್ನುವುದು ನಿಜ. ಮಧ್ಯವರ್ತಿಗಳು ಮೂರ್‍ನಾಲ್ಕು ತಿಂಗಳ ಮೊದಲೇ ಕಂಪನಿಗಳ ಜತೆ ಒಪ್ಪಂದ ಮಾಡಿಕೊಂಡಿರುತ್ತಾರೆ. ಪ್ರತಿ ತಿಂಗಳು ಪೂರೈಸುವ ಆವಕವನ್ನು ರಾಜ್ಯದ ಮಾರುಕಟ್ಟೆ, ಸಹಕಾರ ಸಂಘಗಳಿಂದ ಸಂಗ್ರಹಿಸಿರುತ್ತಾರೆ. ಅಡಿಕೆ ಕೊರತೆ ಬಿದ್ದಾಗ ದಿಢೀರ್ ಬೆಲೆ ಏರಿಕೆ ಮಾಡುತ್ತಾರೆ. ಇದರಿಂದ ಪೂರೈಕೆ ಹೆಚ್ಚಾಗುತ್ತದೆ. ಬೇಡಿಕೆ ಕುಸಿದ ನಂತರ ಮತ್ತೆ ಇಳಿಕೆಯತ್ತ ಸಾಗುತ್ತದೆ.

ಎಚ್.ಎಸ್.ಮಹೇಶ್ ಹುಲುಕುಳಿ
ಉಪಾಧ್ಯಕ್ಷರು, ಮ್ಯಾಮ್‌ಕೋಸ್, ಶಿವಮೊಗ್ಗ.

ಬೀಡಾ ಅಂಗಡಿ ಇಟ್ಟಿದ್ದವ ಸಾವಿರಾರು ಕೋಟಿ ಒಡೆಯ!

ಆಹಾರ ಪದಾರ್ಥ, ಅಗತ್ಯ ವಸ್ತುಗಳಂತೆ ವಾಣಿಜ್ಯ ಬೆಳೆ ಅಡಿಕೆ ಸಂಗ್ರಹದ ಮೇಲೆ ಯಾವುದೇ ನಿರ್ಬಂಧಗಳು ಇಲ್ಲ. ಇಂತಹ ಅವಕಾಶದ ಲಾಭ ಪಡೆಯುವ ಪ್ರಮುಖ ರಾಜಕಾರಣಿಗಳು, ರಿಯಲ್ ಎಸ್ಟೇಟ್ ಕುಳಗಳು, ಶ್ರೀಮಂತರು ಹವಾಲಾ ರೀತಿ ಅಡಿಕೆ ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡುತ್ತಿದ್ದಾರೆ. ಅವರು ಖರೀದಿಸುವ ಪ್ರಮಾಣ ಇಲ್ಲಿನ ಮ್ಯಾಮ್‌ಕೋಸ್, ತುಮ್‌ಕೋಸ್‌ನಂತಹ ಸಹಕಾರ ಸಂಘಗಳ ವಾರ್ಷಿಕ ವಹಿವಾಟುಗಳಿಗಿಂತಲೂ ಅಧಿಕ. ಗುಜರಾತ್‌ನಿಂದ ಅಡಿಕೆ ಖರೀದಿಸಲು ಹೆಲಿಕಾಪ್ಟರ್‌ನಲ್ಲಿ ಶಿವಮೊಗ್ಗಕ್ಕೆ ಬಂದ ಮಧ್ಯವರ್ತಿಗೆ ಕೇಂದ್ರ ಸರ್ಕಾರದ ಪ್ರಭಾವಿ ಸಚಿವರೊಬ್ಬರ ನಂಟಿದೆ ಎಂಬುದು ಶಿವಮೊಗ್ಗದ ಅಡಿಕೆಯ ದೊಡ್ಡ ಮಟ್ಟದ ವರ್ತಕರಿಗೆಲ್ಲ ಸ್ಪಷ್ಟ. ಅಂತಹ ನಂಟಿನ ಫಲವಾಗಿಯೇ, ಅಹಮದಾಬಾದ್‌ನಲ್ಲಿ ಬೀಡಾ ಅಂಗಡಿ ಇಟ್ಟುಕೊಂಡಿದ್ದವ ಇಂದು ಪ್ಯಾರಿಸ್‌ನಲ್ಲಿ ಮಗಳ ಮದುವೆ ಮಾಡುವಷ್ಟು ಎತ್ತರಕ್ಕೆ ಬೆಳೆದಿದ್ದಾರೆ. ಅವರು ಬಂದ ನಂತರವೇ ದಿಢೀರನೆ ಅಡಿಕೆ ಧಾರಣೆ ಏರಿಕೆಯಾಗಿದೆ ಎನ್ನುತ್ತವೆ ಎಪಿಎಂಸಿ ಮೂಲಗಳು.

ಆಯಕಟ್ಟಿನ ರಾಜಕಾರಣಿಗಳ ಸಂಪರ್ಕದಿಂದಲೇ ಇಂತಹ ಮಧ್ಯವರ್ತಿಗಳು ಸಾವಿರಾರು ಕೋಟಿ ಮೌಲ್ಯದ ಅಡಿಕೆಯನ್ನು ಏಕಕಾಲದಲ್ಲಿ ಖರೀದಿಸಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದಾರೆ. ಪ್ರತಿ ವರ್ಷ ಅಡಿಕೆ ಬೆಳೆ ಕ್ಷೇತ್ರ ಗಣನೀಯವಾಗಿ ಹೆಚ್ಚಳವಾಗಿ, ಉತ್ಪಾದನೆ ಅಧಿಕಗೊಂಡರೂ, ಮಾರುಕಟ್ಟೆಯಲ್ಲಿ ಕಂಪನಿಗಳ ಬೇಡಿಕೆಯಷ್ಟು ಅಡಿಕೆ ದೊರಕದಂತಾಗಿದೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 19-12-1996

● **ಭದ್ರಾವತಿ ಕಬ್ಬಿಣ ಕಾರ್ಖಾನೆ ಉಕ್ಕು ಪ್ರಾಧಿಕಾರದ ವಶಕ್ಕೆ**

ಬೆಂಗಳೂರು, ಡಿ. 18– ಸರ್ ಎಂ. ವಿಶ್ವೇಶ್ವರಯ್ಯ ಅವರು ಸ್ಥಾಪಿಸಿದ್ದ ಭದ್ರಾವತಿ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯ ಮೇಲಿದ್ದ ತನ್ನ ಸ್ವಾಮ್ಯವನ್ನು 'ಸ್ಥಾವರದ ಅಭಿವೃದ್ಧಿ ದೃಷ್ಟಿಯಿಂದ' ಕೇಂದ್ರ ಸರ್ಕಾರಿ ಒಡೆತನದ ಭಾರತೀಯ ಉಕ್ಕು ಪ್ರಾಧಿಕಾರಕ್ಕೆ ವಹಿಸಿಕೊಡಲು ಇಲ್ಲಿ ಇಂದು ಸೇರಿದ್ದ ಸಂಪುಟದ ತುರ್ತುಸಭೆ ತೀರ್ಮಾನಿಸಿತು.

ಕಾರ್ಖಾನೆಯನ್ನು ಅಭಿವೃದ್ಧಿಪಡಿಸಲು ನೆರವಾಗುವ ದೃಷ್ಟಿಯಿಂದ ಸರ್ಕಾರ ಈ ತೀರ್ಮಾನ ಕೈಗೊಂಡಿದ್ದು ಮುಂದಕ್ಕೆ ಅದಕ್ಕೆ ಉತ್ತಮ ಭವಿಷ್ಯವಿದೆ ಎಂದು ಭಾವಿಸಿದೆ ಎಂದು ಸಭೆಯ ಬಳಿಕ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಖಾತೆ ಸಚಿವ ಎಂ.ಪಿ. ಪ್ರಕಾಶ್ ಸುದ್ದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 19-12-1971

● **ಇಂದಿರಾಜೀಗೆ ಹೃತ್ಪೂರ್ವಕ ಸನ್ಮಾನ**

ನವದೆಹಲಿ, ಡಿ. 18– ತಾಳ್ಮೆ, ದೂರದೃಷ್ಟಿ, ರಾಜತಾಂತ್ರಿಕ ಪರಿಪಕ್ವತೆ ಮತ್ತು ದಿಟ್ಟತನದ ನಾಯಕತ್ವ ನೀಡಿ ಹದಿನಾಲ್ಕು ದಿನಗಳ ಸಮರದಲ್ಲಿ ರಾಷ್ಟ್ರವನ್ನು ವಿಜಯಪಥದಲ್ಲಿ ನಡೆಸಿದ ಹಾಗೂ ಬಾಂಗ್ಲಾ ದೇಶವನ್ನು ಪಾಕಿಸ್ತಾನಿ ಸರ್ವಾಧಿಕಾರಿಗಳಿಂದ ವಿಮುಕ್ತಿಗೊಳಿಸಿದ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಸಂಸತ್ ಸದಸ್ಯರು ಇಂದು ಹೃತ್ಪೂರ್ವಕವಾಗಿ ಸನ್ಮಾನಿಸಿದರು.

ಸಂಸತ್ ಭವನದ ಮಧ್ಯೆ ಪ್ರಾಂಗಣದಲ್ಲಿ ನಡೆದ ಸಂಭ್ರಮದ ಸತ್ಕಾರ ಸಮಾರಂಭದಲ್ಲಿ ವಿವಿಧ ಪಕ್ಷಗಳು ನಾಯಕರುಗಳು ಪುಷ್ಪಹಾರಗಳನ್ನು ಅರ್ಪಿಸಿ ಇಂದಿರಾ ಗಾಂಧಿಯವರನ್ನು ಅಭಿನಂದಿಸಿದರು.

ದಿನ ಭವಿಷ್ಯ

ಭಾನುವಾರ ಡಿಸೆಂಬರ್ 19, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮಾರ್ಗಶಿರ (ಧನುರ್ಮಾಸ) ಮಾಸ ಶುಕ್ಲಪಕ್ಷ ಪಕ್ಷ ಮಳೆ ನಕ್ಷತ್ರ ಮೂಲ ಪೂರ್ಣಿಮಾ ಗಂ. 4-17 (ಬೆ. 8-25) ಭಾನುವಾರ ನಿತ್ಯ ನಕ್ಷತ್ರ ಮೃಗಶಿರ ಗಂ. 23-1 (ಹ. 3-54) ಶುಭ ನಾಮ ಯೋಗ ಗಂ. 8-15 ಬವ ಕರಣ ಗಂ. 4-17 ವಿಷ ಗಂ. 45-8 ಅಮೃತ ಶೇಷ ಗಂ. 3-5 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-39 ಸೂರ್ಯಾಸ್ತ: 5-53 ಅದೃಷ್ಟ ಸಂಖ್ಯೆ 3, 4

ಮೇಷ: ಕೆಲಸ– ಕಾರ್ಯಗಳು ಕೈಗೂಡುವವು. ವ್ಯಾಪಾರ ವ್ಯವಹಾರಗಳಿಂದ ಅಧಿಕ ಲಾಭ. ಆರೋಗ್ಯದಲ್ಲಿ ಸುಧಾರಣೆ. ಅಕಾಲ ಭೋಜನದಿಂದಾಗಿ ಆಲಸ್ಯ ತಲೆದೋರಬಹುದು.

ವೃಷಭ: ವಿಪರೀತ ಕೆಲಸಗಳಿಂದಾಗಿ ಒತ್ತಡ ಉಂಟಾಗಿ ಗೊಂದಲ ಉಂಟಾಗುವ ಸಾಧ್ಯತೆ. ಕೆಲಸ–ಕಾರ್ಯಗಳಲ್ಲಿ ತಪ್ಪಾಗುವ ಸಾಧ್ಯತೆ. ಆರೋಗ್ಯದಲ್ಲಿ ಕೊಂಚ ವ್ಯತ್ಯಯ. ಹಿರಿಯರ ಸಕಾಲಿಕ ನೆರವಿನ ಭರವಸೆಯಿಂದಾಗಿ ತೃಪ್ತಿ.

ಮಿಥುನ: ಕುಟುಂಬ ಸದಸ್ಯರ ವಿರೋಧದ ನಡುವೆ ಕೆಲಸಗಳನ್ನು ನಿರ್ವಹಿಸಬೇಕಾದೀತು. ಅನವಶ್ಯಕ ಖರ್ಚು ಸಂಭವಿಸಿ ಮಾನಸಿಕ ಕ್ಲೇಶ ಉಂಟಾಗಬಹುದು. ಆಪ್ತರ ಸಲಹೆ ಮಧ್ಯಪ್ರವೇಶದಿಂದಾಗಿ ಸಮಾಧಾನ.

ಕರ್ಕಾಟಕ: ಉದ್ಯೋಗ ಕ್ಷೇತ್ರದಲ್ಲಿ ಮುನ್ನಡೆ. ಹಿರಿಯರೊಂದಿಗೆ ಇದ್ದ ಮನಸ್ತಾಪಗಳು ದೂರವಾಗುವವು. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ. ಮನೋಬಲ ವೃದ್ಧಿಯಾಗಿ ಕಾರ್ಯಸಾಧನೆ.

ಸಿಂಹ: ತಕರಾರಿನ ವಿಷಯಗಳಲ್ಲಿ ಪಂಚಾಯ್ತಿಯಿಂದ ನ್ಯಾಯ ಪ್ರಾಪ್ತವಾಗುವುದು. ಕೆಲಸಕಾರ್ಯಗಳಲ್ಲಿ ಪ್ರಗತಿ. ಆಪ್ತರಿಂದ ಮುದ ನೀಡುವ ಸುದ್ದಿ.

ಕನ್ಯಾ: ಕೆಲಸ–ಕಾರ್ಯಗಳಲ್ಲಿ ಸಫಲತೆ ಕಂಡು ಸಂತಸ ಮೂಡುವುದು. ಶುಭಕಾರ್ಯಗಳನ್ನು ನಿಗದಿಮಾಡುವ ಸಾಧ್ಯತೆ. ಪ್ರೀತಿಪಾತ್ರರ ಆಗಮನ. ಯಂತ್ರೋಪಕರಣಗಳಿಂದ ಕಾರ್ಯನಿರ್ವಹಣೆಯಲ್ಲಿ ಯಶಸ್ಸು.

ತುಲಾ: ಸರಾಗವಾಗಿ ನಡೆಯುವ ಕೆಲಸ ಕಾರ್ಯಗಳು. ಬಹುದಿನಗಳ ನಿರೀಕ್ಷಿತ ಸುದ್ದಿ ಬಂದು ತಲುಪಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ಲಾಭಗಳು ಹೆಚ್ಚಾಗಿ ನೆಮ್ಮದಿ ನೀಡುವುದು. ಮಕ್ಕಳ ವಿಷಯದಲ್ಲಿ ಬೇಸರ ಉಂಟಾಗಬಹುದು.

ವೃಶ್ಚಿಕ: ಆಸೆ– ಆಕಾಂಕ್ಷೆಗಳು ಈಡೇರಿ ಮಾನಸಿಕ ನೆಮ್ಮದಿ ದೊರಕುವುದು. ಸಂಗಾತಿಯೊಂದಿಗಿನ ಮಧುರ ಸಂಬಂಧದಿಂದಾಗಿ ಉಲ್ಲಾಸಮಯ ವಾತಾವರಣ. ಸಕುಟುಂಬ ಪ್ರವಾಸ ಮಾಡುವ ಸಾಧ್ಯತೆ. ವಿದ್ಯಾರ್ಥಿಗಳಿಗೆ ಪ್ರಗತಿ.

ಧನು: ಅಹಿತ ಭೋಜನದಿಂದಾಗಿ ಉದರ ಸಂಬಂಧಿ ರೋಗಗಳಿಂದ ಬಳಲುವ ಸಾಧ್ಯತೆ. ವೃತ್ತಿಯಲ್ಲಿ ಹಿನ್ನಡೆ ಉಂಟಾಗಬಹುದು. ಕುಟುಂಬದಲ್ಲಿ ಬೇಸರ ತಲೆದೋರಬಹುದು. ಸಂಯಮದಿಂದಾಗಿ ಎಲ್ಲವೂ ಸುಗಮವಾಗುವವು.

ಮಕರ: ತಡೆಯಿಲ್ಲದೆ ನಡೆಯುವ ಕೆಲಸ ಕಾರ್ಯಗಳು. ನಿರೀಕ್ಷೆಗಿಂತಲೂ ಹೆಚ್ಚಾದ ವ್ಯಾವಹಾರಿಕ ಲಾಭಗಳು. ಹಿರಿಯರಿಂದ ಸಹಾಯ. ವಾಹನ ಖರೀದಿ ಹಾಗೂ ದೂರ ಪ್ರಯಾಣ ಯೋಗ, ಕಾರ್ಯಗಳಿಂದಾಗಿ ಗೌರವ ಪ್ರಾಪ್ತಿ.

ಕುಂಭ: ಕೆಲಸ ಕಾರ್ಯಗಳಲ್ಲಿ ಸಣ್ಣಪುಟ್ಟ ಎಡರು ತೊಡರುಗಳು ತಲೆದೋರುವ ಸಾಧ್ಯತೆ. ಸಮಯಕ್ಕೆ ಸರಿಯಾಗಿ ಮುಗಿಯದೇ ಕಿರಿಕಿರಿ ಉಂಟಾಗಬಹುದು. ಲೇವಾದೇವಿ ವ್ಯವಹಾರಗಳಲ್ಲಿ ನಷ್ಟ ಸಂಭವಿಸಬಹುದು.

ಮೀನ: ಮಕ್ಕಳ ವಿಷಯದಲ್ಲಿ ಅಸಮಾಧಾನ ಉಂಟಾಗುವ ಸಾಧ್ಯತೆ. ಆತ್ಮಬಲದ ಕೊರತೆಯಿಂದಾಗಿ ಉದ್ಯೋಗದಲ್ಲಿ ನಿರಾಸಕ್ತಿ. ಊಟದ ವಿಷಯದಲ್ಲಿ ಜಾಗರೂಕರಾಗಿರುವುದು ಉತ್ತಮ.

ನಿಮ್ಮ ಜನ್ಮದಿನ 19-ಡಿಸೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ತಡೆಇಲ್ಲದೇ ನಡೆಯುವ ಕೆಲಸ ಕಾರ್ಯಗಳು. ವಿದ್ಯಾಭ್ಯಾಸದಲ್ಲಿ ಪ್ರಗತಿ ಸಾಧ್ಯವಾಗದಿದ್ದರೂ ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಲಾಭ. ಆಧ್ಯಾತ್ಮಿಕ ವಿಚಾರಗಳ ಬಗ್ಗೆ ಒಲವು ಮೂಡುವುದು. ಮುತ್ತು–ರತ್ನದಂತಹ ಬೆಲೆ ಬಾಳುವ ವಸ್ತುಗಳ ವ್ಯವಹಾರದಲ್ಲಿ ಉತ್ತಮ ಅವಕಾಶಗಳು ಮೂಡಿಬರಲಿವೆ.

ಪದಬಂಧ 4812 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3. ಇದು ಮನಸ್ಸಿನ ಬಯಕೆ (4)
5.ಬೇರೆ ರೂಪ ಈ ತರ ಕಾಣಿಸುತ್ತಿದೆ (4)
6.ಕಿರುಗತ್ತಿಯಿದು (2)
7.ಕಾಲಸೂಚಕ ಯಂತ್ರ (4)
10.ಆಡುಗೆಮನೆ ಇಲ್ಲಿದೆ (4)
12.ಕಥೆಯಲ್ಲ!ಇದು ದುಃಖ! (2)
14.ಚಾಲಕನೊಡನಿರುವ ವ್ಯವಸ್ಥಾಪಕ (4)
15.ಅಸಾಂಗತ್ಯವನ್ನು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ
1.ಬಹು ಹೆಚ್ಚಿನ ಅವಶ್ಯಕತೆ (3)
2.ಬಹಿರಂಗದ ವಿರುದ್ಧ ಪದ (4)
3.ಮರದಲ್ಲಿರುವ ಹೊಸ ಯುಗ (4)
4.ಹೊಳಪು ಇಲ್ಲಿಕಾಣುತ್ತಿದೆ (3)
6.ಕಣ್ಣೀರು ಇಲ್ಲಿದೆ (2)
8.ಈತ ಪಹರೆಯವನು (3)
9.ನಡೆದ ಅಥವಾ ಕಲ್ಪಿತ ಸಂಗತಿ (2)
10.ಪಾಪಕ್ಕೆ ಹೆದರುವವನು (4)
11.ಖರ್ಚುವೆಚ್ಚದ ವಿವರ (4)
12.ಅಂಗುಳಿನ ಒಳಭಾಗವಿಲ್ಲಿ ಉಲ್ಟಾ ಕಾಣುತ್ತಿದೆ (3)
13.ಅನುಕೂಲತೆ ಇಲ್ಲಿದೆ (3)



4811ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಾಕಾರ 3.ಅಶ್ವಾರೋಹಿ
5.ನವೀನ 7.ಪ್ರವರ್ತಕ
9.ವ್ಯವಹಾರ 11.ಮಗಳು
14.ಆಡುಂಬೊಲ 15.ಕಣಕ

ಮೇಲಿಂದ ಕೆಳಕ್ಕೆ:
1.ಪ್ರಾಚೀನ 2.ರಸನ
3.ಅನುಭಾವ 4.ಹಿಮ
6.ವೀರಕಾವ್ಯ 7.ಪ್ರಹರ
8.ಕವಾಡಿಗ 10.ಹಾಲಾಹಲ
11.ಮರುಕ 12.ಋುರುಕ 13.ಸ್ತಿಥಿ

ಸುಡೊಕು 5198

					7		1	4
8		7	6		4	2		9
			3					
2	4			1		9		
							7	
7	5			9		3	4	
	8							3
			4		8	5		
9		4			2		6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5197 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಕನ್ನಡ ನೆಲದ ಭಾಷಾ ವೈವಿಧ್ಯ ದರ್ಶನ

ಚಿಂತನೆಗಳ ಹೊಳಹುಗಳಿಂದ ಸಾಹಿತ್ಯ ಜಾತ್ರೆಗೆ ಕಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಲದ ಭಾಷೆಗಳನ್ನು ಉಳಿಸುವ ಮಾರ್ಗೋಪಾಯಗಳ ಕುರಿತ ಚಿಂತನೆಗಳ ಮಂಥನ ಕಾವೇರಿದ್ದರೆ, ಇನ್ನೊಂದೆಡೆ ಹೊಸ ಪುಸ್ತಕಗಳ ಹೂರಣಗಳ ಅವಲೋಕನ. ವೈರಾಣುಗಳ ವಿಕಸನ ನಿಗೂಢ ಸಾಮ್ರಾಜ್ಯ ವಿಸ್ತಾರ- ಹರವುಗಳ ಬಗ್ಗೆ ಜಿಜ್ಞಾಸೆ ಒಂದೆಡೆಯಾದರೆ, ದೇಶದ ಸಾಮಾಜಿಕ, ಆರ್ಥಿಕ ರಾಜಕಿಯ ಬೆಳವಣಿಗೆಗಳ ಸಮಾಲೋಚನೆ ಮತ್ತೊಂದೆಡೆ...

ಹೀಗೆ, ಹತ್ತು ಹಲವು ವಿಚಾರಧಾರೆಗಳ ಗಹನವಾದ ಚರ್ಚೆಗಳಿಗೆ ಬೆಂಗಳೂರು ಸಾಹಿತ್ಯ ಉತ್ಸವ ವೇದಿಕೆಯಾಯಿತು. ದೇಶದ ವಿವಿಧೆಡೆಗಳಿಂದ ಬಂದಿದ್ದ ವಿದ್ವಾಂಸರು, ಲೇಖಕರು ಹಂಚಿಕೊಂಡ ಹೊಳಹುಗಳ ಬೆಳಕಿನೊಂದಿಗೆ ಈ ಸಾಹಿತ್ಯ ಜಾತ್ರೆ ಕಳೆಗಟ್ಟಿತು.

ಮುಖ್ಯಾಂಶಗಳು

- ಸರ್ಕಾರಗಳ ಅಸಡ್ಡೆಯಿಂದ ಭಾಷೆಗಳಿಗೆ ಅಪಾಯ
- ಬಹುಭಾಷೆ, ಸಂಸ್ಕೃತಿ ಉಳಿವು ಕುರಿತು ಅವಲೋಕನ
- ಸ್ಥಳೀಯ ಭಾಷೆಗಳ ಲಿಪಿ ಉಳಿಸುವ ಕಾಳಜಿ

ತಮ್ಮಿಷ್ಟದ ಸಾಹಿತಿಗಳ, ಚಿಂತಕರ ಮಾತುಗಳನ್ನು ಆಲಿಸಲು ಅಭಿಮಾನಿ ಬಳಗ ತಮ್ಮ ವಾರಾಂತ್ಯವನ್ನು ಮುಡಿಪಾಗಿಟ್ಟಿತ್ತು. ಇನ್ನೊಂದೆಡೆ ಸಾಹಿತ್ಯ ಪ್ರೇಮಿಗಳು ಹೊಸ ಪುಸ್ತಕಗಳ ಖರೀದಿ ಭರಾಟೆಯಲ್ಲಿ ಮುಳುಗಿದ್ದರು.

ಕನ್ನಡ ನಾಡಿನ ಕೊಂಕಣಿ, ತುಳು, ಕೊಡವ, ಹಾಲಕ್ಕಿ ಮುಂತಾದ ಬಹು ಭಾಷಾ ಜಗತ್ತು, ಅವುಗಳ ಜೊತೆಗೆ ಬೆಸೆದುಕೊಂಡ ಸಂಸ್ಕೃತಿಗಳನ್ನು ಉಳಿಸಿಕೊಳ್ಳುವ ಬಗೆ ಹೇಗೆ ಎಂಬ ಕುರಿತ ಸಮಾಲೋಚನೆ ಈ ಬಾರಿಯ ವಿಶೇಷವಾಗಿತ್ತು.

ಬೆಂಗಳೂರಿನಲ್ಲಿ ಶನಿವಾರ ಆರಂಭವಾದ 'ಬೆಂಗಳೂರು ಸಾಹಿತ್ಯ ಉತ್ಸವ'ದ ಪುಸ್ತಕ ಮಳಿಗೆಯಲ್ಲಿ ಖರೀದಿ ಭರಾಟೆ ಜೋರಾಗಿತ್ತು

–ಪ್ರಜಾವಾಣಿ ಚಿತ್ರ/ ಕೃಷ್ಣಕುಮಾರ್ ಪಿ.ಎಸ್.

ಕನ್ನಡವೂ ಸೇರಿದಂತೆ ನೆಲದ ಹಲವು ಭಾಷೆಗಳು ಸರ್ಕಾರದ ಅಸಡ್ಡೆಯಿಂದ ಎದುರಿಸುತ್ತಿರುವ ಅಪಾಯಗಳ ಕುರಿತು ವಿದ್ವಾಂಸ ಪುರುಷೋತ್ತಮ ಬಿಳಿಮಲೆ ಅವರು ದಿನದ ಮೊದಲ ಗೋಷ್ಠಿಯಲ್ಲೇ ಬೆಳಕು ಚೆಲ್ಲುವ ಮೂಲಕ ಚರ್ಚೆಗೆ ವೇದಿಕೆ ಹದಗೊಳಿಸಿದರು.

ಬಹುಭಾಷೆಗಳ ನೆಲೆಗಟ್ಟನ್ನು ಉಳಿಸಿಕೊಳ್ಳುವಲ್ಲಿ ಕನ್ನಡಿಗರ ಸ್ವಭಾವ ಹೇಗೆ ಕೆಲಸ ಮಾಡಿತು ಎಂಬುದನ್ನು ವಿದ್ವಾಂಸರಾದ ಶಕೀರಾ ಜಬೀನ್ ಬಿ. ಅವರು ವಿಶ್ಲೇಷಿಸಿದರು.

'ಮೈಸೂರು ಸಂಸ್ಥಾನ ಬಹು ಭಾಷೆಗಳ ನೆಲೆಗೆ ತಳಹದಿ ನಿರ್ಮಿಸಿತ್ತು. ಆಲೂರು ವೆಂಕಟರಾಯರು ಪ್ರತಿಪಾದಿಸಿದ ಕನ್ನಡತ್ವ, ಬಿಎಂಶ್ರೀ ಪ್ರತಿಪಾದಿಸಿದ ಕನ್ನಡತನದ ಜೊತೆ ಇತರ ಭಾಷೆಗಳ ಸಹಬಾಳ್ವೆಯ ಮಹತ್ವ ಸಾರಿದ್ದವು. 'ಎಲ್ಲೇ ಇದ್ದರೂ ಕನ್ನಡವಾಗಿರು' ಎನ್ನುವ ಮೂಲಕ ಕುವೆಂಪು ಕನ್ನಡತನಕ್ಕೆ ಮೇರೆಗಳಿಲ್ಲ ಎಂದರು. ಬಹುಭಾಷೆಗಳಿದ್ದರೂ ಕನ್ನಡ ಆಡಳಿತಕ್ಕೆ ಒಂದೇ ಭಾಷೆ ಬಳಸುವುದು ಸರಿಯಲ್ಲ' ಎಂದರು.

ಅಳಿವಿನಂಚಿನಲ್ಲಿರುವ ಸ್ಥಳೀಯ ಭಾಷೆಗಳ ಲಿಪಿಗಳನ್ನು ಉಳಿಸುವ ಮಹತ್ವದ ಬಗ್ಗೆ ಸಾಹಿತಿ ವಿವೇಕ ಶಾನಭಾಗ ಪ್ರತಿಪಾದಿಸಿದರು.

ಕೊಡವ ಭಾಷೆಯ ವಿಭಿನ್ನ ಸಂಸ್ಕೃತಿಯನ್ನು ಲೇಖಕಿ ಕಾವೇರಿ ಪೊನ್ನಪ್ಪ ಬಿಚ್ಚಿಟ್ಟರು. ತುಳುವನ್ನು ಉಳಿಸಲು ಆಗುತ್ತಿರುವ ಕೆಲಸಗಳ ಬಗ್ಗೆ ನಿಟ್ಟೆ ವಿಶ್ವವಿದ್ಯಾಲಯದ ತುಳು ಅಧ್ಯಯನ ಕೇಂದ್ರದ ಮುಖ್ಯಸ್ಥೆ ಸಾಯಿಗೀತಾ ಹೆಗ್ಡೆ ವಿವರಿಸಿದರು.

ಸಾಮಾಜಿಕ ತಾರತಮ್ಯವು ಕೊರಗ ಭಾಷೆಯ ಅವನತಿಗೆ ಹೇಗೆ ಕಾರಣವಾಗಿದೆ ಎಂಬುದನ್ನು ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟದ ಸದಸ್ಯ ಶ್ರೀಧರ ನಾಡ ಎಳೆ ಎಳೆಯಾಗಿ ಬಿಚ್ಚಿಟ್ಟರು.

ವೈರಾಣುಗಳ ನಿಗೂಢ ವಿಕಸನಗಳ ಮರ್ಮಗಳನ್ನು ವಿಜ್ಞಾನ ಲೇಖಕ ಪ್ರಣಯ್ ಲಾಲ್ ಹಂಚಿಕೊಂಡರು. ದೇಶದ ರಾಜಕೀಯ ಬೆಳವಣಿಗೆಗಳಿಂದ ಎದುರಾಗಿರುವ ತಲ್ಲಣಗಳನ್ನು ಆಕಾರ್ ಪಟೇಲ್ ವಿಶ್ಲೇಷಿಸಿದರು.

50 ವರ್ಷಗಳಲ್ಲಿ ಕನ್ನಡದ ಬೆಳವಣಿಗೆ ಸ್ಥಗಿತ?

ಒಂದನೇ ಪುಟದಿಂದ

'ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 4ರಷ್ಟನ್ನಾದರೂ ಶಿಕ್ಷಣ ಕ್ಷೇತ್ರಕ್ಕೆ ವೆಚ್ಚ ಮಾಡಬೇಕು ಎಂದೂ ಶಿಫಾರಸು ಮಾಡಲಾಗಿದೆ. ಈ ಪ್ರಮಾಣ ಪ್ರಸ್ತುತ ಶೇ 2.8ರಷ್ಟು ಇದೆ. ಇಂತಹ ಶಿಫಾರಸುಗಳನ್ನು ಸರ್ಕಾರ ಜಾರಿಗೊಳಿಸುತ್ತದೆ ಎಂದು ಅನಿಸುವುದಿಲ್ಲ' ಎಂದರು.

'ದೇಶದಲ್ಲಿರುವ 19,226 ಭಾಷೆಗಳಿಗೆ ಸರ್ಕಾರಗಳು ಮನ್ನಣೆಯನ್ನೇ ನೀಡಿಲ್ಲ. ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಕೇವಲ 22 ಭಾಷೆಗಳಿದ್ದು, ಅವುಗಳಲ್ಲಿ 18 ಉತ್ತರ ಭಾರತದವು. ತುಳು, ಕೊಡವ ಸೇರಿದಂತೆ 38 ಭಾಷೆಗಳನ್ನು 8ನೇ ಪರಿಚ್ಛೇದಕ್ಕೆ ಸೇರಿಸುವ ಬಗ್ಗೆ ಸೀತಾಕಾಂತ ಮಹಾಪಾತ್ರ ಸಮಿತಿ 2008ರಲ್ಲೇ ಶಿಫಾರಸು ಮಾಡಿತ್ತು. ಈಗ 99 ಭಾಷೆಗಳು ಇದಕ್ಕೆ ಅರ್ಹವಾಗಿವೆ. ಈ ಭಾಷೆಗಳನ್ನೂ ಸೇರ್ಪಡೆ ಮಾಡಿದರೆ ಸವಲತ್ತು ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ಕೇಂದ್ರವು ಎಂಟನೇ ಪರಿಚ್ಛೇದಕ್ಕೇ ತಿದ್ದುಪಡಿ ತರಲು ಸಿದ್ಧತೆ ನಡೆಸಿದೆ ಎಂಬ ಮಾಹಿತಿ ಸಿಕ್ಕಿದೆ' ಎಂದರು.

'ತುಳು ಮತ್ತು ಕೊಡವ ಭಾಷೆಗಳನ್ನು ರಾಜ್ಯದ ಆಡಳಿತ ಭಾಷೆಗಳೆಂದು ಪರಿಗಣಿಸಿದರೆ, ಅವುಗಳನ್ನೂ ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಬೇಕಾಗುತ್ತದೆ. ಅನೇಕ ರಾಜ್ಯಗಳಲ್ಲಿ ಒಂದಕ್ಕಿಂತ ಹೆಚ್ಚು ಆಡಳಿತ ಭಾಷೆಗಳಿವೆ. ರಾಜ್ಯ ಸರ್ಕಾರ ಇದನ್ನು ಮಾಡುತ್ತಿಲ್ಲ' ಎಂದು ದೂರಿದರು.

ವಿದ್ವಾಂಸರಾದ ಶಕೀರಾ ಜಬೀನ್ ಬಿ., 'ಆಡಳಿತದಲ್ಲಿ, ನ್ಯಾಯಾಂಗಗಳಲ್ಲಿ ನೆಲದ ಬಹುಭಾಷೆಗಳ ಬಳಕೆಗೆ ಅವಕಾಶ ಸಿಗಬೇಕು. ಆದರೆ, ಈ ವಿಚಾರದಲ್ಲಿ ಸರ್ಕಾರಗಳು ಇಬ್ಬಂದಿತನ ಪ್ರದರ್ಶಿಸುತ್ತಿವೆ' ಎಂದು ಆರೋಪಿಸಿದರು.

'ಅಳಿವಿನಂಚಿನಲ್ಲಿ 196 ಭಾಷೆ'

'ಅಂಡಮಾನ್‌ನಲ್ಲಿ ಸೆರಾ ಭಾಷೆ ಮಾತನಾಡುವ ಒಬ್ಬರು ಮಾತ್ರ ಉಳಿದಿದ್ದರು. ಅವರೂ 2020ರ ಏ.4ರಂದು ಕೊನೆಯುಸಿರೆಳೆದರು. ಅವರ ಭಾಷೆ ಜೊತೆ ಸಂಸ್ಕೃತಿಯನ್ನೂ ಜಗತ್ತು ಕಳೆದುಕೊಂಡಿತು. ದೇಶದಲ್ಲಿ 196 ಭಾಷೆಗಳು ಈಗ ಅಳಿವಿನಂಚಿನಲ್ಲಿವೆ. ಅವುಗಳಲ್ಲಿ 71 ಭಾಷೆಗಳು 50 ವರ್ಷಗಳಲ್ಲಿ ಸಂಪೂರ್ಣ ನಾಶವಾಗಲಿವೆ. 101 ಭಾಷೆಗಳ ಅಸ್ತಿತ್ವ ತೀವ್ರ ಅಪಾಯಕ್ಕೆ ಸಿಲುಕಿದೆ' ಎಂದು ಪುರುಷೋತ್ತಮ ಬಿಳಿಮಲೆ ವಿಷಾದಿಸಿದರು.

ಬೆಳಗಾವಿ ಉದ್ವಿಗ್ನ, ನಿಷೇಧಾಜ್ಞೆ

ಒಂದನೇ ಪುಟದಿಂದ

ಆರು ಸರ್ಕಾರಿ ಕಾರುಗಳು, ಆರು ಪೊಲೀಸ್ ಜೀಪ್‌ಗಳು, ಮನೆಗಳ ಮುಂದೆ ನಿಲ್ಲಿಸಿದ್ದ, ನ್ಯೂಕ್ಲಿಯಸ್ ಮಾಲ್‌ಗೆ ಚಲನಚಿತ್ರ ವೀಕ್ಷಣೆಗೆ ಬಂದಿದ್ದವರ ಕಾರುಗಳು ಸೇರಿ 20ಕ್ಕೂ ಹೆಚ್ಚಿನ ವಾಹನಗಳ ಗಾಜುಗಳು ಪುಡಿಯಾಗಿವೆ. ಪೊಲೀಸ್ ಜೀಪಿಗೆ ಬೆಂಕಿಹಚ್ಚಲಾಗಿದೆ. ಕಲ್ಲುತೂರಾಟ ಕೃತ್ಯದ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿವೆ. 'ಈ ಬಗ್ಗೆ ಕ್ಯಾಂಪ್ ಮತ್ತು ಖಡೇ ಬಜಾರ್ ಪೊಲೀಸ್ ಠಾಣೆಯಲ್ಲಿ ಮೂರು ಪ್ರತ್ಯೇಕ ಪ್ರಕರಣ ದಾಖಲಾಗಿದೆ. ಸಿಸಿಟಿವಿ ಕ್ಯಾಮೆರಾಗಳ ದೃಶ್ಯಗಳನ್ನು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ' ಎಂದು ಡಿಸಿಪಿ ವಿಕ್ರಂ ಅಮಟೆ ತಿಳಿಸಿದ್ದಾರೆ.

ಬೃಹತ್ ಪ್ರತಿಭಟನೆ: ಇಲ್ಲಿನ ಧರ್ಮವೀರ ಸಂಭಾಜಿ ವೃತ್ತದಲ್ಲಿ ಶುಕ್ರವಾರ ತಡರಾತ್ರಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್), ಶ್ರೀರಾಮಸೇನಾ ಹಿಂದೂಸ್ತಾನ ಸೇರಿದಂತೆ ವಿವಿಧ ಸಂಘಟನೆಗಳವರು, ಮರಾಠಿಗರು ಪ್ರತಿಭಟನೆ ನಡೆಸಿದರು. ಶಿವಾಜಿ ಪ್ರತಿಮೆಗೆ ಅವಮಾನ ಮಾಡಿದವರ ವಿರುದ್ಧ ಕ್ರಮ ಜರುಗಿಸುವವರೆಗೆ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಪಟ್ಟು ಹಿಡಿದರು.

ಮುಖಂಡರ ಜೊತೆಗೆ ಡಿಸಿಪಿ ಅಮಟೆ ಚರ್ಚಿಸುತ್ತಿರುವಾಗಲೇ ಕಿರ್ಲೋಸ್ಕರ್ ರಸ್ತೆಯಲ್ಲಿ ನಿಲ್ಲಿಸಿದ್ದ ಪೊಲೀಸ್ ವಾಹನದ ಮೇಲೆ ಕೆಲವರು ಕಲ್ಲು ತೂರಿದರು. ಇದರಿಂದ ಉದ್ವಿಗ್ನ ಸ್ಥಿತಿ ನಿರ್ಮಾಣವಾಯಿತು. ಗುಂಪು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು.

ಹಲವೆಡೆ ಕಲ್ಲು ತೂರಾಟ : ಸಂಭಾಜಿ ವೃತ್ತ, ಕೇಳ್ಕರ್ ಬಾಗ್, ರಾಮಲಿಂಗಖಿಂಡ್ ಗಲ್ಲಿ, ಬಾಪಟ್ ಗಲ್ಲಿ ತಿರುವು, ಶಿವಾಜಿ ರಸ್ತೆ, ಮಹಾದ್ವಾರ ರಸ್ತೆ, ಶಾಂತಿ ಗ್ರ್ಯಾಂಡ್ ಹೋಟೆಲ್, ಕುಲಕರ್ಣಿ ಗಲ್ಲಿ ಮತ್ತು ಪಾಟೀಲ ಗಲ್ಲಿಯಲ್ಲಿ ನಿಲ್ಲಿಸಲಾಗಿದ್ದ ವಾಹನಗಳಿಗೆ ಕಿಡಿಗೇಡಿಗಳು ಕಲ್ಲೆಸೆದಿದ್ದಾರೆ. ಸೂರ್ಯ ಯಾತ್ರಿನಿವಾಸ ಹೋಟೆಲ್ ಬಳಿ ಪೊಲೀಸ್ ಜೀಪ್‌ಗೆ ಬೆಂಕಿ ಹಚ್ಚಿದ್ದಾರೆ.

ಬೆಂಗಳೂರಿನಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆಗೆ ಮಸಿ ಬಳಿದವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಸೇರಿದಂತೆ ವಿವಿಧ ಸಂಘಟನೆಗಳವರು ಬೆಳಗಾವಿಯ ಸಂಭಾಜಿ ವೃತ್ತದಲ್ಲಿ ಶುಕ್ರವಾರ ತಡರಾತ್ರಿ ಪ್ರತಿಭಟನೆ ನಡೆಸಿದರು

ಎಂಇಎಸ್ ಕಾರ್ಯಕರ್ತರ ಹೈಡ್ರಾಮಾ

ಶಿವಾಜಿ ಪ್ರತಿಮೆಗೆ ಅವಮಾನ ಖಂಡಿಸಿ ಪ್ರತಿಭಟಿಸಲು ಇಲ್ಲಿನ ಛತ್ರಪತಿ ಶಿವಾಜಿ ಉದ್ಯಾನದ ಬಳಿಗೆ ಶನಿವಾರ ಬೆಳಿಗ್ಗೆ ಗುಂಪುಗೂಡಿದ ಎಂಇಎಸ್ ಕಾರ್ಯಕರ್ತರು ಪೊಲೀಸರ ಜೊತೆ ವಾಗ್ವಾದ ನಡೆಸಿದರು. ನಿಷೇಧಾಜ್ಞೆ ಜಾರಿಯಲ್ಲಿದ್ದರಿಂದ ಪ್ರತಿಭಟನೆಗೆ ಅವಕಾಶ ನೀಡದೇ ಅವರನ್ನು ಪೊಲೀಸರು ಚದುರಿಸಿದರು.

ಉದ್ಯಾನದ ಗೇಟ್‌ಗೆ ಬೀಗ ಹಾಕಿ ಭದ್ರತೆ ಹಾಕಲಾಗಿತ್ತು. 'ನಿಷೇಧಾಜ್ಞೆ ಇದ್ದು, ಪ್ರವೇಶಕ್ಕೆ ಅವಕಾಶವಿಲ್ಲ' ಎಂದು ತಿಳಿಸಿದರೂ, ಗುಂಪಿನೊಂದಿಗೆ ಒಳನುಗ್ಗಲು ಯತ್ನಿಸಿದ ಮುಖಂಡರಾದ ಶಿವಾಜಿ ಸುಂಟಕರ ಹಾಗೂ ಪ್ರಕಾಶ ಶಿರೋಳಕರ ಸೇರಿ ಆರು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದರು.

ಸಂಗೊಳ್ಳಿ ರಾಯಣ್ಣ ಪ್ರತಿಮೆ ಭಗ್ನ

ಬೆಳಗಾವಿ: ಇಲ್ಲಿನ ಅನಗೋಳ ಕನಕದಾಸ ಕಾಲೊನಿಯಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಕಿಡಿಗೇಡಿಗಳು ಭಗ್ನಗೊಳಿಸಿದ್ದಾರೆ. ತಿಲಕವಾಡಿ ಠಾಣೆ ಪೊಲೀಸರು ಪ್ರತಿಮೆಯನ್ನು ಮುಂಜಾಗ್ರತೆಯಾಗಿ ತಮ್ಮ ವಶಕ್ಕೆ ಪಡೆದಿದ್ದಾರೆ.

'ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಮತ್ತು ಹೊಸ ಪ್ರತಿಮೆ ಮರುಪ್ರತಿಷ್ಠಾಪಿಸಬೇಕು' ಎಂದು ಆಗ್ರಹಿಸಿ ರಾಯಣ್ಣನ ಅಭಿಮಾನಿಗಳು ಮತ್ತು ಕನ್ನಡಪರ ಹೋರಾಟಗಾರರು ತಿಲಕವಾಡಿ ಠಾಣೆ ಹಾಗೂ ಚನ್ನಮ್ಮ ವೃತ್ತದಲ್ಲಿ ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು. ತಾಲ್ಲೂಕಿನ ಸುಳಗಾ ಗ್ರಾಮದ ಸಂಭಾಜಿ ಗಲ್ಲಿಯಲ್ಲಿ ರಾಯಣ್ಣ ನಾಮಫಲಕಕ್ಕೆ ಕೇಸರಿಬಣ್ಣ ಎರಚಲಾಗಿದೆ. ಈ ಫೋಟೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಘಟನೆ ನಡೆದದ್ದು ಯಾವಾಗ ಎನ್ನುವುದು ಖಚಿತವಾಗಿಲ್ಲ.

ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಶನಿವಾರ ಕಿಡಿಗೇಡಿಗಳು ಕನ್ನಡ ಬಾವುಟದ ಮೇಲೆ ನಾಯಿಯನ್ನು ನಿಲ್ಲಿಸಿ ಅಪಮಾನ ಮಾಡಿದ್ದು, ವಿಡಿಯೊ ವೈರಲ್ ಆಗಿದೆ

ಬಾವುಟಕ್ಕೆ ಅವಮಾನ: ಕರ್ನಾಟಕದ ವಾಹನಗಳ ಮೇಲೆ ಕಲ್ಲು ತೂರಾಟ

ಬೆಳಗಾವಿ: ನೆರೆಯ ಮಹಾರಾಷ್ಟ್ರದ ಕೊಲ್ಹಾಪುರ, ಮೀರಜ್ ಹಾಗೂ ಸಾಂಗ್ಲಿ ಮೊದಲಾದ ಕಡೆ ಶಿವಸೇನೆಯ ಕಾರ್ಯಕರ್ತರು ಕರ್ನಾಟಕದ ನೋಂದಣಿಯ ವಾಹನಗಳ ಮೇಲೆ ಕಲ್ಲುತೂರಾಟ ನಡೆಸಿದ್ದಾರೆ. ಅಲ್ಲಲ್ಲಿ ವಾಹನಗಳನ್ನು ತಡೆದು ಕೇಸರಿಬಣ್ಣ ಹಚ್ಚಿದ್ದಾರೆ. ಕನ್ನಡಿಗರ ಹೋಟೆಲ್ ಮತ್ತು ಅಂಗಡಿಗಳನ್ನು ಬಂದ್ ಮಾಡಿಸಿದ್ದಾರೆ.

ಬೆಂಗಳೂರಿನಲ್ಲಿ ಶಿವಾಜಿ ಪ್ರತಿಮೆಗೆ ಅವಮಾನ ಖಂಡಿಸಿ ಪ್ರತಿಭಟನೆ ನೆಪದಲ್ಲಿ, ಕನ್ನಡಿಗರಿಗೆ ತೊಂದರೆ ನೀಡಿದ್ದಾರೆ ಎಂದು ಆರೋಪಿಸಲಾಗಿದೆ.

ಕೊಲ್ಹಾಪುರದಲ್ಲಿ ಕನ್ನಡ ಬಾವುಟಕ್ಕೆ ಕೆಲವರು ಬೆಂಕಿಹಚ್ಚಿದ್ದಾರೆ. ಕನ್ನಡ ಬಾವುಟ ಮೇಲೆ ನಾಯಿ ಕೂರಿಸಿ, ಚಪ್ಪಲಿ ಇಟ್ಟು ಅವಮಾನ ಮಾಡಿದ್ದು,ಇದರ ವಿಡಿಯೊಗಳು ವೈರಲ್ ಆಗಿವೆ. ಇದರಿಂದ ಅಲ್ಲಿರುವ ಹಾಗೂ ಆ ರಾಜ್ಯದ ಗಡಿಯಲ್ಲಿರುವ ಕನ್ನಡ ಭಾಷಿಕರು ಆತಂಕಕ್ಕೆ ಒಳಗಾಗಿದ್ದಾರೆ.

'ಮಹಾರಾಷ್ಟ್ರದಲ್ಲಿರುವ ಕನ್ನಡಿಗರಿಗೆ ರಕ್ಷಣೆ ನೀಡಬೇಕು' ಎಂದು ಆಗ್ರಹಿಸಿ ನಗರ, ಜಿಲ್ಲೆಯ ವಿವಿಧೆಡೆ ಕನ್ನಡ ಪರ ಹೋರಾಟಗಾರರು ಪ್ರತಿಭಟನೆ ನಡೆಸಿದರು.

ಬೆಳಗಾವಿಯಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆ ಭಗ್ನ ಮಾಡಿರುವ ಘಟನೆ ಅಕ್ಷಮ್ಯ, ಖಂಡನೀಯ. ಹದ್ದು ಮೀರಿದ ವರ್ತನೆ ಸಹಿಸಲು ಸಾಧ್ಯವಿಲ್ಲ

ಬಿ.ಎಸ್.ಯಡಿಯೂರಪ್ಪ, ಶಾಸಕ

ಸಂಗೊಳ್ಳಿ ರಾಯಣ್ಣ ಪ್ರತಿಮೆ ಭಗ್ನಗೊಳಿಸಿರುವ ಕೃತ್ಯ ಖಂಡನೀಯ. ಕಾನೂನು ಸುವ್ಯವಸ್ಥೆಗೆ ಧಕ್ಕೆ ತಂದವರ ವಿರುದ್ಧ ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮತೀಯ ಗೂಂಡಾಗಿರಿಯನ್ನು ಪ್ರೋತ್ಸಾಹಿಸಿದ್ದರ ಪರಿಣಾಮ ಬೆಳಗಾವಿಯಲ್ಲಿ ಸಂಗೊಳ್ಳಿ ರಾಯಣ್ಣನ ಪ್ರತಿಮೆಯ ಭಗ್ನ ಮತ್ತು ದಾಂದಲೆ ನಡೆದಿದೆ

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ನಮ್ಮವರೂ ಕಲ್ಲು ತೂರಬೇಕು ಎಂದು ಹೇಳುವುದಿಲ್ಲ. ಆದರೆ, ಪರಿಸ್ಥಿತಿ ವಿಕೋಪಕ್ಕೆ ಹೋದಾಗ ನ್ಯೂಟನ್‌ನ ಮೂರನೇ ನಿಯಮ ಅನುಸರಿಸಲೇ ಬೇಕಾಗುತ್ತದೆ. ಇದನ್ನು ಎಂಇಎಸ್‌ನವರು ಅರ್ಥ ಮಾಡಿಕೊಳ್ಳಬೇಕು

ಸಿ.ಸಿ.ಪಾಟೀಲ
ಲೋಕೋಪಯೋಗಿ ಸಚಿವ

ಎಂಇಎಸ್ ನಿಷೇಧಿಸಲು ಆಗ್ರಹ

ಬೆಂಗಳೂರು: ಮಹಾರಾಷ್ಟ್ರದಲ್ಲಿ ಕನ್ನಡ ಬಾವುಟ ಸುಟ್ಟು, ಕನ್ನಡಿಗರ ಹಾಗೂ ಕರ್ನಾಟಕದವರಿಗೆ ಸೇರಿದ ವಾಹನಗಳ ಮೇಲೆ ದಾಳಿ ಮಾಡಿ ಪುಂಡಾಟ ನಡೆಸುತ್ತಿರುವ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಬಗ್ಗೆ ಎಲ್ಲೆಡೆ ಆಕ್ರೋಶ ವ್ಯಕ್ತವಾಗುತ್ತಿದೆ.

ಇದೇ ವಿಷಯವಾಗಿ ನೆಟ್ಟಿಗರು ಸಾಮಾಜಿಕ ಜಾಲತಾಣಗಳಲ್ಲಿ ಎಂಇಎಸ್ ನಡೆಯನ್ನು ವ್ಯಾಪಕವಾಗಿ ಖಂಡಿಸಿದ್ದಾರೆ. ಅದರಲ್ಲೂ #BanMES ಹ್ಯಾಶ್ ಟ್ಯಾಗ್ ಟ್ವಿಟರ್‌ನಲ್ಲಿ ನಂ.1 ಟ್ರೆಂಡಿಂಗ್ ಆಗಿತ್ತು.

ಇದೇ ವಿಷಯವಾಗಿ ಸುಮಾರು 43 ಸಾವಿರ ಟ್ವೀಟ್‌ಗಳು ರಾತ್ರಿಯ ವೇಳೆಗೆ ಹೊರಬಿದ್ದಿದ್ದವು.

ಪ್ರಧಾನಿ ಮಧ್ಯಪ್ರವೇಶಕ್ಕೆ ಠಾಕ್ರೆ ಒತ್ತಾಯ

ಪ್ರಜಾವಾಣಿ ವಾರ್ತೆ

ಮುಂಬೈ: ಬೆಂಗಳೂರಿನ ಸ್ಯಾಂಕಿ ಟ್ಯಾಂಕ್ ರಸ್ತೆಯಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆಗೆ ಮಸಿ ಬಳಿದಿರುವುದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ಈ ವಿಚಾರದಲ್ಲಿ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಒತ್ತಾಯಿಸಿದ್ದಾರೆ. ಅಲ್ಲದೆ, ಮಹಾರಾಷ್ಟ್ರ ಏಕೀಕರಣ ಸಮಿತಿಗೆ ತನ್ನ ಬೆಂಬಲವನ್ನು ಮಹಾರಾಷ್ಟ್ರ ಸರ್ಕಾರವು ಪುನರುಚ್ಚರಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	1,882	1,657
ಹಾರಂಗಿ	2,859	2,853.78	74	204
ಕಬಿನಿ	2,284	2,283.51	990	700
ಹೇಮಾವತಿ	2,922	2,912.05	433	2,540
ಲಿಂಗನಮಕ್ಕಿ	1,819	1,810.10	1,001	-
ಸೂಪಾ (ಮೀ)	564	553.61	180	3,126
ಮಾಣಿ	594.36	586	-	-
ತುಂಗಭದ್ರಾ	1,633	1,632.80	3,989	6,461
ಮಲಪ್ರಭಾ	2,079.50	2,076.86	-	1,369
ಘಟಪ್ರಭಾ	2,175	2,166.16	170	170
ಭದ್ರಾ	186	186	1,057	1,057
ಆಲಮಟ್ಟಿ (ಮೀ)	519.60	519.26	3,654	9,522
ನಾರಾಯಣಪುರ (ಮೀ)	492.25	491.48	8,077	7,945

*ನೆಲಮಟ್ಟದಿಂದ

ಶಿವಾಜಿ ಪ್ರತಿಮೆಗೆ ಮಸಿ: ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಯಾಂಕಿ ರಸ್ತೆಯ ಭಾಷ್ಯಂ ವೃತ್ತದಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ಸ್ಮಾರಕದ ಪ್ರತಿಮೆಗೆ ಕಿಡಿಗೇಡಿಗಳು ಮಸಿ ಬಳಿದಿದ್ದು, ಈ ಬಗ್ಗೆ ಸದಾಶಿವನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಸ್ಯಾಂಕಿ ಕೆರೆಗೆ ಹೊಂದಿಕೊಂಡಿರುವ ಉದ್ಯಾನದಲ್ಲಿ ಶಿವಾಜಿ ಪ್ರತಿಮೆ ಇದೆ. ಗುರುವಾರ ರಾತ್ರಿ ಕಿಡಿಗೇಡಿಗಳು ಉದ್ಯಾನದೊಳಗೆ ನುಗ್ಗಿ ಪ್ರತಿಮೆಗೆ ಮಸಿ ಬಳಿದಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಅವರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಕೇಂದ್ರ ವಿಭಾಗದ ಡಿಸಿಪಿ ಎಂ.ಎನ್. ಅನುಚೇತ್ ಹೇಳಿದರು.

'ಘಟನೆ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿ ಪರಿಶೀಲಿಸಿದ್ದರು. ಸದ್ಯ ಸ್ಥಳದಲ್ಲಿ ಬಿಗಿ ಭದ್ರತೆ ಇದೆ. ಸಾರ್ವಜನಿಕರು ಯಾವುದೇ ಗಾಳಿ ಸುದ್ದಿಗಳಿಗೆ ಕಿವಿಗೂಡಬಾರದು' ಎಂದೂ ಅವರು ತಿಳಿಸಿದರು.

ಎರಡು ಗುಂಪುಗಳ ನಡುವೆ ವೈಷಮ್ಯಕ್ಕೆ ಪ್ರಚೋದನೆ (ಐಪಿಸಿ 153–ಎ) ಹಾಗೂ ಸಾರ್ವಜನಿಕರ ಆಸ್ತಿಗೆ ನಷ್ಟ ಉಂಟು ಮಾಡಿದ (ಐಪಿಸಿ 427) ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದೂ ಅನುಚೇತ್ ಮಾಹಿತಿ ನೀಡಿದರು.

ಘಟನೆ ಬಗ್ಗೆ ಟ್ವೀಟ್ ಮಾಡಿರುವ ಸಚಿವೆ ಶಶಿಕಲಾ ಜೊಲ್ಲೆ, 'ಬೆಂಗಳೂರಿನಲ್ಲಿ ಹಿಂದೂ ಸಾಮ್ರಾಟ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆಗೆ ಕಿಡಿಗೇಡಿಗಳು ಮಸಿ ಬಳಿದಿರುವ ಘಟನೆ ಖಂಡನೀಯ. ತಾಯ್ನಾಡಿನ ರಕ್ಷಣೆಗಾಗಿ ಹಾಗೂ ಹಿಂದೂಸ್ಥಾನವನ್ನು ಒಗ್ಗೂಡಿಸಲು ಶ್ರಮಿಸಿದ ಹೆಮ್ಮೆಯ ನಾಯಕ ಶಿವಾಜಿ ಮಹಾರಾಜರು. ಆದರೆ, ಇಂತಹ ಅಪ್ರತಿಮ ವೀರರ ಪ್ರತಿಮೆಗೆ ಮಸಿ ಬಳಿದಿರುವುದು ಆಪಾದನೀಯ' ಎಂದಿದ್ದಾರೆ.

ಗಣ್ಯರ ನಮನ: ಜಾಲಪ್ಪ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಹಿರಿಯ ನಾಯಕ ಮತ್ತು ಕೇಂದ್ರದ ಮಾಜಿ ಸಚಿವ ಆರ್.ಎಲ್. ಜಾಲಪ್ಪ ಅವರ ಅಂತ್ಯಕ್ರಿಯೆ ಸಕಲ ಸರ್ಕಾರಿ ಗೌರವಗೊಳೊಂದಿಗೆ ನಗರದ ಆರ್‌ಎಲ್‌ಜೆ ಐಟಿ ಕ್ಯಾಂಪಸ್‌ನಲ್ಲಿ ಈಡಿಗ ಸಮುದಾಯದ ಸಂಪ್ರದಾಯದಂತೆ ಶನಿವಾರ ನಡೆಯಿತು.

ಜಾಲಪ್ಪ ಅವರ ಹಿರಿಯ ಮಗ ಜೆ. ನರಸಿಂಹಸ್ವಾಮಿ ಸಂಜೆ 5ಕ್ಕೆ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿದರು. ಕಿರಿಯ ಮಗ ಜೆ.ರಾಜೇಂದ್ರ ಅವರಿಗೆ ರಾಷ್ಟ್ರಧ್ವಜ ಹಸ್ತಾಂತರಿಸಲಾಯಿತು.

ಸರ್ಕಾರದ ಪರವಾಗಿ ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್ ಭಾಗವಹಿಸಿದ್ದರು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ಹಾಗೂ ಜಾಲಪ್ಪ ಅವರ ಒಡನಾಡಿ ಎಸ್.ಎಂ.ಕೃಷ್ಣ, ಜಾಲಪ್ಪ ಅವರ ಕುಟುಂಬದ ಸದಸ್ಯರು, ಅಭಿಮಾನಿಗಳು, ಕಾಲೇಜಿನ ವಿದ್ಯಾರ್ಥಿಗಳು ಸೇರಿದಂತೆ ನೂರಾರು ಜನರು ಅಂತ್ಯಕ್ರಿಯೆ ಸಂದರ್ಭದಲ್ಲಿ ಹಾಜರಿದ್ದರು.

ದೊಡ್ಡಬಳ್ಳಾಪುರದಲ್ಲಿ ಶನಿವಾರ ಜಾಲಪ್ಪ ಅವರ ಪಾರ್ಥಿವಶರೀರಕ್ಕೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಂತಿಮ ನಮನ ಸಲ್ಲಿಸಿದರು

ಕೋಲಾರದ ಆಸ್ಪತ್ರೆಯಿಂದ ಶುಕ್ರವಾರ ರಾತ್ರಿ ಸ್ವಗ್ರಾಮ ತೂಬಗೆರೆಯ ಜಾಲಪ್ಪ ಅವರ ನಿವಾಸಕ್ಕೆ ಪಾರ್ಥಿವ ಶರೀರ ತರಲಾಗಿತ್ತು. ಬೆಳಿಗ್ಗೆ ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ನಂತರ ನಗರದ ಪ್ರಮುಖ ಬೀದಿಗಳಲ್ಲಿ ಅಂತಿಮಯಾತ್ರೆ ನಡೆಯಿತು. ಆರ್‌ಎಲ್‌ಜೆಐಟಿ ಕಾಲೇಜಿನ ಜಾಲಪ್ಪ ಕಲಾಮಂದಿರದಲ್ಲಿ ಜನರು ಅಂತಿಮ ನಮನ ಸಲ್ಲಿಸಿದರು.

ಗಣ್ಯರ ಅಂತಿಮ ನಮನ: ಸಂಸದ ಬಿ.ಎನ್.ಬಚ್ಚೇಗೌಡ, ಜಿಲ್ಲಾ ಉಸ್ತುವಾರಿ ಸಚಿವ ಎಂ.ಟಿ.ಬಿ ನಾಗರಾಜ್, ಶಾಸಕರಾದ ಟಿ.ವೆಂಕಟರಮಣಯ್ಯ, ಜಿ.ಟಿ.ದೇವೇಗೌಡ, ಮಾಜಿ ಸಚಿವರಾದ ಪಿ.ಜಿ.ಆರ್.ಸಿಂಧ್ಯಾ, ಡಾ.ಎಚ್‌.ಸಿ. ಮಹಾದೇವಪ್ಪ, ಮಾಜಿ ಶಾಸಕ ಆರ್.ಜಿ. ವೆಂಕಟಾಚಲಯ್ಯ, ಅಂಜನಮೂರ್ತಿ ಸೇರಿದಂತೆ ಹಲವಾರು ಗಣ್ಯರು ಗೌರವ ಸಲ್ಲಿಸಿದರು.

'ನಾನೇನು ತಪ್ಪು ಮಾಡಿದ್ದೇನೆ?'

ಪ್ರಜಾವಾಣಿ ವಾರ್ತೆ

ಮೈಸೂರು: 'ನಾನೇನು ತಪ್ಪು ಮಾಡಿದ್ದೇನೆ? ರಂಗಾಯಣಕ್ಕೆ ಕಾಲಿಟ್ಟಾಗಿಂದ ಕೋಮುವಾದಿ ಎಂದು ಜರಿಯುತ್ತಿದ್ದರೆ, ರಾಜಕಾರಣಿಗಳ ಮರ್ಜಿಯಿಂದ ಬಂದವನು ಎಂದು ಅವಮಾನಿಸಿದರೆ ತಾಳ್ಮೆ ಕೆಡುವುದಿಲ್ಲವೇ? ನಾನೂ ಮನುಷ್ಯನಲ್ಲವೇ?' ಎಂದು ರಂಗಾಯಣದ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಪ್ರಶ್ನಿಸಿದ್ದಾರೆ.



ಅಡ್ಡಂಡ ಕಾರ್ಯಪ್ಪ

ಬಹುರೂಪಿ ಉತ್ಸವಕ್ಕೆ ಚಕ್ರವರ್ತಿ ಸೂಲಿಬೆಲೆ, ಮಾಳವಿಕಾ ಅವಿನಾಶ್ ಅವರನ್ನು ಆಹ್ವಾನಿಸಿರುವುದಕ್ಕೆ ವಿರೋಧ, ನಂತರ ನಡೆದಿರುವ ವಾಗ್ವಾದಗಳಿಗೆ ಅವರು ಪ್ರತಿಕ್ರಿಯಿಸಿದ್ದಾರೆ.

'ಕಳೆದ ವರ್ಷ 'ಗಾಂಧಿಪಥ' ನಾಟಕೋತ್ಸವದಲ್ಲೂ ಗಲಾಟೆ ಮಾಡಿದ್ದ ಅದೇ ಗುಂಪು`ಕಾರ್ಯಪ್ಪ ವಜಾ ಆಗಬೇಕು' ಎಂದು ನನ್ನ ಭಾವಚಿತ್ರಕ್ಕೆ ಚಪ್ಪಲಿಯಲ್ಲಿ ಹೊಡೆದರೂ ಬಹುರೂಪಿ ಯಶಸ್ವಿಯಾಯಿತು' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

'ಕೊರೊನಾ ಕಾಲದಲ್ಲಿ ಸಾವಿರಾರು ಜನರಿಗೆ ಆಹಾರ ವಿತರಿಸಿದರೆಂದು ಮಾಳವಿಕಾ ಅವಿನಾಶ್, ನದಿ-ಕೆರೆ ಶುದ್ಧೀಕರಣದ ಕಾಯಕದ ವಿಚಾರಕ್ಕೆ ಚಕ್ರವರ್ತಿ ಸೂಲಿಬೆಲೆ ಅವರನ್ನು ಆಹ್ವಾನಿಸಲಾಗಿದೆ. ನಾ. ಡಿಸೋಜಾ, ಎಚ್.ಎಸ್. ವೆಂಕಟೇಶ್‌ಮೂರ್ತಿ, ತುಳಸೀಗೌಡ, ಮಾತಾ ಮಂಜಮ್ಮ ಜೋಗತಿ, ಸುರೇಶ್ ಹೆಬ್ಳೀಕರ್, ಟಿ.ಎಸ್. ನಾಗಾಭರಣ, ವಿಜಯಲಕ್ಷ್ಮಿ ಬಾಳೇಕುಂದ್ರಿ ಇದ್ದಾರೆ. ಇಲ್ಲಿ ಎಡ-ಬಲ ಎಲ್ಲಿ ಕಂಡಿರಿ?' ಎಂದು ಪ್ರಶ್ನಿಸಿದ್ದಾರೆ. 'ಸಂಘ ಪರಿವಾರದವನಾದರೆ ಏನು ತೊಂದರೆ? ಸರ್ಕಾರ ಅವರಿಗೆ ಇಷ್ಟವಾದವರನ್ನು ನೇಮಿಸುತ್ತವೆ. ಅತಿಥಿಗಳು ಬರಬಾರದೆಂಬ ಏಕತ್ವ ವಾದವೇಕೆ? ಎಂದು ಪ್ರಶ್ನಿಸಿದ್ದಾರೆ.

ಆಂಧ್ರ - ಕರ್ನಾಟಕ ನಡುವಣ ಗಡಿ ಗುರುತಿಸುವಿಕೆ ಕಾರ್ಯ

ಉಭಯ ರಾಜ್ಯಗಳ ಒಪ್ಪಿಗೆ ಮೇಲೆ ಇತ್ಯರ್ಥ

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಕರ್ನಾಟಕ ಮತ್ತು ಆಂಧ್ರಪ್ರದೇಶ ನಡುವಿನ ಅಂತರರಾಜ್ಯ ಗಡಿ ವಿವಾದವನ್ನು ಉಭಯ ರಾಜ್ಯಗಳ ಒಪ್ಪಿಗೆ ಮೇರೆಗೆ ಬಗೆಹರಿಸಲಾಗಿದೆ' ಎಂದು ಆಂಧ್ರಪ್ರದೇಶದ 'ಜಿಯೊ ಸ್ಪಾಟಿಕಲ್ ಡೇಟಾ ಸೆಂಟರ್' (ಎಪಿ ಆ್ಯಂಡ್ ಟಿಜಿಡಿಸಿ) ಬಳ್ಳಾರಿ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಭೂದಾಖಲೆಗಳ ಉಪನಿರ್ದೇಶಕರಿಗೆ (ಡಿಡಿಎಲ್‌ಆರ್) ಬರೆದಿರುವ ಪತ್ರದಲ್ಲಿ ತಿಳಿಸಿದೆ.

ಉಭಯ ರಾಜ್ಯಗಳ ಪ್ರತಿಪಾದನೆಯನ್ನು ಆಧರಿಸಿ ಸರ್ವಸಮ್ಮತವಾಗಿ ಗಡಿಯನ್ನು ಗುರುತಿಸಲಾಗಿದೆ ಎಂದು ಡಿಸೆಂಬರ್ 10ರಂದು ಬರೆದಿರುವ ಪತ್ರದಲ್ಲಿ ಸ್ಪಷ್ಟಪಡಿಸಲಾಗಿದೆ. ಇದರೊಂದಿಗೆ ಗಡಿ ಗುರುತಿಸುವ ಕಾರ್ಯದ ಪುನರ್ ಪರಿಶೀಲನೆ ಪ್ರಶ್ನೆಗೆ ವಿರಾಮ ಬಿದ್ದಂತಾಗಿದೆ. ಕರ್ನಾಟಕ ಹಾಗೂ ಆಂಧ್ರ ನಡುವಿನ ಅಂತರರಾಜ್ಯ ಗಡಿಯನ್ನು ನಿಖರವಾಗಿ ಗುರುತಿಸಿಲ್ಲ ಎಂದು ಅಕ್ರಮ ಗಣಿಗಾರಿಕೆ ವಿರೋಧಿ ಹೋರಾಟಗಾರ ಟಪಾಲ್ ಗಣೇಶ್ ಆಕ್ಷೇಪ ಎತ್ತಿದ್ದು, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಜಿಲ್ಲಾಧಿಕಾರಿಗಳ ತಾಂತ್ರಿಕ ಸಲಹೆಗಾರರಾದ ಡಿಡಿಎಲ್‌ಆರ್, ಹೈದರಾಬಾದ್‌ನಲ್ಲಿರುವ ಡೆಪ್ಯುಟಿ ಸರ್ವೇಯರ್ ಜನರಲ್‌ಗೆ ಪತ್ರ ಬರೆದಿದ್ದರು.

ಸರ್ವೇಯರ್ ಜನರಲ್ ಆಫ್ ಇಂಡಿಯಾ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ವರದಿಯಲ್ಲಿ ಗಡಿ ಗುರುತಿಸುವಿಕೆಯಲ್ಲಿ ಲೋಪವಾಗಿದ್ದರೆ, ಪರಿಶೀಲಿಸಲಾಗುವುದು ಎಂದಿದೆ

ಟಪಾಲ್ ಗಣೇಶ್, ಅಕ್ರಮ ಗಣಿಗಾರಿಕೆ ವಿರೋಧಿ ಹೋರಾಟಗಾರ

'ಗಡಿ ಗುರುತಿಸುವಾಗ ಮೂಲ ಗಡಿ ಕಲ್ಲುಗಳನ್ನು ಪರಿಗಣಿಸಿಲ್ಲ. 63ರಿಂದ 67ನೇ ಸಂಖ್ಯೆಯ ಗಡಿ ಕಲ್ಲುಗಳನ್ನು ಪಲ್ಲಟ ಮಾಡಲಾಗಿದೆ. ಕರ್ನಾಟಕದ ಕಡೆ 400 ಮೀಟರ್ ವ್ಯತ್ಯಾಸವಾಗಿದೆ. ಇದರಿಂದಾಗಿ ಅಕ್ರಮ ಗಣಿಗಾರಿಕೆ ಸಕ್ರಮಗೊಳ್ಳಲಿದೆ' ಎಂದು ಟಪಾಲ್ ಗಣೇಶ್ ಆಕ್ಷೇಪ ಎತ್ತಿದ್ದರು. ಈ ಅಂಶವನ್ನು ಡಿಡಿಎಲ್‌ಆರ್ ಪತ್ರದಲ್ಲಿ ಪ್ರಸ್ತಾಪ ಮಾಡಿದ್ದರು.

ಗಡಿ ಗುರುತಿಸುವಲ್ಲಿ ಲೋಪವಾಗಿದೆ ಎಂದು ಟಪಾಲ್ ಗಣೇಶ್, ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದರು. ಗಡಿ ಗುರುತಿಸುವ ಕಾರ್ಯದಲ್ಲಿ ಲೋಪವಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿ, ಡಿಡಿಎಲ್‌ಆರ್ ಅವರಿಂದ ಎರಡು ಪತ್ರಗಳು ಸರ್ವೆ ಆಫ್ ಇಂಡಿಯಾಕ್ಕೆ ಹೋದ ಬಳಿಕ, ಉತ್ತರ ಬಂದಿದೆ. ಇದರಿಂದ ಅಂತರರಾಜ್ಯ ಗಡಿ ಗುರುತಿಸುವಿಕೆ ಕಾರ್ಯ ಅಂತಿಮಗೊಂಡಂತಾಗಿದೆ.

ಆರ್‌ಟಿಐ ಅರ್ಜಿ ವಿಲೇವಾರಿ

ಗಡಿ ಗುರುತಿಸುವಿಕೆಗೆ ಅನುಸರಿಸಿದ ಮಾನದಂಡಗಳು, ಯಾವ ಸ್ಕೆಚ್, ನಕ್ಷೆಗಳ ಆಧರಿಸಿ ಗಡಿ ಗುರುತಿಸಲಾಗಿದೆ ಎಂದು ಮಾಹಿತಿ ನೀಡುವಂತೆ ಕೇಳಿ ಟಪಾಲ್ ಗಣೇಶ್ ಸಲ್ಲಿಸಿದ್ದ ಅರ್ಜಿಯನ್ನು ಎಪಿ ಆ್ಯಂಡ್ ಟಿಜಿಡಿಸಿ ವಿಲೇವಾರಿ ಮಾಡಿದೆ.

'ನೀವು ಕೇಳಿರುವ ಮಾಹಿತಿಯು ವರ್ಗೀಕರಣ ಮಾಹಿತಿ ಆಗಿರುವುದರಿಂದ ಆರ್‌ಟಿಐ ಕಾಯ್ದೆಯಡಿ ಕೊಡಲು ಬರುವುದಿಲ್ಲ' ಎಂದು ಸ್ಪಷ್ಟಪಡಿಸಲಾಗಿದೆ.



ಬೆಲೆ ₹30 ಮಾತ್ರ

ವರ್ಷದ ಸಮಗ್ರ ಮಾರ್ಗದರ್ಶಿ

2022

ದಿನದರ್ಶಿಕೆ ಮಾರುಕಟ್ಟೆಯಲ್ಲಿ ಲಭ್ಯ

ಪ್ರತಿಗಳಿಗಾಗಿ ನಿಮ್ಮ ನ್ಯೂಸ್ ಏಜೆಂಟರು, ಪುಸ್ತಕದ ಅಂಗಡಿಗಳು ಅಥವಾ ನಮ್ಮ ಕಚೇರಿಗಳು

ದಿ ಪ್ರಿಂಟರ್ಸ್ (ಮೈಸೂರು) ಪ್ರೈ .ಲಿ., 75, ಎಂ.ಜಿ. ರಸ್ತೆ, ಬೆಂಗಳೂರು-560 001.

ದೂರವಾಣಿ: 080-45557199/226.

ಶಾಖೆಗಳು: ಮೈಸೂರು: 2420532/2420129.

ಹುಬ್ಬಳ್ಳಿ: 2372081/2372516.

ಮಂಗಳೂರು: 2215852/2218334. ಕಲಬುರಗಿ: 255539/221808.

ದಾವಣಗೆರೆ: 230846/255048 ಸಂಪರ್ಕಿಸಿ

ಮಳೆಬಿಲ್ಲ ಮರೆಯಿಂದ...

ದಾದಾಪೀರ್ ಜೈಮನ್

ನಮ್ಮ ಬೆಂಗಳೂರು ಮತ್ತೊಂದು ಕ್ವೀರ್ ಪ್ರೈಡ್ ಮಾರ್ಚ್‌ನ ಹೊಸ್ತಿಲಲ್ಲಿದೆ. ಮಹಾನಗರ ಇದನ್ನು 'ಹೆಮ್ಮೆಯ ನಡಿಗೆ' ಎಂದು ಕರೆಯುತ್ತದೆ. ಸಲಿಂಗಕಾಮ ಅಪರಾಧವಲ್ಲ ಎಂದು (ಸೆಕ್ಷನ್ 377ಅನ್ನು ಭಾಗಶಃ ರದ್ದುಗೊಳಿಸಿ) ಸುಪ್ರೀಂ ಕೋರ್ಟ್ ತೀರ್ಪು ನೀಡಿ ಮೂರು ವರ್ಷಗಳೇ ಗತಿಸಿವೆ. ಅಲ್ಲಿಂದ ಇಲ್ಲಿಯವರೆಗೆ ಕ್ವೀರ್ ಸಮುದಾಯವನ್ನು ಸಮಾಜ ನೋಡುವ ದೃಷ್ಟಿಕೋನ ಬದಲಾಗಿದೆಯೇ? ಸಾಹಿತ್ಯ, ರಂಗಭೂಮಿ, ಸಿನಿಮಾ ಮುಂತಾದ ಕಲಾ ಮಾಧ್ಯಮಗಳಲ್ಲಿ ಕ್ವೀರ್ ಸಮುದಾಯದ ಕಥೆಗಳನ್ನು ಹೇಳುವಲ್ಲಿ ಎಷ್ಟರ ಮಟ್ಟಿಗೆ ಪ್ರಗತಿಯಾಗಿದೆ ಎಂದು ಯೋಚಿಸಿದರೆ ದಾರಿ ತುಂಬಾ ದೂರ ಇದೆ ಎಂದೇ ಹೇಳಬೇಕಾದೀತು.

'ತೀರ್ಪು ಬಂದಿತಲ್ಲ. ಇನ್ನು ಈ ರೀತಿಯ ಬಣ್ಣಬಣ್ಣದ ಉಡುಗೆಗಳನ್ನು ತೊಟ್ಟು ಈ ಪ್ರೈಡ್ ಮಾರ್ಚ್ ನಡೆಸುವ ಅವಶ್ಯಕತೆಯಾದರೂ ಏನಿದೆ? ನೀವೂ ಇನ್ನು ಮೇಲೆ ಎಲ್ಲರಂತೆ ಸಹಜವಾಗಿ ಇರಬಹುದಲ್ಲ' ಎನ್ನುವ ಮಾತನ್ನು ಮತ್ತೆ ಮತ್ತೆ ಕೇಳುತ್ತಿರುತ್ತೇವೆ. ಭಾರತ ಸೇರಿದಂತೆ ಜಗತ್ತಿನ ಎಲ್ಲಾ ಪ್ರಮುಖ ನಗರಗಳಲ್ಲಿ ಈ ಪ್ರೈಡ್ ಮೆರವಣಿಗೆಗಳು ಯಾಕೆ ನಡೆಯುತ್ತವೆ? ಬೇರೆ ಬೇರೆ ದೇಶಗಳಲ್ಲಿ ಅವರನ್ನು ಒಪ್ಪಿಕೊಂಡು ಬಹಳ ವರ್ಷಗಳೇ ಆಗಿಹೋದವಲ್ಲ! ಪ್ರೈಡ್ ಮಾರ್ಚ್‌ಗಳನ್ನು ನಡೆಸುವ ಮುಖ್ಯ ಉದ್ದೇಶ ನಾಗರಿಕ ಸಮಾಜಕ್ಕೆ 'ನಿಮ್ಮಂತೆಯೇ ನಾವೂ ಇದ್ದೇವೆ; ಸಹಜವಾಗಿ. ನಮ್ಮ ಅಸ್ತಿತ್ವವೂ ನಿಮ್ಮಂತೆಯೇ ಮುಖ್ಯ' ಎಂಬ ಸಂದೇಶವನ್ನು ದಾಟಿಸುವುದಾಗಿದೆ. ಸಮಾಜದ ಒತ್ತಡಕ್ಕೆ ಹೆದರಿ ಹಲವು ಸಂದೇಹಗಳಿಂದ ತನ್ನ ಇರುವಿನ ಬಗ್ಗೆಯೇ ಅಸ್ತಿತ್ವದ ಬಗ್ಗೆಯೇ ಕೀಳರಿಮೆ ಹೊಂದಿರುವ ಜನರಿಗೆ ಈ ಪ್ರೈಡ್ ಮಾರ್ಚ್ ಅಪಾರ ಆತ್ಮವಿಶ್ವಾಸ ಮತ್ತು ಅಪರಿಮಿತ ಧೈರ್ಯವನ್ನು ಕೊಡುತ್ತದೆ.

ಕ್ವೀರ್ ಸಮುದಾಯದ ಕುರಿತು ಬಹಳ ಕೆಲಸ ಮಾಡಿರುವ ಕನ್ನಡದ ಹಿರಿಯ ಕವಿಯೊಬ್ಬರ ಬಳಿ ಮಾತನಾಡುತ್ತಿದ್ದಾಗ ಅವರು ಮಾತಿನ ಭರದಲ್ಲಿ ಎಂಬಂತೆ 'ಏನೋಪಾ, ಈ ಕ್ವೀರ್ ಸಮುದಾಯದವರು ಅವರ ಲೈಂಗಿಕ ಅಸ್ಮಿತೆಯನ್ನು ಮುಂದೆಮಾಡಿಯೇ ಇಡೀ ಜೀವನ ಕಳೆದುಬಿಡ್ತಾರೆ. ಅದು ಯಾಕಾಗಿ ಅಷ್ಟು ಮುಖ್ಯ ಆಗಬೇಕು. ಅವರೂ ಕೂಡ ಎಲ್ಲರಂತೆ ಯಾಕಿರಬಾರದು' ಎನ್ನುವ ಪ್ರಶ್ನೆಯನ್ನು ಮುಂದಿಟ್ಟರು. ಆ ಕ್ಷಣಕ್ಕೆ ನನಗೆ ಏನೆಂದು ಉತ್ತರಿಸಬೇಕೆಂದು ಹೊಳೆಯಲಿಲ್ಲ. ಈಗ ಅನಿಸುವ ಪ್ರಕಾರ ಒಬ್ಬ ದಲಿತ, ಪುರುಷ ಪ್ರಾಧಾನ್ಯ ವ್ಯವಸ್ಥೆಯ ಕಪಿಮುಷ್ಟಿಯಿಂದ ತುಳಿತಕ್ಕೊಳಗಾಗುತ್ತಲೇ ಇರುವ ಮಹಿಳೆ ಮತ್ತು ಇತರೆ ತಳಸಮುದಾಯಗಳಿಂದ ಬಂದ ವ್ಯಕ್ತಿ ಜೀವನಪೂರ್ತಿ ಹೋರಾಡುವುದು ಅವರಿಗೆ ದಕ್ಕಬೇಕಾದ ಸಮಾನತೆಯ ವಿಷಯಕ್ಕೆ ಅಲ್ಲವೇ? ಆ ನಿಟ್ಟಿನಲ್ಲಿ ನೋಡಿದಾಗ ಕ್ವೀರ್ ಸಮುದಾಯ ಇನ್ನೂ ತನ್ನ ಲೈಂಗಿಕ ಅಸ್ಮಿತೆಯನ್ನು ಮುನ್ನೆಲೆಗೆ ತರುತ್ತಿದೆಯೆಂದರೆ ಅದಕ್ಕೆ ಸಲ್ಲಬೇಕಾದ ಸಮತೆಯ ಹೂವು ಕೈಗೆಟುಕಿಲ್ಲ ಅರ್ಥವಲ್ಲವೇ?

ನಾನು ಬರೆದ 'ಆವರಣ' ಕಥೆಯನ್ನು ಓದಿ ಓದುಗರೊಬ್ಬರು ಕರೆ ಮಾಡಿದ್ದರು. ಕೋವಿಡ್ ಸಾಂಕ್ರಾಮಿಕದ ಕಷ್ಟ ಕಾಲದಲ್ಲಿ ಗಂಡಿದ್ದವನು ಹೆಣ್ಣಾಗಿ ಪರಿವರ್ತನೆಯಾದ ಅನಂತು ಅನ್ನುವ ಪಾತ್ರವೊಂದು ಬಾಲ್ಯದಲ್ಲಿ ತಾನು ಬಿಟ್ಟುಬಂದಿದ್ದ ತನ್ನ ಅಣ್ಣನ ಮನೆಗೆ ಮರಳುವ ಎಳೆಯೊಂದು ಕಥೆಯಲ್ಲಿದೆ. ಅದಕ್ಕೆ ಪ್ರತಿಕ್ರಿಯಿಸುತ್ತಾ ಅವರು ಹೇಳಿದರು: 'ಅಲ್ಲಾ ಸರ್, ಆ ಕಥೆಯ ಅಣ್ಣ, ಅಪ್ಪ, ಅಮ್ಮ ಎಲ್ಲರೂ ಅನಂತು ಅನಂತು ಅಂತ ಪ್ರಾಣಬಿಟ್ಟರು. ಅಣ್ಣ ಅಂತೂ ಕಷ್ಟಪಟ್ಟು ಓದಿ ಸಾಧನೆ ಮಾಡಿದ. ಈ ಅನಂತು ಏನೂ ಆಗಲೇ ಇಲ್ಲವಲ್ಲ ಸರ್? ಕೊನೆಗೆ ಮತ್ತೆ ಅಲ್ಲಿಯೇ ಬಂದುಬಿದ್ದ. ಅವನ ಸಾಧನೆ ಏನು' ಎಂದರು. ಸಮಾಜ ವಿಭಿನ್ನವಾದದ್ದನ್ನು ನಾವು ಒಪ್ಪಿಕೊಳ್ಳಬೇಕೆಂದರೆ ನೀವು ಏನೋ ಮಹತ್ತರವಾದದ್ದನ್ನು ಸಾಧಿಸಿರಲೇಬೇಕು ಎನ್ನುವ ಧೋರಣೆ ಇದು. ಏನನ್ನಾದರೂ ಮಹತ್ತರವಾದದ್ದನ್ನು ಸಾಧಿಸಲು ಕ್ವೀರ್ ಸಮುದಾಯದ ವ್ಯಕ್ತಿಗಳು ಪ್ರಯತ್ನಿಸಿ ಬಳಲಿದ ಅದೆಷ್ಟೋ ಉದಾಹರಣೆಗಳು ನಮ್ಮ ಮುಂದಿವೆ. ಎಲ್ಲರೂ ಅಕ್ಕಯ್ ಪದ್ಮಸಾಲಿ, ರೇವತಿ, ಮಂಜಮ್ಮ ಜೋಗತಿ, ಕರಣ್ ಜೋಹರ್, ಹಿಮಾ ದಾಸ್, ವಸುಧೇಂದ್ರ ಆಗಲು ಸಾಧ್ಯವಿಲ್ಲವಲ್ಲ. ಅವರೂ ನಮ್ಮ ನಿಮ್ಮಂತೆ ಒಂದು ಸಹಜವಾದ ಜೀವನವನ್ನು ನಡೆಸಲು ಸಾಧ್ಯವಾಗಬೇಕಲ್ಲವೇ?

ಇನ್ನೊಂದು ಮುಖ್ಯವಾದ ವಿಷಯ ಭಾಷೆಯ ಬಗೆಗಿನದು. ಯಾವುದೇ ರಾಜಕೀಯ ಪಕ್ಷವಿರಲಿ, ಅದು ತನ್ನ ಎದುರಾಳಿ ಪಕ್ಷವನ್ನು ಜರಿಯಬೇಕಾದರೆ ಸ್ತ್ರೀಕೇಂದ್ರಿತ ಬೈಗುಳಗಳ ಮುಂದುವರಿಕೆಯಾಗಿ ಕ್ವೀರ್ ಸಮುದಾಯದ ಬಗೆಗಿನ ಬೈಗುಳಗಳೂ ಇರುತ್ತವೆ. 'ಕೈಗೆ ಬಳೆ ತೊಟ್ಟುಕೊಂಡಿದ್ದೀಯಾ' ಎಂದು ಬಳಸುವಂತೆಯೇ 'ಷಂಡ' 'ಕೈಲಾಗದವನು' 'ಹೆಣ್ಣಿಗ' ಹೀಗೆ ಪದಪುಂಜಗಳನ್ನು ಬಳಸಲಾಗುತ್ತದೆ. ಇವುಗಳು ಏನನ್ನು ಸೂಚಿಸುತ್ತಿವೆ? ಸಂತಾನೋತ್ಪತ್ತಿ ಮಾಡಲಾಗದವರು ಬದುಕಲು ಯೋಗ್ಯರಲ್ಲ ಎಂಬ ಅರ್ಥವನ್ನಲ್ಲವೇ ಆ ಪದಗಳು ದಾಟಿಸುವುದು? ಇದೇ ಪ್ರಶ್ನೆಯನ್ನು ನಿಜವಾಗಿಯೂ ಎದುರುಗೊಂಡರೆ ಅದಕ್ಕೆ ಉತ್ತರವೇನಿದ್ದೀತು? ಕ್ವೀರ್ ಸಮುದಾಯದ ಜನ ಮಕ್ಕಳನ್ನು ದತ್ತು ತೆಗೆದುಕೊಳ್ಳಬಹುದು. ಬಾಡಿಗೆ ತಾಯ್ತನದ ಮೂಲಕ ತಮ್ಮದೇ ಆದ ಮಕ್ಕಳನ್ನು ಪಡೆಯಬಹುದು. ದತ್ತು ಪಡೆಯುವ ಹಕ್ಕು ಈ ಸಮುದಾಯದ ಜನಕ್ಕೆ ಬಂದರೆ ಅದು ಆ ಮಕ್ಕಳಿಗೆ ಆಸರೆಯಾಗುವುದಿಲ್ಲವೇ?

ಕ್ವೀರ್ ಸಮುದಾಯವು ಇನ್ನೂ ತನ್ನ ಲೈಂಗಿಕ ಅಸ್ಮಿತೆಯನ್ನು ಮುನ್ನೆಲೆಗೆ ತರುತ್ತಿದೆ ಎಂದರೆ ಅದಕ್ಕೆ ಸಲ್ಲಬೇಕಾದ ಸಮತೆಯ ಹೂವು ಇದುವರೆಗೆ ಕೈಗೆಟಕಿಲ್ಲ ಎಂದೇ ಅರ್ಥ

ಕನ್ನಡ ಸಿನಿಮಾರಂಗದಲ್ಲಿ, ಅದರಲ್ಲೂ ಕಮರ್ಷಿಯಲ್ ಸಿನಿಮಾಗಳಲ್ಲಿ, ಕ್ವೀರ್ ಸಮುದಾಯವನ್ನು ಕ್ಯಾರಿಕೇಚರ್ ಮಟ್ಟದಿಂದ ಮೇಲೆ ನೋಡಲೇ ಇಲ್ಲ. ಕಲಾತ್ಮಕ ಸಿನಿಮಾಗಳ ಮಟ್ಟಿಗೆ 'ನಾನು ಅವನಲ್ಲ, ಅವಳು' 'ಹರಿಕಥಾಪ್ರಸಂಗ' ಮುಂತಾದ ಚಿತ್ರಗಳು ತೆರೆಕಂಡರೂ ಅವು ಜನಸಾಮಾನ್ಯರಿಗೆ ತಲುಪಿದ್ದು ಇಲ್ಲವೇ ಇಲ್ಲ. ಆ ನಿಟ್ಟಿನಲ್ಲಿ ಕಮರ್ಷಿಯಲ್ ಸಿನಿಮಾ ಮಾಡುವವರ ಹೊಣೆ ತುಂಬಾ ಮಹತ್ವದ್ದು ಎಂದು ನನಗೆ ಯಾವಾಗಲೂ ಅನಿಸುತ್ತದೆ. ಇದಕ್ಕೆ ಅಪವಾದವೆಂಬಂತೆ ಕನ್ನಡ ರಂಗಭೂಮಿಯಲ್ಲಿ ಹಲವಾರು ಒಳ್ಳೆಯ ಪ್ರಯತ್ನಗಳಾಗಿವೆ. ವಸುಧೇಂದ್ರರ ಮೋಹನಸ್ವಾಮಿಯನ್ನು ರಂಗರೂಪಕ್ಕೆ ತರಲಾಗಿದೆ. ರೇವತಿ ಅವರ ಆತ್ಮಕಥೆ ಆಧರಿಸಿದ 'ಬದುಕು ಬಯಲು' ಪ್ರದರ್ಶನವಾಗಿದೆ. ಬೆಂಗಳೂರು ಥಿಯೇಟರ್ ಕಲೆಕ್ಟಿವ್‌ನವರು ಅಭಿನಯಿಸಿದ ವಿಜಯ್ ತೆಂಡೂಲ್ಕರ್ ನಾಟಕ ಆಧಾರಿತ ಲೆಸ್ಬಿಯನ್ ಪ್ರೇಮಕಥೆ ಉಳ್ಳ 'ಒಂದು ಪ್ರೀತಿಯ ಕಥೆ', ಧೀಮಹಿ ತಂಡದಿಂದ ಪ್ರದರ್ಶನವಾದ 'ಪತಂಗ ಪ್ರಭಾವ', 'ಅಮ್ಮ ಮತ್ತು ಸುಹೇಲ್' ಹೀಗೆ ಹಲವಾರು ನಾಟಕಗಳು ಕ್ವೀರ್ ಕಥೆಗಳನ್ನು ಒಳಗೊಂಡಿದ್ದವು. ಇದು ನಿಜಕ್ಕೂ ಗಮನಾರ್ಹವಾದದ್ದು.

11ನೇ ಪುಟಕ್ಕೆ...

'ಏನಾಗುತ್ತೋ ನೋಡಿಯೇ ಬಿಡೋಣ' ಎನ್ನುವ ಧೈರ್ಯ ಹುಡುಗಿಯರಲ್ಲಿ ಇಂದು ಎದ್ದು ಕಾಣುತ್ತಿದೆ. ತನ್ನ ಗಳಿಕೆಯನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಅವಕಾಶವೂ ಅವಳಿಗೆ ಸಿಕ್ಕಿದೆ. ಹೆಣ್ಣುಮಕ್ಕಳ ಮದುವೆಯ ಕನಿಷ್ಠ ವಯಸ್ಸನ್ನು 21 ವರ್ಷಕ್ಕೆ ಏರಿಸಿರುವುದು ಕೂಡ ಹುಡುಗಿಯರ ಬದಲಾದ ಮನೋಭಾವಕ್ಕೆ ಪೂರಕವಾಗಿದೆ

ಕಲೆ: ಸೂರ್ಯ ಶೆಟ್ಟಿ

ಬಿಂದಾಸ್ ಹುಡ್ಗೀರು

ಪ್ರತಿಭಾ ನಂದಕುಮಾರ್

ನಲವತ್ತು ವರ್ಷಗಳ ಹಿಂದೆ ನಾನು ಬರೆದ 'ನಾವು ಹುಡುಗಿಯರೇ ಹೀಗೆ' ಎನ್ನುವ ಕವನವನ್ನು ಮೊನ್ನೆ ಒಬ್ಬಳು ಹುಡುಗಿ ಓದಿ ಪ್ರತಿಕ್ರಿಯಿಸಿದ ರೀತಿ ಯುಗಪರಿವರ್ತನೆಗೆ ಷರಾ ಬರೆದಂತೆ ಅನ್ನಿಸಿತು. ಪ್ರೀತಿಸಿದ ಹುಡುಗನಿಗೆ ನಿವೇದನೆ ಮಾಡಿಕೊಳ್ಳಲಾಗದ ಅಸಹಾಯಕತೆಯನ್ನು ಅಂದಿನ ಹುಡುಗಿ ತೋಡಿಕೊಂಡಿದ್ದರೆ, ಇಂದಿನ ಹುಡುಗಿ ಹೇಳಿದ್ದು: 'ವಾಟ್ಸ್ ಆ್ಯಪ್‌ನಲ್ಲಿ ಒಂದು ಫಾರ್ವರ್ಡ್ ಮಾಡಿದ್ರೆ ಮುಗೀತು. ಆ ಕಡೆಯಿಂದ ರೆಸ್ಪಾನ್ಸ್ ಬಂದ್ರೆ ಓಕೆ. ಇಲ್ದಿದ್ರೆ ಡಿಲೀಟ್, ಅಷ್ಟೆ. ನಿಮ್ಮ ಕಾಲದವರು ಹಾಕಿಕೊಂಡ ಬೌಂಡರಿಗೂ ನಮ್ಮ ಬೌಂಡರಿಗೂ ತುಂಬಾ ವ್ಯತ್ಯಾಸ ಇದೆ. ನಾವು ನಮ್ಮ ಬೌಂಡರಿನ ವಿಸ್ತಾರ ಮಾಡಿಕೊಂಡಿದ್ದೀವಿ. ಅದಕ್ಕೇ ನಮಗೆ ಹೆಚ್ಚು ಬ್ರೀದಿಂಗ್ ಸ್ಪೇಸ್ ಸಿಗುತ್ತೆ.'

ಹಾಗಾದರೆ ಇಂದಿನ ಹುಡುಗಿಯರು ಹೆಚ್ಚು ಸರಾಗವಾಗಿ ಉಸಿರಾಡುತ್ತಾರಾ? ಅವರು ಹಿಂದಿನವರಂತೆ ಪರಿಸ್ಥಿತಿಗಳಲ್ಲಿ ಸಿಕ್ಕಿಬಿದ್ದು ಉಸಿರುಕಟ್ಟಿದಂತೆ ಬದುಕಬೇಕಾಗಿಲ್ಲವೇ? ಅಕಸ್ಮಾತ್ ಬಿಕ್ಕಟ್ಟಿನ ಸ್ಥಿತಿಗಳನ್ನು ಎದುರಿಸಬೇಕಾದರೂ ಅವರು ಅದರ ಪರ್ಯಾಯ ಪರಿಹಾರಗಳನ್ನು ಸುಲಭವಾಗಿ ಕಂಡುಕೊಳ್ಳುತ್ತಾರೆಯೇ? ಹಿಂದಿನವರಿಗಿಂತ ಅವರಿಗೆ ಹೆಚ್ಚು ಅಭಿಪ್ರಾಯ ಸ್ವಾತಂತ್ರ್ಯ ಸಿಕ್ಕಿದೆಯೇ? ಅಭಿವ್ಯಕ್ತಿ ಸ್ವಾತಂತ್ರ್ಯ ದಕ್ಕಿದೆಯೇ? ಕಾನೂನಿನ ನೆರವು ಇರುವುದರಿಂದ ಇಂದಿನ ಹುಡುಗಿಯರು ಹೆಚ್ಚು ಸಬಲೆಯರಾಗಿದ್ದಾರೆಯೇ? ಇಂತಹ ಪ್ರಶ್ನೆಗಳು ಹುಟ್ಟಿದವು. ಅವುಗಳಿಗೆ ಬಂದ ಉತ್ತರ 'ಹೌದು' ಮತ್ತು 'ಇಲ್ಲ' ಎನ್ನುವ ಮಿಶ್ರಣವಾಗಿತ್ತು.

ತದ್ವಿರುದ್ಧ

ನಮ್ಮ ದೇಶದಲ್ಲಿ ಮಹಿಳೆಯರ ಬಗ್ಗೆ ಮಾತನಾಡುವಾಗ ಸಾಮಾನ್ಯೀಕರಣ - ಜನರಲೈಸೇಶನ್ - ಸಾಧ್ಯವೇ ಇಲ್ಲ. ಯಾವುದೇ ಒಂದು ಕ್ಷೇತ್ರ ತೆಗೆದುಕೊಂಡರೂ ಅಲ್ಲಿ ಎರಡು ತದ್ವಿರುದ್ಧ ಧ್ರುವಗಳು ಕಾಣಿಸುತ್ತವೆ. ಎರಡು ಎಕ್ಸ್‌ಟ್ರೀಮ್‌ಗಳು. ಉಳಿದವರೆಲ್ಲ ಅದರ ನಡುವೆ ವಿವಿಧ ಘಟ್ಟಗಳಲ್ಲಿ ಕಾಣಿಸುತ್ತಾರೆ. ಅಂದರೆ ಒಂದು ತುದಿಯಲ್ಲಿ ಸಕಲ ಅವಕಾಶ ವಂಚಿತರಾದ, ಅತ್ಯಂತ ಶೋಷಿತ ಮಹಿಳೆಯರಿದ್ದರೆ, ಇನ್ನೊಂದು ತುದಿಯಲ್ಲಿ ಎಲ್ಲ ಅವಕಾಶಗಳನ್ನು ಹೊಂದಿದ, ಪ್ರಗತಿಯ ಸಂಕೇತರಾದ, ಎಲ್ಲ ರೀತಿಯ ಸ್ವಾತಂತ್ರ್ಯವನ್ನು ಹೊಂದಿದ ಮಹಿಳೆಯರು ಇರುತ್ತಾರೆ. ಹಾಗಾಗಿ ಒಂದು ಕಡೆ ಶ್ರುತಿ #ಮೀಟೂ ಅಂತ ಸುದ್ದಿ ಮಾಡುತ್ತಿದ್ದರೆ, ಇನ್ನೊಂದು ಕಡೆ ಬಾಸ್/ಗೆಳೆಯ/ಪಕ್ಕದ ಮನೆಯವ/ಅಪರಿಚಿತ/ಕೊನೆಗೆ ಮಹಿಳೆಯು ತಂದೆ ಅಥವಾ ಅಣ್ಣಂದಿರಿಂದಲೇ ಅತ್ಯಾಚಾರಕ್ಕೆ ಒಳಗಾಗುವ ಘಟನೆಗಳು ದಿನಂಪ್ರತಿ ಮಾಧ್ಯಮಗಳಲ್ಲಿ ವರದಿ ಆಗುತ್ತಲೇ ಇರುತ್ತವೆ. ಎಷ್ಟೋ ಹಳ್ಳಿಯ ಹೆಂಗಸರೇ ನಗರದ ಹೆಂಗಸರಿಗಿಂತ ಹೆಚ್ಚು ಲಿಬರೇಟೆಡ್ ಆಗಿರುತ್ತಾರೆ. ಒಂದು ಕಡೆ, ಗಂಡ ಸರಿಯಾಗಿಲ್ಲ ಎಂದು ಅವನನ್ನು ಓಡಿಸಿ ಇನ್ನೊಬ್ಬನ ಜೊತೆ ಕೂಡಿಕೆ ಮಾಡಿಕೊಂಡ ಮಹಿಳೆ ಸುಖವಾಗಿ ಬದುಕುತ್ತಿದ್ದರೆ, ಇನ್ನೊಂದು ಕಡೆ ತಂಗಿ ಬೇರೆ ಜಾತಿಯವನನ್ನು ಮದುವೆ ಆದಳೆಂದು ಅವಳ ತಲೆ ಕತ್ತರಿಸಿ ತಾನೊಬ್ಬ ಮಹಾವೀರ, ಜಾತಿಯ ಶ್ರೇಷ್ಠತೆಯ ರಕ್ಷಕ ಎಂದು ಭ್ರಮಿಸುವ ಹುಂಬ ಹುಡುಗ ಇದ್ದಾನೆ.

ಕುಗ್ಗಬೇಕಾಗಿಲ್ಲ

ಆದರೆ ನಿಜವಾಗಿ ನೋಡಿದರೆ ಈಗಿನ ಹುಡುಗಿಯರು ಸಮಾಜದ ಸ್ವಾಸ್ಥ್ಯದ ಜವಾಬ್ದಾರಿಯನ್ನು ತಮ್ಮ ತಲೆ ಮೇಲೆ ಹೊತ್ತು ಕುಗ್ಗಬೇಕಾಗಿಲ್ಲ ಎನ್ನಿಸುತ್ತದೆ. ಏಕೆಂದರೆ ಅವರಿಗೆ ಒಂದು ಪರ್ಯಾಯ ವ್ಯವಸ್ಥೆಯನ್ನು ಅವರೇ ಕಲ್ಪಿಸಿಕೊಳ್ಳುತ್ತಿದ್ದಾರೆ. ತಂದೆ ತಾಯಿಗಳು ಮಾತ್ರವಲ್ಲದೇ ಗೆಳೆಯರ ಬಳಗವನ್ನು ತಾವೇ ನಿರ್ಮಿಸಿಕೊಂಡು ಒಂದು 'ಸಪೋರ್ಟ್ ಸಿಸ್ಟಮ್' ಅನ್ನು ಮಾಡಿಕೊಳ್ಳುತ್ತಿದ್ದಾರೆ. ಅದಕ್ಕೆ ಮುಖ್ಯವಾಗಿ ಶಿಕ್ಷಣ ಮತ್ತು ಆರ್ಥಿಕ ಸ್ವಾವಲಂಬನೆ ಕಾರಣವಾಗಿದೆ. ಉದ್ಯೋಗಸ್ಥ ಮಹಿಳೆಯರು ಈಗ ಇಪ್ಪತ್ತು ವರ್ಷದ ಹಿಂದೆ ಅನುಭವಿಸುತ್ತಿದ್ದ ಕಟ್ಟುಪಾಡುಗಳು ಸಡಿಲಗೊಂಡಿವೆ. ತಾವು ಗಳಿಸುವ ಹಣಕ್ಕೆ ತಮ್ಮದೇ ಒಡೆತನ ಎನ್ನುವುದು ಹಿಂದೆ ಊಹಿಸಿಕೊಳ್ಳಲೂ ಸಾಧ್ಯವಿರುತ್ತಿರಲಿಲ್ಲ. ಹೆಂಡತಿಯ, ಸೊಸೆಯ, ಮಗಳ ಸಂಬಳವನ್ನು ಗಂಡಸರು ತಾವೇ ಇಸ್ಕೊಳ್ಳುತ್ತಿದ್ದ ಸಾವಿರಾರು ಉದಾಹರಣೆಗಳಿರುತ್ತಿದ್ದವು. ಈಗ ಬ್ಯಾಂಕಿಗೆ ನೇರವಾಗಿ ಸಂಬಳ ಸಂದಾಯವಾಗುವುದರಿಂದ ಅಷ್ಟರಮಟ್ಟಿಗೆ ಮಹಿಳೆ ತನ್ನ ಗಳಿಕೆಯನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಅವಕಾಶ ಒದಗಿದೆ. ಎಲ್ಲಿ ಆರ್ಥಿಕ ಸ್ವಾವಲಂಬನೆ ಒದಗುತ್ತದೋ ಅಲ್ಲಿ ಇತರ ಸ್ವಾತಂತ್ರ್ಯ ತಾನಾಗಿ ಬರುತ್ತದೆ.

ಮುಕ್ತ ಮಾರುಕಟ್ಟೆ, ಸ್ಯಾಟಲೈಟ್ ಟಿವಿ, ಮೊಬೈಲ್ ಫೋನ್, ಕಂಪ್ಯೂಟರ್ ಮತ್ತು ಇಂಟರ್‌ನೆಟ್ ಜೊತೆಗೆ ಹಲವಾರು ಸಂವಹನ ಮಾರ್ಗಗಳು ಮಹಿಳೆಯರಿಗೆ ತಂದು ಕೊಟ್ಟಿರುವ ಮುಕ್ತತೆ ಮತ್ತು ಬಿಡುಗಡೆ ಅಪಾರ ಮತ್ತು ಸಾಮಾನ್ಯ ಗ್ರಹಿಕೆಗೂ ಮೀರಿದ್ದು. ಮೊದಲು ಪ್ರಸ್ತಾಪಿಸಿದ ಹುಡುಗಿ ಹೇಳಿದ್ದು 'ಕಮಿಟ್‌ಮೆಂಟ್ ಅನ್ನುವುದು ಈಗ ರಿಡಿಫೈನ್ ಆಗಿದೆ. ಒಬ್ಬ ಹುಡುಗನ ಜೊತೆ ಪ್ರೀತಿ ಆಯಿತು, ಸಂಬಂಧ ಆಯಿತು ಅಂತ ಅನಿವಾರ್ಯವಾಗಿ ಮದುವೆ ಮಾಡಿಕೊಳ್ಳಕ್ಕಾಗಲ್ಲ. ಕಮಿಟ್‌ಮೆಂಟ್ ಇದ್ದರೆ ಮಾತ್ರ ಮದುವೆ, ಮದುವೆ ಆಯಿತು ಅಂತ ಕಮಿಟ್‌ಮೆಂಟ್ ಅಲ್ಲ!' ಅಂದರೆ ಸರಿ ಬರದಿದ್ದರೆ ಬಿಟ್ಟು ಹೋಗುವ ಸ್ವಾತಂತ್ರ್ಯ ಇವತ್ತಿನ ಹುಡುಗಿಯರಿಗೆ ದೊಡ್ಡ ಬಳುವಳಿ.

ಪ್ರಸಿದ್ಧ ಲಾಯರ್ ಒಬ್ಬರು ಹೇಳಿದ್ದು: 'ಇವತ್ತು ಒಂದೇ ದಿನದಲ್ಲಿ ಫ್ಯಾಮಿಲಿ ಕೋರ್ಟಿನಲ್ಲಿ 365 ಕೇಸ್‌ಗಳು ಸೆಟಲ್ ಆದವು. ಅಂದರೆ ಸರಿ ಬರಲ್ಲ, ಸೆಪರೇಷನ್ ಕೊಡಿ ಅಂತ ಕೇಳಿ ದೂರವಾದರು. ಅಲ್ಲಿ ಭಾವನೆ, ಸಂಬಂಧ, ಸಾಮಾಜಿಕ ಹೊಣೆಗಾರಿಕೆ ಇತ್ಯಾದಿಗಳಿಗಿಂತ ಹೆಚ್ಚಾಗಿ ವ್ಯಕ್ತಿಗತ ಸ್ವಾತಂತ್ರ್ಯಕ್ಕೇ ಹೆಚ್ಚು ಒತ್ತು ಬಿದ್ದಿತ್ತು. ಸಹಿಷ್ಣುತೆ ಅನ್ನುವುದು ಈಗ ಅತ್ಯಂತ ಕಡಿಮೆ ಮಟ್ಟದಲ್ಲಿದೆ. ಅರ್ಥಮಾಡಿಕೊಳ್ಳುವ ತಾಳ್ಮೆಯಾಗಲೀ ಸಂಬಂಧಗಳನ್ನು ಉಳಿಸಿಕೊಳ್ಳುವ ಕಳಕಳಿಯಾಗಲೀ ಕಂಡುಬರುತ್ತಿಲ್ಲ. ಒಬ್ಬ ಹೋದರೆ ಮತ್ತೊಬ್ಬ ಸಿಗುತ್ತಾನೆ ಅನ್ನುವ ಧೈರ್ಯ ಬಂದಿದೆ ಹುಡುಗಿಯರಲ್ಲಿ. ಅದಕ್ಕೇ ಹಿಂದಿನ ಕಾಲದ ಗಟ್ಟಿ ನಂಬಿಕೆಯಾದ 'ಮದುವೆ ಎನ್ನುವುದು ಬದುಕಿನಲ್ಲಿ ಒಂದೇ ಬಾರಿಗೆ, ಹೆಣ್ಣಿಗೆ ಒಬ್ಬನೇ ಗಂಡ' ಎನ್ನುವ ಮಾತುಗಳೆಲ್ಲ ಗಾಳಿಗೆ ತೂರಿಹೋಗಿವೆ. ಇರೋದು ಒಂದೇ ಬದುಕು ಅದನ್ನು ಅನುಭವಿಸೋಣಾ, ಆನಂದಿಸೋಣಾ ಅನ್ನುವ ಪ್ರವೃತ್ತಿ ಇವತ್ತಿನ ಹುಡುಗಿಯರಲ್ಲಿ ಹೆಚ್ಚಾಗಿದೆ.'

ಬೆಂಬಲಶಕ್ತಿ

ಅದನ್ನು ಸಮಾಜ ಕೀಳಾಗಿ ನೋಡುತ್ತಿದೆಯೇ ಎಂದರೆ ಒಂದು ವರ್ಗದ ತಂದೆ ತಾಯಿಗಳು ಇಲ್ಲ ಎಂದು ಹೇಳುತ್ತಾರೆ. ಚೆನ್ನಾಗಿ ಶಿಕ್ಷಣ ಪಡೆದು ಒಳ್ಳೆಯ ಕೆಲಸ ಮಾಡುತ್ತಾ ದೊಡ್ಡ ವೇತನ ಪಡೆದುಕೊಳ್ಳುತ್ತಿರುವ ಮಗಳು ಇವತ್ತಿನ ತಂದೆತಾಯಿಯರಿಗೆ ಒಂದು ಬೆಂಬಲಶಕ್ತಿಯಾಗುತ್ತಿದ್ದಾಳೆ. ಹಾಗಾಗಿ ಆ ಆಸರೆ ತಪ್ಪಿಹೋದರೆ ಎನ್ನುವ ಭಯಕ್ಕೆ ಅವರು ಮಗಳ ಮದುವೆಯ ವಿಚಾರವನ್ನೇ ಪ್ರಸ್ತಾಪಿಸದೆ ಸುಮ್ಮನಿದ್ದು ಬಿಡುತ್ತಿದ್ದಾರೆ. ಹಾಗಾಗಿ ಒಂದು ವಯಸ್ಸು ಮೀರಿದ ಹೆಣ್ಣುಮಗಳು ಹೊರಗಡೆ ಬಾಯ್ ಫ್ರೆಂಡ್‌ಗಳನ್ನು ಮಾಡಿಕೊಂಡರೂ ನೋಡಿಯೂ ನೋಡದ ಹಾಗೆ ಸುಮ್ಮನಿದ್ದು ಬಿಡುವುದು ಅಥವಾ ಅದನ್ನು ತಾವೂ ಒಪ್ಪಿ ಸಮ್ಮತಿಸುವುದು ಟ್ರೆಂಡ್ ಆಗುತ್ತಿದೆ.

ಪ್ರತಿಷ್ಠಿತ ದೊಡ್ಡ ಕುಟುಂಬಗಳ ಹೆಣ್ಣು ಮಕ್ಕಳು ಸುಲಭವಾಗಿ ಡೈವೋರ್ಸ್ ಮಾಡುತ್ತಿರುವುದು, ಹುಡುಗಿಯರಿಗೆ ಮದುವೆ ಶಾಶ್ವತ ಬಂಧನವಲ್ಲ, ಬಿಡುಗಡೆ ಅಷ್ಟೇ ಸುಲಭ ಎನ್ನುವ ಸಂದೇಶವನ್ನು ಉಳಿದ ವರ್ಗಗಳಿಗೆ ರವಾನಿಸುತ್ತಿವೆ. ಜೊತೆಗೆ ಕಾನೂನು ಮಹಿಳೆಯರಿಗೆ ಸಿಕ್ಕಾಪಟ್ಟೆ ರಕ್ಷಣೆ ನೀಡುವುದರಿಂದ ಮಹಿಳಾ ಸಬಲೀಕರಣ ಎನ್ನುವುದು ನಿಧಾನವಾಗಿಯಾದರೂ ಜಾರಿಯಾಗುತ್ತಿದೆ. ಪಾಸ್‌ಪೋರ್ಟ್ ಪಡೆಯಲು ಗಂಡನ ಅನುಮತಿ ಅಗತ್ಯ ಎನ್ನುವ ಅನಗತ್ಯ ಕಾನೂನನ್ನು ತೆಗೆದು ಹಾಕಿದ್ದು ವ್ಯವಸ್ಥೆಯೂ ತನ್ನ ಚಿಂತನೆಯಲ್ಲಿ ಮುನ್ನಡೆದಿದೆ ಎನ್ನುವುದರ ಸಂಕೇತ.

ಸಮಾಜದಲ್ಲಿ ಮಹಿಳೆಯರ ಸಾಂಪ್ರದಾಯಿಕ ಪಾತ್ರವನ್ನು ಪ್ರಶ್ನಿಸಲು ಸಾಧ್ಯವಾಗಿರುವುದೇ ಇವತ್ತಿನ ಸನ್ನಿವೇಶದಲ್ಲಿ ದೊಡ್ಡ ಪ್ಲಸ್ ಪಾಯಿಂಟ್. ಕಿರುತೆರೆಗಳ ಧಾರಾವಾಹಿಗಳು, ಮುಖ್ಯ ವಾಹಿನಿಯ ಚಲನಚಿತ್ರಗಳು ಎಷ್ಟೇ ಓಬಿರಾಯನ ಕಾಲದ ಪ್ಲಾಟ್‌ಗಳನ್ನು ಇಟ್ಟುಕೊಂಡು ಮಹಿಳೆಯರ ಸ್ಟೀರಿಯೊ ಟೈಪ್‌ಗಳನ್ನು ಬಿಂಬಿಸುತ್ತಿದ್ದರೂ ಅದನ್ನು ಮನರಂಜನೆ ಎಂದುಕೊಂಡು ನೋಡುವ ಮಹಿಳೆಯರು ತಮ್ಮ ಜೀವನದಲ್ಲಿ ಸಂಕೀರ್ಣ ಸಮಸ್ಯೆ ಎದುರಾದಾಗ ತಮಗೆ ಇಷ್ಟವಾದ ಸಮ್ಮತವಾದ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆಯೇ ಹೊರತು ಯಾರೋ ಸೂಚಿಸಿದ ತೀರ್ಮಾನಗಳಿಗೆ ಕಟ್ಟುಬೀಳುವುದಿಲ್ಲ. ಏನಾಗುತ್ತೋ ನೋಡೇ ಬಿಡೋಣಾ ಎನ್ನುವ ಧೈರ್ಯ ಹಿಂದೆಂದಿಗಿಂತ ಇಂದು ಹುಡುಗಿಯರಲ್ಲಿ ಎದ್ದು ಕಾಣುತ್ತಿದೆ.

ಇತ್ತೀಚೆಗೆ ಹೆಚ್ಚುತ್ತಿರುವ ಸನಾತನ ನಂಬಿಕೆಗಳಿಗೆ ಮಹಿಳೆಯರನ್ನು ಒಗ್ಗಿಸುವ ಪ್ರಯತ್ನಗಳನ್ನೂ ಇವತ್ತಿನ ಹುಡುಗಿಯರು ಒಂದು ಸಂಶಯದಲ್ಲೇ ಪರಿಗಣಿಸುತ್ತಿದ್ದಾರೆ ಎನ್ನುವುದು ಒಂದು ಮುಖ್ಯ ಅಂಶ. ಎಲ್ಲಿಯವರೆಗೆ ಅದು ತಮ್ಮ ವೈಯಕ್ತಿಕ ಬದುಕಿಗೆ ಹಾನಿಕಾರಕವಲ್ಲವೋ ಅಲ್ಲಿಯವರೆಗೆ ಅವರಿಗೆ ದೂರುಗಳಿಲ್ಲ. ಆದರೆ ಯಾವತ್ತು ದುಷ್ಟ ಗಂಡನನ್ನು ಪತಿ ಪರಮೇಶ್ವರ ಎಂದು ತಿಳಿದು ಸಹಿಸಿಕೊಂಡಿರು ಎಂದು ಹೇಳುತ್ತಾರೋ ಅವತ್ತು ಅವರು ಸಿಡಿದೆದ್ದು ಹೊರಬರುತ್ತಾರೆ/ಬರುತ್ತಿದ್ದಾರೆ. ಉದ್ಯೋಗ ಕ್ಷೇತ್ರದಲ್ಲಿ ಈಗ ಮಹಿಳೆಗೆ ಎಲ್ಲಾ ವಲಯಗಳಲ್ಲೂ ಪ್ರವೇಶ ಸಿಕ್ಕಿರುವುದರಿಂದ ಅದು ಮಹಿಳೆಯರ ವೃತ್ತಿ ಸಾಧ್ಯತೆಗಳನ್ನು ಸಿಕ್ಕಾಪಟ್ಟೆ ಹೆಚ್ಚಿಸಿದೆ. ಅದರಿಂದ ಒಟ್ಟಾರೆ ಮಹಿಳೆಯರ ಚಿಂತನೆ, ಸ್ಥಿತಿಯಲ್ಲಿ ಮಹತ್ತರ ಬದಲಾವಣೆ ಕಂಡಿದೆ.

ಸ್ವಾರ್ಥವೇ ಸ್ವಾತಂತ್ರ್ಯ

ಆದರೂ ಒಂದೊಂದು ಸಲ ಇವತ್ತಿನ ಹುಡುಗಿಯರಿಗೆ ಸ್ವಾತಂತ್ರ್ಯ ಎನ್ನುವ ಪರಿಕಲ್ಪನೆಯ ಬಗ್ಗೆ ಭ್ರಮೆ ಅಥವಾ ತಪ್ಪು ತಿಳುವಳಿಕೆ ಇದೆ ಅನ್ನಿಸುತ್ತದೆ.

9ನೇ ಪುಟಕ್ಕೆ...

ಶ್.. ಸದ್ದು, ಇದು 52 ಹರ್ಟ್ಸ್!

ನಿಗೂಢ ಸದ್ದಿನ ಮೂಲ ಹುಡುಕುತ್ತ ತಮ್ಮ ಜೀವನದ ಒಂದು ಡಜನ್ ವರ್ಷಗಳನ್ನು ವ್ಯಯಿಸಿದ ತಜ್ಞರ ತಂಡವು ಆ ಸುದೀರ್ಘ ಸಮಯದಲ್ಲಿ ನಡೆಸಿದ ಸಂಶೋಧನೆಯಲ್ಲಿ ಬಿಚ್ಚಿಕೊಂಡಿದ್ದೇ ಈ ಒಂಟಿ ತಿಮಿಂಗಲದ ಕಥೆ...

ಸುನೀಲ್ ಬಾರ್ಕೂರ್

ಒಂಟಿತನ, ಖಿನ್ನತೆ, ಒತ್ತಡದಂತಹ ಮಾನಸಿಕ ಪರಿಸ್ಥಿತಿಗಳು ಮಾನವನಿಗಷ್ಟೇ ಸೀಮಿತವೆಂಬುದು ಸಾಮಾನ್ಯ ನಂಬಿಕೆ. ಆದರೆ ನಿಜಕ್ಕೂ ಇದು ಸತ್ಯವೇ? ಆಗಸದಲ್ಲಿ ಹಾರುತ್ತಿರುವ ಹಕ್ಕಿ, ನೆಲದ ಮೇಲೆ ಕುಪ್ಪಳಿಸುತ್ತಿರುವ ಕಪ್ಪೆ, ಸಮುದ್ರದ ಆಳದಲ್ಲಿ ಈಜುತ್ತಿರುವ ಮೀನು ಇವುಗಳೆಲ್ಲವೂ ಈ ಖಿನ್ನತೆ, ಒಂಟಿತನವನ್ನು ಅನುಭವಿಸುತ್ತಿರಬಹುದೇ? ಹಾಗಿದ್ದ ಪಕ್ಷದಲ್ಲಿ ಯಾವ ಆಪ್ತಸಮಾಲೋಚಕರ ನೆರವಿಲ್ಲದೆಯೇ ಅಂತಹ ಸನ್ನಿವೇಶವನ್ನು ಅವುಗಳು ಹೇಗೆ ಸಂಭಾಳಿಸಿಕೊಳ್ಳುತ್ತವೆ?

ಮಾನವನಲ್ಲಿ ಇರುವಂತೆಯೇ ಎಲ್ಲ ಜೀವಿಗಳಲ್ಲಿಯೂ ತಮ್ಮದೇ ಆದ ಭಾವನೆಗಳಿರುತ್ತವೆ. ಅವುಗಳೂ ಮಾನಸಿಕ ಕಾಯಿಲೆಗಳಿಂದ ಬಳಲುತ್ತವೆ ಎಂಬುದರ ಕುರಿತು ಚರ್ಚೆಗಳು ನಡೆಯುತ್ತಲೇ ಇವೆ. ಮನಃಶಾಸ್ತ್ರಜ್ಞರ ಸೆಮಿನಾರ್‌ಗಳ ಜಿಜ್ಞಾಸೆಯ ಪಟ್ಟಿಯಲ್ಲಷ್ಟೇ ಇರುತ್ತಿದ್ದ ಈ ವಿಷಯವನ್ನು ಜಾಗತಿಕವಾಗಿ ಚರ್ಚೆಗೆ ಕಾರಣವಾಗಿಸಿದ ಶ್ರೇಯ ಪೆಸಿಫಿಕ್ ಸಾಗರದಲ್ಲಿ ತೇಲಾಡಿಕೊಂಡಿರುವ ತಿಮಿಂಗಲವೊಂದಕ್ಕೆ ಸಲ್ಲುತ್ತದೆ.

ಅದು 1989ರ ಒಂದು ದಿನ. ಅಮೆರಿಕ ಮತ್ತು ಸೋವಿಯತ್ ರಷ್ಯಾ ನಡುವಿನ ಶೀತಲ ಸಮರ ತಾರಕಕ್ಕೇರಿತ್ತು. ಸಂಭಾವ್ಯ ಯುದ್ಧದ ಸನ್ನಿವೇಶದಲ್ಲಿ ತಮ್ಮ ದೇಶದ ನೆಲ, ಜಲ, ವಾಯುಗಡಿಗಳನ್ನು ಎರಡೂ ದೇಶಗಳ ಸೈನಿಕರು ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಿದ್ದರು. ರಷ್ಯಾದ ಜಲಾಂತರ್ಗಾಮಿ ನೌಕೆಗಳನ್ನು ಪತ್ತೆ ಹಚ್ಚಲು ಅಮೆರಿಕದ ಮಿಲಿಟರಿ ಪಡೆಗಳು ಇರಿಸಿದ್ದ ಹೈಡ್ರೋಫೋನ್ ಉಪಕರಣವೊಂದು ಪೆಸಿಫಿಕ್ ಸಾಗರದಾಳದಿಂದ ಸದ್ದನ್ನೊಂದನ್ನು ಪತ್ತೆ ಹಚ್ಚಿತು. 52 ಹರ್ಟ್ಸ್‌ನ ಆವರ್ತನದಲ್ಲಿ ಹೊರಹೊಮ್ಮಿದ್ದ ಆ ಸದ್ದನ್ನು ಗಂಭೀರವಾಗಿಯೇ ತೆಗೆದುಕೊಂಡ ಮಿಲಿಟರಿ ಪಡೆಯು ಆ ಪ್ರದೇಶವನ್ನೆಲ್ಲ ಹುಡುಕಾಡಿ ಕೊನೆಗೆ ಏನೂ ಸಿಗದೇ ಸುಮ್ಮನಾಯಿತು. ಇದಾದ ಮೂರು ವರ್ಷಗಳ ಬಳಿಕ ಅಮೆರಿಕ ಮಿಲಿಟರಿ ಪಡೆಯು ಈ ನಿಗೂಢ ಸದ್ದಿನ ಮೂಲ ಪತ್ತೆಹಚ್ಚಲು ವಿಲಿಯಮ್ ವಾಟ್ಕಿನ್ಸ್ ಎಂಬ ಸಾಗರ ಶಾಸ್ತ್ರಜ್ಞರೊಬ್ಬರನ್ನು ನೇಮಿಸಿತು. ಈ ಪತ್ತೇದಾರಿಕೆಯಲ್ಲಿ ವಾಟ್ಕಿನ್ಸ್ ಅವರ ಜೊತೆಗೆ ಪರಿಣಿತರ ತಂಡವೂ ಇತ್ತು. ಈ ಒಂದು ಸದ್ದಿನ ತುಣುಕನ್ನಿಟ್ಟುಕೊಂಡು ತನಿಖೆಯನ್ನಾರಂಭಿಸಿದ ತಂಡಕ್ಕೆ ಮೊದಲು ಗೊಂದಲ ಮೂಡಿಸಿದ್ದೇ ಆ 52ರ ಆವರ್ತನ.

9ನೇ ಪುಟಕ್ಕೆ...

ಏಸು ಹೇಳಿದ ಪ್ರಸಂಗಗಳು

ಹೊರೆಯಾಲ ದೊರೆಸ್ವಾಮಿ

ಒಬ್ಬ ರೈತನು ತನ್ನ ಹೊಲದಲ್ಲಿ ಬೀಜ ಬಿತ್ತುವುದಕ್ಕೆಂದು ಹೊರಟ. ಅವನು ಬೀಜ ಬಿತ್ತುವಾಗ ಕೆಲವು ಬೀಜಗಳು ದಾರಿಯ ಮಗ್ಗುಲಲ್ಲಿ ಬಿದ್ದವು; ಹಕ್ಕಿಗಳು ಬಂದು ಅವುಗಳನ್ನು ತಿಂದುಬಿಟ್ಟವು. ಇನ್ನು ಕೆಲವು ಬೀಜಗಳು ಸ್ವಲ್ಪ ಮಣ್ಣು ಇದ್ದ ಬಂಡೆಯ ಮೇಲೆ ಬಿದ್ದವು; ಬೀಜಗಳೇನೊ ಮೊಳೆತವು; ಆದರೆ, ಬೇರುಬಿಡಲು ಮಣ್ಣು ಸಾಕಷ್ಟು ಇಲ್ಲದ ಕಾರಣ ಅವು ಅಲ್ಲೇ ಒಣಗಿದವು. ಮತ್ತೆ ಕೆಲವು ಬೀಜಗಳು ಮುಳ್ಳುಗಿಡಗಳ ನಡುವೆ ಬಿದ್ದವು. ಚೆನ್ನಾಗಿ ಬೆಳೆಯದಂತೆ ಮುಳ್ಳುಗಿಡಗಳು ಅವನ್ನು ಅಲ್ಲೇ ಅಡಗಿಸಿಬಿಟ್ಟವು. ಮತ್ತೂ ಕೆಲವು ಬೀಜಗಳು ಉತ್ತು ಹದವಾದ ಹೊಲದಲ್ಲಿ ಬಿದ್ದವು. ಅವು ಒಂದಕ್ಕೆ ಮೂವತ್ತರಷ್ಟು, ಒಂದಕ್ಕೆ ಅರವತ್ತರಷ್ಟು, ಒಂದಕ್ಕೆ ನೂರರಷ್ಟು ಫಲಕೊಟ್ಟವು. ಕ್ರಮವರಿತು ಶ್ರಮ ಹಾಕಬೇಕೆಂದು ಇಲ್ಲಿಯ ಸಾರಾಂಶ.

***

> ಕ್ರಿಸ್‌ಮಸ್ ಹಬ್ಬ ಇನ್ನೇನು ಹೊಸ್ತಿಲಲ್ಲಿದೆ. ಅದು ಏಸು ಕ್ರಿಸ್ತನು ಜನಿಸಿದ ದಿವಸ. ಶಾಂತಿ ಸಹನೆಯನ್ನು ಸಾರಿದ ಏಸು ತನ್ನ ಶಿಷ್ಯರಿಗೆ ಹಾಗೂ ಸಾಮಾನ್ಯ ಜನಕ್ಕೆ ಬೇರೆ ಬೇರೆ ಸಂದರ್ಭಗಳಲ್ಲಿ ಹೇಳಿದ ಪ್ರಸಂಗಗಳು-ಕಥಾ ರೂಪದಲ್ಲಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ನಿರೂಪಿಸಲಾಗಿದೆ.

ಒಬ್ಬ ಮನುಷ್ಯನು ತನ್ನ ಹೊಲದಲ್ಲಿ ಗೋಧಿಯನ್ನು ಬಿತ್ತಿದ. ಅವನ ವೈರಿಯು ಜನರೆಲ್ಲ ನಿದ್ದೆ ಮಾಡುವ ಹೊತ್ತಿನಲ್ಲಿ ಆ ಹೊಲಕ್ಕೆ ಹೋಗಿ ಹಣಜಿಯನ್ನು (ಕೂಳೆಧಾನ್ಯ) ಬಿತ್ತಿದ. ಗೋಧಿಯು ಮೊಳಕೆ ಒಡೆದು ಬೆಳೆದಂತೆಲ್ಲಾ ಹಣಜಿಯೂ ಬೆಳೆಯತೊಡಗಿತು. ಆಗ, ಯಜಮಾನನು ತನ್ನ ಆಳುಗಳನ್ನು ಕರೆದು 'ನಾನು ಹೊಲದಲ್ಲಿ ಬಿತ್ತಿದ್ದು ಗೋಧಿ ಮಾತ್ರ, ಹಣಜಿ ಹೇಗೆ ಬೆಳೆಯಿತು' ಎಂದು ಕೇಳಿದ. ಅದಕ್ಕೆ ಆಳುಗಳು 'ಯಾರೋ ಒಬ್ಬ ನಿಮ್ಮ ವೈರಿ ಬಿತ್ತನೆ ಮಾಡಿರಬೇಕು' ಎಂದು ಹೇಳಿ, 'ಹಣಜಿಯನ್ನು ಆರಿಸಿ ತೆಗೆದುಬಿಡೋಣವೂ' ಎಂದು ಕೇಳಿದರು. ಅದಕ್ಕೆ ಯಜಮಾನನು, 'ಬೇಡ, ಬೇಡ, ಹಾಗೆ ಮಾಡುವುದು ಬೇಡ. ಈಗ ಹಣಜಿಯನ್ನು ಆರಿಸಿ ತೆಗೆಯುವಾಗ ಅದರ ಸಂಗಡ ಗೋಧಿಯ ಪೈರೂ ಕಿತ್ತು ಬಂದುಬಿಡುತ್ತದೆ. ಸುಗ್ಗಿಯ ಕಾಲದವರೆಗೂ ಅವೆರಡು ಬೆಳೆಯಲಿ. ಆನಂತರ, ಗೋಧಿ ಮತ್ತು ಹಣಜಿ ಪೈರುಗಳನ್ನು ಬೇರೆಬೇರೆಯಾಗಿ ಕೊಯ್ದು, ಗೋಧಿಯನ್ನು ಒಕ್ಕಿ ಕಣದಲ್ಲಿ ತುಂಬಿ, ಹಣಜಿಯನ್ನು ಹೊರೆ ಕಟ್ಟಿ, ಬೆಂಕಿಗೆ ಹಾಕಿ' ಎಂದು ತಿಳಿಸಿದ. ಸಮಯ ನೋಡಿ ವೈರಿಯನ್ನು ಮುಗಿಸಬೇಕು ಎಂಬುದು ಈ ಪ್ರಸಂಗದ ಸಾರಾಂಶ.

***

ಏಸು ಹೇಳಿದ ಇನ್ನೊಂದು ಪ್ರಸಂಗ: ದ್ರಾಕ್ಷಿತೋಟದ ಒಬ್ಬ ಯಜಮಾನನು ತೋಟದಲ್ಲಿ ಕೆಲಸ ಮಾಡಲು ಕೂಲಿ ಆಳುಗಳನ್ನು ಕರೆತರಲು ಬೆಳಿಗ್ಗೆ ಪಟ್ಟಣಕ್ಕೆ ಹೊರಟ. ಅವನು ಕೆಲವು ಕೂಲಿ ಆಳುಗಳನ್ನು ಕಂಡು, ದಿನಕ್ಕೆ ಒಂದು ಪಾವಲಿಯಂತೆ (ಒಂದು ಪಾವಲಿ = ನಾಲ್ಕು ಆಣೆ ಅಥವಾ ಇಪ್ಪತ್ತೈದು ಪೈಸೆ) ಕೂಲಿ ಗೊತ್ತುಮಾಡಿ, ಅವರನ್ನು ತನ್ನ ದ್ರಾಕ್ಷಿತೋಟಕ್ಕೆ ಕಳುಹಿಸಿದ. ಅವರು ದ್ರಾಕ್ಷಿ ತೋಟದಲ್ಲಿ ಕೆಲಸ ಮಾಡತೊಡಗಿದರು.

ತರುವಾಯ, ಹೆಚ್ಚು ಕಡಿಮೆ ಬೆಳಿಗ್ಗೆ ಒಂಬತ್ತು ಗಂಟೆಯ ಹೊತ್ತಿಗೆ ಹೋಗಿ, ಪೇಟೆಯಲ್ಲಿ ಸುಮ್ಮನೆ ನಿಂತಿದ್ದ ಇನ್ನು ಕೆಲವು ಕೂಲಿಕಾರರನ್ನು ಕಂಡು 'ನೀವು ಸಹ ನನ್ನ ದ್ರಾಕ್ಷಿತೋಟಕ್ಕೆ ಹೋಗಿ, ನಿಮಗೆ ಸರಿಯಾದ ಕೂಲಿಯನ್ನು ಕೊಡುತ್ತೇನೆ' ಅನ್ನಲು ಅವರು ತೋಟಕ್ಕೆ ಹೋದರು. ಅವರೂ ದ್ರಾಕ್ಷಿತೋಟದಲ್ಲಿ ಕೆಲಸ ಮಾಡತೊಡಗಿದರು. ಆನಂತರ, ಯಜಮಾನನು ತಿರುಗಿ, ಹೆಚ್ಚುಕಡಿಮೆ ಮಧ್ಯಾಹ್ನ ಹನ್ನೆರಡು ಗಂಟೆ ಹೊತ್ತಿಗೆ, ಅದೇ ರೀತಿ ಪೇಟೆಯಲ್ಲಿ ನಿಂತಿದ್ದ ಇನ್ನು ಕೆಲವು ಕೂಲಿಕಾರರನ್ನು ಕಂಡು, ಅವರಿಗೆ ಸರಿಯಾಗಿ ಕೂಲಿಕೊಡುವುದಾಗಿ ಹೇಳಿ, ತನ್ನ ದ್ರಾಕ್ಷಿತೋಟದಲ್ಲಿ ಕೆಲಸ ಮಾಡಲು ಕಳುಹಿಸಿದ.

ಮತ್ತೆ, ಯಜಮಾನನು, ಹೆಚ್ಚುಕಡಿಮೆ ಮೂರು ಗಂಟೆಯ ಹೊತ್ತಿಗೆ ಪೇಟೆಗೆ ಹೋಗಿ, ಮತ್ತೂ ಕೆಲವು ಕೂಲಿಕಾರರನ್ನು ಕಂಡು, ಅವರಿಗೆ ಸರಿಯಾಗಿ ಕೂಲಿಕೊಡುವುದಾಗಿ ಹೇಳಿ, ತನ್ನ ದ್ರಾಕ್ಷಿ ತೋಟದಲ್ಲಿ ಕೆಲಸ ಮಾಡಲು ಕಳುಹಿಸಿದ. ತಿರುಗಿ, ಯಜಮಾನನು, ಹೆಚ್ಚುಕಡಿಮೆ ಸಂಜೆ ಐದುಗಂಟೆಯ ಹೊತ್ತಿಗೆ ಪೇಟೆಗೆ ಹೋಗಿ, ಬೇರೆ ಕೆಲವರು ಸುಮ್ಮನೆ ನಿಂತಿರುವುದನ್ನು ಕಂಡ.

ಯಜಮಾನನು ಅವರಿಗೆ 'ದಿನವೆಲ್ಲಾ ಸುಮ್ಮನೆ ಯಾಕೆ ನಿಂತಿದ್ದೀರಿ' ಎಂದು ಕೇಳಲು ಅವರು 'ಯಾರೂ ನಮ್ಮನ್ನು ಕೂಲಿಗೆ ಕರೆಯಲಿಲ್ಲ' ಅಂದರು. ಆಗ, ಯಜಮಾನನು 'ನೀವು ಸಹ ನನ್ನ ದ್ರಾಕ್ಷಿತೋಟಕ್ಕೆ ಹೋಗಿ' ಅಂದ. ಅವರೆಲ್ಲ ಯಜಮಾನನ ದ್ರಾಕ್ಷಿತೋಟದಲ್ಲಿ ಕೆಲಸ ಮಾಡತೊಡಗಿದರು.

ಆನಂತರ, ಸಂಜೆ ಆದಮೇಲೆ, ಯಜಮಾನನು ತನ್ನ ಪಾರುಪತ್ಯೆದಾರನನ್ನು ಕರೆದು 'ಕಡೆಗೆ ಬಂದವರನ್ನು ಮೊದಲು ಮಾಡಿಕೊಂಡು, ಮೊದಲು ಬಂದವರತನಕ ಅವರಿಗೆ ಸಮಾನವಾಗಿ ಕೂಲಿ ಕೊಡು' ಎಂದ. ಆಗ, ಸಂಜೆ ಐದು ಗಂಟೆಗೆ ಬಂದವರಿಗೂ ಒಂದು ಪಾವಲಿ ಕೂಲಿ ಸಿಕ್ಕಿತು. ಅದಕ್ಕೆ, ಬೆಳಿಗ್ಗೆಯೇ ಬಂದ ಕೂಲಿಕಾರರು ಗೊಣಗುತ್ತ 'ಕಡೆಗೆ ಬಂದ ಇವರು ಒಂದು ತಾಸು ಹೊತ್ತು ಮಾತ್ರ ಕೆಲಸ ಮಾಡಿದ್ದಾರೆ. ನಾವು ದಿನವೆಲ್ಲ ಬಿಸಿಲಿನಲ್ಲಿ ಕಷ್ಟಪಟ್ಟು ಕೆಲಸ ಮಾಡಿದ್ದೇವೆ. ಇವರನ್ನು ನಮಗೆ ಸಮ ಮಾಡಿದ್ದೀಯೆ' ಅಂದರು. ಅದಕ್ಕೆ ಯಜಮಾನನು 'ನೀನು ನನ್ನಲ್ಲಿ ಕೆಲಸ ಮಾಡಲು ಒಂದು ಪಾವಲಿಗೆ ಒಪ್ಪಂದ ಆಗಿತ್ತು. ಅದರಂತೆ, ನಿನಗೆ ಒಂದು ಪಾವಲಿ ಕೂಲಿ ನೀಡಿದ್ದೇನೆ. ನಿನಗೆ ಕೊಟ್ಟಂತೆ ಕಡೆಯವನಿಗೂ ಕೊಡುವುದಕ್ಕೆ ನನಗೆ ಮನಸ್ಸುಂಟು. ಅದನ್ನು ನೀನು ತಪ್ಪಿಸುವುದು ಎಷ್ಟು ಸರಿ? ನಾನು ಒಳ್ಳೆಯವನಾಗಿರುವುದು ನಿನ್ನ ಕಣ್ಣನ್ನು ಒತ್ತುತ್ತದೊ' ಅಂತ ಕೇಳಿದ. ಅವರೆಲ್ಲ, ಆಗ ಸುಮ್ಮನಾದರು. ಈ ರೀತಿ ಕಡೆಯವನು ಮೊದಲಿಗನಾಗುವನು. ಮೊದಲಿಗನು ಕಡೆಯವನಾಗುವನು ಎಂದು ಏಸು ತಿಳಿಸಿದ.

***

ದೇಶಾಂತರಕ್ಕೆ ಹೊರಟ ಒಬ್ಬ ಮನುಷ್ಯ ತನ್ನ ಆಳುಗಳನ್ನು ಕರೆದು ಅವರಿಗೆ ತನ್ನ ಆಸ್ತಿಯನ್ನು ಈ ರೀತಿ ಒಪ್ಪಿಸಿದ. ಅವನು ಒಬ್ಬನಿಗೆ ಐದು ತಲಾಂಶು (ಒಂದು ತಲಾಂಶ = 3,000 ರೂಪಾಯಿ), ಒಬ್ಬನಿಗೆ ಎರಡು ತಲಾಂಶು, ಒಬ್ಬನಿಗೆ ಒಂದು ತಲಾಂಶು - ಹೀಗೆ ಹಂಚಿ ಅವನ್ನು ಸರಿಯಾದ ರೀತಿಯಲ್ಲಿ ಬಳಸಬೇಕೆಂದು ತಿಳಿಸಿ, ಬೇರೊಂದು ದೇಶಕ್ಕೆ ಹೋದ.

ಬಳಿಕ, ಐದು ತಲಾಂಶು ಹೊಂದಿದವನು ಹೋಗಿ ಅದನ್ನು ವ್ಯಾಪಾರಕ್ಕೆ ಹಾಕಿ, ಇನ್ನೂ ಐದು ತಲಾಂಶು ಗಳಿಸಿಕೊಂಡ. ಹಾಗೆಯೇ, ಎರಡು ತಲಾಂಶು ಹೊಂದಿದವನು ಇನ್ನೂ ಎರಡು ಸಂಪಾದಿಸಿದ. ಆದರೆ, ಒಂದು ತಲಾಂಶು ಹೊಂದಿದವನು ಭೂಮಿಯನ್ನು ಅಗೆದು ತನ್ನ ಧಣಿಯ ಹಣವನ್ನು ಅಲ್ಲಿ ಬಚ್ಚಿಟ್ಟ.

ಬಹುಕಾಲದ ಮೇಲೆ, ಆ ಆಳುಗಳ ಧಣಿಯು ಪರದೇಶದಿಂದ ಬಂದು, ತನ್ನ ಆಳುಗಳಿಂದ ಲೆಕ್ಕ ತೆಗೆದುಕೊಂಡ. ಆಗ, ಐದು ತಲಾಂಶು ಪಡೆದಿದ್ದವನು ಮುಂದೆ ಬಂದು ಇನ್ನೂ ಐದು ತಲಾಂಶು ತಂದು 'ಸ್ವಾಮಿ, ನೀನು ಐದು ತಲಾಂಶುಗಳನ್ನು ನನಗೆ ಕೊಟ್ಟಿದ್ದೀಯಲ್ಲಾ, ಇಗೋ, ಇನ್ನೂ ಐದು ತಲಾಂಶು ಸಂಪಾದಿಸಿದ್ದೇನೆ' ಅಂದ. ಅವನ ಧಣಿಯು 'ಭಲಾ, ನಂಬಿಗಸ್ತನಾದ ಒಳ್ಳೆ ಆಳು ನೀನು. ಸ್ವಲ್ಪ ಕೆಲಸದಲ್ಲೇ ನಂಬಿಗಸ್ತನಾದೆ. ಆದುದರಿಂದ, ನಿನ್ನನ್ನು ದೊಡ್ಡ ಕೆಲಸದಲ್ಲಿ ಇಡುತ್ತೇನೆ. ನೀನು ನಿನ್ನ ಧಣಿಯ ಸೌಭಾಗ್ಯದಲ್ಲಿ ಸೇರು' ಅಂದ.

ಆನಂತರ, ಎರಡು ತಲಾಂಶು ಹೊಂದಿದವನು ಮುಂದೆ ಬಂದು 'ಸ್ವಾಮಿ, ಎರಡು ತಲಾಂಶವನ್ನು ನೀನು ನನಗೆ ಒಪ್ಪಿಸಿದ್ದೀಯಲ್ಲಾ? ಅದರಿಂದ ಇನ್ನೂ ಎರಡು ತಲಾಂಶು ಸಂಪಾದಿಸಿದ್ದೇನೆ. ತೆಗೆದುಕೊ' ಅಂದ. ಅದಕ್ಕೆ ಧಣಿಯು ಅವನಿಗೆ 'ಭಲಾ, ನಂಬಿಗಸ್ತನಾದ ಒಳ್ಳೆ ಆಳು ನೀನು. ಸ್ವಲ್ಪ ಕೆಲಸದಲ್ಲೇ ನಂಬಿಗಸ್ತನಾದೆ. ದೊಡ್ಡ ಕೆಲಸದಲ್ಲಿ ನಿನ್ನನ್ನು ಮುಂದೆ ಇಡುತ್ತೇನೆ. ನಿನ್ನ ಧಣಿಯ ಸೌಭಾಗ್ಯದಲ್ಲಿ ಸೇರು' ಎಂದು ಹೇಳಿದ.

ಕ್ರಿಸ್‌ಮಸ್ ಕಥೆಗಳು

ತರುವಾಯ, ಒಂದು ತಲಾಂಶು ಹೊಂದಿದವನು ಮುಂದೆ ಬಂದು 'ನೀನು, ಕಠಿಣ ಮನುಷ್ಯನು. ನೀನು ಬಿತ್ತದಿರುವಲ್ಲಿ ಕೊಯ್ಯುವವನು, ನೀನು ತೂರದಿರುವಲ್ಲಿ ರಾಶಿ ಮಾಡಿಕೊಳ್ಳುವವನು ಎಂದು ತಿಳಿದು, ಹೆದರಿಕೊಂಡು ಹೋಗಿ, ನಿನ್ನ ತಲಾಂಶುವನ್ನು ಭೂಮಿಯಲ್ಲಿ ಬಚ್ಚಿಟ್ಟೆ. ಇಗೋ ನಿನ್ನದು ನಿನಗೆ ಸಂದಿದೆ' ಎಂದು ಒಂದು ತಲಾಂಶುವನ್ನು ಹಿಂದಕ್ಕೆ ನೀಡಿದನು. ಅದಕ್ಕೆ ಧಣಿಯು ಸಿಟ್ಟುಗೊಂಡು 'ನೀನು ನಿಜಕ್ಕೂ ಮೈಗಳ್ಳನಾಗಿರುವೆ. ನೀನು, ನಿನ್ನ ಹಣವನ್ನು ಸಾಹುಕಾರನಲ್ಲಿ ಬಡ್ಡಿಗೆ ಹಾಕಬೇಕಿತ್ತು. ನಾನು ಬಂದು ನನ್ನದನ್ನು ಬಡ್ಡಿ ಸಮೇತ ಪಡೆದುಕೊಳ್ಳುತ್ತಿದ್ದೆ' ಎಂದು ಆ ತಲಾಂಶುವನ್ನು ಪಡೆದು ಹತ್ತು ತಲಾಂಶು ಇದ್ದವನಿಗೆ ತನ್ನ ಸೇವಕರ ಮೂಲಕ ಕೊಡಿಸಿದ. ಬಳಿಕ, 'ಈ ಆಳನ್ನು ಕತ್ತಲೆಗೆ ಹಾಕಿ ಬಿಡಿರಿ' ಎಂದು ಹೇಳಿದನು. ಮೈಗಳ್ಳರಿಗಿಂತ ಚಟುವಟಿಕೆಯುಳ್ಳವರು ಮೇಲು ಎಂಬುದು ಈ ಪ್ರಸಂಗದ ತಾತ್ಪರ್ಯ.

(ಆಧಾರ: 'ಹೊಸ ಒಡಂಬಡಿಕೆ')

ಬಿಂದಾಸ್ ಹುಡ್ಗೀರು

8ನೇ ಪುಟದಿಂದ...

ವ್ಯಕ್ತಿ ಸ್ವಾತಂತ್ರ್ಯ ಎನ್ನುವುದು ತನ್ನನ್ನು ಶೋಷಣೆಗೆ ಒಳಪಡಿಸದ ಹಾಗೆ ಕಾಪಾಡಿಕೊಳ್ಳುವುದು ಎನ್ನುವುದರ ಬದಲಿಗೆ ಇತರರನ್ನು ಕೀಳಾಗಿ ಕಾಣುವುದು ಎಂದುಕೊಳ್ಳುವ ಸಾಧ್ಯತೆಗಳೂ ಇವೆ. ನಾನು ನನ್ನಿಷ್ಟ ನನಗಾಗಿ ನಾನೇ ಎನ್ನುವ ಧೋರಣೆಯಿಂದಾಗಿ ಸಂಬಂಧಗಳನ್ನು ಬಹಳ ಹಗುರವಾಗಿ ಕಂಡುಬಿಡುವ ಅಪಾಯ ಹೆಚ್ಚಾಗುತ್ತಿದೆ. ಸ್ವಾರ್ಥವೇ ಸ್ವಾತಂತ್ರ್ಯ. ಜೊತೆಗೆ ಜೀವನದ ಎಲ್ಲ ಹಂತಗಳಲ್ಲೂ ಹೆಂಗಸರು, ಸದಾ ಗಂಡಸರ ಜೊತೆಜೊತೆಗೆ ವ್ಯವಹರಿಸಬೇಕಾದ ಕಾರಣ ಅಲ್ಲಿ ಒಂದು ಸಮತೋಲನ ಕಳೆದುಕೊಳ್ಳುವುದೂ ಸಾಧಾರಣವಾಗಿ ಬಿಡುತ್ತಿದೆ. ಎಲ್ಲ ಅನಿಷ್ಟಗಳಿಗೂ ಮಹಿಳೆಯನ್ನೇ ಹೊಣೆಮಾಡುವ ಸಮಾಜದಲ್ಲಿ ಮಹಿಳೆ ತನ್ನನ್ನು ಕಾಪಾಡಿಕೊಳ್ಳಲು ಇನ್ನಷ್ಟು ಉಗ್ರವಾಗಿ ಸಮರ್ಥಿಸಿಕೊಳ್ಳಬೇಕಾಗಿ ಬಂದಿರುವುದರಿಂದ ಆಕೆ ದುಪ್ಪಟ್ಟು ಶ್ರಮವಹಿಸಿ ತನ್ನನ್ನು ಕಾಪಾಡಿಕೊಳ್ಳಬೇಕಾಗಿದೆ. ಅದಕ್ಕಾಗಿಯೇ ಇವತ್ತಿನ ಪೀಳಿಗೆಯ ಹುಡುಗಿಯರು ಮೊದಲಿನಿಂದಲೇ ಒಂದು ರೀತಿಯ ಒರಟುತನ, ಉಗ್ರತೆಯನ್ನು ರೂಢಿಸಿಕೊಂಡು ಅದನ್ನೇ ಸ್ವಾತಂತ್ರ್ಯ ಎಂದು ತಿಳಿಯುತ್ತಾರೆ.

ಸಮಾಜದಲ್ಲಿ ಮಹಿಳೆಯ ಸ್ಥಿತಿ ಬಗ್ಗೆ ಉಂಟಾಗಿರುವ ಬದಲಾವಣೆಯ ಅಳತೆಗೋಲು ಎಂದರೆ ಇವತ್ತು ಕನ್ನಡದಲ್ಲಿ ಜನಪ್ರಿಯವಾಗಿರುವ ಮಹಿಳಾ ಸ್ಟ್ಯಾಂಡ್ ಅಪ್ ಕಾಮಡಿಯನ್‌ಗಳು. ತರ್ಲೆ ಬಾಕ್ಸ್‌ನ ಸೋನು ವೇಣುಗೋಪಾಲ್ ವಿಡಂಬನೆ ಮಾಡುವ ಸಂಗತಿಗಳೆಲ್ಲ ಈಗ ಹತ್ತು ವರ್ಷದ ಮೊದಲು ಮುಕ್ತವಾಗಿ ಮಾತನಾಡಲು ಹಿಂಜರಿಯುತ್ತಿದ್ದಂತವೇ ಆಗಿದ್ದವು. ಮಹಿಳೆಯರ 'ಗುಪ್ತ' ವಿಷಯಗಳೆಲ್ಲ ಈಗ 'ಮುಕ್ತ ಮುಕ್ತ'. ಇವತ್ತಿನ ಹುಡುಗಿಯರು #ಮುಟ್ಟು ಅಂತ ರಕ್ತದ ಕಲೆಯ ಫೋಟೊವನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಜಂಭದಲ್ಲಿ ಹಾಕುತ್ತಾರೆ. 'ಎಕ್ಸ್'ಗಳ ಜೊತೆ ಬಿಂದಾಸ್ ಆಗಿ ಮಾತನಾಡುತ್ತಾರೆ, ಅನೇಕ ಸಂದರ್ಭಗಳಲ್ಲಿ ತಮ್ಮ 'ಕರೆಂಟ್'ಗೆ ಪರಿಚಯ ಮಾಡಿಸುತ್ತಾರೆ. 'ಡೈವೋರ್ಸ್ ಪಾರ್ಟಿ' ಕೂಡ ಮಾಡುತ್ತಾರೆ ಮತ್ತು 'ಬ್ರೇಕ್ ಅಪ್ ಸಾಂಗ್'ಅನ್ನು ಜೋರಾಗಿ ಹಾಡುತ್ತಾರೆ. ಇವತ್ತು ಯಾರಾದರೂ 'ನಾವು ಹುಡುಗಿಯರೇ ಹೀಗೆ' ಎಂದು ಬರೆದರೆ ಅದು ನಾನು ನಲವತ್ತು ವರ್ಷದ ಹಿಂದೆ ಬರೆದಿದ್ದಕ್ಕಿಂತ ಸಿಕ್ಕಾಪಟ್ಟೆ ಬದಲಾಗಿರುತ್ತದೆ.

ಮಳೆಬಿಲ್ಲ ಮರೆಯಿಂದ



8ನೇ ಪುಟದಿಂದ...

ಸಾಹಿತ್ಯದಲ್ಲೂ ಒಳ್ಳೊಳ್ಳೆಯ ಪುಸ್ತಕಗಳು ಬಂದವು. ವಸುಧೇಂದ್ರರ ಮೋಹನಸ್ವಾಮಿಯ ಆಚೆಗೆ ಕಾವ್ಯಾ ಕಡಮೆಯವರ 'ಪುನರಪಿ', ಇತ್ತೀಚೆಗೆ ಬಂದ ಸುಶಾಂತ್ ಕೋಟ್ಯಾನ್ ಅವರ 'ದೀಪವಿರದ ದಾರಿಯಲ್ಲಿ', ಕೆ. ಸತ್ಯನಾರಾಯಣ ಅವರ 'ಲೈಂಗಿಕ ಜಾತಕ' ಮುಂತಾದವುಗಳನ್ನು ಹೆಸರಿಸಬಹುದು. ಕಥೆಗಳ ಮಟ್ಟಿಗಂತೂ ಹಲವು ಯುವ ಬರಹಗಾರರು ಧೈರ್ಯದಿಂದ ಕ್ವೀರ್ ವಿಷಯಗಳ ಬಗ್ಗೆ ಬರೆಯುತ್ತಿದ್ದಾರೆ. ಮುದಿರಾಜ್ ಬಾಣದ್ ಅವರ 'ಚಾನ್ನೆ', ಮುಸ್ತಫಾ ಅವರ 'ಹರಾಂನ ಕಥೆಗಳು', 'ನೀಲಕುರಿಂಜಿ' ಕೃತಿಗಳಲ್ಲಿ ಹಲವಾರು ಕ್ವೀರ್ ಕಥೆಗಳಿವೆ. ಕ್ವೀರ್ ಜೀವಗಳ ಆತ್ಮಕಥೆಗಳಿಗೆ ಈ ವರ್ಷ ಸುಗ್ಗಿ. ಮಾನವಿ ಬಂಡೋಪಾಧ್ಯಾಯ ಅವರ 'ಗಂಡು ಜೀವ ಹೆಣ್ಣು ಭಾವ', ಮಂಜಮ್ಮ ಜೋಗತಿ ಅವರ 'ನಡುವೆ ಸುಳಿವ ಹೆಣ್ಣು', ಅಕ್ಕಯ್ ಪದ್ಮಸಾಲಿ ಅವರ 'ಅಕ್ಕಯ್' ಓದುಗರಿಗೆ ಹೊಸ ಲೋಕವನ್ನೇ ತೆರೆದಿಟ್ಟವು. ಅವರ ಕಾವ್ಯದಲ್ಲಿ ಶಿಲೋಕ್ ಮುಕ್ಕಾಟಿ, ಚಾಂದನಿ ಗಗನ, ರೂಮಿ ಹರೀಶ್, ಉಮಿ ಅವರಲ್ಲದೆ ಅನೇಕರು ಬರೆಯುತ್ತಿದ್ದಾರೆ. ಈ ಮಟ್ಟಿಗೆ ಬೆಳವಣಿಗೆಗಳು ಆಶಾದಾಯಕವಾಗಿ ಕಂಡಿವೆ.

ಕ್ವೀರ್ ಸಮುದಾಯದವರು ಅವರದೇ ಆದ ಸ್ವ ಸಹಾಯ ಗುಂಪುಗಳನ್ನು ಕಟ್ಟಿಕೊಂಡಿದ್ದಾರೆ. ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಉಚಿತವಾಗಿ ಚಿಕಿತ್ಸೆ ಕೊಡುವ ಸಮುದಾಯಸ್ನೇಹಿ ಕೌನ್ಸೆಲರುಗಳಿದ್ದಾರೆ. ಸಮುದಾಯ ಕೇಂದ್ರಿತ ಚಟುವಟಿಕೆಗಳಾಗುತ್ತವೆ. ಭಾರತದ ಅನೇಕ ಕಡೆ ಕ್ವೀರ್ ಚಿತ್ರೋತ್ಸವಗಳಾಗುತ್ತವೆ. ಅನೇಕ ಖಾಸಗಿ ಕಂಪನಿಗಳಲ್ಲಿ ಕ್ವೀರ್ ಸಮುದಾಯವನ್ನು ಒಳಗೊಳ್ಳುವ ಪ್ರಯತ್ನಗಳಾಗುತ್ತಿವೆ. ಯುನಿಸೆಕ್ಸ್ ಶೌಚಾಲಯಗಳ ನಿರ್ಮಾಣ ಮೆಟ್ರೊ ಸಿಟಿಗಳಲ್ಲಿ ಒಂದು ಬದಲಾವಣೆಯನ್ನು ಸೂಚಿಸುತ್ತಿದೆ. ಆದರೆ ಇವೆಲ್ಲವೂ ನಗರಕೇಂದ್ರಿತವಾದ ಬೆಳವಣಿಗೆಗಳು. ಇಂತಹ ಮುಕ್ತ ವಾತಾವರಣ ಹಳ್ಳಿಗಳು, ತಾಲ್ಲೂಕುಗಳು, ಜಿಲ್ಲೆಗಳು, ಅರೆ ಪಟ್ಟಣಗಳ ಕಡೆ ಇಲ್ಲವೆಂದೇ ಹೇಳಬೇಕು. ಅಲ್ಲಿಯವರೆಗೂ ತಲುಪುವ ಮಾರ್ಗಗಳು ಯಾವುವು ಎಂಬುದನ್ನು ನೆನೆಸಿಕೊಂಡರೆ ಕ್ವೀರ್ ಸಮುದಾಯ ನಡೆಯಬೇಕಾದ ದಾರಿ ದೂರವಿದೆ ಎಂದೇ ಹೇಳಬೇಕು.

ಇಲ್ಲಿ ಹೇಳಲೇಬೇಕಾದ ಮತ್ತೊಂದು ಮಾತಿದೆ. ಸುಪ್ರೀಂ ಕೋರ್ಟ್ ತೀರ್ಪು ಬಂದ ನಂತರದ ಮೂರು ವರ್ಷಗಳಲ್ಲಿ ಕ್ವೀರ್ ಸಮುದಾಯದ ಹುಡುಗರು ಸಮಾಜದ ಮತ್ತು ಕುಟುಂಬದ ಒತ್ತಡಗಳಿಗೆ ಹೆದರಿ ಮದುವೆಯಾದ ಎಷ್ಟೋ ಉದಾಹರಣೆಗಳಿವೆ. ಈ ಮೊದಲೂ ಆಗುತ್ತಿರಲಿಲ್ಲವಾ ಎಂದರೆ ಆಗುತ್ತಿತ್ತು. ಕೋರ್ಟ್ ತೀರ್ಪಿತ್ತ ಮೇಲೂ ಈ ರೀತಿಯ ಮದುವೆಗಳು ಮುಂದುವರೆಯುತ್ತಿವೆ ಎಂದರೆ ಸಮುದಾಯದಲ್ಲಿನ ಜನರಿಗೆ ತಮ್ಮ ಅಸ್ಮಿತೆಯನ್ನು ಒಪ್ಪಿಕೊಳ್ಳುವ ಧೈರ್ಯ ಬಂದಿಲ್ಲವೆಂದೇ ಅರ್ಥ. ಇವೆಲ್ಲದರ ನಡುವೆ ನಲುಗುವುದು ಇವರನ್ನು ಮದುವೆಯಾಗಿ ಬರುವ ಹೆಣ್ಣುಮಕ್ಕಳಲ್ಲವೇ? ಎಷ್ಟೋ ಸಂದರ್ಭಗಳಲ್ಲಿ ಪೋಷಕರಿಗೆ ಅವರ ಮಕ್ಕಳ ಬಗೆಗೆ ಹೀಗೊಂದು ಸುಳಿವು ಇದ್ದೇ ಇರುತ್ತದೆ. ಬೆದರಿಸಿ ಇಲ್ಲವೆ ನಾನಾ ಉಪಾಯ ಮಾಡಿ ಮದುವೆ ಮಾಡಿಸಿಬಿಡುತ್ತಾರೆ. ಇಲ್ಲೂ ಕೂಡ ಹೆಣ್ಣನ್ನು ಎರಡನೇ ದರ್ಜೆಯ ಪ್ರಜೆಯಾಗಿ ನೋಡುವ ಪುರುಷಪ್ರಾಧಾನ್ಯ ಮನೋಸ್ಥಿತಿ ಕೆಲಸ ಮಾಡುತ್ತಿರುವುದನ್ನು ಕಾಣಬಹುದು. ಕ್ವೀರ್ ಸಮುದಾಯದ ಜನ ಯಾವುದೋ ಒತ್ತಡಕ್ಕೆ ಮಣಿಯಬಾರದು ಎಂಬುದನ್ನು ಮನಗಾಣಬೇಕು. ಆಗ ದೀಪದ ದಾರಿಯ ಬಾಗಿಲು ತಾನಾಗೇ ತೆರೆದುಕೊಳ್ಳುತ್ತದೆ. ಆ ದೀಪದ ದಾರಿಯಲ್ಲಿ ಹೆಮ್ಮೆಯಿಂದ ನಾವೆಲ್ಲರೂ ಹೆಜ್ಜೆ ಹಾಕಬಹುದು. ಪೂರ್ಣಚಂದ್ರ ತೇಜಸ್ವಿ ಹೇಳಿದಂತೆ 'ನಾವು ಅಂದುಕೊಂಡಂತೆ ಬದುಕುವ ಸ್ವಾತಂತ್ರ್ಯ ಯಾವತ್ತೂ ಭಯಾನಕ ಹೋರಾಟದ ಫಲವೇ ಹೊರತು ಸುಲಭಕ್ಕೆ ಸಿಗುವುದಲ್ಲ'. ಹೋರಾಟದ ಧೈರ್ಯವನ್ನು ಜತನವಾಗಿ ನಮ್ಮೊಳಗೇ ಸಾಕುತ್ತಿರಬೇಕು ಅಷ್ಟೆ!

ಮೋಹನ ಸ್ವಾಮಿ ನಾಟಕದ ದೃಶ್ಯ

ಮುನ್ನೋಟ 19-12-2021 ರಿಂದ 25-12-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ಪ್ರತಿಭೆಗೆ ತಕ್ಕ ಅವಕಾಶಗಳು ಒದಗಿಬರುತ್ತವೆ. ವೈಯಕ್ತಿಕ ಕೆಲಸಗಳ ಬಗ್ಗೆ ಹೆಚ್ಚು ಗಮನಹರಿಸಿರಿ. ಕ್ರಯ ವಿಕ್ರಯ ಒಪ್ಪಂದದ ವ್ಯವಹಾರಗಳಿಂದ ಲಾಭ ಹೆಚ್ಚಾಗಿ ಬರುತ್ತದೆ. ಯಂತ್ರೋಪಕರಣ ಬಳಸುವ, ವಾಹನ ದುರಸ್ತಿ ಮಾಡುವವರಿಗೆ ಹೆಚ್ಚಿನ ಪ್ರಗತಿ ಇರುತ್ತದೆ. ಲೋಹದ ಪ್ರತಿಮೆ, ಬಟ್ಟೆ ವ್ಯಾಪಾರಸ್ಥರಿಗೆ ಉತ್ತಮ ವ್ಯವಹಾರವಿರುತ್ತದೆ. ತಂದೆಯಿಂದ ವ್ಯವಹಾರದ ಒಳಗುಟ್ಟು ತಿಳಿದುಕೊಳ್ಳಲು ಅವಕಾಶ ದೊರೆಯುತ್ತದೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ವ್ಯವಹಾರಗಳಲ್ಲಿ ಬಂಧುಗಳ ಮಧ್ಯೆ ಭಿನ್ನಾಭಿಪ್ರಾಯ ಬರಬಹುದು. ಅನಾರೋಗ್ಯವಿದ್ದಲ್ಲಿ ಸುಧಾರಿಸಲಿದೆ. ದೊಡ್ಡ ಮೊತ್ತದ ವಸ್ತು ಖರೀದಿಸುವಾಗ ಎಚ್ಚರವಿರಲಿ. ವಿದ್ಯಾರ್ಥಿಗಳು ಅಧ್ಯಯನದತ್ತ ಗಮನಹರಿಸಿ. ಸ್ವಂತ ವ್ಯವಹಾರದಲ್ಲಿ ಲಾಭ ಹೆಚ್ಚು ಇರಲಿದೆ. ಸ್ವಲ್ಪ ಕಾನೂನಿನ ತೊಂದರೆ ಬರಬಹುದು. ವಿದೇಶಿ ಯಂತ್ರಗಳ ಬಿಡಿಭಾಗ ತರಿಸಿ ಮಾರುವವರಿಗೆ ವ್ಯವಹಾರ ಹೆಚ್ಚಾಗುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ಕೃಷಿಕರ ಆದಾಯದಲ್ಲಿ ಅನಿಶ್ಚಿತತೆ ಎದುರಾಗಬಹುದು. ನಿಮ್ಮ ಅಗತ್ಯ ಪೂರೈಸುವಷ್ಟು ಹಣದ ಒಳಹರಿವು ಇರುತ್ತದೆ. ಜಾಮೀನು ಕೊಡುವುದು ಬಹಳ ದುಬಾರಿಯಾಗಬಹುದು. ವಿಶ್ವಾಸಪೂರ್ವಕ ಮಾತುಗಳಿಂದಾಗಿ ಸ್ನೇಹ ಸಂಪಾದನೆ ಮಾಡುವಿರಿ. ವಿದ್ಯುತ್ ಗುತ್ತಿಗೆದಾರರಿಗೆ ಬರುವ ಹಣ ನಿಧಾನವಾಗಬಹುದು. ಹಿರಿಯರಿಂದ ಅಮೂಲ್ಯ ದಾಖಲೆಗಳು ನಿಮಗೆ ಹಸ್ತಾಂತರ ಆಗಬಹುದು.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**

ಕೆಲವು ಮಹಿಳೆಯರಿಗೆ ಸ್ಥಾನಮಾನ ಲಭ್ಯವಾಗುತ್ತವೆ. ಲೆಕ್ಕಾಚಾರ ವ್ಯತ್ಯಾಸದಿಂದ ಲಾಭ ಕಡಿಮೆ ಆಗಬಹುದು. ಹಿರಿಯರ ಆರೋಗ್ಯ ವ್ಯತ್ಯಾಸವಾಗಬಹುದು. ಕೆಲಸದ ಸ್ಥಳದಲ್ಲಿ ನಿಮ್ಮ ಒಣ ಪ್ರತಿಷ್ಠೆಯಿಂದ ವಿರೋಧ ಬರಬಹುದು. ನೇಕಾರರಿಗೆ ಕೈತುಂಬಾ ಕೆಲಸ ಬಂದು ಧನ ಸಂಪಾದನೆಯಾಗುತ್ತದೆ. ಕಟ್ಟಡ ಕಾರ್ಮಿಕರಿಗೆ ಸಾಕಷ್ಟು ಕೆಲಸಗಳು ದೊರೆಯುತ್ತವೆ.

ಸಿಂಹ — **ಮಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ವ್ಯವಹಾರದಲ್ಲಿ ಮಹತ್ವದ ಬೆಳವಣಿಗೆ ನಡೆದು ನಿಮಗೆ ಸೂಕ್ತ ಸ್ಥಾನ ಸಿಕ್ಕು ಲಾಭ ಪಡೆಯುವಿರಿ. ಸಾಮಾಜಿಕ ಕ್ಷೇತ್ರದಲ್ಲಿರುವವರಿಗೆ ಕೀರ್ತಿ ಯಶಸ್ಸು ದೊರೆಯುತ್ತದೆ. ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಉದ್ಯೋಗದಲ್ಲಿ ಸಂತಸದ ಸುದ್ದಿ ಕೇಳುವಿರಿ. ನಿಮ್ಮ ಅಗತ್ಯ ಪೂರೈಸುವಷ್ಟು ಹಣ ಇರುತ್ತದೆ. ಮಹಿಳಾ ನೌಕರರಿಗೆ ಉದ್ಯೋಗದಲ್ಲಿ ಸ್ವಲ್ಪ ಕಿರಿಕಿರಿಯಾಗುವ ಸಾಧ್ಯತೆಗಳಿವೆ.

ಕನ್ಯಾ — **ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ವ್ಯವಹಾರದಲ್ಲಿ ನಿಮ್ಮ ಮುನ್ನಡೆಯನ್ನು ಸಾಧಿಸುವಿರಿ. ನಿಮ್ಮ ಕೆಲವೊಂದು ಕೆಲಸಗಳು ನಿಮಗೆ ಆಪಾದನೆ ತರಬಹುದು. ಲೇವಾದೇವಿ ನಡೆಸುವವರಿಗೆ ಮಧ್ಯಮ ಫಲಿತಾಂಶ ಇರುತ್ತದೆ. ಹೊಸ ವಾಹನ ಕೊಳ್ಳುವ ಯೋಗವಿದೆ. ದ್ರವ್ಯಾನುಕೂಲತೆ ನಿಮ್ಮ ನಿರೀಕ್ಷೆಯಂತೆ ಇರುತ್ತದೆ. ವ್ಯವಹಾರದಲ್ಲಿ ಸಾಕಷ್ಟು ಹಣ ಉಳಿಸುವಿರಿ. ಕಚೇರಿಯ ಆಂತರಿಕ ಸಮಸ್ಯೆಗಳಿಂದ ಮುಕ್ತಿ ಹೊಂದುವಿರಿ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖೆ 1,2,3**

ನ್ಯಾಯಾಲಯದ ತೀರ್ಪುಗಳು ಮುಂದೆ ಹೋಗಬಹುದು. ಸಹನೆ ಇದ್ದರೆ ಒಳ್ಳೆಯ ಫಲಿತಾಂಶ ನಿರೀಕ್ಷಿಸಬಹುದು. ಕೃಷಿಕರಿಗೆ ಆದಾಯ ಹೆಚ್ಚುತ್ತದೆ. ಬಂಧುಗಳೊಡನೆ ಸಂಬಂಧ ಸುಧಾರಿಸಿಕೊಳ್ಳಿ. ನಿವೇಶನ ಈಗ ಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಸಾಧನೆಗೆ ಉತ್ತಮ ಅವಕಾಶ ದೊರೆಯುತ್ತದೆ. ಮೂತ್ರಕೋಶದ ಕಾಯಿಲೆ ಇರುವವರು ಎಚ್ಚರ ವಹಿಸಿರಿ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ.

ವೃಶ್ಚಿಕ — **ವಿಶಾಖೆ 4 ಅನುರಾಧ, ಜ್ಯೇಷ್ಠ**

ಕುಟುಂಬ ಸದಸ್ಯರಲ್ಲಿ ವಾದವಿವಾದಗಳ ಸಾಧ್ಯತೆಯಿದೆ. ಕೋರ್ಟ್ ವಿಷಯದಲ್ಲಿ ಉತ್ತಮ ವಕೀಲರನ್ನು ನೇಮಿಸಿಕೊಳ್ಳಿ. ಶಸ್ತ್ರಚಿಕಿತ್ಸಕರಿಗೆ ಉತ್ತಮ ಗಳಿಕೆ, ಹೆಸರು ಬರುವುದು. ಹೊಸ ವ್ಯವಹಾರದಲ್ಲಿ ನಿರೀಕ್ಷಿತ ವ್ಯಕ್ತಿಗಳಿಂದ ಸಹಕಾರ ದೊರೆಯುವುದು. ವಿವಾಹ ಸಂಬಂಧಗಳಲ್ಲಿದ್ದ ವ್ಯತ್ಯಾಸಗಳು ದೂರವಾಗುತ್ತವೆ.

ಧನುಸ್ಸು — **ಮೂಲ, ಪೂರ್ವಾಷಾಢ, ಉತ್ತರಾಷಾಢ 1**

ಉದ್ಯೋಗ ಕ್ಷೇತ್ರದಲ್ಲಿನ ಸಮಸ್ಯೆಗಳಿಗೆ ಪರಿಹಾರ ದೊರಕುವುದು. ಅಧಿಕಾರಿಗಳಿಂದ ಸಹಾಯ ದೊರೆಯುವುದು. ಕೃಷಿಕರ ಆದಾಯ ಏರಿಕೆಯಾಗಲಿದೆ. ಆರ್ಥಿಕ ಪ್ರಗತಿಯಿದೆ. ಕುಟುಂಬದಲ್ಲಿ ಒಮ್ಮತದ ಅಭಿಪ್ರಾಯ ಮೂಡಿ ಎಲ್ಲರಲ್ಲಿ ಒಗ್ಗಟ್ಟು ಮೂಡುವುದು. ಹೊಸ ಆಸ್ತಿ ಖರೀದಿಗೆ ಆಲೋಚನೆ ಮಾಡುವಿರಿ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ಆರ್ಥಿಕ ಸ್ಥಿತಿ ಚೇತರಿಸುತ್ತದೆ. ನ್ಯಾಯಾಲಯದ ವ್ಯವಹಾರಗಳಲ್ಲಿ ನಿಮಗೆ ಯಶಸ್ಸು ಇರುತ್ತದೆ. ಹಿತೈಷಿಗಳಿಂದ ನಿಮ್ಮ ವ್ಯವಹಾರಗಳಿಗೆ ಸಹಾಯ ದೊರೆತು ಅದರಲ್ಲಿ ಉನ್ನತಿ ಕಾಣಬಹುದು. ರಾಜಕಾರಣಿಗಳಿಗೆ ಶುಭ ಸಮಾಚಾರವಿದೆ. ವಸ್ತ್ರಗಳ ಸಗಟು ವ್ಯಾಪಾರಿಗಳಿಗೆ ಅಭಿವೃದ್ಧಿ ಇದೆ. ಹಿರಿಯರ ಆರೋಗ್ಯದಲ್ಲಿ ಸ್ವಲ್ಪ ಚೇತರಿಕೆ ಇರಲಿದೆ. ಭೂಮಿ ಅಭಿವೃದ್ಧಿಪಡಿಸುವವರಿಗೆ ಹೆಚ್ಚಿನ ಕೆಲಸ ದೊರೆಯುತ್ತವೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ದಾಯಾದಿ ಕಲಹಗಳು ಕಡಿಮೆಯಾಗಲಿವೆ. ಸಂತಾನ ಅಪೇಕ್ಷಿತರಿಗೆ ಶುಭ ಸಮಾಚಾರವಿದೆ. ಪ್ರಿಯರಿಂದ ಅಥವಾ ಮಕ್ಕಳಿಂದ ಶುಭ ಸಮಾಚಾರ ಕೇಳುವಿರಿ. ಸರ್ಕಾರಿ ಕೆಲಸಗಳಲ್ಲಿ ಮುನ್ನಡೆಯಿದೆ. ಅನಿರೀಕ್ಷಿತ ಪ್ರೇಮ ಪ್ರಕರಣ ನಿಮಗೆ ತೊಂದರೆ ಮಾಡಬಹುದು.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ಒಡಹುಟ್ಟಿದವರ ಸಮಸ್ಯೆ ಉಲ್ಬಣಿಸಬಹುದು. ಮಹಿಳೆಯರಿಗೆ ಉದ್ಯೋಗದಲ್ಲಿ ಬಡ್ತಿ ದೊರೆಯಬಹುದು. ಉದ್ಯಮಿಗಳು ಋಣ ಭಾರದಿಂದ ಹೊರಬರಲು ಮಾರ್ಗ ದೊರೆಯುತ್ತದೆ. ಹಣಕಾಸು ಸಂಸ್ಥೆಗಳಿಗೆ ಹೆಚ್ಚಿನ ಪ್ರಗತಿ ಇರುತ್ತದೆ. ಗುತ್ತಿಗೆದಾರರಿಗೆ ಒಳ್ಳೆಯ ಗುತ್ತಿಗೆಗಳು ದೊರೆಯುತ್ತದೆ. ಹೊಸ ಯೋಜನೆ ಪ್ರಾರಂಭಿಸಲು ಮಾತುಕತೆ ನಡೆಸುವಿರಿ. ಸ್ಥಿರಾಸ್ತಿ ಕೊಳ್ಳುವ ವಿಚಾರದಲ್ಲಿ ಹೆಚ್ಚಿನ ಯಶಸ್ಸನ್ನು ಕಾಣುವಿರಿ.

ಪದಬಂಧ 2718



ಮೇಲಿಂದ ಕೆಳಕ್ಕೆ

1. ನುಡಿಯ ಅಧಿದೇವತೆ 4
2. ಶ್ರಮದ ಫಲದಿಂದ ಸದಾ ರೆಡಿಯಾಗಿರುವ ಪರ್ಣಕುಟೀರ 4
3. ಒಂದು ಕಾಲಘಟ್ಟದಿಂದ ಮತ್ತೊಂದಕ್ಕೆ ಇರುವ ವ್ಯತ್ಯಾಸ 4
4. ಸೋಲು ಕಾಣದ ಕ್ರೀಡೆ 4
7. ವ್ಯಕ್ತಿಗೆ ಸೀಮಿತವಾದ ಕಿರಿದಾದ ವಿಶ್ವ 5
9. ಹತ್ತಿರದಿಂದ ಕಾಣಿಸದ ನೋಟದ ಭಾಗ್ಯ ಕಿರುತೆರೆಯಲ್ಲಿ ಲಭ್ಯ 5
10. ಸಾಮೀಪ್ಯಕ್ಕೊಂದು ಪರ್ಯಾಯ 3
11. ಬೆಳಕಿನಾಚೆಯಿರುವ ಛಾಯೆ 3
15. ಶುಭೋದಯದ ಹಾರೈಕೆ 4
16. ಹಲಬಗೆಯ ವಸ್ತು ಚಿಂತೆಗೀಡು ಮಾಡಿದೆ 4
17. ಮೂರು ಮನನೀಯ ನಡತೆ 3
18. ಮಾರಾಟದ ದರದಲ್ಲಿ ಸಿಗುವ ಔದಾರ್ಯ 4

ಎಡದಿಂದ ಬಲಕ್ಕೆ

1. ಇದೀಗ ಭವ್ಯತೆಯ ಹೆದ್ದಾರಿ ಪಡೆದ ವಿಶ್ವನಾಥನ ಪಟ್ಟಣ 4
3. ವಿಶ್ವನಾಥ ಪುಣ್ಯಸ್ಥಳದ ಪಕ್ಕದಲ್ಲಿ ಹರಿವ ಪವಿತ್ರ ನದಿ 4
5. ಕೇಳುವುದಕ್ಕೂ ಮೀರಿದ್ದು 5
6. ಶತ್ರುವಿನ ಹೆಸರು 4
8. ಬಾಯಿ ಚಪ್ಪರಿಸುತ್ತಾ ಸವಿಯುವ ಭೋಜನ 3
10. ತಾಳ್ಮೆಯ ಗುಣ 3
12. ಮತ್ತೆ ಕೇಳಿಸುವ ಕೂಗು 4
13. ಲಕ್ಷ್ಮೀ ಕಟಾಕ್ಷದಿಂದ ಸುಖ ಸಂತೋಷಗಳನ್ನು ಅನುಭವಿಸುತ್ತಿರುವವ 4
14. ಶಿವನ ಜೊತೆ ಸೇರಿದ ಅಮೂಲ್ಯ ರತ್ನ 3
15. ಒಳ್ಳೆಯ ಚರಿತ್ರೆಯುಳ್ಳವ 4
17. ಸದಾ ಉಪಾಯ ಹುಡುಕುವ ಮೋಸದ ಮೃಗ 4
19. ತ್ರೇತಾಯುಗದ ನಾಯಕ ಮತ್ತು ಖಳನಾಯಕ 5
20. ನುಚ್ಚು ನುಚ್ಚಾಗಿ ಕೈಗೆ ಸಿಗುವಂತದ್ದು 4
21. ಮೊದಲಿನಂತೆಯೇ ಇರಬಹುದಾದ ಅವಸ್ಥೆ 4

ಪದಬಂಧ ಉತ್ತರ -2717

ಮೇಲಿಂದ ಕೆಳಕ್ಕೆ

1. ಪತ್ರಿಕಾರಂಗ 2. ಮನೋಕಾರಕ 4. ವರ್ಷಾಕಾಲ 6. ಗರಿಮುರಿ 8. ಮಂಗಳಧ್ವನಿ 11. ಮರುಳ 13. ದಿನಸಿ 14. ದಡ್ಡತನ 15. ವಿಕಾರಮನ 16. ಕಮಲಹರ 17. ವಿಮರ್ಶಕ

ಎಡದಿಂದ ಬಲಕ್ಕೆ

1. ಪರಶುರಾಮ 3. ಶಿವರಾತ್ರಿ 5. ನೋಡುಗ 7. ರಂಗಮಂದಿರ 9. ಮುಪ್ಪು 10. ಮಲಮಗ 12. ಕದಿರಿ 14. ದಳವಿ 16. ಕಸಿವಿಸಿ 18. ಅಡ್ಡ 19. ಕಾಲನಿಯಮ 20. ನಲಿಮ 21. ಹರಕಲು 22. ನವಸಾಗರ

ಚಹಾ 'ಕಪ್'ನಲ್ಲಿ ಬದುಕಿನ ಜೀವರಸ

ಆಂಟನಿ ಬಾರ್ಕೂರು

ವಿಮರ್ಶೆ

ಈ ವರ್ಷ ಜ್ಞಾನಪೀಠ ಪ್ರಶಸ್ತಿಗೆ ಭಾಜನರಾದ ಕೊಂಕಣಿ ಸಾಹಿತಿ ಮತ್ತು ಚಳವಳಿಗಾರ ದಾಮೋದರ ಮಾವಜೊ ಅವರ ಕಾದಂಬರಿ 'ಜೀವ ಕೊಡಲೇ? ಚಹಾ ಕುಡಿಯಲೇ?', ಹದಿಹರಿಯದ ಹುಡುಗನ ದೃಷ್ಟಿಕೋನದಿಂದ ಬದುಕನ್ನು ಅವಲೋಕಿಸುತ್ತದೆ.

'ಚಹಾ ಬೇಕನ್ನಿಸಿತು' ಅಂತ ಆರಂಭವಾಗುವ ಕಥೆ, 'ಸಾಯಲೇ? ಇಲ್ಲ ಚಹಾ ಕುಡಿಯಲೇ' ಎನ್ನುವ ವಿಷಣ್ಣ ಪ್ರಶ್ನೆಯೊಂದಿಗೆ ಮುಗಿಯುತ್ತದೆ. ಇದರ ನಡುವೆ ವಿಪಿನ್ ಎನ್ನುವ ತಂದೆ, ತಾಯಿ ಇಬ್ಬರಿಂದಲೂ ನಿರ್ಲಕ್ಷ್ಯಕ್ಕೊಳಗಾದ ಬಾಲಕ, ಪ್ರಪಂಚವನ್ನು ನೋಡುವ ವಿನೂತನ ದೃಷ್ಟಿಕೋನವನ್ನು, ಮಾವಜೊ ಅವರು ಬಹಳ ಹೃದಯಂಗಮವಾಗಿ ಚಿತ್ರಿಸಿದ್ದಾರೆ. ತಾಯಿಯ ಅಸಡ್ಡೆ, ತಂದೆಯ ಅತಿ ಶಿಸ್ತು, ರೋಗಗ್ರಸ್ತರನ್ನು ನೋಡಿಕೊಳ್ಳುವ ಕಷ್ಟ - ಇಂತಹ ಸನ್ನಿವೇಶದಲ್ಲಿ ಬೆಳೆವ ಹುಡುಗನ ವ್ಯಕ್ತಿತ್ವ ಮಾಮೂಲಿ ಹುಡುಗರಿಗಿಂತ ಬೇರೆಯದೇ ಛಾಪನ್ನು ಪಡೆದುಕೊಳ್ಳುತ್ತದೆ.

ನಮಗೆ ವಿಪರೀತ ನೋವೆನಿಸಿದರೂ ವಿಪಿನ್‌ಗೆ ಇದರಿಂದ ನೋವೇ ಆಗುತ್ತಿಲ್ಲವೇನೋ ಅನಿಸುತ್ತದೆ. ವಿಪಿನ್ ಪ್ರೌಢನಾದಾಗ ಅವನ ಜೀವನದಲ್ಲಿ ಬರುವ ಹುಡುಗಿಯರು, ಸಂಬಂಧಿಕರು, ಆಗಂತುಕರೊಂದಿಗೆ ಅವನು ನಡಕೊಳ್ಳುವ ವಿಧಾನ ಕೊಂಚ ವಿಲಕ್ಷಣವೆನಿಸಿ, ಇದರ ಹಿಂದಿನ ಕಾರಣ ಅವನ ಬಾಲ್ಯದ ಸನ್ನಿವೇಶಗಳೋ ಅಥವಾ ಅವನು ಜೀವನವನ್ನು ನೋಡುವ ದೃಷ್ಟಿಕೋನವೋ ಅಥವಾ ಅವನ ಪ್ರಶ್ನಿಸುವ ಮನೋಭಾವವೋ ಅಥವಾ ಇವನು ಒಬ್ಬ ವ್ಯಕ್ತಿಯಾಗಿಯೇ ಇಂಥವನೋ ಅನ್ನುವ ಜಿಜ್ಞಾಸೆ ಓದುಗರನ್ನು ಕಾಡುತ್ತದೆ. ಹೀಗೆ ಸೂಕ್ಷ್ಮ ಚಿತ್ರಣವನ್ನು ಮಾತ್ರ ತೋರಿಸಿ ಅದರ ಅರ್ಥವನ್ನು ಓದುಗರಿಗೇ ಬಿಟ್ಟಿರುವುದು ಈ ಕಾದಂಬರಿಯ ಶಕ್ತಿ ಕೂಡಾ.

ಒಂದು ಸನ್ನಿವೇಶ - ತಂದೆ ಸತ್ತಿರುತ್ತಾರೆ. ಆಗ ವಿಪಿನ್ ಕಲಿಕೆಗೆ ಸಹಾಯ ಮಾಡುತ್ತಿರುವ ಹುಡುಗ ಕರೆಮಾಡಿ ತನ್ನ ಪರೀಕ್ಷೆಯ ಕುರಿತು ಕೆಲವು ಸಂದೇಹಗಳನ್ನು ಕೇಳುತ್ತಾನೆ. ವಿಪಿನ್, ಹೆಣ ಬಿಡಿಸಲು ಬಿಲ್ ಸಂದಾಯಮಾಡುತ್ತಿರುವ ಜೊತೆಗೇ ಆ ಹುಡುಗನ ಸಂದೇಹವನ್ನೂ ಪರಿಹರಿಸುತ್ತಾನೆ. ಹೀಗೆ ಅವನು ತಟಸ್ಥನಂತೆ ಭಾಸವಾಗುತ್ತಾನೆ. ಆದರೆ, ಮುಂದೆ 'ಸಾಯಲೇ? ಇಲ್ಲ ಚಹಾ ಕುಡಿಯಲೇ?' ಎಂದು ಯೋಚನೆ ಮಾಡುವುದು ಕಂಡಾಗ ಅವನ ತಾಟಸ್ಥ್ಯದ ಬಗ್ಗೆ ಹೊಸ ಪ್ರಶ್ನೆ ಮೂಡುತ್ತದೆ.

ಮಾವಜೊ ಅವರು ಬಲಪಂಥೀಯ ಧೋರಣೆಗಳನ್ನು ತಮ್ಮ ಪ್ರಖರ ಮಾತುಗಳಿಂದ ಖಂಡಿಸಿ, ಸದ್ಯ ಪೊಲೀಸ್ ರಕ್ಷಣೆಯಲ್ಲಿರುವವರು. ಅವರ ಈ ಕಥೆಯಲ್ಲಿ ಸಹ ಮತಾಂತರ, ಧಾರ್ಮಿಕ ದಬ್ಬಾಳಿಕೆ, ಮುಸ್ಲಿಂ ದಮನ, ಇತ್ಯಾದಿ ವಿಚಾರಗಳ ಸುತ್ತ ಹಲವಾರು ಘಟನೆಗಳು ಬಂದು ಹೋಗುತ್ತವೆ. ಕಥೆಯ ಓಟಕ್ಕೆ ಇವು ಪೂರಕವಾಗುತ್ತವಾದರೂ ಕೆಲವು ಟಿಪ್ಪಣಿಗಳು ಕಥಾನಾಯಕನ ಮನೋಪ್ರಪಂಚಕ್ಕಿಂತ ಮಾವಜೊ ಅವರ ಅಸಹನೆಯ ಅಭಿವ್ಯಕ್ತಿಯಂತೆ ಗೋಚರಿಸುತ್ತವೆ. ಹಲವಾರು ಕಡೆ ಕಥಾನಾಯಕ ತಾನು ಓದುವ ಪುಸ್ತಕಗಳ ಬಗ್ಗೆ ಮಾತಾಡುವುದು, ಅದು ಕಥಾನಾಯಕನೋ ಅಥವಾ ಕಥಾ ಲೇಖಕರೋ ಎನ್ನುವ ಪ್ರಶ್ನೆ ಉದ್ಭವಿಸುವಂತೆ ಮಾಡುತ್ತದೆ.

ಬಾಲಕನ ಕಣ್ಣಿನಿಂದ ಬಹು ಸಾಮಾನ್ಯವೆನ್ನಿಸುವ ಘಟನೆಗಳ ಮೂಲಕ ಸಂಕೀರ್ಣವಾದ ಮಾನವಗುಣಗಳ ಸಂಘರ್ಷ ಮತ್ತು ವ್ಯಕ್ತಿತ್ವಗಳ ತೊಳಲಾಟವನ್ನು ಸಮರ್ಥವಾಗಿ ನಿರೂಪಿಸುತ್ತಾ ಸಾಗುವ ಕಥೆಯಲ್ಲಿ, ಹುಡುಗ ಬೆಳೆದಂತೆ, ಹಲವು ವ್ಯಕ್ತಿತ್ವಗಳ ಅನಾವರಣವಾಗುತ್ತಾ ಹೋಗುತ್ತದೆ. ಕೇವಲ ಸಮಾಜದ ತೋರಿಕೆಗಾಗಿ ಜೊತೆಗಿರುವ ಗಂಡ ಹೆಂಡಿರ ಸಂಬಂಧ, ನಾಲಿಗೆಯ ಚಪಲ, ಸಮಾಜದ ವಿವಿಧ ಕೋಮುಗಳ ನಡುವಿನ ಬಹುವಿಧ ಆಯಾಮ, ರೋಗ ರುಜಿನಗಳ ಬರ್ಬರತೆ, ನೆಂಟರಿಷ್ಟರ ಕುತಂತ್ರ - ಹೀಗೆ ಹಲವಾರು ಮಜಲುಗಳಲ್ಲಿ ಅನಾವರಣಗೊಳ್ಳುವ ಮನುಷ್ಯನ ಮನೋಭಿತ್ತಿಯನ್ನು ಹಲವು ಸೂಕ್ಷ್ಮಗಳ ಮೂಲಕ ಚಿತ್ರಿಸಲಾಗಿದ್ದು ಮನಮುಟ್ಟುವಂತಿದೆ. ಹಾದರದ ಸನ್ನಿವೇಶಗಳನ್ನು ಚಿತ್ರಿಸುವಾಗಲೂ, ಲೇಖಕರು ಹುಡುಗನ ದೃಷ್ಟಿಕೋನವನ್ನು ಬಿಟ್ಟು ಹೋಗುವುದಿಲ್ಲ - ಇಲ್ಲಿ ಮಾವಜೊ ತೋರುವ ಸಂಯಮ ಇಷ್ಟವಾಗುತ್ತದೆ.

ಚಹಾ ವಿಪಿನ್‌ನ ನೆಚ್ಚಿನ ಪೇಯ. ಅವನ ಅಮ್ಮನಿಗೂ ಇಷ್ಟ. ಆದರೆ, ಮಾಡಿಕೊಳ್ಳಲು ಉದಾಸೀನ - ಅದು ಅವಳ ವ್ಯಕ್ತಿಚಿತ್ರಣ ಕೂಡಾ. ಹೀಗೆ ಚಹಾ ಬಹಳಷ್ಟು ಸನ್ನಿವೇಶಗಳಲ್ಲಿ ಹಿನ್ನೆಲೆಯಾಗಿ ಬರುತ್ತದೆ.

ಕಾದಂಬರಿಯ ಹರಿವು ಮತ್ತು ಹಂದರ 'ಮುಂದೇನಾಗುತ್ತದೆ' ಎನ್ನುವ ಕುತೂಹಲವನ್ನು ಉಳಿಸಿಕೊಂಡು ಹೋಗುತ್ತದೆ. ವಿಪಿನ್, ಫಾತಿಮಾ, ಚಿತ್ರಾ, ಸ್ಟೆಲ್ಲಾ ಇವರೆಲ್ಲರ ತಳಮಳಗಳು ನಮ್ಮವೇ ಆಗಿ, ನಾವೂ ಮಾವಜೊ ಅವರೊಂದಿಗೆ ಗೋವಾದ ಹಲವು ಊರುಗಳಲ್ಲಿ ಒಂದು ಸುತ್ತು ಹೋಗಿ ಬರುತ್ತೇವೆ.

ಕಥೆಯ ಹಂದರ ವಿಪಿನ್‌ನ ಸುತ್ತಲಿನ ಹತ್ತಾರು ಮುಖಗಳ ಪರಿಚಯ ಮಾಡಿಸುತ್ತಾ ಹೋಗುತ್ತದಾದರೂ ಇದು ಕೇವಲ ವಿಪಿನ್‌ನ ಕಥೆಯಲ್ಲ. ಅಲ್ಲಿ ಬರುವ ಮಾರ್ಟಿನ್ ಸರ್, ಕಾಶ್ತಾಬಿರ್, ಫಾತಿಮಾ, ಚಿತ್ರಾ ಕೂಡಾ ಆಪ್ತರಾಗುತ್ತಾರೆ. ಕೆಲವೊಮ್ಮೆ ಫಾತಿಮಾಳತ್ತ ವಿಪಿನ್‌ನ ತಾತ್ಸಾರದ ಬಗ್ಗೆ ಓದುಗರಿಗೆ ವಿಪಿನ್‌ನ ಮೇಲೆಯೇ ಕೋಪ ಬರುವಷ್ಟು ಆ ಪಾತ್ರ ಮನದುಂಬುತ್ತದೆ. ಇದರೊಂದಿಗೆ ಬದಲಾಗುತ್ತಿರುವ ಸಮಾಜದ ಧೋರಣೆಗಳ ಬಗ್ಗೆ ಮತ್ತು ಅದರಿಂದಾಗುತ್ತಿರುವ ಅನಾಹುತಗಳ ಬಗ್ಗೆ ಕಾಳಜಿ, ಕಳವಳ ಮತ್ತು ವಿರೋಧ ವ್ಯಕ್ತಪಡಿಸುತ್ತಾ ಸಾಗುವುದರಿಂದ, ಈ ಕಾದಂಬರಿ ವರ್ತಮಾನ ಕಾಲಕ್ಕೂ ಸಲ್ಲುವ ಕೃತಿಯಾಗುತ್ತದೆ.

ಅನುವಾದಕ ಕಿಶೂ ಬಾರ್ಕೂರು ಸಶಕ್ತ ಕನ್ನಡದ ಬಳಕೆಯಿಂದ, ಕಥೆಯ ಓಘವನ್ನು ಕಾಪಿಟ್ಟುಕೊಂಡು, ಗೋವಾದ ಕೊಂಕಣಿ ಜನಮನದ ಚಿತ್ರಣವನ್ನು ಅತ್ಯಂತ ನಾಜೂಕಿನಿಂದ ಕನ್ನಡಕ್ಕೆ ತಂದಿದ್ದಾರೆ. ಕಾದಂಬರಿಯ ಮಾತುಗಳು ಮಂಗಳೂರು ಕನ್ನಡದ ಛಾಯೆಯನ್ನು ಹೊಂದಿರುವುದು ಗೋವೆಯ ಪ್ರಾದೇಶಿಕತೆಗೆ ಬಹು ಹತ್ತಿರವಾಗಿಸುತ್ತದೆ. ಕನ್ನಡದಲ್ಲಿದ್ದರೂ ಗೋವೆಯ ಜಾಯಮಾನದ ಕಥೆಯಾಗಿಯೇ ಉಳಿದು, ವರ್ತಮಾನಕ್ಕೂ ಸ್ಪಂದಿಸುತ್ತಾ ಓದುಗರಿಗೆ ಹೊಸತೊಂದು ಅನುಭವವನ್ನು ನೀಡುತ್ತದೆ. ಕನ್ನಡ ಪುಸ್ತಕಗಳ ಕಪಾಟಿನಲ್ಲಿ ಇರಲೇಬೇಕಾದ ಈ ಕೃತಿಯನ್ನು ತನ್ನ ಮೊದಲ ಪ್ರಕಟಣೆಗಳಲ್ಲಿಯೇ ಕಾಣಿಕೆಯಾಗಿ ಕೊಟ್ಟಿರುವ 'ಬಹುವಚನ'ದ ನಡೆಯೂ ಅಭಿನಂದನೆಗೆ ಪಾತ್ರವಾಗುವಂಥದ್ದು. ❖

ಪು: 282 ₹400

ಜೀವ ಕೊಡಲೇ? ಚಹ ಕುಡಿಯಲೇ?
ಲೇ: ದಾಮೋದರ ಮಾವಜೊ
ಕನ್ನಡಕ್ಕೆ: ಕಿಶೂ ಬಾರ್ಕೂರು
ಪ್ರ: ಬಹುವಚನ
ಸಂ: 6362588659

ಐದು ಸಂಪುಟಗಳು ಹಲವಾರು ಚಿಂತನೆ

ಪು: 636 ₹500
ಪು: 620 ₹500
ಪು: 544 ₹450
ಪು: 416 ₹350
ಪು: 360 ₹300

ಎಲ್ಲ ಕೃತಿಗಳ ಲೇಖಕ: ಡಾ. ಕಾ. ವೆಂ. ಶ್ರೀನಿವಾಸಮೂರ್ತಿ
ಪ್ರಕಾಶನ: ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು
ಸಂ: 9845062549

ಎಚ್. ದಂಡಪ್ಪ

ಒಳನೋಟ

ಡಾ.ಕಾ.ವೆಂ. ಶ್ರೀನಿವಾಸಮೂರ್ತಿಯವರು ಇಲ್ಲಿಯವರೆಗೆ ಬರೆದಿರುವ ವಿವಿಧ ಪ್ರಕಾರಗಳ ಕೃತಿಗಳನ್ನು ಐದು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಸಾಹಿತಿಯೊಬ್ಬನ ಸಮಗ್ರ ಸಾಹಿತ್ಯದ ಪ್ರಕಟಣೆ ಪ್ರಾರಂಭವಾದದ್ದು ಐದು ದಶಕಗಳ ಹಿಂದೆ. ಈ ಬಗೆಯ ಸಮಗ್ರ ಸಂಪುಟಗಳಿಂದ ಸಂಶೋಧಕನಿಗೆ, ಸಾಹಿತ್ಯಚರಿತ್ರಕಾರನಿಗೆ, ಅಷ್ಟೇ ಅಲ್ಲ ಓದುಗನಿಗೂ ಲಾಭವಿದೆ. ಲೇಖಕನ ಮೊದಲ ಕೃತಿಯಿಂದ ಕೊನೆಯ ಕೃತಿಯವರೆಗೂ ಆಗಿರುವ ಆಲೋಚನಾ ಕ್ರಮ, ಅಭಿವ್ಯಕ್ತಿಯ ಸ್ವರೂಪ, ಆಯಾಯ, ಯುಗ ಧರ್ಮದ ಅನುಭವದ ಸ್ವರೂಪ, ಸಾಂಸ್ಕೃತಿಕ ಚಿಂತನೆಯ ನೆಲೆಗಳ ಸ್ವರೂಪವನ್ನು ಗುರುತಿಸಲು ಸಾಧ್ಯವಾಗುತ್ತದೆ.

ಶ್ರೀನಿವಾಸಮೂರ್ತಿ ಅವರ ಮೊದಲ ಸಂಪುಟವು 'ಕನ್ನಡ ಪರ ಚಿಂತನೆ ಮತ್ತು ಪರಂಪರೆ', 'ಸಂಕೀರ್ಣ' ಎಂಬ ಎರಡು ಭಾಗಗಳನ್ನು ಒಳಗೊಂಡಿದೆ. ಮೊದಲನೇ ಭಾಗ ಪಿಎಚ್.ಡಿ ಪ್ರಬಂಧವಾಗಿದ್ದು ಎರಡನೇ ಭಾಗದಲ್ಲಿ ಮೊದಲನೇ ಭಾಗಕ್ಕೆ ಪೂರಕವಾಗಿ ಕನ್ನಡ ಭಾಷೆ, ಸಂಸ್ಕೃತಿ, ಕನ್ನಡ ನಾಡಿನ ಜನರ ಸಾಂಸ್ಕೃತಿಕ ಪರಿಸರ ಇತ್ಯಾದಿಗಳನ್ನು ಕುರಿತ ಲೇಖನಗಳಿವೆ.

ಇಲ್ಲಿನ ಅಧ್ಯಯನ ಕ್ರಮದಲ್ಲಿ ಎರಡು ಬಗೆಗಳಿವೆ. 1) ಕನ್ನಡ ಸಾಹಿತ್ಯ ಪರಂಪರೆಯ ವಿವಿಧ ಪ್ರಕಾರಗಳಲ್ಲಿ ಕಂಡುಬರುವ ಕನ್ನಡ ಪರ ಚಿಂತನೆಗಳ ಅಧ್ಯಯನ. 2) ಕನ್ನಡ ಸಂಸ್ಕೃತಿಯನ್ನು ಮಾನವಿಕ ಶಾಸ್ತ್ರಗಳ ನೆಲೆಯಿಂದ ಅಧ್ಯಯನ. ಕನ್ನಡ ಪರ ಚಿಂತನೆ ಭಾಗದಲ್ಲಿ ಕವಿರಾಜಮಾರ್ಗಕಾರನಿಂದ ಮೊದಲ್ಗೊಂಡು ದಲಿತ ಬಂಡಾಯ ಕೃತಿಗಳಲ್ಲಿ ಕಂಡು ಬರುವ ಕನ್ನಡ ಪರ ಚಿಂತನೆಗಳವರೆಗೆ ಬೆಳಕು ಚೆಲ್ಲಲಾಗಿದೆ.

'ಸಂಕೀರ್ಣ' ಭಾಗದಲ್ಲಿ ಶಿಕ್ಷಣ, ಔದ್ಯಮಿಕ, ಕಂಪ್ಯೂಟರ್, ಕೇಂದ್ರ ಮತ್ತು ರಾಜ್ಯಗಳ ನಡುವೆ ಕನ್ನಡ, ಕನ್ನಡ ಚಳವಳಿ, ಅವುಗಳ ಸ್ವರೂಪ, ಕನ್ನಡದ ಅನುಷ್ಠಾನದ ಬಗೆಗೆ ವಿವಿಧ ಸಂಘ ಸಂಸ್ಥೆಗಳು, ಪ್ರಾಧಿಕಾರಗಳು ಕೊಟ್ಟಿರುವ ವರದಿಗಳ ವಿವರಗಳು ಇವೆ. ಕನ್ನಡ-ಕನ್ನಡಿಗ-ಕರ್ನಾಟಕದ ಬಗೆಗೆ ವಿಪುಲವಾದ ಮಾಹಿತಿ ಈ ಸಂಪುಟದಲ್ಲಿ ದೊರೆಯುತ್ತದೆ.

ಎರಡು ಮತ್ತು ಮೂರನೇ ಸಂಪುಟಗಳು ವಿಮರ್ಶೆಗೆ ಸಂಬಂಧಿಸಿದ ಲೇಖನಗಳನ್ನೊಳಗೊಂಡಿವೆ. ಕವಿರಾಜಮಾರ್ಗದಿಂದ ಪ್ರಾರಂಭಿಸಿ ಇತ್ತೀಚಿನ ಲೇಖಕರವರೆಗಿನ ಕೃತಿಗಳ ಪರಿಶೀಲನೆ ಎರಡೂ ಸಂಪುಟಗಳಲ್ಲಿದ್ದು ದಲಿತ, ಬಂಡಾಯ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳು ಹೆಚ್ಚಾಗಿವೆ. ಸಂಸ್ಕೃತಿಯ ಅಧ್ಯಯನದ ನೆಲೆ ಇಲ್ಲಿದೆ.

ಹಳಗನ್ನಡ ನಡುಗನ್ನಡ, ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಪಂಥದ ಕವಿ ಕೃತಿಗಳನ್ನು ಸಾಮಾಜಿಕ ವಿಮರ್ಶೆಯ ನೆಲೆಗಳಲ್ಲಿ ವಿವರಣೆಗೆ ಒಳಪಡಿಸಿರುವ ಇಲ್ಲಿನ ಲೇಖನಗಳು ಅಂಬೇಡ್ಕರ್, ಸ್ತ್ರೀವಾದ, ಒಮ್ಮೊಮ್ಮೆ ಮಾರ್ಕ್ಸ್, ಲೋಹಿಯಾ ವಿಚಾರಗಳ ಹಿನ್ನೆಲೆಯಲ್ಲಿ ವಿವರಿಸಲು ಪ್ರಯತ್ನಿಸಿರುವುದು ಕುತೂಹಲಕಾರಿ. ಉದಾಹರಣೆಗೆ ಕನ್ನಡ ಸಾಹಿತ್ಯ ಮತ್ತು ದಲಿತತ್ವ, ಬಂಡಾಯ ಸಂವೇದನೆ, ಚರಿತ್ರೆಯ ನಡಿಗೆ ಇತ್ಯಾದಿ ಲೇಖನಗಳನ್ನು ನೋಡಬಹುದು. ಸಾಹಿತ್ಯ ಕೃತಿಯೊಂದರಲ್ಲಿರುವ ವಸ್ತು ಜನಪರವಾಗಿದೆಯೋ ಇಲ್ಲವೋ ಎಂಬ ವಿಷಯ ಇಲ್ಲಿರುವ ಲೇಖನಗಳಲ್ಲಿ ಚರ್ಚೆಯಾಗಿದೆ.

ಸಂಪುಟ 4ರಲ್ಲಿ ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದ ನಾಲ್ಕು ಭಾಗಗಳಿದ್ದು 51 ಲೇಖನಗಳಿವೆ. ಎಲ್ಲಾ ಲೇಖನಗಳನ್ನು ಗಮನಿಸಿದಾಗ ಕೆಲವು ಲೇಖನಗಳು ಕಾಲ ದೇಶ ಬದ್ಧವಾಗಿವೆ. ಮತ್ತೆ ಕೆಲವು ಕಾಲದೇಶಾತೀತವಾದ ಸಾರ್ವತ್ರಿಕ ಆದರ್ಶಮೌಲ್ಯಗಳನ್ನು ಸಾರುತ್ತವೆ. ಲೇಖಕರೇ ಹೇಳಿಕೊಂಡಿರುವಂತೆ 'ಸಾಹಿತ್ಯ, ಸಂಸ್ಕೃತಿ, ಚಳವಳಿ, ಸಿದ್ಧಾಂತದ ಸಂಸರ್ಗದಲ್ಲಿ ಇಲ್ಲಿನ ಬರಹಗಳು ಮೂಡಿವೆ'. ಭಾಷೆ, ಶಿಕ್ಷಣ, ಪರಿಸರ, ಹೆಣ್ಣು, ಸಂಸ್ಕೃತಿ ಸಮಸ್ಯೆ, ಅಭಿವೃದ್ಧಿಯ ಪರಿಕಲ್ಪನೆ, ಜಾಗತೀಕರಣ, ರೈತರ ಸಮಸ್ಯೆ, ರಾಷ್ಟ್ರೀಯತೆ, ಜಾತೀಯತೆ, ಸಾಮಾಜಿಕ ನ್ಯಾಯ, ಕೋಮುವಾದ ಹೀಗೆ ಹಲವಾರು ವಿಚಾರಗಳಿಗೆ ಸಂಬಂಧಿಸಿದ ಲೇಖನಗಳಿವೆ. ಕೊನೆಯ ಭಾಗ ಜಾನಪದಕ್ಕೆ ಸಂಬಂಧಿಸಿದೆ. ಮಲೇಮಾದೇಶ್ವರ ಕಾವ್ಯದ ಕುರಿತ ಲೇಖನ ಸಾರ್ವತ್ರಿಕ ಮೌಲ್ಯದ ಹುಡುಕಾಟ ನಡೆಸಲು ಪ್ರಯತ್ನಿಸುತ್ತದೆ. ಉಳಿದ ಲೇಖನಗಳು ಸಾಂಸ್ಕೃತಿಕ ಮಾನವಶಾಸ್ತ್ರದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿರುವುದರಿಂದ ಗಮನ ಸೆಳೆಯುತ್ತವೆ.

ಕೊನೆಯ ಸಂಪುಟ 5ರಲ್ಲಿ ಇಲ್ಲಿಯವರೆಗೆ ಬರೆದಿರುವ ಮತ್ತು ಧ್ವನಿಸಾಂದ್ರಿಕೆಗಳಾಗಿರುವ ಒಟ್ಟು 247 ಭಾವಗೀತೆಗಳಿವೆ. ಭಾವಗೀತೆ, ನಾಡಗೀತೆ, ಜನಪರ ಗೀತೆ ಮತ್ತು ಓದುಗವಿತೆ ಎಂಬ ಭಾಗಗಳಲ್ಲಿ ಲೇಖಕರೇ ವಿಭಜಿಸಿ ಪ್ರಕಟಿಸಿದ್ದಾರೆ. ಕೆಲವು ಗೀತೆಗಳನ್ನು ಬಿಟ್ಟು ಉಳಿದೆಲ್ಲ ಧ್ವನಿಸಾಂದ್ರಿಕೆಗಳಾಗಿವೆ. ವಿಷಾದ, ನೋವು, ಪ್ರತಿಭಟನೆ, ಪ್ರೀತಿ, ಪ್ರೇಮ ಹಾಗೂ ಕನ್ನಡ ನಾಡು ನುಡಿಯನ್ನು ಕುರಿತು ಬರೆದಿರುವ ಗೀತೆಗಳು ಇಲ್ಲಿವೆ. ವೈವಿಧ್ಯಮಯ ವಸ್ತುಗಳನ್ನು ಜನಪದೀಯ ಸಂಭಾಷಣಾತ್ಮಕ ದಾಟಿಯಲ್ಲಿ ರಚನೆಯಾಗಿರುವ ಇಲ್ಲಿಯ ಭಾವಗೀತೆಗಳು ಅಲ್ಲಲ್ಲಿ ಕಾವ್ಯತ್ವವನ್ನು ಮೈಗೂಡಿಸಿಕೊಂಡಿವೆ. ಭಾಷೆ, ಆಯಾ ಗೀತೆಯ ವಸ್ತುವಿಗೆ ಅನುಗುಣವಾಗಿ ಸರಳ, ಸುಲಲಿತ, ಭಾವಗೀತೆ ಎಂದು ಇವುಗಳನ್ನು ಕರೆದುಕೊಂಡಿರುವುದು ಶ್ರೀನಿವಾಸಮೂರ್ತಿಯವರ ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ. ❖

ಮಹತ್ತರ ಸಾಧನೆಯ 'ಮಾಹೆ' ಪ್ರಸಾರಾಂಗ

ಬಾಲಚಂದ್ರ ಎಚ್.

ದಶಕದ ಸಂಭ್ರಮ

ಕಲಿಕೆಯೊಂದೇ ವಿಶ್ವವಿದ್ಯಾಲಯದ ಉದ್ದೇಶವಾಗಬಾರದು, ಜ್ಞಾನದ ಪ್ರಸರಣವೂ ಮುಖ್ಯವಾಗಿರಬೇಕು, ವಾಚನ ಸಂಸ್ಕೃತಿಯೂ ಬೆಳೆಯಬೇಕು ಎಂಬ ಸದಾಶಯದೊಂದಿಗೆ ಆರಂಭವಾದ 'ಮಣಿಪಾಲ್ ಯೂನಿವರ್ಸಲ್ ಪ್ರೆಸ್'ಗೆ ದಶಮಾನದ ಸಡಗರ. ಮಣಿಪಾಲ್ ಯೂನಿವರ್ಸಿಟಿ ಎಂದು ಪ್ರಸಿದ್ಧಿ ಹೊಂದಿರುವ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ) ಸಂಸ್ಥೆಯ ಸ್ವಂತ ಪ್ರಸಾರಾಂಗ ಆರಂಭಿಸಿ ಅಕಾಡೆಮಿಕ್, ನಾನ್ ಅಕಾಡೆಮಿಕ್ ಸೇರಿದಂತೆ ಹತ್ತು ಹಲವು ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸುತ್ತ ಬಂದಿದೆ. ಪ್ರಕಾಶನವನ್ನು ವಿವಿಧ ಭಾರತೀಯ ಭಾಷೆಗಳಿಗೆ ವಿಸ್ತರಿಸುತ್ತಿದೆ.

ವಿಶ್ವವಿದ್ಯಾಲಯದ ಕಲ್ಪನೆ ಬಹಳ ಸಂಕೀರ್ಣವಾಗಿದ್ದು, ಜ್ಞಾನದ ಆಕರಗಳನ್ನು ಮುದ್ರಿಸುವುದು, ದಾಖಲಿಸುವುದು, ಪಸರಿಸುವುದು ಬಹಳ ಮುಖ್ಯ ಪ್ರಕ್ರಿಯೆ. ಈ ಕಾರ್ಯ ಕೆಲವು ಸರ್ಕಾರಿ ವಿಶ್ವವಿದ್ಯಾಲಯಗಳ ಪ್ರಸಾರಾಂಗಗಳಲ್ಲಿ ನಡೆಯುತ್ತಿರಬಹುದು. ಆದರೆ, ಖಾಸಗಿ ವಿಶ್ವವಿದ್ಯಾಲಯವೊಂದು ಪ್ರಸಾರಾಂಗದ ಮೂಲಕ ಪ್ರಕಟಣೆ ವಿಭಾಗದಲ್ಲಿ ಕ್ರಿಯಾಶೀಲವಾಗಿರುವ ವಿರಳ ಉದಾಹರಣೆಯನ್ನು ಮಣಿಪಾಲ ವಿ.ವಿ. ಪ್ರಸಾರಾಂಗದಲ್ಲಿ ಕಾಣಬಹುದು.

ಡಾ.ಟಿಎಂಎ ಪೈ ಅವರ ಜ್ಞಾನ ಪ್ರಸರಣದ ಕನಸಾಗಿದ್ದ ಮಾಹೆ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗವು ಅವರು ಕಾಲವಾದ ಹಲವು ವರ್ಷಗಳ ಬಳಿಕ ಸಾಕಾರವಾಗಿದೆ. ಮಣಿಪಾಲ ವಿ.ವಿ. ಸಾಧನೆಯ ಹಾದಿಯಲ್ಲಿ ಮಣಿಪಾಲ ಯೂನಿವರ್ಸಲ್ ಪ್ರೆಸ್ (ಎಂಯುಪಿ) ಮುಖ್ಯವಾದ ಮೈಲಿಗಲ್ಲು ಎಂದೇ ಹೇಳಬಹುದು.

ಎಂಯುಪಿ ಮೊದಲ ಅಧ್ಯಾಯ ತೆರೆದುಕೊಂಡದ್ದು 2011ರಲ್ಲಿ. ಆಗ ಮಣಿಪಾಲ್ ವಿ.ವಿ. ಸಹ ಉಪ ಕುಲಪತಿ ಆಗಿದ್ದ ಡಾ.ಎಚ್. ವಿನೋದ ಭಟ್ ಅವರು ವಿಶ್ವವಿದ್ಯಾಲಯವೇ ಸ್ವಂತ ಪಬ್ಲಿಕೇಶನ್ ವಿಭಾಗ ಹೊಂದಬೇಕೆಂಬ ಯೋಜನೆಯನ್ನು ಮುನ್ನೆಲೆಗೆ ತಂದರು. ಮಣಿಪಾಲ್ ಸೆಂಟರ್ ಫಾರ್ ಯುರೋಪಿಯನ್ ಸ್ಟಡೀಸ್‌ನ ಮುಖ್ಯಸ್ಥೆ ಡಾ. ನೀತಾ ಇನಾಂದಾರ್ ಅವರ ಹೆಗಲಿಗೆ ಮುಖ್ಯ ಸಂಪಾದಕತ್ವದ ಹೊಣೆ ವಹಿಸಿದರು.

ತತ್ವಶಾಸ್ತ್ರಜ್ಞ ಡಾ. ಶ್ರೀನಿವಾಸ ವರಖೇಡಿ ಅವರ 'ದ ಪಾಥ್ ಆಫ್ ಪ್ರೂಫ್ಸ್' ಗ್ರಂಥ ಪ್ರಕಟಿಸುವ ಮೂಲಕ ಮಣಿಪಾಲ ವಿ.ವಿ. ಪ್ರಸಾರಾಂಗ ಶುಭನಾಂದಿಯಾಯಿತು. ನಂತರ ಪ್ರಕಟಣೆಯ ಪರ್ವ ನಿರಂತರವಾಯಿತು. ಮುಂದೆ, ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಹಾಗೂ ಸಿಬ್ಬಂದಿಗೆ ಪುಸ್ತಕಗಳನ್ನು ಪ್ರಕಟಿಸಲು ವೇದಿಕೆ ಒದಗಿಸಿತು.

ಪ್ರಸಿದ್ಧ ಬರಹಗಾರರು, ಲೇಖಕರು, ವಿದೇಶಗಳ ಚಿಂತಕರು ತಮ್ಮ ಕೃತಿಗಳಿಗೆ ಮಣಿಪಾಲ್ ಯೂನಿವರ್ಸಲ್ ಪ್ರೆಸ್‌ನಲ್ಲಿ ಬೆಳಕು ಕಾಣಿಸಿದರು. ಸ್ಥಳೀಯ ಬರಹಗಾರರಿಗೂ ಎಂಯುಪಿ ಬಾಗಿಲು ತೆರೆಯಿತು. ಅನುವಾದಕರಿಗೆ ಆದ್ಯತೆ ನೀಡಿತು. ವಿದ್ಯಾರ್ಥಿಗಳಿಗೆ ಅಭಿವ್ಯಕ್ತಿಯ ಅವಕಾಶ ನೀಡಲಾಯಿತು.

ಕವಿ ನಿಸಾರ್ ಅಹಮದ್ ಅವರ ಕೃತಿಯನ್ನೂ ಎಂಯುಪಿ ಪ್ರಕಟಿಸಿದೆ. ತುಳುವಿನ ಸತೀ ಕಮಲೆ ಕಾದಂಬರಿ ಕನ್ನಡಕ್ಕೆ ಬಂದಿದೆ; ಚಂದ್ರಶೇಖರ ಕಂಬಾರರು ತಮ್ಮ ಅನುವಾದಿತ ಕೃತಿಯ ಮೂಲಕ ತುಳು ಭಾಷೆಯಲ್ಲಿ ಅವಕಾಶ ಕಂಡುಕೊಂಡಿದ್ದಾರೆ. ಶಿವರಾಮ ಕಾರಂತರ ಚೋಮನ ದುಡಿ ಸಂಸ್ಕೃತದಲ್ಲಿ ಸದ್ದು ಮಾಡಿದೆ. ಕನ್ನಡದ ರಂಗಭೂಮಿಯ ಕುರಿತು ಕೆ.ವಿ. ಅಕ್ಷರ ಇಂಗ್ಲಿಷ್‌ನಲ್ಲಿ ಕೃತಿ ಪ್ರಕಟಿಸಿದ್ದಾರೆ. ಪ್ರೊ. ನೀತಾ ಇನಾಂದಾರ್ ಮರಾಠಿಯ ಯೂಟರ್ನ್ ನಾಟಕವನ್ನು ಕನ್ನಡಕ್ಕೆ ತಂದಿದ್ದಾರೆ.

ಡಾ. ಷ. ಶೆಟ್ಟರ್, ಎಚ್.ಎಸ್. ಶಿವಪ್ರಕಾಶ್, ಮನು ಚಕ್ರವರ್ತಿ ಮುಂತಾದವರ ಕೃತಿಗಳನ್ನು ಎಂಯುಪಿ ಪ್ರಕಟಿಸಿದೆ. ಪುಸ್ತಕಗಳು, ಜರ್ನಲ್‌ಗಳು ಸೇರಿದರೆ ಇದುವರೆಗೆ 250ಕ್ಕಿಂತಲೂ ಅಧಿಕ ಪ್ರಕಟಣೆಗಳಾಗುತ್ತವೆ. ಟಿ.ಪಿ. ಅಶೋಕ ಅವರ ಕಥನ ಭಾರತಿ ಕೃತಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನವಾಗಿದೆ. ಮೈತ್ರೇಯಿ ಕರ್ನೂರ್ ಅನುವಾದಿಸಿದ ಶ್ರೀನಿವಾಸ ವೈದ್ಯ ಅವರ ಕೃತಿ 'ಎ ಹ್ಯಾಂಡ್‌ಫುಲ್ ಸೆಸೇಮೆ'ಗೆ ಕುವೆಂಪು ಭಾಷಾಭಾರತಿ 2018ನೇ ಸಾಲಿನ ಪುಸ್ತಕ ಬಹುಮಾನ ಲಭಿಸಿದೆ. ಎನ್.ಟಿ. ಭಟ್ ಅನುವಾದಿಸಿದ 'ದ ಅದರ್ ಫೇಸ್ ಕೃತಿ'ಗೆ 2018ರ ಕರ್ನಾಟಕ ಸಾಹಿತ್ಯ ಅಕಾಡೆಮಿ-ಅಮೆರಿಕನ್ನಡಿಗರ ದತ್ತಿ ನಿಧಿ ಬಹುಮಾನ ಬಂದಿದೆ.

ಎಂಯುಪಿಯಲ್ಲಿ ಪ್ರಕಟಗೊಳ್ಳುವ ಪುಸ್ತಕಗಳ ಆಯ್ಕೆಗೆ ನಿರ್ದಿಷ್ಟ ವಿಧಾನವಿದೆ. ಪ್ರತಿ ಕೃತಿಯನ್ನು ಪ್ರಕಟಣೆ ಪೂರ್ವದಲ್ಲಿ ಉಪ ಕುಲಪತಿಗಳ ನೇತೃತ್ವದ ಸಂಪಾದಕೀಯ ಮಂಡಳಿಯಲ್ಲಿ ಸಮೀಕ್ಷೆಗೊಳಪಡಿಸಲಾಗುತ್ತದೆ. ಕೆಲವೊಮ್ಮೆ ವಿಷಯ ತಜ್ಞರು ಕೃತಿಯ ಮರುನಿರೂಪಣೆಗೆ ಸಲಹೆ ಕೊಡುತ್ತಾರೆ. ಕೆಲವು ಪುಸ್ತಕಗಳು ಪ್ರಕಟಣೆಗೆ ನಿರಾಕರಣೆಯಾಗುವುದೂ ಇದೆ. ಪುಸ್ತಕಗಳು ಪ್ರಕಟಣೆಗೆ ಸ್ವೀಕೃತವಾದರೆ ಪ್ರತಿ ಸಂಪಾದನೆ, ಕರಡು ತಿದ್ದುವಿಕೆ, ಪುಟವಿನ್ಯಾಸ ಇತ್ಯಾದಿ ಹಂತಗಳ ಮೂಲಕ ಮುದ್ರಣಕ್ಕೆ ಕಳುಹಿಸಲಾಗುತ್ತದೆ. ಎಂಯುಪಿಯ ಪ್ರಧಾನ ಸಂಪಾದಕಿ ಡಾ. ನೀತಾ ಇನಾಂದಾರ್ ನೇತೃತ್ವದಲ್ಲಿ ಸಂಪಾದಕರ, ವಿನ್ಯಾಸಕರ, ಮಾರುಕಟ್ಟೆ ನಿರ್ವಾಹಕರ ತಂಡ ಕೆಲಸ ನಿರ್ವಹಿಸುತ್ತದೆ. ಎಂಯುಪಿ 'ಮಣಿಪಾಲ್ ಇಂಟರ್‌ನ್ಯಾಶನಲ್ ಲಿಟರೇಚರ್ ಆ್ಯಂಡ್ ಆರ್ಟ್ ಪ್ಲ್ಯಾಟ್‌ಫಾರ್ಮ್-ಮಿಲಾಪ್' ಎಂಬ ಉತ್ಸವವನ್ನು ಸಂಯೋಜಿಸುವ ಹೊಣೆಯನ್ನು ಹೊತ್ತುಕೊಂಡಿದೆ.

ಕೋವಿಡ್ ಸವಾಲು ಪ್ರಕಾಶನ ಸಂಸ್ಥೆಗಳ ಮೇಲೂ ಪರಿಣಾಮ ಬೀರಿದೆ. ಎಂಯುಪಿಯಲ್ಲಿ ಪುಸ್ತಕಗಳ ಪ್ರಕಟಣೆ ಕಡಿಮೆಯಾಗಿರಬಹುದು, ಆದರೆ, ಮಾರಾಟ ಎಂದಿನಂತೆಯೇ ಇದೆ. ಎಂಯುಪಿಯ ಜೊತೆಗೆ ಲೇಖಕರ ದೊಡ್ಡ ತಂಡವಿರುವಂತೆಯೇ ದೊಡ್ಡದೊಂದು ವಾಚಕ ಸಮುದಾಯವೂ ಇದರ ಬೆಂಬಲಕ್ಕಿದೆ. ❖

ಸಿರಿಗನ್ನಡ ಪುಸ್ತಕ ಮಳಿಗೆಯಲ್ಲಿ ಪ್ರೊ.ನೀತಾ ಇನಾಂದಾರ್(ಎಡದಿಂದ ಎರಡನೆಯವರು)

ಉಲ್ಲೇಖನಾರ್ಹ ಕೃತಿಗಳು

ಡಾ.ಎಚ್.ಎಸ್. ಬಲ್ಲಾಳ್ ಅವರ (ಸಹಲೇಖಕ ಡಾ. ಪಿ. ಡಿ. ಗುಪ್ತ ಅವರೊಂದಿಗೆ) ಮಕ್ಕಳ ಕ್ಯಾನ್ಸರ್, ಡಾ.ಎಂ.ಎಸ್. ವಲಿಯತ್ತಾನ್ ಅವರ ಆಯುರ್ವೇದಿಕ್ ಇನ್‌ಹೆರಿಟೆನ್ಸ್-ಎ ರೀಡರ್ಸ್ ಕಂಪಾನಿಯನ್, ಡಾ. ಎಚ್. ವಿನೋದ್ ಭಟ್ (ಸಹಲೇಖಕಿ ನೀತಾ ಇನಾಂದಾರ್ ಅವರ ಜೊತೆಗೆ) ಅವರ ಉನ್ನತ ಶಿಕ್ಷಣ ಕುರಿತ ಕೃತಿಗಳನ್ನು ಇದೇ ಸಂಸ್ಥೆ ಹೊರತಂದಿದೆ.

ಸೂಪರ್ ಹೆವಿ ಎಲಿಮೆಂಟ್ಸ್-ಸರ್ಚಿಂಗ್ ಫಾರ್ ದ ಎಂಡ್ ಆಫ್ ದ ಪೀರಿಯೋಡಿಕ್ ಟೇಬಲ್ ಎಂಬ ವಿಶ್ವಮಾನ್ಯ ಕೃತಿಯನ್ನು ಬರೆದ ಜರ್ಮನಿಯ ಸಂಶೋಧಕ ಗಾಟ್‌ಫ್ರೀಡ್ ಮುಜೆನ್‌ಬರ್ಗ್ ನೊಬೆಲ್ ಪ್ರಶಸ್ತಿಗೆ ಪರಿಗಣನೆ ಆದವರ ಪಟ್ಟಿಯಲ್ಲಿದ್ದವರು ಮತ್ತು ಮಾಹೆಯಲ್ಲಿ ಸಂಶೋಧಕರಾಗಿದ್ದವರು. ವಿಯೆಟ್ನಾಂನ ಜೀವವಿಜ್ಞಾನಿ ಥಿಲೋ ನಾಡ್ಲೆರ್ ಕುರಿತ ಕೃತಿ ಕೂಡ ಉಲ್ಲೇಖಾರ್ಹವಾದದ್ದು. ಜರ್ಮನಿಯ ಪ್ರಾಧ್ಯಾಪಕರಾದ ಬ್ರಿಟ್ ಇಲ್, ಬಿಟ್ರೀಸ್ ಡರ್ನ್‌ಬಾಕ್ ಬರೆದಿರುವ ಜರ್ನಲಿಸಂ ಆ್ಯಂಡ್ ಜರ್ನಲಿಸಂ ಎಜುಕೇಶನ್ ಇನ್ ಡೆವಲಪಿಂಗ್ ಕಂಟ್ರೀಸ್ ಕೃತಿಯು ಪತ್ರಿಕೋದ್ಯಮ ಅಭ್ಯಾಸಿಗಳ ಮುಖ್ಯ ಪರಾಮರ್ಶನ ಗ್ರಂಥವೆನಿಸಿದೆ.


ವೈದೇಹಿ ಧ್ವನಿ ಕೇಳು ಪುಸ್ತಕ

ಮೊದಲ ಓದು

ಕನ್ನಡ ರಸ್ತೆಯಲ್ಲಿ 'ಚೆ' ಯಾನ

500 ಸಿ.ಸಿ. ಸಾಮರ್ಥ್ಯದ ನೋರ್ಟ್ರನ್ ಮೋಟಾರ್ ಸೈಕಲ್ 'ಲಾ ಪೊದೆರೊಸಾ'ದಲ್ಲಿ ತಮ್ಮ ಗೆಳೆಯನೊಂದಿಗೆ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ 1952ರಲ್ಲಿ ಅರ್ನೆಸ್ಟೊ ಚೆ ಗೆವಾರ ಹೊರಟಿದ್ದ ಯಾತ್ರೆ ಇದೀಗ ಕನ್ನಡದ ನೆಲ ತಲುಪಿದೆ.

ಚೆ ಗೆವಾರ ಲ್ಯಾಟಿನ್ ಅಮೆರಿಕನ್ ಪ್ರವಾಸದ ಟಿಪ್ಪಣಿ 'ಮೋಟಾರ್ ಸೈಕಲ್ ಡೈರೀಸ್'ನಲ್ಲಿ, ಅವರ ಜೊತೆಯೇ ಹಿಂದೆ ಕುಳಿತು ಪ್ರಯಾಣಿಸಿದಂತೆ ಅನುವಾದದ ಮೂಲಕ ಈ ಕೃತಿಯನ್ನು ಕನ್ನಡದ ನೆಲದಲ್ಲಿ ನಿಲ್ಲಿಸಿದ್ದಾರೆ ಸೃಜನ್. ಚೆ ಗೆವಾರ ಬರೆದ ಈ ಕಥನವನ್ನು ಆಧರಿಸಿ ವಾಲ್ಟರ್ ಸಲೇಸ್ ನಿರ್ದೇಶಿಸಿದ ಸಿನಿಮಾ, ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಲು ಸೃಜನ್ ಅವರಿಗಿದ್ದ ಪ್ರೇರಣೆ. ಕೃತಿಯಲ್ಲಿ ಮೂಲ ಕಥನ ಹಾಗೂ ಸಿನಿಮಾ ದೃಶ್ಯಗಳು ಮತ್ತೆ ಅಕ್ಷರ ಹಾಗೂ ಚಿತ್ರರೂಪ ಪಡೆದಿವೆ.

ಅರ್ಜೆಂಟೀನಾದಲ್ಲಿ ಹುಟ್ಟಿ, ವೈದ್ಯಕೀಯ ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ ಹಗಲುಗನಸಲ್ಲಿ ದೂರ ತೀರದ ದೇಶ ಸುತ್ತುತ್ತಿದ್ದ ಚೆ ಗೆವಾರ ಹಾಗೂ ಅವರ ಗೆಳೆಯ ಆಲ್ಬರ್ಟೊ ಗ್ರಾನಡೊ, ಜೊತೆಗೂಡಿ ಈ ಪ್ರವಾಸ ಕೈಗೊಂಡಿದ್ದು ಕ್ಯೂಬಾ ಕ್ರಾಂತಿಗೆ ಎಂಟು ವರ್ಷಗಳ ಹಿಂದೆ. ಹೀಗಾಗಿ ಚೆ ಗೆವಾರ ಬದುಕನ್ನು ತಿಳಿಯಲು 'ಮೋಟಾರ್ ಸೈಕಲ್' ಸಾಹಸ ಯಾತ್ರೆಯೇ ಆಧಾರ. 'ಒಬ್ಬರನ್ನೊಬ್ಬರು ಅರಿತೆವು' ಎಂಬಲ್ಲಿಂದ ಹಿಡಿದು 'ಕೊನೆಯ ಮಾತುಗಳು' ಎನ್ನುವ ಟಿಪ್ಪಣಿ ಇದಕ್ಕೆ ಪೂರಕವಾಗಿವೆ. 'ಡಿಸ್ಕವರಿ ಆಫ್ ದಿ ಓಷಿಯನ್' 'ಸಾಗರ ಮಥನ'ವಾಗಿ, ಬೆಟ್ಟ, ಕಣಿವೆ, ಸರೋವರಗಳು ಅಕ್ಷರ ರೂಪದಲ್ಲೇ ಕಣ್ತುಂಬಿಕೊಳ್ಳುವಂತೆ ಮಾಡುತ್ತದೆ. ❖

ಪು: 228 ₹180

ಮೋಟಾರ್ ಸೈಕಲ್ ಡೈರೀಸ್
ಲ್ಯಾಟಿನ್ ಅಮೆರಿಕನ್ ಪ್ರವಾಸದ ಟಿಪ್ಪಣಿಗಳು
ಲೇ: ಅರ್ನೆಸ್ಟೊ ಚೆ ಗೆವಾರ
ಕನ್ನಡಕ್ಕೆ: ಸೃಜನ್
ಪ್ರ: ವೈಷ್ಣವಿ ಪ್ರಕಾಶನ
ಸಂ: 9620170027

ತೆರಿಗೆ ಜಗತ್ತಿಗೆ ಪದಕೋಶ



ಪು: 220 ₹150

ಸಂಕ್ಷಿಪ್ತ ತೆರಿಗೆ ಪದಕೋಶ
ಲೇ: ಸುಬ್ರಾಯ ಎಂ. ಹೆಗಡೆ, ಶಿವಣ್ಣ ಡಿ.
ಪ್ರ: ಅಘನಾಶಿನಿ ಪ್ರಕಾಶನ, ಬೆಂಗಳೂರು
ಸಂ: 9449835287

ವಿವಿಧ ಜ್ಞಾನಶಾಖೆಗಳಿಗೆ ಸಂಬಂಧಿಸಿದ ಪದಕೋಶಗಳು ಕನ್ನಡದಲ್ಲಿ ಹೆಚ್ಚೇನೂ ಇಲ್ಲ. ಆದರೆ, ಬೇರೆ ಬೇರೆ ವಿಷಯಗಳನ್ನು ಕನ್ನಡದಲ್ಲಿ ಬರೆಯಬೇಕಾದ, ಕನ್ನಡದಲ್ಲಿ ಓದಿಕೊಳ್ಳಬಹುದಾದ ಸಂದರ್ಭಗಳು ಹೆಚ್ಚುತ್ತ ಸಾಗಿವೆ. ಇದು ಕನ್ನಡದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ ಹೌದು. ತೆರಿಗೆಗೆ ಸಂಬಂಧಿಸಿದ ವಿಷಯಗಳನ್ನು ಕನ್ನಡದಲ್ಲಿ ಬರೆಯುವಾಗ, ಓದುವಾಗ ನೆರವಾಗಲಿ ಎಂಬ ಉದ್ದೇಶದಿಂದ ಸುಬ್ರಾಯ ಎಂ. ಹೆಗಡೆ ಮತ್ತು ಶಿವಣ್ಣ ಡಿ. ಅವರು ಜೊತೆಯಾಗಿ 'ಸಂಕ್ಷಿಪ್ತ ತೆರಿಗೆ ಪದಕೋಶ'ವನ್ನು ಹೊರತಂದಿದ್ದಾರೆ. ಇದರಲ್ಲಿ ತೆರಿಗೆ ಜಗತ್ತಿನಲ್ಲಿ ಬಳಸುವ ಇಂಗ್ಲಿಷ್ ಪದಗಳಿಗೆ ಕನ್ನಡದ ಪದಗಳನ್ನು, ವಿವರಣೆಗಳನ್ನು ನೀಡಲಾಗಿದೆ.

ಕೃತಿಕಾರರಾದ ಹೆಗಡೆ ಮತ್ತು ಶಿವಣ್ಣ ಅವರು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಈ ಹಿಂದೆ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿದ್ದವರು. ಅಲ್ಲದೆ, ತೆರಿಗೆಗೆ ಸಂಬಂಧಿಸಿದ ಆದೇಶಗಳನ್ನು, ಕಾಯ್ದೆಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡಿದ ಅನುಭವ ಹೊಂದಿರುವವರು. ಈ ಅನುವಾದ ಕೆಲಸದ ಸಂದರ್ಭದಲ್ಲಿ ಇವರು, ಕನ್ನಡದಲ್ಲಿ ಒಂದು ತೆರಿಗೆ ಪದಕೋಶದ ಅಗತ್ಯ ಇದೆ ಎಂಬುದನ್ನು ಮನಗಂಡರು. ಕನ್ನಡದಲ್ಲಿ ತೆರಿಗೆ ಕುರಿತ ಬರವಣಿಗೆಗಳಲ್ಲಿ ಇನ್ನಷ್ಟು ಖಚಿತತೆ ಮತ್ತು ಏಕರೂಪತೆ ಬರಬೇಕು ಎಂಬ ಉದ್ದೇಶದಿಂದ ಈ ಪದಕೋಶವನ್ನು ಹೊರತಂದಿರುವುದಾಗಿ ಅವರು ಹೇಳಿದ್ದಾರೆ. ತೆರಿಗೆಗೆ ಸಂಬಂಧಿಸಿದ ಐದು ಸಾವಿರಕ್ಕೂ ಹೆಚ್ಚಿನ ಪದಗಳಿಗೆ ಇಲ್ಲಿ ಇಂಗ್ಲಿಷ್ ವರ್ಣಮಾಲೆಯಲ್ಲಿನ ಅಕ್ಷರಗಳ ಅನುಕ್ರಮದಲ್ಲಿ ಕನ್ನಡ ಅರ್ಥ, ವಿವರಣೆ ನೀಡಲಾಗಿದೆ. ನ್ಯಾಯಾಲಯದ ಕಲಾಪಗಳು, ಆದೇಶಗಳಲ್ಲಿ ಬಳಕೆಯಾಗುವ ಕೆಲವು ಪದಗಳು, ನುಡಿಗಟ್ಟುಗಳು ಕೂಡ ಈ ಕೃತಿಯಲ್ಲಿ ಇವೆ. ❖

ಮನದ ದನಿಯಲ್ಲಿ ಸಮಾಜ ಬಿಂಬ

ಕೆಎಸ್‌ಆರ್‌ಟಿಸಿ ಬಸ್ ಚಾಲಕರಾಗಿದ್ದು ಸಮಕಾಲೀನ ಸಮಸ್ಯೆಗಳಿಗೆ ತಮ್ಮ ಚಿಂತನೆಗಳ ಹಾರನ್ ಬಾರಿಸಿದ್ದಾರೆ ಲೇಖಕ ವೈಲೇಶ್ ಪಿ.ಎಸ್.

ಗೃಹಿಣಿಗೆ ಮಾನಸಿಕ ಸದೃಢತೆ, ಸಾಮಾಜಿಕ ಮತ್ತು ವ್ಯವಹಾರ ಜ್ಞಾನ ಮುಖ್ಯ ಎಂಬುದನ್ನು ಉದಾಹರಣೆಗಳ ಸಹಿತ ನಿರೂಪಿಸುವಲ್ಲಿಂದ ಲೇಖನ ಮಾಲೆ ಆರಂಭವಾಗುತ್ತದೆ. ನಾಡಿನ ರಸ್ತೆಗಳ ದುಃಸ್ಥಿತಿಯ ಕುರಿತು ಬರೆಯುವಾಗ ಅಪ್ಪಟ ಚಾಲಕರಾಗಿಯೇಬಿಟ್ಟ ಲೇಖಕರು ವ್ಯವಸ್ಥೆಗೆ ಅಲ್ಲಲ್ಲಿ ತಿವಿದಿದ್ದಾರೆ.

'ನಾವೇ ಅನ್ಯ ಭಾಷೆಗಳಲ್ಲಿ ಮಾತನಾಡಲು ಉತ್ಸುಕರಾಗಿರುವಾಗ ಬೇರೆಯವರೇಕೆ ಕನ್ನಡ ಕಲಿಯುತ್ತಾರೆ' ಎನ್ನುವಲ್ಲಿ ನಾಡು - ನುಡಿಯ ಅವಗಣನೆಗೆ ಅವರ ಆಕ್ರೋಶ ಹೊರಬಿದ್ದಿದೆ. ಗುರುವಿನ ಹೊಡೆತ ತಿಂದೂ ಅವರಿಗೆ ಕೃತಜ್ಞನಾಗುವ ಶಿಷ್ಯ, ಇಂದು ಗುರು ಹೊಡೆದರೆ ಠಾಣೆಯ ಮೆಟ್ಟಿಲೇರಿ ಎಫ್‌ಐಆರ್ ದಾಖಲಿಸುವ ಪೋಷಕರು ಎರಡರ ವೈರುಧ್ಯಗಳನ್ನೂ ತೆರೆದಿಟ್ಟು ಚಿಂತನೆಗೆ ಹಚ್ಚಿದ್ದಾರೆ.

ಎಲ್ಲರೊಳಗೊಂದಾಗಿ ಬದುಕುವುದು ಕಷ್ಟವಲ್ಲ. ಮನಸ್ಸು ಮಾಡಬೇಕು ಅಷ್ಟೇ ಎನ್ನುತ್ತಾ ಸಹಿಷ್ಣುತೆ ಸಾಧ್ಯ ಎಂದು ಹೇಳಿದ್ದಾರೆ. ಹೀಗೆ 39 ಲೇಖನಗಳು ಹಲವಾರು ಸಂಗತಿಗಳ ಕುರಿತು ಮಾತನಾಡಿವೆ. ❖



ಪು: 140 ₹140

ಮನದ ಇನಿದನಿ
ಲೇ: ವೈಲೇಶ್ ಪಿ.ಎಸ್. ಕೊಡಗು
ಪ್ರ: ಬೊಮ್ಮಲಿಂಗೇಶ್ವರ ಪ್ರಕಾಶನ, ವಿರಾಜಪೇಟೆ
ಸಂಪರ್ಕ: 9481883194

ಕಥೆ
ಮಂಜಯ್ಯ ದೇವರಮನಿ
ಅವರ
ಕಲ್ಲೇಶಿ ಪ್ರೇಮ ಪುರಾಣ
ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವನ
ಡಾ.ಮುಮ್ತಾಜ್ ಬೇಗಂ
ಅವರ
ಕೆಂಡದ ಮುತ್ತು
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ಆಶ್ರಮವಾಸಿಗಳಿಗೆ ಬಾಪೂ ಅವರಿಂದ ಸ್ವಾವಲಂಬನೆಯ ಪಾಠ. ನಾಟಕದ ಮಧ್ಯೆ ಸಾಕ್ಷ್ಯಚಿತ್ರ ಮೂಡಿಸಲು ರಂಗದ ಮೇಲೆ ತೆರೆಯ ವ್ಯವಸ್ಥೆಯನ್ನೂ ಮಾಡಲಾಗಿತ್ತು

ರಂಗದ ಮೇಲೂ... ತೆರೆಯ ಮೇಲೂ... ಬಾಪೂ

> ಗಾಂಧಿಯನ್ನು ಬಹುಮಾಧ್ಯಮ ರಂಗಪ್ರಸ್ತುತಿಯ ಮೂಲಕ ಅರ್ಥೈಸುವ ಹೊಸದೊಂದು ಪ್ರಯತ್ನವನ್ನು ಮಾಡಿದ್ದಾರೆ ಚಿಂತಕ ಎನ್.ಎಸ್. ಶಂಕರ್. 'ಇದು ರಾಷ್ಟ್ರಪಿತನ ಜೀವನ ಚರಿತ್ರೆಯಲ್ಲ, ಗಾಂಧಿವಾದದ ಪ್ರತಿಪಾದನೆಯೂ ಅಲ್ಲ. ಆದರೆ ನಮ್ಮ ಕಾಲದ ಸವಾಲುಗಳಿಗೆ ಗಾಂಧಿ ಮಾರ್ಗದಲ್ಲಿ ಉತ್ತರ ಹುಡುಕುವ ಯತ್ನ' ಎನ್ನುತ್ತಾರೆ ಅವರು

ಬಿ.ಎಂ. ಹನೀಫ್

ಮಹಾತ್ಮ ಗಾಂಧಿ ಈ ದೇಶಕ್ಕೊಂದು ಆದರ್ಶವೂ ಹೌದು, ವ್ಯಸನವೂ ಹೌದು. ನಾಲ್ಕು ಬಗೆಯಲ್ಲಿ ಗಾಂಧಿಯನ್ನು ನೆನಪಿಸಿಕೊಳ್ಳುವ ವರ್ಗಗಳು ಭಾರತದಲ್ಲಿ ಈಗಲೂ ಇವೆ. ಶುದ್ಧ ಗಾಂಧೀವಾದಿಗಳಾಗಿ ಗಾಂಧಿಯ ಪುಣ್ಯಸ್ಮರಣೆಯಲ್ಲಿ ನಿರತರಾದವರದ್ದು ಒಂದು ಗುಂಪಾದರೆ, ಗಾಂಧಿಯ ಆದರ್ಶಗಳನ್ನು ಸ್ಮರಿಸುತ್ತಲೇ ಗಾಂಧೀವಾದದ ಒಳಿತು-ಕೆಡುಕುಗಳನ್ನು ಪರೀಕ್ಷಿಸುತ್ತಾ ಮೆಚ್ಚಿಕೊಳ್ಳುವುದು ಇನ್ನೊಂದು ಗುಂಪು. ಇತರ ವಾದಗಳ ಜೊತೆಗೆ (ಮುಖ್ಯವಾಗಿ ಅಂಬೇಡ್ಕರ್‌ವಾದ) ಗಾಂಧೀವಾದವನ್ನು ಸಂಘರ್ಷಕ್ಕೆ ಒಡ್ಡುತ್ತಾ ಗಾಂಧೀವಾದದ ದೌರ್ಬಲ್ಯಗಳನ್ನು ವೈಭವೀಕರಿಸುವುದು ಮೂರನೆಯ ಗುಂಪಾದರೆ; ಗಾಂಧಿ ಈ ದೇಶದ ಮೇಲೆ ಮಾಡಿರುವ ಸತ್ವಪ್ರಭಾವವನ್ನು ಸಹಿಸಲಾಗದೆ ಗಾಂಧೀವಾದವನ್ನು ಸದಾ ಹೀಗಳೆಯುವ ನಾಲ್ಕನೇ ಗುಂಪೊಂದಿದೆ. ಹಾಗೆಂದೇ ಗಾಂಧಿ ಈ ದೇಶಕ್ಕೆ ಇವತ್ತಿಗೂ ಆದರ್ಶವಾಗಿ, ಕನಸಾಗಿ, ಹಳಹಳಿಕೆಯಾಗಿ, ವ್ಯಸನವಾಗಿ ಜೀವಂತವಾಗಿದ್ದಾರೆ. ಗಾಂಧಿಯನ್ನು ನೀವು ಹೊಗಳಬಹುದು ಅಥವಾ ತೆಗಳಬಹುದು, ಆದರೆ ನಿರ್ಲಕ್ಷಿಸುವಂತಿಲ್ಲ ಎನ್ನುವುದು ಇವತ್ತಿಗೂ ಸತ್ಯ.

ಪತ್ರಕರ್ತ, ಚಿಂತಕ ಮತ್ತು ಸಿನಿಮಾ ನಿರ್ದೇಶಕ ಎನ್.ಎಸ್.ಶಂಕರ್, ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ, ಗಾಂಧಿಯನ್ನು ಬಹುಮಾಧ್ಯಮ ರಂಗಪ್ರಸ್ತುತಿಯ ಮೂಲಕ ಅರ್ಥೈಸುವ ಹೊಸದೊಂದು ಪ್ರಯತ್ನವನ್ನು ಇತ್ತೀಚೆಗೆ ಮಾಡಿದ್ದಾರೆ. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಕರ್ನಾಟಕ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಬೆಂಬಲದೊಂದಿಗೆ ಶಂಕರ್ ರಚಿಸಿ, ನಿರ್ದೇಶಿಸಿರುವ ಈ ರಂಗಪ್ರಸ್ತುತಿ ಇತ್ತೀಚೆಗೆ ಬೆಂಗಳೂರು ಮತ್ತು ಮೈಸೂರಿನಲ್ಲಿ ಮೂರು ಪ್ರದರ್ಶನಗಳನ್ನು ಕಂಡಿತು. ನಾಟಕವಾಗಿ ಆರಂಭವಾಗುವ ದೃಶ್ಯಗಳು ಅಲ್ಲಿಂದ ಹಿನ್ನೆಲೆಯಲ್ಲಿ ಇರುವ ತೆರೆಯ ಮೇಲೆ ಒಮ್ಮೆ ಸಾಕ್ಷ್ಯಚಿತ್ರವಾಗಿ, ಇನ್ನೊಮ್ಮೆ ಸಿನಿಮಾ ಆಗಿ ಮುಂದುವರಿಯುತ್ತವೆ. ಜೊತೆಗೆ ಗಾಂಧೀವಾದದ ಕುರಿತು, ಗಾಂಧೀ ವ್ಯಕ್ತಿತ್ವದ ಕುರಿತು ಸಂದರ್ಶನಗಳ ತುಣುಕುಗಳೂ ಕಾಣಿಸಿಕೊಳ್ಳುತ್ತವೆ. ರಂಗಕ್ಕೆ ಮರಳುವ, ತೆರೆಗೆ ಜಿಗಿಯುವ ಈ ಕಣ್ಣೋಟದ ಆಟದ ಮೂಲ, ನಾಟಕವೇ ಆಗಿರುವುದರಿಂದ ರಂಗಾಸಕ್ತರ ಕುತೂಹಲವನ್ನು ಕೆಣಕುವಲ್ಲಿ ಈ ಪ್ರಯೋಗ ಯಶಸ್ವಿಯಾಗಿದೆ.



'ಬಾಪೂ' ನಾಟಕದಲ್ಲಿ ಹೀಗೊಂದು ಗಂಭೀರ ಚರ್ಚೆ ಚಿತ್ರ: ಅನೂಪ್ ರಾಘ ಟಿ.

'ಇದು ರಾಷ್ಟ್ರಪಿತನ ಜೀವನ ಚರಿತ್ರೆಯಲ್ಲ, ಗಾಂಧಿವಾದದ ಪ್ರತಿಪಾದನೆಯೂ ಅಲ್ಲ. ಆದರೆ ನಮ್ಮ ಕಾಲದ ಸವಾಲುಗಳಿಗೆ ಗಾಂಧಿ ಮಾರ್ಗದಲ್ಲಿ ಉತ್ತರ ಹುಡುಕುವ ಯತ್ನ' ಎನ್ನುತ್ತಾರೆ ಶಂಕರ್. ಮುಖ್ಯವಾಗಿ ಅಹಿಂಸೆ ಮತ್ತು ಸತ್ಯಾಗ್ರಹ, ಹಿಂದೂ-ಮುಸ್ಲಿಂ ಏಕತೆ, ಅಸ್ಪೃಶ್ಯತೆ ನಿವಾರಣೆ ಮತ್ತು ಜೀವನ ಶೈಲಿಯ ಕುರಿತು ಗಾಂಧಿ ವಿಚಾರಗಳನ್ನು ಪಾತ್ರಗಳ ಸಂವಾದ, ಸಿನಿಮಾ ದೃಶ್ಯಾವಳಿ ಮತ್ತು ಸಂದರ್ಶನಗಳ ಮೂಲಕ ಪ್ರೇಕ್ಷಕರಿಗೆ ತಲುಪಿಸುವ ಪ್ರಯತ್ನವನ್ನು ಶಂಕರ್ ಮಾಡಿದ್ದಾರೆ. ರಿಚರ್ಡ್ ಅಟೆನ್‌ಬರೋ ಅವರ 'ಗಾಂಧಿ', ಶ್ಲೋಕ್ ಶರ್ಮಾ ನಿರ್ದೇಶನದ 'ಬಾಂಬೆ ಮಿರರ್' ಸಿನಿಮಾದ ದೃಶ್ಯಗಳು, ಚಾರ್ಲಿ ಚಾಪ್ಲಿನ್ ಸಿನಿಮಾದ ದೃಶ್ಯಗಳು, ಎಚ್.ಎಸ್.ದೊರೆಸ್ವಾಮಿ ಮತ್ತು ದೇವನೂರ ಮಹಾದೇವ ಅವರ ಸಂದರ್ಶನದ ತುಣುಕುಗಳು, ಪಿಚ್ಚಳ್ಳಿ ಶ್ರೀನಿವಾಸ್ ಅವರ ತತ್ವಪದ ಗಾಯನ ಮುಂತಾಗಿ ತೆರೆಯ ಮೇಲಿನ ಎಲ್ಲ ದೃಶ್ಯಗಳೂ ರಂಗದ ಮೇಲೆ ನಡೆಯುವ ನಾಟಕಕ್ಕೆ ಪೂರಕವಾಗಿದ್ದು ರಂಗಪ್ರಸ್ತುತಿಯ ಹೊಸ ಅನುಭವವೊಂದನ್ನು ಕಟ್ಟಿಕೊಡುತ್ತದೆ.

ರಂಗಭೂಮಿಯ ಜೊತೆಗೆ ಮಾಧ್ಯಮದ ಇತರ ಆಯಾಮಗಳೂ ಸೇರಿಕೊಂಡು ರೂಪಗೊಳ್ಳುವ ಈ ಬಗೆಯ ರಂಗಪ್ರಸ್ತುತಿ ನಿಜಕ್ಕೂ ಅಪರೂಪದ್ದು. ಹಲವು ವರ್ಷಗಳ ಹಿಂದೆ ಕನ್ನಡದಲ್ಲಿ ಅರುಂಧತಿ ನಾಗ್ ಅವರು ನಟಿಸಿದ್ದ 'ಒಡಕಲು ಬಿಂಬ' ನಾಟಕದಲ್ಲಿ ಟಿವಿ ತೆರೆಯಲ್ಲಿ ತನ್ನದೇ ಪಾತ್ರದ ಜೊತೆ ಸಂಭಾಷಣೆ ನಡೆಸುತ್ತಾ ಮುಂದುವರಿಯುವ ಪ್ರಯೋಗ ಯಶಸ್ವಿಯಾಗಿತ್ತು. ಆದರೆ ಶಂಕರ್ ಅವರ ಪ್ರಯತ್ನ ರಾಜಕೀಯ ತಾತ್ವಿಕತೆಯ ಹಿನ್ನೆಲೆಯಲ್ಲಿ ರೂಪುಗೊಂಡಿದ್ದು ರಂಗ ಸಾಧ್ಯತೆಯ ಇನ್ನಷ್ಟು ಆಯಾಮಗಳನ್ನು ಒಳಗೊಂಡಿದೆ.

ಸಮಕಾಲೀನ ರಾಜಕೀಯ ಸನ್ನಿವೇಶದಲ್ಲಿ ಬಾಪೂ ಅವರನ್ನು ಮತ್ತಷ್ಟು ಅರ್ಥೈಸುವ ಮತ್ತು ಹೊಸ ತಲೆಮಾರಿಗೆ ಅರ್ಥವತ್ತಾಗಿ ಪರಿಚಯಿಸುವ ಪ್ರಯತ್ನಗಳ ಅಗತ್ಯವಿದೆ ಎನ್ನುವುದಂತೂ ನಿಸ್ಸಂಶಯ.

ಇದು 52 ಹರ್ಟ್ಸ್!

8ನೇ ಪುಟದಿಂದ...

ತಂಡದ ಪರಿಣಿತರಲ್ಲಿ ಕೆಲವರದನ್ನು ತಿಮಿಂಗಲವೊಂದರ ಕೂಗೆಂದು ವಾದಿಸಿದರು. ಆದರೆ ತಮ್ಮ ಕಿವಿಯ ಬಳಿಯ ಕವಾಟಗಳಿಂದ ಗಾಳಿಯನ್ನು ಊದಿ ಧ್ವನಿಯನ್ನು ಹೊರಹೊಮ್ಮಿಸುವ ತಿಮಿಂಗಲಗಳ ಹಾಡೆಂದೇ ಹೆಸರು ಪಡೆದಿರುವ ಆ ಕೂಗಿನ ಆವರ್ತನದ ವ್ಯಾಪ್ತಿ 10ರಿಂದ 30 ಹರ್ಟ್ಸ್‌ಗಳಷ್ಟೇ ಎಂಬ ಅರಿವಿನ ಹಿನ್ನೆಲೆಯಲ್ಲಿ ಅವರ ವಾದಕ್ಕೆ ಹೆಚ್ಚು ಪುಷ್ಟೀಕರಣ ಸಿಗಲಿಲ್ಲ. ಅಷ್ಟಕ್ಕೂ ತಮ್ಮ ಈ ಹಾಡುಗಳಿಂದಲೇ ತಾವು ತಿಮಿಂಗಲಗಳ ಯಾವ ಉಪಜಾತಿಗೆ ಸೇರಿದ್ದವೆಂಬುದರ ಕುರಿತ ಸುಳಿವನ್ನು ಕೊಡುವ ಈ ಜಲಚರಗಳ ಯಾವ ಜಾತಿಯೂ 30 ಹರ್ಟ್ಸ್‌ಗಳ ಈ ಲಕ್ಷ್ಮಣರೇಖೆಯನ್ನು ದಾಟದಿರುವುದನ್ನು ತಂಡವು ಮತ್ತೊಮ್ಮೆ ಖಾತ್ರಿ ಪಡಿಸಿಕೊಂಡಿತು.

ತಮ್ಮ ಸಂಶೋಧನೆಯ ಅಂಗವಾಗಿ 1992ರಿಂದ 2004 ರವರೆಗೆ ಪೆಸಿಫಿಕ್ ಸಾಗರ ಮತ್ತು ಸುತ್ತಮುತ್ತಲೆಲ್ಲ ಪ್ರದೇಶಗಳನ್ನು ಜಾಲಾಡಿದ ತಂಡಕ್ಕೆ ಹಲವು ಬಾರಿ ಆ ಕೂಗು ಕೇಳಿಸಿತು. ಅದು ಹೊರಹೊಮ್ಮುವ ಸಮಯ ಮತ್ತು ಪತ್ತೆಯಾಗುತ್ತಿದ್ದ ಜಾಗಗಳೆಲ್ಲ ತಿಮಿಂಗಲಗಳ ಮಿಲನದ ಸಮಯ ಮತ್ತು ವಲಸೆಯ ಮಾರ್ಗಕ್ಕೆ ತಾಳೆ ಹೊಂದುತ್ತಿದ್ದರೂ ಕಗ್ಗಂಟಾಗಿ ಉಳಿದದ್ದು ಆ 52 ಹರ್ಟ್ಸ್‌ನ ಆವರ್ತನ ಮಾತ್ರ. ಹೀಗೆ ಈ ನಿಗೂಢ ಸದ್ದಿನ ಮೂಲ ಹುಡುಕುತ್ತ ತಮ್ಮ ಜೀವನದ ಒಂದು ಡಜನ್ ವರ್ಷಗಳನ್ನು ವ್ಯಯಿಸಿದ ತಂಡವು ಆ ಸುದೀರ್ಘ ಸಮಯದಲ್ಲಿ ತಮಗೆ ಸಿಕ್ಕ ಮಾಹಿತಿಯ ಆಧಾರದ ಮೇಲೆ ಸಂಶೋಧನೆಯ ವರದಿಯನ್ನು ಅಖೈರುಗೊಳಿಸುವುದರೊಳಗೆ ಸಂಶೋಧನಾ ತಂಡದ ನಾಯಕ ವಾಟ್ಕಿನ್ಸ್ ತಮ್ಮ 78ರ ವಯಸ್ಸಿನಲ್ಲಿ ಸಾವನ್ನಪ್ಪಿದರು. ಅವರ ಮರಣಾನಂತರ 2004ರಲ್ಲಿ ಅಂತೂ ಇಂತೂ ಪ್ರಕಟಗೊಂಡ ವರದಿಯ ಬಗ್ಗೆ ಆರಂಭದಲ್ಲಿ ಇದ್ದ ಆಸಕ್ತಿಯನ್ನು ಅಧಿಕಾರಿಗಳು ಕಳೆದುಕೊಂಡಿದ್ದ ಪರಿಣಾಮವಾಗಿ ಹತ್ತರಲ್ಲಿ ಹನ್ನೊಂದು ಎಂಬಂತೇ ಆ ವರದಿ ಮೂಲೆ ಸೇರಿತು.

ಇದಾದ ಹಲವು ತಿಂಗಳುಗಳ ನಂತರ ಅಮೆರಿಕದ ಪ್ರಮುಖ ಪತ್ರಿಕೆಯೊಂದು ಈ ಪೂರ್ತಿ ಪ್ರಹಸನದ ಕುರಿತು ರೋಚಕ ಕತೆಯನ್ನು ಬರೆದು ಮುಖಪುಟದಲ್ಲಿ ಪ್ರಕಟಿಸಿತು. ಆ 52ರ ಆವರ್ತನದ ಯಕ್ಷಪ್ರಶ್ನೆಗೆ ಕೊನೆಗೂ ಉತ್ತರವನ್ನು ಕಂಡುಹಿಡಿದ ಸಂಶೋಧನಾ ತಂಡವು ಅದರ ಮೂಲವೊಂದು ಅಂಗವಿಕಲ ತಿಮಿಂಗಲವೆಂದು ವರದಿಯಲ್ಲಿ ಬಹಿರಂಗಪಡಿಸಿತ್ತು. ಇದುವರೆಗೆ ಒಮ್ಮೆಯೂ ಯಾರಿಗೂ ಕಾಣಿಸಿಕೊಳ್ಳದೇ ಕೇವಲ ಧ್ವನಿಯಿಂದಲೇ ತನ್ನ ಇರುವಿಕೆಯನ್ನು ಪ್ರಚುರಪಡಿಸುತ್ತಿದ್ದ ಆ ತಿಮಿಂಗಲವು ತನ್ನ ದೈಹಿಕ ನ್ಯೂನತೆಯ ಪರಿಣಾಮದಿಂದ ಬೇರೆ ತಿಮಿಂಗಲಗಳಿಗಿಂತ ವಿಭಿನ್ನವಾಗಿ ತನ್ನದೇ ಸ್ವರದಲ್ಲಿ ಧ್ವನಿಯನ್ನು ಹೊರಡಿಸುತ್ತಿದೆಯೆಂಬ ನಿರ್ಧಾರಕ್ಕೆ ಸಂಶೋಧನಾ ತಂಡವು ಬಂದಿತ್ತು.

ತನ್ನ ನ್ಯೂನತೆಯ ಪರಿಣಾಮವಾಗಿ ಮಾತು ಬರುತ್ತಿದ್ದರೂ ಮೂಕನಂತಾಗಿದ್ದ ಆದರೂ ಇತರ ತಿಮಿಂಗಲಗಳ ಜೊತೆಗೆ ಸಂಪರ್ಕಿಸುವ ತನ್ನ ಪ್ರಯತ್ನವನ್ನು ಎಡೆಬಿಡದೇ ನಡೆಸುತ್ತಿದ್ದ ಈ ಜಲಚರವು ಬೇರೆಲ್ಲ ತಿಮಿಂಗಲಗಳು ಹೊರಡಿಸುವ 10ರಿಂದ 30ರ ಆವರ್ತದಿಂದ ಭಿನ್ನವಾಗಿ ಧ್ವನಿಯನ್ನು ಹೊರಡಿಸುವ ಜಗತ್ತಿನ ಏಕೈಕ ತಿಮಿಂಗಲವೆಂಬ ವಿಷಯವನ್ನೂ ತಂಡವು ಖಚಿತಪಡಿಸಿತು.

ಈ ಒಂಟಿ ತಿಮಿಂಗಲದ ಕಥೆ ಪತ್ರಿಕೆಯ ಮೂಲಕ ಜನರಿಗೆ ತಲುಪುತ್ತಿದ್ದಂತೆಯೇ ಅತಿಬೇಗ ಎಲ್ಲೆಡೆ ಹರಡಿ ವಿಭಿನ್ನ ಪ್ರತಿಕ್ರಿಯೆಗಳು ವ್ಯಕ್ತವಾದವು. ವಿಜ್ಞಾನಿಗಳು, ಸಾಗರಶಾಸ್ತ್ರಜ್ಞರು ಈ ಬಗ್ಗೆ ಹೆಚ್ಚಿನ ವಿಶ್ಲೇಷಣೆಗೆ ಪೆಸಿಫಿಕ್ ಸಾಗರದ ಕಡೆಗೆ ಹೊರಟರೆ ಕವಿಗಳು, ಲೇಖಕರು, ಸಂಗೀತಕಾರರು ಮತ್ತು ಸಿನಿಮಾ ಮಂದಿ ಈ ಜಲಚರದಲ್ಲಿ ಭಗ್ನಪ್ರೇಮಿಯನ್ನು ಕಂಡು 52 ಎಂಬುದನ್ನು ಒಂಟಿತನದ ಚಿಹ್ನೆ ಎಂಬಂತೆ ಬಿಂಬಿಸತೊಡಗಿದರು. ಈ ಕಾರ್ಯದಲ್ಲಿ ಆಯಾ ಕ್ಷೇತ್ರದ ಘಟಾನುಘಟಿಗಳು ತೊಡಗಿಸಿಕೊಂಡಿದ್ದು ಮತ್ತೊಂದು ವಿಶೇಷ. 2015ರಲ್ಲಿ ದಕ್ಷಿಣ ಕೊರಿಯಾದ ಪ್ರಸಿದ್ಧ ಬ್ಯಾಂಡ್ ಬಿಟಿಎಸ್ ಹೊರತಂದ ಜನಪ್ರಿಯ ಆಲ್ಬಂ 'ದಿ ಮೋಸ್ಟ್ ಬ್ಯೂಟಿಫುಲ್ ಮೂವ್‌ಮೆಂಟ್ ಇನ್ ಲೈಫ್'ನಲ್ಲಿ ವ್ಹೇಲಿನ್ 52 ಎಂಬ ಹಾಡನ್ನು ಈ ತಿಮಿಂಗಲದ ಒಂಟಿತನವನ್ನೇ ಬಿಂಬಿಸಿ ರಚಿಸಲಾಗಿತ್ತು. ಕ್ಯಾಥರಿನ್ ರಾಬರ್ಟ್ಸ್ ಮತ್ತು ಸೀನ್ ಲೇಕ್ಮನ್ 2015ರಲ್ಲಿ ಹೊರತಂದ ಅಲ್ಬಂ 'ಟುಮಾರೋ ವಿಲ್ ಫಾಲೊ ಟುಡೆ' ಎಂಬ ಆಲ್ಬಂನಲ್ಲಿ 52 ಎಂಬ ಶೀರ್ಷಿಕೆಯ ಹಾಡನ್ನು ಸಂಪೂರ್ಣವಾಗಿ ಈ ತಿಮಿಂಗಲದ ಕುರಿತಾಗಿಯೇ ಮೀಸಲಿಡಲಾಗಿತ್ತು. 'ನೋ ಲ್ಯಾಂಡ್', 'ಅ ಲೋನ್ಲಿ ಬ್ಲೂ ವ್ಹೇಲ್ ಲಿವಿಂಗ್ ಲೈಕ್ ಆನ್ ಐಲ್ಯಾಂಡ್', '52 ಹರ್ಟ್ಸ್', '52 ಬ್ಲೂ'... ಹೀಗೆ ಈ ತಿಮಿಂಗಿಲದ ಕುರಿತು ಬಂದ ಆಲ್ಬಂಗಳಿಗೆ ಲೆಕ್ಕವಿಲ್ಲ.

ಇನ್ನು ತಾವೇನೂ ಕಮ್ಮಿಯಿಲ್ಲ ಎಂಬಂತೇ ಸಿನಿಮಾದವರು ಕೂಡ ಈ ಕಾಣದ ತಿಮಿಂಗಲದಿಂದ ಸ್ಫೂರ್ತಿ ಪಡೆದರು. 2014ರಲ್ಲಿ ಈ '52'ಅನ್ನು ಹುಡುಕುವ ಇಬ್ಬರು ಸಹೋದರಿಯರ ಕತೆಯನ್ನಾಧರಿಸಿದ ಕಿರು ಚಿತ್ರ 'ದಿ ಲೋನ್‌ಲಿಯೆಸ್ಟ್' ಬಿಡುಗಡೆಯಾಗಿ ಜನಪ್ರಿಯತೆಯನ್ನು ಗಳಿಸಿತಷ್ಟೆ. ಈ ಸಿನಿಮಾ ಮಂದಿ ಸಿದ್ಧಸೂತ್ರದ ಬೆನ್ನುಬಿದ್ದರು. '52 ಹರ್ಟ್ಸ್ ಐ ಲವ್ ಯೂ', 'ಮೈ ನೇಮ್ ಇಸ್ ಬಾಟ್ಲರ್ ನಾಟ್ ಬಟ್ಲರ್', 'ಫ್ಯಾಂಟಮ್ 52' ಚಿತ್ರಗಳು ತಯಾರಾದವು. ಅವುಗಳಲ್ಲಿ ಫ್ಯಾಂಟಮ್ 52 ಅಂತೂ ಭರ್ಜರಿ ಯಶಸ್ಸು ಕಂಡು ಸುಮಾರು 60 ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು ಪ್ರಶಸ್ತಿಗಳನ್ನು ಬಾಚಿತು. ಇದು ಇಷ್ಟಕ್ಕೇ ನಿಲ್ಲಲಿಲ್ಲ. ಟೈಟಾನಿಕ್ ಖ್ಯಾತಿಯ ಲಿಯೋನಾರ್ಡೋ ಡಿ ಕಾಪ್ರಿಯೋ ನಿರ್ಮಿಸಿರುವ ಹೊಸ ಚಿತ್ರ 'ದಿ ಲೋನ್‌ಲಿಯೆಸ್ಟ್ ವ್ಹೇಲ್, ದಿ ಸರ್ಚ್ ಫಾರ್ 52' ಬಿಡುಗಡೆಯಾಗಿ ಸದ್ದು ಮಾಡುತ್ತಿದೆ.

ಇವೆಲ್ಲದರ ನಡುವೆ ಈ 52 ಎಂಬ ಕುತೂಹಲವನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯುವ ಮೊದಲಿಗರಾಗುವ ಹಂಬಲದಿಂದ ಹಲವರು ಪೆಸಿಫಿಕ್ ಸಾಗರ ತೀರದಲ್ಲಿ ಬೀಡುಬಿಟ್ಟು ಆ ಅಲೆಗಳ ಮೇಲೆ ಸೋನೊಬಾಯ್ಸ್ ಎಂಬ ಉಪಕರಣವನ್ನು ತೇಲಿಬಿಟ್ಟು ಈ ಮಾಯಮೃಗಕ್ಕಾಗಿ ಕಾಯುತ್ತಿದ್ದಾರೆ. ನೀವೇನಾದರೂ ಆ ಕಡೆ ಹೋದಲ್ಲಿ ಸ್ವಲ್ಪ ಕಿವಿಗೊಟ್ಟು ಕೇಳುತ್ತಿರಿ. ಯಾರಿಗೊತ್ತು ನಿಮಗೂ ಒಂದು ದಿನ ಕೇಳಿಸಬಹುದು ದೂರದಲ್ಲಿ ಯಾರದೋ ಆ ಧ್ವನಿ...

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಸರಸಮಯ ಸಂಖ್ಯಾಟ

ನಿಮ್ಮ ಮಿತ್ರನಿಗೆ ಯಾವುದಾದರೊಂದು ಸಂಖ್ಯೆ ಬರೆದುಕೊಳ್ಳುವಂತೆ ತಿಳಿಸಿ. ಅದನ್ನು 9ರಿಂದ ಗುಣಿಸಲಿ. ಬಂದ ಉತ್ತರದಲ್ಲಿ 9ನ್ನು ಬಿಟ್ಟು ಯಾವುದಾದರೊಂದು ಅಂಕಿಯನ್ನು ಹೊಡೆದು ಹಾಕುವಂತೆ ಹೇಳಿ. ಉಳಿದ ಅಂಕಿಗಳನ್ನು ಕೇಳಿ ತಿಳಿದುಕೊಳ್ಳಿ. ಈಗ ಅವನು ಹೊಡೆದು ಹಾಕಿದ ಅಂಕಿ ಯಾವುದು ಎಂದು ಸುಲಭವಾಗಿ ಹೇಳಿಬಿಡಬಹುದು. ಅದು ಹೇಗೆ?

ನಿಮ್ಮ ಮಿತ್ರ ಹೊಡೆದು ಹಾಕದ ಅಂಕಿಗಳನ್ನು ಹೇಳುತ್ತಿದ್ದಂತೆಯೇ ಅವುಗಳನ್ನೆಲ್ಲ ಮನಸ್ಸಿನಲ್ಲಿ ಕೂಡಿಸುತ್ತಾ ಹೋಗಿ. ಕೂಡಿಸಿ ಬಂದ ಸಂಖ್ಯೆಯನ್ನು ಮತ್ತೆ ಕೂಡಿಸಿ. ಹೀಗೆ ಏಕಾಂಕವಾಗುವವರೆಗೂ ಕೂಡಿಸುತ್ತಾ ಹೋದಾಗ ಒಂದು ಅಂಕಿ ಸಿಗುತ್ತದೆ (ಸೂಚ್ಯಂಕ). ಆ ಅಂಕಿಯನ್ನು 9ರಲ್ಲಿ ಕಳೆಯಿರಿ. ಉಳಿಯುವ ಅಂಕಿಯೇ ನಿಮ್ಮ ಮಿತ್ರ ಹೊಡೆದು ಹಾಕಿದ ಅಂಕಿಯಾಗಿರುತ್ತದೆ.

ಉದಾ: 985
x 9
8865 (6 ಹೊಡೆದು ಹಾಕು)
ಈಗ 8 + 8 + 5 = 21
ಮತ್ತೆ 2 + 1 = 3
9 - 3 = 6

ಅವನು ಹೊಡೆದು ಹಾಕಿದ ಅಂಕಿಯೂ 6 ಅಲ್ಲವೇ? ಇನ್ನಷ್ಟು ಉದಾಹರಣೆಗಳನ್ನು ಮಾಡಿ ರೂಢಿಸಿಕೊಂಡು ನಿಮ್ಮ ಮಿತ್ರನಿಗೆ ಜಾದೂ ಮಾಡಿ ತೋರಿಸಿ.

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ನಕಲಿ ಕದ = ________
2. ಬದಲಾದ ನಾತ = ________
3. ಕರಡಿ ಮರಿ = ________
4. ಮಾಮನನಡು = ________

ಶಬ್ದಗಳೊಡನೆ ಸರಸ

ಪುಟ್ಟ - ಪುಟ್ಟಿ ಪ್ರಶ್ನೆ

1. ಪುಟ್ಟಿ ಇಲ್ಲಿ 7 ಜನ ಚಿತ್ರನಟರ ಹೆಸರು ಬರೆದು 8ನೇ ಚಿತ್ರನಟನ ಹೆಸರನ್ನು ಇಲ್ಲಿ ಹುಡುಕಲು ಹೇಳಿದ್ದಾಳೆ. ನಿಮ್ಮಿಂದ ಸಾಧ್ಯವೇ?
   1. ಶಿವಕುಮಾರ
   2. ವಜ್ರಮುನಿ
   3. ರಾಮಕೃಷ್ಣ
   4. ಜಗ್ಗೇಶ್
   5. ಕುಮಾರ ಬಂಗಾರಪ್ಪ
   6. ಮಾನು
   7. ರವಿಚಂದ್ರ

2. ಏಕಾಕ್ಷರಿ ವಾಕ್ಯ
ಇಲ್ಲಿ ಕೊಟ್ಟಿರುವ ವಾಕ್ಯ ಒಂದೇ ಅಕ್ಷರದ ಪದಗಳಿಂದ ಆಗಿದೆ ಗಮನಿಸಿ.

ಏ ರೈ ನೀ ಸೈ ಬಾ; ಆ ಕೈ ತಾ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಟ್ವೆಂಟಿ – 20 ಮ್ಯಾಚ್

ಪದಗಳಿಗೂ ಅರ್ಥಗಳಿಗೂ ಹೊಂದಿಸಿ.

A

1.	ಕೇಶ	A.	ಮಂಗ
2.	ಕುಬ್ಜ	B.	ಅಶಾಂತಿ
3.	ಕೊಕ್ಕ	C.	ಮೂಲೆ
4.	ಕೊಪ್ಪ	D.	ತಲೆಗೂದಲು
5.	ಕಿಲ್ಲೆ	E.	ಪ್ರಶ್ನೆ
6.	ಕ್ರಯ	F.	ಕೋಳಿ
7.	ಕ್ಷೋಭೆ	G.	ಕೋಟೆ
8.	ಕೋನ	H.	ಕುಳ್ಳ
9.	ಕೋಡ	I.	ಚಿಕ್ಕಹಳ್ಳಿ
10.	ಕೋರಿ	J.	ಬೆಲೆ

B

ಅಕ್ಷರಗಳಿಗೂ ಪದಗಳಿಗೂ ಹೊಂದಿಸಿ

1.	ಉ	A.	ನಾಯಕ
2.	ಆ	B.	ಕರಾರು
3.	ಸಂ	C.	ಪವನ
4.	ತ	D.	ಕರಣ
5.	ಪ್ರ	E.	ವಂತಿಗೆ
6.	ಚಂ	F.	ಕಳಿಸು
7.	ಸೇ	G.	ಜವಾನ
8.	ಅ	H.	ವಿಧಾನ
9.	ನೀ	I.	ಪಾವತಿ
10.	ವಿ	J.	ಹಾರಿಕೆ

ಡಜ್ಜ ಚಕ್ಕು ಕೇಶ್ರುಷ್ಟು ಕಥೆಯ — ಯೋಧ ರಮೇಶ್

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ಸಣ್ಣಹಳ್ಳಿ ಹೊಸಕಟ್ಟಿ. ಇಲ್ಲಿನ 16 ಯೋಧರು ಸೇನೆಯಲ್ಲಿದ್ದಾರೆ. ಯೋಧ ರಮೇಶ ನರಗುಂದ ಅವರು ಇಲ್ಲಿಯವರು

ತಮ್ಮ ತಂಡದ ಜೊತೆ ಅವರು ಜಮ್ಮು-ಕಾಶ್ಮೀರದ ನವಾಪಿಂಡ್ ಗಡಿಯಲ್ಲಿ 78ನೇ ಬೆಟಾಲಿಯನ್‌ನಲ್ಲಿ ಕರ್ತವ್ಯದಲ್ಲಿದ್ದರು. ರಮೇಶ ಅವರಿಗೆ ಆಗ 25 ವರ್ಷ

2017ರ ಜುಲೈ 20ರಂದು ಕರ್ತವ್ಯದಲ್ಲಿದ್ದಾಗ ಆ ಪ್ರದೇಶದಲ್ಲಿ ಇದ್ದಕ್ಕಿದ್ದಂತೆಯೇ ವಿದ್ಯುತ್ ಕಡಿತವಾಯಿತು. ಜನರೇಟರ್ ಸರಿಪಡಿಸಲು 6 ಜನ ಯೋಧರು ತೊಡಗಿದರು

ದುರಸ್ತಿ ನಡೆಯುತ್ತಿದ್ದಾಗ ಇದ್ದಕ್ಕಿದ್ದಂತೆಯೇ ಅಲ್ಲಿನ ಜನರೇಟರ್ ಸ್ಫೋಟಗೊಂಡಿತು. ದುರಸ್ತಿ ಮಾಡುತ್ತಿದ್ದ 6 ಜನ ಯೋಧರು ಸ್ಥಳದಲ್ಲೇ ಮೃತಪಟ್ಟರು

ಹುತಾತ್ಮ ಯೋಧ ರಮೇಶ ಅವರ ಪಾರ್ಥಿವ ಶರೀರಕ್ಕೆ ರಾಮನಕೊಪ್ಪದ ವಳಶಾಲಾ ಆವರಣದಲ್ಲಿ ಮಕ್ಕಳು ಶ್ರದ್ಧಾಂಜಲಿ ಅರ್ಪಿಸಿದರು



ಪಾರ್ಥಿವ ಶರೀರದ ಮೆರವಣಿಗೆ ಹೊಸಕಟ್ಟಿ ಗ್ರಾಮ ತಲುಪಿದಾಗ ಮಕ್ಕಳು, ವೃದ್ಧರು, ತಾಯಂದಿರು ಯೋಧನ ಕುಟುಂಬದವರ ದುಃಖದಲ್ಲಿ ಭಾಗಿಯಾದರು

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಮಾಡು 2. ಜರಿ 3. ವಾರ 4. ಗುರಿ
5. ವೈರಿ 6. ಕಣಿ 7. ರಸ 8. ರಾಣಿ

1.		ವಾ	
2.		ರ	
3.		ಭ	
4.		ಖ	
5.		ಜ	
6.		ನ	
7.		ರ್ಪಾ	
8.		ಗಿ	

ಕಳೆದ ಸಂಚಿಕೆಯ ಸರಿ ಉತ್ತರಗಳು

ಆಲೋಚನೆಗೆ ಆಹಾರ:
1. ಮಾಣಿ ಕೊಟ್ಟ ಬಿಲ್ಲನ್ನು ಮ್ಯಾನೇಜರ್ ತಿರುವು ಮುರುವು ಮಾಡಿ ನೋಡಿದ್ದ. ₹ 81 ಬದಲಾಗಿ ₹ 18 ಎಂದು ಕಂಡಿತ್ತು. ಹಾಗಾಗಿ ಆತ ₹ 82 ಕೊಟ್ಟ.
2. ಮಾಣಿ ತಂದು ಕೊಟ್ಟದ್ದು 8 ಕಪ್‌ಗಳು ಮಾತ್ರ (SIX TEA + TWO COFFEE = 8 ಕಪ್‌ಗಳು)

ಅದಲು ಬದಲು ಕಂಚಿ ಕದಲು:
1. ಕವನದಲಾಭ 2. ದೂರಮಾಡು 3. ಹಾಡಿನಲಿ 4. ನಮ್ಮಗುರಿ

ಶಬ್ದಗಳೊಡನೆ ಸರಸ: 1. ಗುರಿ 2. ಮೋತಿ 3. ಗಿಣಿ 4. ಬಾಲೆ 5. ಹೀರೆ 6. ಸೋಲು 7. ಮೀನು 8. ದಾಳಿ 9. ಕೆರೆ 10. ತೆರೆ

ಪದಹಿಗ್ಗು: 1. ಕೊರಡು 2. ಆಘಾತ 3. ಉಪ್ಪಿಟ್ಟು 4. ಕಾಯಿಸು 5. ಇದ್ದಲಿ 6. ಕದಡು 7. ಶಕುನಿ 8. ಕುವತ್ತು

ಟ್ವೆಂಟಿ-20 ಮ್ಯಾಚ್:
ಎ ವಿಭಾಗ: 1. ಸರಿ 2. ತಪ್ಪು 3. ಸರಿ 4. ಸರಿ 5. ತಪ್ಪು 6. ಸರಿ 7. ಸರಿ 8 .ತಪ್ಪು 9. ಸರಿ 10. ಸರಿ
ಬಿ ವಿಭಾಗ: 1-J, 2-H, 3-G, 4-I, 5-A, 6-B, 7-D, 8-C, 9-F, 10-E

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:
majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ತನುಶ್ರೀ ಬೇವನೂರಮಠ
ಲೋಕಾಪುರ (ಬಾಗಲಕೋಟೆ)

ದಯಾನಂದ ಛಲವಾದಿ
ರಡ್ಡೇರನಾಗನೂರ (ನರಗುಂದ)

ಕೃಷ್ಣ ಅರ್ನವ್
ನೆಲಮಂಗಲ (ಬೆಂಗಳೂರು)

ಗೋವಾ ಫಾರ್ವರ್ಡ್ ಪಕ್ಷದ ಜೊತೆ ಕಾಂಗ್ರೆಸ್ ಮೈತ್ರಿ

ಪ್ರಜಾವಾಣಿ ವಾರ್ತೆ

ಪಣಜಿ: ಹಲವಾರು ವಾರಗಳ ಮಾತುಕತೆ ಬಳಿಕ, ಗೋವಾ ಫಾರ್ವರ್ಡ್ ಪಕ್ಷದ ಜೊತೆ ಚುನಾವಣೆ ಪೂರ್ವ ಮೈತ್ರಿ ಮಾಡಿಕೊಂಡಿರುವುದಾಗಿ ಕಾಂಗ್ರೆಸ್ ಶನಿವಾರ ಘೋಷಿಸಿದೆ.

ಎರಡೂ ಪಕ್ಷಗಳು ಸದ್ಯದಲ್ಲೇ ಸೀಟು ಹಂಚಿಕೆ ಮತ್ತು ಇತರ ಔಪಚಾರಿಕ ಕೆಲಸಗಳ ಕುರಿತು ಚರ್ಚೆ ನಡೆಸಲಿವೆ ಎಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಕಾರ್ಯದರ್ಶಿ, ಗೋವಾ ಕಾಂಗ್ರೆಸ್ ಉಸ್ತುವಾರಿ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

'ಮೈತ್ರಿ ಮಾಡಿಕೊಳ್ಳುವ ಕುರಿತು ಗೋವಾ ಫಾರ್ವರ್ಡ್ ಪಕ್ಷ ನಮ್ಮ ಜೊತೆ ಹಲವಾರು ದಿನಗಳಿಂದ ಚರ್ಚೆ ನಡೆಸುತ್ತಿತ್ತು. ನಾವು ಈಗ ಒಮ್ಮತಕ್ಕೆ ಬಂದಿದ್ದೇವೆ. ಕೋಮುವಾದಿ ಮತ್ತು ಭ್ರಷ್ಟ ಬಿಜೆಪಿ ವಿರುದ್ಧ ಗೆಲ್ಲಲು ಇದು ಉತ್ತಮ ಮೈತ್ರಿ ಆಗಲಿದೆ. ಇದು ಉತ್ತಮ ಆರಂಭ ಎಂದು ನಾನು ಭಾವಿಸುತ್ತೇನೆ. ಇದು ಅತ್ಯಂತ ಸ್ಪಷ್ಟವಾದ ಮತ್ತು ದೃಢವಾದ ಮೈತ್ರಿ. ಇದರಿಂದ ಕಾಂಗ್ರೆಸ್‌ಗೆ ವಿಜಯ ಸಿಗುವುದು ಖಚಿತ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಈ ವೇಳೆ ಗೋವಾ ಫಾರ್ವರ್ಡ್ ಪಕ್ಷದ ಅಧ್ಯಕ್ಷ ವಿಜಯ್ ಸರ್ದೇಸಾಯಿ ಕೂಡಾ ಉಪಸ್ಥಿತರಿದ್ದರು.

'ಕಾಂಗ್ರೆಸ್ ಮತ್ತು ಗೋವಾ ಫಾರ್ವರ್ಡ್ ಪಕ್ಷ ಸೇರಿ ಟೀಮ್ ಗೋವಾ ಆಗಿದೆ. ಎರಡೂ ಪಕ್ಷಗಳು ಒಟ್ಟಾಗಿ ಹೋರಾಡಿ ನಿರಂಕುಶವಾದಿ ಬಿಜೆಪಿಯನ್ನು ಸೋಲಿಸಲಿವೆ. ಜನರಿಗಾಗಿ ಯಾವ ಕೆಲಸವನ್ನೂ ಬಿಜೆಪಿ ಮಾಡುವುದಿಲ್ಲ' ಎಂದು ಸರ್ದೇಸಾಯಿ ಹೇಳಿದರು.

2017ರ ಗೋವಾ ವಿಧಾನಸಭೆ ಚುನಾವಣೆಯಲ್ಲಿ ಗೋವಾ ಫಾರ್ವರ್ಡ್ ಪಕ್ಷ 40 ಸ್ಥಾನಗಳಲ್ಲಿ ಮೂರು ಸ್ಥಾನಗಳನ್ನು ಗೆದ್ದಿತ್ತು. ಬಿಜೆಪಿ ವಿರೋಧಿ ಪಕ್ಷ ಎಂದು ಗುರುತಿಸಿಕೊಂಡಿದ್ದ ಈ ಪಕ್ಷ ಚುನಾವಣೆ ಬಳಿಕ ಬಿಜೆಪಿ ನೇತೃತ್ವದ ಮೈತ್ರಿ ಸರ್ಕಾರದ ಭಾಗವಾಯಿತು. 2019ರಲ್ಲಿ ವಿಜಯ್ ಸರ್ದೇಸಾಯಿ ಅವರ ಪಕ್ಷವು ಎನ್‌ಡಿಎಯಿಂದ ಹೊರಗೆ ಬಂತು.

ಹೊಸ ಪಕ್ಷ ಸ್ಥಾಪಿಸಿದ ಗುರ್ನಾಮ್ ಚದುನಿ

ಚಂಡೀಗಡ: ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ದೆಹಲಿಯ ಗಡಿಗಳಲ್ಲಿ ನಡೆದ ಪ್ರತಿಭಟನೆಯ ನಾಯಕರಲ್ಲಿ ಒಬ್ಬರಾಗಿದ್ದ ಗುರ್ನಾಮ್ ಸಿಂಗ್ ಚದುನಿ ಅವರು 'ಸಂಯುಕ್ತ ಸಂಘರ್ಷ ಪಕ್ಷ' ಎಂಬ ಹೆಸರಿನ ಹೊಸ ರಾಜಕೀಯ ಪಕ್ಷಕ್ಕೆ ಶನಿವಾರ ಚಾಲನೆ ನೀಡಿದರು. ಮುಂಬರಲಿರುವ ಪಂಜಾಬ್ ವಿಧಾನಸಭೆ ಚುನಾವಣೆಯಲ್ಲಿ ಎಲ್ಲಾ 117 ಕ್ಷೇತ್ರಗಳಲ್ಲೂ ತಮ್ಮ ಪಕ್ಷ ಸ್ಪರ್ಧಿಸಲಿದೆ ಎಂದರು.

ಸುದ್ದಿಗಾರರ ಎದುರು ಮಾತನಾಡಿದ ಅವರು, ರಾಜಕಾರಣವನ್ನು ಶುದ್ಧೀಕರಿಸುವ ಮತ್ತು ಉತ್ತಮರನ್ನು ಮುಂದೆ ತರುವ ಗುರಿಯನ್ನು ಹೊಂದಿರುವುದಾಗಿ ಹೇಳಿದರು. ಬೇರೆ ಪಕ್ಷಗಳ ಜೊತೆ ಮೈತ್ರಿ ಮಾಡಿಕೊಳ್ಳುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಮೈತ್ರಿ ಕುರಿತು ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ ಎಂದರು.

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,
ನಂದಿನಗರ, ಬೀದರ – 585 401. ಇ-ಮೇಲ್ : eokvafsu@gmail.com
ಆಸ್ತಿ ಅಧಿಕಾರಿಗಳವರ ಕಛೇರಿ

ಸಂಖ್ಯೆ:ಆ.ಅ/ಕ.ಪ.ಪ.ಮೀ.ವಿ.ವಿ/ಟೆ.ನಂ.104/ಕಾಮಗಾರಿ/2021–22 ದಿನಾಂಕ:16.12.2021

ಟೆಂಡರ ಪ್ರಕಟಣೆ (ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

1) ಕಾಮಗಾರಿ/ಸರಕು/ಸೇವೆಯ ವಿವರ : Work list enclosed, 2) ಕಾಮಗಾರಿ/ಸರಕು/ಸೇವೆಯ ಅಂದಾಜು ಮೊತ್ತ : e-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ: e-portal ನಲ್ಲಿ ನಮೂದಿಸಿದಂತೆ, 4) ಕಾಮಗಾರಿ/ಸರಕು/ಸೇವೆಯ ಟೆಂಡರ ಮೊತ್ತದ ವಿವರ: e-portal ನಲ್ಲಿ ನಮೂದಿಸಿದಂತೆ, 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ : 17.01.2022 up to 5.00 PM, 6) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ : e-portal ನಲ್ಲಿ ನಮೂದಿಸಿದಂತೆ, 7) ಟೆಂಡರ ಫಾರಂ ಸಲ್ಲಿಸಲು ಅಂತಿಮ ದಿನಾಂಕ : 17.01.2022 up to 5.00 PM, 8) ಫೈನಾನ್ಸಿಯಲ ಬಿಡ ಟೆಂಡರ ತೆರೆಯುವ ದಿನಾಂಕ, 19.01.2022 at 11.30. AM, 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ, ವಿಳಾಸ, ದೂರವಾಣಿ ಸಂಖ್ಯೆ : ಆಸ್ತಿ ಅಧಿಕಾರಿಗಳ ಕಛೇರಿ, ಕಪಪಮೀವಿವಿ, ನಂದಿನಗರ, ಬೀದರ. 08482–245446, 10) ಅಂತರ್ಜಾಲ ತಾಣದ ವಿಳಾಸ : e-procurement portal- www.eproc.karnataka.gov.in

ಸಹಿ/– ಆಸ್ತಿ ಅಧಿಕಾರಿಗಳು
ಕಪಪಮೀವಿವಿ, ಬೀದರ.

ವಾ.ಸಾ.ಸಂ.ಇ/ಬೀದರ/221/ಎಂಸಿ&ಎ/2021–22

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ–585105
ಫೋ.ನಂ 08472–278634/256944, Email:eerwssglb14@gmail.com

ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2021–22/1934 ದಿನಾಂಕ : 16.12.2021

ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ದತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿ ಲಕೋಟೆಯಲ್ಲಿ)

ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ : **ಆಳಂದ ತಾಲೂಕಿನ 02 (Indent No 36228 & 36229)**, 2) ಟೆಂಡರಿಗಿಟ್ಟ ಮೊತ್ತ : ಕನಿಷ್ಠ **1,00,00,719/–, ಗರಿಷ್ಠ 1,02,97,000/–**. 3) ಲೆಕ್ಕ ಶೀರ್ಷಿಕೆ : **JJM 2020-21,** 4) ಗುತ್ತಿಗೆದಾರರ ಅರ್ಹತೆ : 3ನೇ ದರ್ಜೆ ಗುತ್ತಿಗೆದಾರರು & ಮೇಲ್ಪಟ್ಟು. 5) ಟೆಂಡರ ಫಾರಂ ಪಡೆಯುವ ದಿನಾಂಕ : **17–12–2021 ರಿಂದ 31–12–2021**. 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಇ–ಪ್ರೋಕ್ಯೂರ್‌ಮೆಂಟ್ ಪ್ರಕಾರ. 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : **31–12–2021** ಸಾಯಂಕಾಲ 4:00 ಗಂಟೆವರೆಗೆ. 8) ಪ್ರೀ ಬಿಡ್ಡ್ ಸಭೆ : **27–12–2021 ಬೆ.11.00** ಗಂಟೆಯ ನಂತರ, 9) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : **01–01–2022 ಬೆ. 11.00** ಗಂಟೆಯ ನಂತರ, 10) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ : **04–01–2022 ಬೆ. 11.00 ಗಂಟೆಯ ನಂತರ**. 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ ಕುಸನೂರ ರೋಡ, ಕಲಬುರಗಿ 12) ಅಂತರಜಾಲ ತಾಣದ ವಿಳಾಸ : **www.eproc.karnataka.gov.in**

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/813/ಎಂ.ಸಿ.&ಎ/2021–22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಮಹದೇವಪುರ ವಿಭಾಗ,
ವೈಟ್‌ಫೀಲ್ಡ್ ರಸ್ತೆ, ಫೀನಿಕ್ಸ್ ಮಾಲ್ ಎದುರು, ಬೆಂಗಳೂರು – 560 048.

ಸಂಖ್ಯೆ: ಕಾಪಾಅ/ಮ ಪುರ/ಟೆಂಡರ್/13/2021–22 ದಿನಾಂಕ: 18.12.2021

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ರಾಜ್ಯ ಅಥವಾ ಕೇಂದ್ರ ಸರ್ಕಾರದ ಇನ್ಯಾವುದೇ ಸಂಸ್ಥೆಗಳಲ್ಲಿ ಸೂಕ್ತ ದರ್ಜೆಯಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಯಾವುದಾದರೂ ಅಥವಾ ಎಲ್ಲಾ ಕಾಮಗಾರಿಗಳಿಗೆ **ಐಟಂ ದರದ** ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಪ್ಯಾಕೇಜ್ ಕಾಮಗಾರಿಗಳ ಹೆಸರು	ಕಾಮಗಾರಿಗಿಟ್ಟ ಅಂದಾಜು ಮೊತ್ತ (₹ ಲಕ್ಷಗಳಲ್ಲಿ)
1.	**ಪ್ಯಾಕೇಜ್–1** ವಾರ್ಡ್ ಸಂಖ್ಯೆ–54 ಹೂಡಿಯಲ್ಲಿ ಸರ್ವೀಸ್ ಮಾಡದಿರುವ ರಸ್ತೆ ಸ್ಟ್ರೆಚಸ್‌ಗಳು, ತಪ್ಪಿಹೋಗಿರುವ ಬಿಟ್‌ಗಳು ಮತ್ತು ಭಾಗಶಃ ಸರ್ವೀಸ್ ಆಗಿರುವ ರಸ್ತೆಗಳಲ್ಲಿ ಬೀದಿ ದೀಪ ವ್ಯವಸ್ಥೆಯನ್ನು ಒದಗಿಸುವುದು.	332.00
	ವಾರ್ಡ್ ಸಂಖ್ಯೆ–54 ಹೂಡಿಯಲ್ಲಿ ಖಾಲಿ ಎಲ್‌ಟಿ ವಿದ್ಯುತ್ ಕಂಬಗಳಿಗೆ ಕೇಬಲ್‌ಗಳು, ಟೈಮರ್‌ಗಳು ಮತ್ತು ಸಲಕರಣೆಗಳಿಗೆ ಬೀದಿ ದೀಪಗಳನ್ನು ಒದಗಿಸುವುದು.	
	ವಾರ್ಡ್ ಸಂಖ್ಯೆ–82 ಗರುಡಾಚಾರ್‌ಪಾಳ್ಯದಲ್ಲಿ, ವಾರ್ಡ್ ಸಂಖ್ಯೆ–85 ದೊಡ್ಡನೆಕುಂದಿಯಲ್ಲಿ ಹಾಗೂ ವಾರ್ಡ್ ಸಂಖ್ಯೆ–86 ಮಾರತಹಳ್ಳಿಯಲ್ಲಿ ಸರ್ವೀಸ್ ಮಾಡದಿರುವ ರಸ್ತೆ ಸ್ಟ್ರೆಚಸ್‌ಗಳು, ತಪ್ಪಿಹೋಗಿರುವ ಬಿಟ್‌ಗಳು ಮತ್ತು ಭಾಗಶಃ ಸರ್ವೀಸ್ ಆಗಿರುವ ರಸ್ತೆಗಳಲ್ಲಿ ಬೀದಿ ದೀಪ ವ್ಯವಸ್ಥೆಯನ್ನು ಒದಗಿಸುವುದು.	
	ವಾರ್ಡ್ ಸಂಖ್ಯೆ–82 ಗರುಡಾಚಾರ್‌ಪಾಳ್ಯದಲ್ಲಿ, ವಾರ್ಡ್ ಸಂಖ್ಯೆ–85 ದೊಡ್ಡನೆಕುಂದಿಯಲ್ಲಿ ಹಾಗೂ ವಾರ್ಡ್ ಸಂಖ್ಯೆ–86 ಮಾರತಹಳ್ಳಿಯಲ್ಲಿ ಖಾಲಿ ಎಲ್‌ಟಿ ವಿದ್ಯುತ್ ಕಂಬಗಳಿಗೆ ಕೇಬಲ್‌ಗಳು, ಟೈಮರ್‌ಗಳು ಮತ್ತು ಸಲಕರಣೆಗಳಿಗೆ ಬೀದಿ ದೀಪಗಳನ್ನು ಒದಗಿಸುವುದು.	
2.	**ಪ್ಯಾಕೇಜ್–2** ವಾರ್ಡ್ ಸಂಖ್ಯೆ–83 ಕಾಡುಗೋಡಿಯಲ್ಲಿ ಸರ್ವೀಸ್ ಮಾಡದಿರುವ ರಸ್ತೆ ಸ್ಟ್ರೆಚಸ್‌ಗಳು, ತಪ್ಪಿಹೋಗಿರುವ ಬಿಟ್‌ಗಳು ಮತ್ತು ಭಾಗಶಃ ಸರ್ವೀಸ್ ಆಗಿರುವ ರಸ್ತೆಗಳಲ್ಲಿ ಬೀದಿ ದೀಪ ವ್ಯವಸ್ಥೆಯನ್ನು ಒದಗಿಸುವುದು.	474.00
	ವಾರ್ಡ್ ಸಂಖ್ಯೆ–83 ಕಾಡುಗೋಡಿಯಲ್ಲಿ ಖಾಲಿ ಎಲ್‌ಟಿ ವಿದ್ಯುತ್ ಕಂಬಗಳಿಗೆ ಕೇಬಲ್‌ಗಳು, ಟೈಮರ್‌ಗಳು ಮತ್ತು ಸಲಕರಣೆಗಳಿಗೆ ಬೀದಿ ದೀಪಗಳನ್ನು ಒದಗಿಸುವುದು.	
	ವಾರ್ಡ್ ಸಂಖ್ಯೆ–84 ಹಗದೂರಿನಲ್ಲಿ ಸರ್ವೀಸ್ ಮಾಡದಿರುವ ರಸ್ತೆ ಸ್ಟ್ರೆಚಸ್‌ಗಳು, ತಪ್ಪಿಹೋಗಿರುವ ಬಿಟ್‌ಗಳು ಮತ್ತು ಭಾಗಶಃ ಸರ್ವೀಸ್ ಆಗಿರುವ ರಸ್ತೆಗಳಲ್ಲಿ ಬೀದಿ ದೀಪ ವ್ಯವಸ್ಥೆಯನ್ನು ಒದಗಿಸುವುದು.	
	ವಾರ್ಡ್ ಸಂಖ್ಯೆ–84 ಹಗದೂರಿನಲ್ಲಿ ಖಾಲಿ ಎಲ್‌ಟಿ ವಿದ್ಯುತ್ ಕಂಬಗಳಿಗೆ ಕೇಬಲ್‌ಗಳು, ಟೈಮರ್‌ಗಳು ಮತ್ತು ಸಲಕರಣೆಗಳಿಗೆ ಬೀದಿ ದೀಪಗಳನ್ನು ಒದಗಿಸುವುದು.	
	ವಾರ್ಡ್ ಸಂಖ್ಯೆ–149 ವರ್ತೂರಿನಲ್ಲಿ ಸರ್ವೀಸ್ ಮಾಡದಿರುವ ರಸ್ತೆ ಸ್ಟ್ರೆಚಸ್‌ಗಳು, ತಪ್ಪಿಹೋಗಿರುವ ಬಿಟ್‌ಗಳು ಮತ್ತು ಭಾಗಶಃ ಸರ್ವೀಸ್ ಆಗಿರುವ ರಸ್ತೆಗಳಲ್ಲಿ ಬೀದಿ ದೀಪ ವ್ಯವಸ್ಥೆಯನ್ನು ಒದಗಿಸುವುದು.	
	ವಾರ್ಡ್ ಸಂಖ್ಯೆ–149 ವರ್ತೂರಿನಲ್ಲಿ ಖಾಲಿ ಎಲ್‌ಟಿ ವಿದ್ಯುತ್ ಕಂಬಗಳಿಗೆ ಕೇಬಲ್‌ಗಳು, ಟೈಮರ್‌ಗಳು ಮತ್ತು ಸಲಕರಣೆಗಳಿಗೆ ಬೀದಿ ದೀಪಗಳನ್ನು ಒದಗಿಸುವುದು.	
3.	**ಪ್ಯಾಕೇಜ್–3** ವಾರ್ಡ್ ಸಂಖ್ಯೆ–150 ಬೆಳ್ಳಂದೂರಿನಲ್ಲಿ ಸರ್ವೀಸ್ ಮಾಡದಿರುವ ರಸ್ತೆ ಸ್ಟ್ರೆಚಸ್‌ಗಳು, ತಪ್ಪಿಹೋಗಿರುವ ಬಿಟ್‌ಗಳು ಮತ್ತು ಭಾಗಶಃ ಸರ್ವೀಸ್ ಆಗಿರುವ ರಸ್ತೆಗಳಲ್ಲಿಬೀದಿ ದೀಪ ವ್ಯವಸ್ಥೆಯನ್ನು ಒದಗಿಸುವುದು.	194.00
	ವಾರ್ಡ್ ಸಂಖ್ಯೆ–150 ಬೆಳ್ಳಂದೂರಿನಲ್ಲಿ ಖಾಲಿ ಎಲ್‌ಟಿ ವಿದ್ಯುತ್ ಕಂಬಗಳಿಗೆ ಕೇಬಲ್‌ಗಳು, ಟೈಮರ್‌ಗಳು ಮತ್ತು ಸಲಕರಣೆಗಳಿಗೆ ಬೀದಿ ದೀಪಗಳನ್ನು ಒದಗಿಸುವುದು.	
	ಇಎಂಡಿ (₹. ಗಳಲ್ಲಿ) - ಸರ್ಕಾರದ ಆದೇಶದ ಪ್ರಕಾರ ಘೋಷಣೆ	

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ಪ್ರಕಟಣೆಯ ದಿನಾಂಕ: **18.12.2021** ರಿಂದ. (2) ಟೆಂಡರ್ ದಾಖಲೆಗಳನ್ನು ದಿನಾಂಕ **22.12.2021** ರ ಸಂಜೆ **4:00** ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (3) ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **23.12.2021**ರ ಮಧ್ಯಾಹ್ನ **3:00** ಗಂಟೆಯವರೆಗೆ (4) ಬಿಡ್ ಪೂರ್ವಭಾವಿ ಸಭೆಯ ದಿನಾಂಕ **24.12.2021**ರ ಮಧ್ಯಾಹ್ನ **3:00** ಗಂಟೆಗೆ. (5) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **31.12.2021**ರ ಸಂಜೆ **4:00** ಗಂಟೆಯವರೆಗೆ. (6) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **03.01.2022**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು – ಮಹದೇವಪುರ ವಿಭಾಗ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಉತ್ತರ ಪ್ರದೇಶ: ಚುನಾವಣೆಗೆ ತಿಂಗಳ ಮೊದಲು ಎಸ್‌ಪಿ ಮುಖಂಡರ ಮನೆಗಳಲ್ಲಿ ಶೋಧ

ಅಖಿಲೇಶ್ ಆಪ್ತರ ಮೇಲೆ ಐ.ಟಿ. ದಾಳಿ

ಪ್ರಜಾವಾಣಿ ವಾರ್ತೆ

ಲಖನೌ: ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್ ಅವರ ಆಪ್ತರ ನಿವಾಸಗಳು ಹಾಗೂ ಕಚೇರಿಗಳಲ್ಲಿ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು ಶನಿವಾರ ಶೋಧ ನಡೆಸಿದ್ದಾರೆ. ಇದು ಮುಂಬರುವ ಉತ್ತರ ಪ್ರದೇಶ ಚುನಾವಣೆಯಲ್ಲಿ ಬಿಜೆಪಿ ಸೋಲುವ ಭೀತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಅಖಿಲೇಶ್ ಹೇಳಿದ್ದಾರೆ.

ಪಕ್ಷದ ಹಿರಿಯ ಮುಖಂಡ ಹಾಗೂ ವಕ್ತಾರ ರಾಜೀವ್ ರಾಯ್, ಅಖಿಲೇಶ್ ಅವರ ಆಪ್ತ ಕಾರ್ಯದರ್ಶಿ ಜೈನೇಂದ್ರ ಯಾದವ್ ಮತ್ತು ಪಕ್ಷದ ಮುಖಂಡ ಮನೋಜ್ ಯಾದವ್ ಅವರಿಗೆ ಸೇರಿದ ಜಾಗಗಳಲ್ಲಿ ತಪಾಸಣೆ ನಡೆಸಲಾಗಿದೆ.

ಶನಿವಾರ ಬೆಳಗಿನ ಜಾವ ವಾರಾಣಸಿಯಿಂದ ಮೌಗೆ ಬಂದ ಅಧಿಕಾರಿಗಳ ತಂಡ, ರಾಯ್ ಅವರ ಮನೆಯಲ್ಲಿ ತಪಾಸಣೆ ನಡೆಸಿತು. ರಾಯ್ ಅವರು ಕರ್ನಾಟಕ ಸೇರಿದಂತೆ ವಿವಿಧೆಡೆ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಈ ಕಾರ್ಯಾಚರಣೆಯನ್ನು ರಾಜಕೀಯ ಪ್ರೇರಿತ ಎಂದು ರಾಯ್ ಕರೆದಿದ್ದಾರೆ.

ಮೈನ್‌ಪುರಿ, ಆಗ್ರಾ, ಲಖನೌನಲ್ಲಿ ಜೈನೇಂದ್ರ ಯಾದವ್ ಹಾಗೂ ಮನೋಜ್ ಯಾದವ್ ಅವರಿಗೆ ಸೇರಿದ ಜಾಗಗಳಿಗೂ ಅಧಿಕಾರಿಗಳ ತಂಡ ಭೇಟಿ ನೀಡಿತು. ಅಖಿಲೇಶ್ ಆಪ್ತರಾಗಿರುವ ಇತರರ ಮೇಲೂ ಅಧಿಕಾರಿಗಳು ದಾಳಿ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

> **ಚುನಾವಣೆಯಲ್ಲಿ ಬಿಜೆಪಿಗೆ ಸೋಲಿನ ಭಯ ಹೆಚ್ಚಿದಂತೆಲ್ಲಾ, ಶೋಧಗಳೂ ಹೆಚ್ಚಲಿವೆ. 22 ಕೋಟಿ ಜನರು ಬಿಜೆಪಿ ವಿರುದ್ಧವಾಗಿದ್ದಾರೆ, ಇವರೆಲ್ಲರ ತಪಾಸಣೆ ಸಾಧ್ಯವೇ?**
> **ಅಖಿಲೇಶ್ ಯಾದವ್**
> ಸಮಾಜವಾದಿ ಪಕ್ಷದ ಮುಖ್ಯಸ್ಥ

ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ರಾಯ್‌ಬರೇಲಿಯಲ್ಲಿ ಶನಿವಾರ ನಡೆದ ವಿಜಯರಥ ಯಾತ್ರೆಯಲ್ಲಿ ಜನರ ಕೈಕುಲುಕಿದರು–ಪಿಟಿಐ ಚಿತ್ರಗಳು

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಶಾಲು ಹೊದಿಸಿದರು

'ಇ.ಡಿ., ಸಿಬಿಐ ಶೋಧ ನಿರೀಕ್ಷೆ'

ಚುನಾವಣೆಗೂ ಮುನ್ನ ಆದಾಯ ತೆರಿಗೆ ಇಲಾಖೆ ಶೋಧವನ್ನು ಅಖಿಲೇಶ್ ಲೇವಡಿ ಮಾಡಿದ್ದಾರೆ. 'ಈಗ ಆದಾಯ ತೆರಿಗೆ ಇಲಾಖೆ ಶೋಧ ನಡೆಸಿದೆ. ಇದಾದ ಬಳಿಕ ಜಾರಿ ನಿರ್ದೇಶನಾಲಯ (ಇ.ಡಿ.) ಹಾಗೂ ಸಿಬಿಐ ದಾಳಿ ನಡೆಸುವ ನಿರೀಕ್ಷೆಯಿದೆ' ಎಂದಿದ್ದಾರೆ.

ಚುನಾವಣೆ ಹತ್ತಿರ ಬಂದಿರುವಾಗ ಶೋಧ ನಡೆಸುವ ಬದಲು, ಮೊದಲೇ ಏಕೆ ತಪಾಸಣೆಗೆ ಒಳಪಡಿಸಲಿಲ್ಲ ಎಂದು ಪ್ರಶ್ನಿಸಿರುವ ಅವರು, 'ರಾಜ್ಯ ವಿಧಾನಸಭಾ ಚುನಾವಣೆಗೆ ಐ.ಟಿ ಇಲಾಖೆಯೂ ಧುಮುಕಿದೆ. ಆದರೆ ಬಿಜೆಪಿ ಧೂಳೀಪಟವಾಗಲಿದೆ' ಎಂದು ಅವರು ರಾಯ್‌ಬರೇಲಿಯಲ್ಲಿ ಹೇಳಿದ್ದಾರೆ.

ಇತ್ತೀಚೆಗೆ ಮುಕ್ತಾಯವಾದ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ಸಮಯದಲ್ಲೂ ಕೇಂದ್ರೀಯ ಸಂಸ್ಥೆಗಳನ್ನು ಬಳಸಿಕೊಂಡು ಬಿಜೆಪಿ ಸರ್ಕಾರ ಶೋಧ ಕಾರ್ಯಾಚರಣೆ ನಡೆಸಿತ್ತು. ಅದರ ಕಹಿಯನ್ನು ತಾನೇ ಉಂಡಿತ್ತು ಎಂದು ಅಖಿಲೇಶ್ ವಿಶ್ಲೇಷಿಸಿದ್ದಾರೆ.

'ಉಪಯೋಗಿ ಅಲ್ಲ, ಅನುಪಯೋಗಿ'

ಯೋಗಿ ಸರ್ಕಾರವು 'ಅನುಪಯೋಗಿ' ಎಂದು ಅಖಿಲೇಶ್ ಯಾದವ್ ಹೇಳಿದ್ದಾರೆ. ದಲಿತರು ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಉಲ್ಲೇಖಿಸಿ ಟ್ವೀಟ್ ಮಾಡಿದ್ದಾರೆ. 'ಹಾಥರಸ್‌ನ ಹೆಣ್ಣುಮಗಳು, ಲಖಿಂಪುರದ ರೈತರು, ಗೋರಖಪುರದ ವರ್ತಕರು, ಅಸುರಕ್ಷಿತ ಭಾವದಲ್ಲಿರುವ ಮಹಿಳೆಯರು, ನಿರುದ್ಯೋಗಿ ಯುವಜನರು, ದಲಿತರು, ಹಿಂದುಳಿದ ವರ್ಗದ ಜನರು ಈಗಿನ ರಾಜ್ಯ ಸರ್ಕಾರವು 'ಅನುಪಯೋಗಿ' (ವ್ಯರ್ಥ) ಎಂದು ಹೇಳುತ್ತಿದ್ದಾರೆ' ಎಂದು ಅಖಿಲೇಶ್ ವಿವರಿಸಿದ್ದಾರೆ. ಯೋಗಿ ಉಪಯೋಗಿ ಎಂದು ಪ್ರಧಾನಿ ಹೇಳಿದ್ದಕ್ಕೆ ಪ್ರತಿಯಾಗಿ ಅಖಿಲೇಶ್ ಹೀಗೆ ಹೇಳಿದ್ದಾರೆ.

'ಉತ್ತರ ಪ್ರದೇಶಕ್ಕೆ ಯೋಗಿ ಉಪಯೋಗಿ'

ಲಖನೌ: ಬಿಜೆಪಿಯ ಪ್ರತಿಸ್ಪರ್ಧಿ ಪಕ್ಷಗಳು ದೇಶದ ಪರಂಪರೆಯನ್ನು ವಿರೋಧಿಸುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಶಿವ, ರಾಮ ಮಂದಿರ ಮತ್ತು ಗಂಗಾ ನದಿಯನ್ನು ಉಲ್ಲೇಖಿಸಿ ಅವರು ಮಾತನಾಡಿದ್ದಾರೆ. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಮೇಲೆ ಹೊಗಳಿಕೆಯ ಮಳೆಗರೆದಿದ್ದಾರೆ. ಯೋಗಿ ಅವರು 'ಉಪಯೋಗಿ' ಎಂಬುದನ್ನು ಜನರು ಕಂಡುಕೊಂಡಿದ್ದಾರೆ ಎಂದು ಹೇಳಿದ್ದಾರೆ.

'ಯುಪಿ (ಉತ್ತರ ಪ್ರದೇಶ) + ಯೋಗಿ = ಉಪಯೋಗಿ' ಎಂದರು.

ಗಂಗಾ ಎಕ್ಸ್‌ಪ್ರೆಸ್‌ವೇ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿ ಶಾಜಹಾನ್‌ಪುರದಲ್ಲಿ ಅವರು ಮಾತನಾಡಿದರು. ದೇಶದ ಪರಂಪರೆಯ ಬಗ್ಗೆ ಅಸಮಾಧಾನ ಇರುವ ಜನರು ದೇಶದಲ್ಲಿ ಇದ್ದಾರೆ ಎಂದರು.

'ಕೆಲವು ಜನರಿಗೆ ಕಾಶಿ ವಿಶ್ವನಾಥ ಧಾಮ, ರಾಮ ಮಂದಿರ, ಗಂಗಾ ನದಿ ಸ್ವಚ್ಛತೆ ಬಗ್ಗೆ ಸಮಸ್ಯೆ ಇದೆ. ಸೇನಾ ಕಾರ್ಯಾಚರಣೆಯ ಬಗ್ಗೆಯೂ ಇವೇ ಜನರು ಪ್ರಶ್ನೆಗಳನ್ನು ಎತ್ತುತ್ತಾರೆ. ಕೊರೊನಾ ಲಸಿಕೆಯ ಬಗ್ಗೆಯೂ ಅವರು ಪ್ರಶ್ನೆ ಕೇಳುತ್ತಾರೆ' ಎಂದು ಮೋದಿ ಅವರು ಪ್ರತಿಸ್ಪರ್ಧಿ ಪಕ್ಷಗಳ ನಾಯಕರನ್ನು ಪರೋಕ್ಷವಾಗಿ ಉಲ್ಲೇಖಿಸಿ ಹೇಳಿದ್ದಾರೆ.

ಉತ್ತರ ಪ್ರದೇಶದ ಜನರ ಅಭಿವೃದ್ಧಿಗಾಗಿ ಯೋಗಿ ನೇತೃತ್ವದ ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ. ಕಳೆದ ಕೆಲ ವರ್ಷಗಳಲ್ಲಿ ರಾಜ್ಯವು ಅಭಿವೃದ್ಧಿಗೆ ಸಾಕ್ಷಿಯಾಗಿದೆ. ಮಾಫಿಯಾಗಳನ್ನು ದಮನ ಮಾಡಲಾಗಿದೆ. ಗ್ರಾಮಗಳಿಂದ ವಲಸೆ ನಿಂತಿದೆ. ಮಹಿಳೆಯರಲ್ಲಿ ಸುರಕ್ಷಿತ ಭಾವ ಈಗ ಇದೆ ಎಂದು ಮೋದಿ ಪ್ರತಿಪಾದಿಸಿದ್ದಾರೆ.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬ್ರಿಟಿಷರು ಗಲ್ಲಿಗೇರಿಸಿದ ರಾಮ್ ಪ್ರಸಾದ್ ಬಿಸ್ಮಿಲ್, ಅಷ್ಫಕ್‌ಉಲ್ಲಾ ಖಾನ್ ಮತ್ತು ರೋಶನ್ ಸಿಂಗ್ ಅವರನ್ನು ಮೋದಿ ಸ್ಮರಿಸಿದರು. ಈ ಮೂವರು ಶಾಜಹಾನ್‌ಪುರದವರು. ದೇಶ ಸೇವೆಯೇ ಈ ಮಹಾನ್ ಹೋರಾಟಗಾರರಿಗೆ ನೀಡುವ ನಿಜವಾದ ಗೌರವ ಎಂದರು.

ಹಿಂದೂ ಮತ್ತು ಹಿಂದುತ್ವವಾದಿ

'ಹಿಂದೂ' ಮತ್ತು 'ಹಿಂದುತ್ವವಾದಿ' ಪದಗುಚ್ಛಗಳನ್ನು ವಿಶ್ಲೇಷಿಸಲು ರಾಹುಲ್ ಮತ್ತೆ ಯತ್ನಿಸಿದರು.

'ನಿಜವಾದ ಹಿಂದೂ ಎನಿಸಿಕೊಂಡವರು ಸತ್ಯಕ್ಕಾಗಿ ಹೋರಾಡುತ್ತಾರೆಯೇ ವಿನಾ, ಹಿಂದುತ್ವವಾದಿಯಂತೆ ಜನರಲ್ಲಿ ದ್ವೇಷವನ್ನು ಹರಡುವುದಿಲ್ಲ' ಎಂದರು.

ಮಹಾತ್ಮಾ ಗಾಂಧಿ ಹೆಸರು ಪ್ರಸ್ತಾಪಿಸಿದ ರಾಹುಲ್, 'ಒಬ್ಬ ಹಿಂದೂ ಅನ್ಯಾಯದ ವಿರುದ್ಧ ಹೋರಾಡಿದರು. ಆದರೆ ಹಿಂದುತ್ವವಾದಿಯು ಗೋಡ್ಸೆಯ ರೀತಿ ಇರುತ್ತಾರೆ' ಎಂದು ಹೋಲಿಕೆ ಮಾಡಿದರು.

'ಮೋದಿ ಅವರು ತಾವು ಹಿಂದೂ ಎಂದು ಹೇಳಿಕೊಳ್ಳುತ್ತಾರೆ. ಆದರೆ ಅವರು ಸತ್ಯದ ರಕ್ಷಣೆಗೆ ಯಾವಾಗ ನಿಂತಿದ್ದಾರೆ. ಅವರು ಹಿಂದೂವೇ ಅಥವಾ ಹಿಂದುತ್ವವಾದಿಯೇ' ಎಂದು ಪ್ರಶ್ನಿಸಿದರು. ದೇಶದಲ್ಲಿ ಈಗ ಹಿಂದೂ ಮತ್ತು ಹಿಂದುತ್ವವಾದಿ ನಡುವೆ ಸಂಘರ್ಷ ಏರ್ಪಟ್ಟಿದೆ ಎಂದರು.

'ಇಬ್ಬರು ಉದ್ಯಮಿಗಳಿಗೆ ದೇಶದ ಹಣ'

ಪಾದಯಾತ್ರೆಯಲ್ಲಿ ಪ್ರಧಾನಿ ವಿರುದ್ಧ ರಾಹುಲ್ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಲಖನೌ: ತಮ್ಮ ಹಿಂದಿನ ಮತಕ್ಷೇತ್ರವಾದ ಉತ್ತರ ಪ್ರದೇಶದ ಅಮೇಠಿಯಲ್ಲಿ ಶನಿವಾರ ಬೃಹತ್ ಪಾದಯಾತ್ರೆ ನಡೆಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, 'ಹಮ್ ದೊ ಹಮಾರೆ ದೊ' (ನಾವಿಬ್ಬರು, ನಮ್ಮವರಿಬ್ಬರು) ಎಂಬ ಹೇಳಿಕೆ ಬಳಸಿಕೊಂಡು ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ವಾಗ್ದಾಳಿ ನಡೆಸಿದರು.

'ನಾನು ಇಲ್ಲಿ ಮಾಡಿದ ಭಾಷಣವು ಸುದ್ದಿವಾಹಿನಿಗಳಲ್ಲಿ 30 ಸೆಕೆಂಡ್ ಪ್ರಸಾರವಾಗುತ್ತದೆ. ಇದೇ ಭಾಷಣವನ್ನು ಪ್ರಧಾನಿ ಮೋದಿ ಅವರು ಮಾಡಿದ್ದರೆ, ಅದನ್ನು 6 ತಿಂಗಳು ಪ್ರಸಾರ ಮಾಡುತ್ತಿದ್ದರು. ಮೋದಿ ಅವರು ದೇಶದ ಹಣವನ್ನು ಇಬ್ಬರು ಉದ್ಯಮಿಗಳಿಗೆ ನೀಡುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಅವರು ಮೋದಿಯವರನ್ನು ದಿನದ 24 ಗಂಟೆಯೂ ಸುದ್ದಿವಾಹಿನಿಗಳಲ್ಲಿ ತೋರಿಸುತ್ತಿದ್ದಾರೆ. ಇದು ಪಾಲುದಾರಿಕೆ ವ್ಯವಹಾರ' ಎಂದು ರಾಹುಲ್ ಆರೋಪಿಸಿದರು.

> **ಹಿಂದುತ್ವವಾದಿಯು ಗಂಗೆಯಲ್ಲಿ ಏಕಾಂಗಿಯಾಗಿ ಮುಳುಗು ಹಾಕುತ್ತಾನೆ. ಆದರೆ ಹಿಂದೂ ಕೋಟ್ಯಂತರ ಜನರ ಜತೆ ಒಂದಾಗಿ ಪುಣ್ಯ ಸ್ನಾನ ಮಾಡುತ್ತಾನೆ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

'ಹಣದುಬ್ಬರ ಮತ್ತು ನಿರುದ್ಯೋಗದ ಬಗ್ಗೆ ಪ್ರಧಾನಿ ಎಂದಿಗೂ ಉತ್ತರ ನೀಡುವುದಿಲ್ಲ. ಬೆಲೆಗಳು ಶೀಘ್ರಗತಿಯಲ್ಲಿ ಏಕೆ ಏರುತ್ತಿವೆ, ದೇಶದ ಯುವ ಜನರಿಗೆ ಉದ್ಯೋಗ ಏಕೆ ಸಿಗುತ್ತಿಲ್ಲ ಎಂಬ ಪ್ರಶ್ನೆಗಳಿಗೆ ಅವರು ಉತ್ತರಿಸಲು ಹೋಗುವುದಿಲ್ಲ. ಆದರೆ ಇದಕ್ಕೆ ನನ್ನಲ್ಲಿ ಉತ್ತರವಿದೆ. ಜಿಎಸ್‌ಟಿ, ನೋಟು ರದ್ದತಿ ನಿರ್ಧಾರಗಳನ್ನು ಸರ್ಕಾರವು ತಪ್ಪಾಗಿ ಜಾರಿಗೊಳಿಸಿತು. ಸಾಂಕ್ರಾಮಿಕ ಸಮಯದಲ್ಲಿ ಸರಿಯಾದ ನೆರವು ನೀಡದೇ ಇದ್ದುದರಿಂದ ಸಣ್ಣ, ಮಧ್ಯಮ ಸ್ತರದ ವರ್ತಕರು ಸಂಕಷ್ಟಕ್ಕೆ ಈಡಾದರು' ಎಂದು ರಾಹುಲ್ ಹೇಳಿದರು.

'ಮೋದಿ ಅವರು ಗಂಗೆಯಲ್ಲಿ ಮುಳುಗುತ್ತಾರೆ, ಕೇದಾರನಾಥಕ್ಕೆ ಹೋಗುತ್ತಾರೆ. ಇವೆಲ್ಲವೂ ಜ್ವಲಂತ ಸಮಸ್ಯೆಗಳಿಂದ ಜನರ ಗಮನ ಬೇರೆಡೆ ತಿರುಗಿಸುವ ಯತ್ನಗಳು' ಎಂದು ಅವರು ಆರೋಪಿಸಿದರು.

ಆರು ಕಿಲೋಮೀಟರ್ ದೂರ ಸಾಗಿದ ಪಾದಯಾತ್ರೆಯಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಇದ್ದರು. ಬಳಿಕ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಮಾತನಾಡಿದ ರಾಹುಲ್, ಗಡಿಯೊಳಗೆ ಹಳ್ಳಿಯನ್ನು ನಿರ್ಮಿಸಿರುವ ಚೀನಾದಿಂದ ದೇಶದ ಭದ್ರತೆಗೆ ಅಪಾಯವಿದೆ ಎಂದು ಹೇಳಿದರು. 2019ರ ಲೋಕಸಭಾ ಚುನಾವಣೆಯಲ್ಲಿ ಅಮೇಠಿಯಲ್ಲಿ ರಾಹುಲ್ ಸೋತಿದ್ದರು. 'ನನ್ನ ತವರು ಅಮೇಠಿಯೇ. ಇಲ್ಲಿನ ಜನರ ಕಣ್ಣುಗಳಲ್ಲಿ ನನ್ನ ಬಗ್ಗೆ ಅದೇ ಆಪ್ತ ಭಾವ ಇದೆ' ಎಂದು ಭಾವನಾತ್ಮಕವಾಗಿ ಮಾತನಾಡಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಅಮೇಠಿಯಲ್ಲಿ ಆರು ಕಿಲೋಮೀಟರ್ ಪಾದಯಾತ್ರೆ ನಡೆಸಿದ ಬಳಿಕ ಸಮಾವೇಶ ಉದ್ದೇಶಿಸಿ ಶನಿವಾರ ಮಾತನಾಡಿದರು–ಪಿಟಿಐ ಚಿತ್ರ

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ.,
ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು, ಹಾಸನ ಜಿಲ್ಲೆ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 19/2021–22
ದಿನಾಂಕ: 17.12.2021/Call-2

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆಕ್ಸ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4ರ ನಿಯಮದನ್ವಯ ಎಕ್ಸಿಕ್ಯುಟಿವ್ ಇಂಜಿನಿಯರ್ ರವರ ಕಚೇರಿ, ಕಾವೇರಿ ನೀರಾವರಿ ನಿಗಮ(ನಿ) ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ರವರು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ (ನಿ.) ಬೆಂಗಳೂರು ರವರ ಪರವಾಗಿ PWD Class-I of any State / Central Government Public Sector organization who are enrolled in Category I-A of CNNL ನಲ್ಲಿ ನೊಂದಾಯಿತರಾದ ಗುತ್ತಿಗೆದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಮೊತ್ತ ರೂ. 267.58 ಲಕ್ಷ EMD declaration shall be submitted in prescribed format, as uploaded in tender wizard ಟೆಂಡರ್ ಪ್ರೊಸೆಸಿಂಗ್ ಫೀ ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್ ಸೈಟ್ https://eproc.karnataka.gov.in ಮೂಲಕ ದಿನಾಂಕ: 20.12.2021 ರಿಂದ 28.12.2021 ರ ವರೆಗೆ ಪಡೆಯಬಹುದು (Down load), ತಾಂತ್ರಿಕ ಬಿಡ್ ತೆರೆಯುವ ದಿನಾಂಕ 29.12.2021, ಬೆಳಗ್ಗೆ 11.00 ಗಂಟೆಯ ನಂತರ, ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ https://eproc.kamataka.gov.in ಅಂತರ್ಜಾಲ ತಾಣದಲ್ಲಿ (ಇಲಾಖೆ) ಅಥವಾ ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ಅಣೆಕಟ್ಟು ವಿಭಾಗ, ಕಾನೀನಿನಿ, ಗೊರೂರು

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/557/2021–22

ಮೈಸೂರು ವಿಶ್ವವಿದ್ಯಾನಿಲಯ
ನಿರ್ದೇಶಕರ ಕಛೇರಿ, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ ಮತ್ತು ಲೇಖನ ಸಾಮಾಗ್ರಿ ವಿಭಾಗ, ಮಾನಸಗಂಗೋತ್ರಿ, ಮೈಸೂರು – 570006, ಕರ್ನಾಟಕ ರಾಜ್ಯ ದೂರವಾಣಿ: 0821–2419367, 2419285

ವಿಷಯ: ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯಕ್ಕೆ 2021–22ನೇ ಸಾಲಿನ ಪರೀಕ್ಷಾ ಕಾರ್ಯಗಳಿಗೆ ಅವಶ್ಯಕವಾಗಿರುವ ಲೇಖನ ಸಾಮಾಗ್ರಿಗಳ ಖರೀದಿಗಾಗಿ ದರಪಟ್ಟಿ ನೀಡುವ ಬಗೆಗೆ.
ಉಲ್ಲೇಖ: 1) ಕುಲಸಚಿವ(ಪರೀಕ್ಷಾಂಗ),ಮೈ.ವಿ.ವಿ. ಇವರ ಆದೇಶ ಸಂಖ್ಯೆ: ಪ.ವಿ.1.7/ಸ್ಟೇಷನರಿ/ಮೈವಿವಿಮುದ್ರಣಾಲಯ /2014–15, ದಿನಾಂಕ:21.09.2021

Tender Notification (Through Karnataka Govt. E-Procurement Portal only)

ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯಕ್ಕೆ ಅಗತ್ಯವಾದ 2021–22ನೇ ಸಾಲಿನ ಪರೀಕ್ಷಾ ಕಾರ್ಯಗಳಿಗೆ ಅವಶ್ಯಕವಾಗಿರುವ ಲೇಖನ ಸಾಮಾಗ್ರಿಗಳನ್ನು ಖರೀದಿಸಲು ಇ–ಟೆಂಡರ್ ಮೂಲಕ ದರಪಟ್ಟಿ ನೀಡಲು ಕೋರಲಾಗಿದೆ. ದರಗಳು ಮುಂದಿನ ಒಂದು ವರ್ಷವರೆಗೆ ಚಾಲ್ತಿಯಲ್ಲಿರುವಂತೆ ನೀಡಬೇಕು. ಸರಬರಾಜು ಮಾಡಬೇಕಾದ ಪರೀಕ್ಷಾ ಕಾರ್ಯಗಳಿಗೆ ಅವಶ್ಯಕವಾಗಿರುವ ಲೇಖನ ಸಾಮಾಗ್ರಿಗಳ ವಿವರ, ನಿಬಂಧನೆಗಳು, ಷರತ್ತುಗಳು ಮತ್ತು ಇತರೆ ಮಾಹಿತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿ: 19.01.2022. ಹೆಚ್ಚಿನ ವಿವರಗಳನ್ನು: www.eproc.karnataka.gov.in.Tenderನಲ್ಲಿ ಪಡೆಯಬಹುದು.

1. MU/PP/Exam/stat /2021-22/IND-809

ದೂರವಾಣಿ ಸಂಖ್ಯೆ: 0821–2419367, 2419285 ಮತ್ತು ಮೊಬೈಲ್ ಸಂಖ್ಯೆ: 9916906047

ಸಹಿ/– ನಿರ್ದೇಶಕರು, ಮೈ.ವಿ.ವಿ. ಮುದ್ರಣಾಲಯ ಮತ್ತು ಲೇಖನ ಸಾಮಾಗ್ರಿ ವಿಭಾಗ, ಮಾನಸಗಂಗೋತ್ರಿ, ಮೈಸೂರು–9

DIPR/DDMYS/MCA/D53/2020-21

'ಅಗ್ನಿ ಪ್ರೈಮ್' ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ಯಶಸ್ವಿ

ಬಾಲಾಸೋರ್, ಒಡಿಶಾ (ಪಿಟಿಐ): ಅಣ್ವಸ್ತ್ರ ಸಿಡಿತಲೆ ಹೊತ್ತು, ಗರಿಷ್ಠ 2,000 ಕಿ.ಮೀ ದೂರದ ಗುರಿ ತಲುಪಬಲ್ಲ 'ಅಗ್ನಿ ಪಿ' ಖಂಡಾಂತರ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಭಾರತ ಶನಿವಾರ ಯಶಸ್ವಿಯಾಗಿ ನಡೆಸಿತು.

'ಅಗ್ನಿ ಪಿ' ಖಂಡಾಂತರ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ನಡೆಯಿತು

ಒಡಿಶಾದ ಕರಾವಳಿ ಭಾಗದಲ್ಲಿರುವ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ದ್ವೀಪ ಪ್ರದೇಶದಿಂದ ಬೆಳಿಗ್ಗೆ 11.06 ವೇಳೆಗೆ ಪರೀಕ್ಷಾರ್ಥ ಪ್ರಯೋಗ ನಡೆಯಿತು ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು ತಿಳಿಸಿದೆ.

ಎರಡು ಹಂತದಲ್ಲಿ ಘನ ಅಂಶ ಅಳವಡಿಸಬಹುದಾದ, ಉಭಯ ದಿಕ್ಸೂಚಿ ವ್ಯವಸ್ಥೆಯನ್ನು ಕ್ಷಿಪಣಿ ಒಳಗೊಂಡಿದೆ. ವಿವಿಧ ಟೆಲಿಮೆಟ್ರಿ, ರಾಡಾರ್, ವಿದ್ಯುನ್ಮಾನ ಆಪ್ಟಿಕಲ್ ಕೇಂದ್ರ, ಕೆಳಹಂತದ ನೌಕೆಯನ್ನು ಕ್ಷಿಪಣಿಯ ವೇಗ ಮತ್ತು ಗುರಿಯನ್ನು ಗುರುತಿಸಲು ಬಳಸಿದ್ದು, ನಿರ್ದಿಷ್ಟ ಎತ್ತರದಲ್ಲಿ, ಸ್ಪಷ್ಟಗುರಿ ತಲುಪಿತು ಎಂದು ಹೇಳಿಕೆ ತಿಳಿಸಿದೆ.

ಎರಡನೇ ಬಾರಿಗೆ ಪರೀಕ್ಷಾರ್ಥ ಪ್ರಯೋಗವು ನಡೆದಿದ್ದು, ಇದರಲ್ಲಿ ಸಮಗ್ರವಾಗಿ ಅಳವಡಿಸಿದ ಅತ್ಯಾಧುನಿಕ ತಂತ್ರಜ್ಞಾನದ ಸಾಮರ್ಥ್ಯವನ್ನು ನಿರೂಪಿಸಿತು. ಭೂಮಿಯಿಂದ ಭೂಮಿಗೆ ನಿರ್ದಿಷ್ಟ ಗುರಿ ಆಧರಿಸಿ ಪ್ರಯೋಗಿಸಬಹುದಾದ ಈ ಕ್ಷಿಪಣಿಯ ವ್ಯಾಪ್ತಿ 1000 ರಿಂದ 2000 ಕಿ.ಮೀಗಳು ಎಂದು ಡಿಆರ್‌ಡಿಒ ವಿವರಿಸಿದೆ.

ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿದ್ದಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಡಿಆರ್‌ಡಿಒಗೆ ಅಭಿನಂದನೆ ಸಲ್ಲಿಸಿದ್ದಾರೆ.

ಡ್ರೋನ್ ಹೊಡೆದು ಉರುಳಿಸಿದ ಯೋಧರು

ನವದೆಹಲಿ (ಪಿಟಿಐ): ಪಂಜಾಬ್ ವ್ಯಾಪ್ತಿಯಲ್ಲಿ ಭಾರತ ಮತ್ತು ಪಾಕಿಸ್ತಾನ ಗಡಿಗೆ 300 ಮೀಟರ್ ದೂರದಲ್ಲಿ, ಚೀನಾ ನಿರ್ಮಿತ 'ಡ್ರೋನ್' ಅನ್ನು ಬಿಎಸ್‌ಎಫ್ ಯೋಧರು ಶುಕ್ರವಾರ ಹೊಡೆದುರುಳಿಸಿದ್ದಾರೆ.

ಫಿರೋಜ್‌ಪುರ್ ವಲಯದ ವಾನ್ ಗಡಿಯಲ್ಲಿ ರಾತ್ರಿ 11.10ರ ವೇಳೆಗೆ ಕಪ್ಪು ಬಣ್ಣದ ಡ್ರೋನ್ ಹಾರಾಟ ನಡೆದಿದ್ದು, ಅದನ್ನು ಪತ್ತೆಹಚ್ಚಿ ಉರುಳಿಸಲಾಯಿತು. ಗಡಿಬೇಲಿಗೆ 150 ಮೀಟರ್ ದೂರದಲ್ಲಿ ಹಾರಾಟ ನಡೆಯುತ್ತಿತ್ತು.

ಹೆಕ್ಸಾ ಕಾಪ್ಟರ್, ನಾಲ್ಕು ಶಕ್ತಿಶಾಲಿ ಬ್ಯಾಟರಿ ಅಳವಡಿಸಿದ್ದ ಈ ಡ್ರೋನ್‌ನ ತೂಕ ಸುಮಾರು 23 ಕೆ.ಜಿ. ಒಟ್ಟು 10 ಕೆ.ಜಿಯಷ್ಟು ತೂಕದ ವಸ್ತುವನ್ನು ಒಯ್ಯಬಲ್ಲ ಸಾಮರ್ಥ್ಯವನ್ನು ಇದು ಹೊಂದಿತ್ತು. ಡ್ರೋನ್‌ನಲ್ಲಿ ಮಾದಕವಸ್ತು, ಶಸ್ತ್ರಾಸ್ತ್ರಗಳು ಇರಲಿಲ್ಲ ಎಂದು ಬಿಎಸ್‌ಎಫ್ ಹೇಳಿಕೆಯಲ್ಲಿ ತಿಳಿಸಿದೆ.

ಡ್ರೋನ್ ಕಂಡುಬಂದಿದ್ದ ಪ್ರದೇಶದ ಸುತ್ತಲೂ ತಪಾಸಣೆ ನಡೆದಿದೆ. ಈ ಹಿಂದೆಯೂ ಪಂಜಾಬ್‌ಗೆ ಹೊಂದಿಕೊಂಡ ಪ್ರಾಂತ್ಯದಲ್ಲೇ ಪಾಕಿಸ್ತಾನದಿಂದ ಬಂದಿದ್ದ ಎರಡು ಡ್ರೋನ್‌ಗಳನ್ನು ಯೋಧರು ಹೊಡೆದುರುಳಿಸಿದ್ದರು.

ವಿಶ್ವ ಬ್ಯಾಡ್ಮಿಂಟನ್: ಲಕ್ಷ್ಯಗೆ ಕಂಚು; ಫೈನಲ್ ಪ್ರವೇಶಿಸಿದ ಮೊದಲ ಭಾರತೀಯ ಆಟಗಾರ ಕಿದಂಬಿ

ಶ್ರೀಕಾಂತ್‌ಗೆ ಚಾರಿತ್ರಿಕ ಜಯ

ಯುವೆಲಾ, ಸ್ಪೇನ್ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ವಿಶ್ವ ಬ್ಯಾಡ್ಮಿಂಟನ್‌ನಲ್ಲಿ ವಿನೂತನ ದಾಖಲೆ ಬರೆದರು.

ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಫೈನಲ್‌ಗೆ ಲಗ್ಗೆ ಇಟ್ಟ ಭಾರತದ ಮೊದಲ ಆಟಗಾರನಾದರು. ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಅವರು 17-21, 21-14, 21-17ರಿಂದ ಭಾರತದವರೇ ಆದ ಲಕ್ಷ್ಯ ಸೇನ್ ವಿರುದ್ಧ ಜಯಿಸಿದರು.

ಭಾರತದ ಇಬ್ಬರು ಆಟಗಾರರು ಮುಖಾಮುಖಿಯಾಗಿದ್ದ ಐತಿಹಾಸಿಕ ಸೆಮಿಫೈನಲ್ ಪಂದ್ಯವು 69 ನಿಮಿಷಗಳವರೆಗೆ ಕುತೂಹಲದ ಗಣಿಯಾಗಿತ್ತು. ಮೊದಲ ಗೇಮ್‌ನಲ್ಲಿ ಯುವ ಆಟಗಾರ ಲಕ್ಷ್ಯ ಸೇನ್ ಅನುಭವಿ ಶ್ರೀಕಾಂತ್‌ಗೆ ಸೋಲಿನ ರುಚಿ ತೋರಿಸಿದರು.

ಆದರೆ ಈ ಗೇಮ್‌ನಲ್ಲಿ ಶ್ರೀಕಾಂತ್ ಶುಭಾರಂಭ ಮಾಡಿ ಎರಡು ಪಾಯಿಂಟ್ ಮುಂದಿದ್ದರು. ಈ ಹಂತದಿಂದಲೇ ಆಕ್ರಮಣಶೀಲ ಆಟವಾಡಿದ ಲಕ್ಷ್ಯ ದಿಟ್ಟ ಪೈಪೋಟಿಯೊಡ್ಡಿದರು. 8-8ರವರೆಗೆ ಗೇಮ್ ಸಮಬಲದಲ್ಲಿ ಸಾಗಿತು.

20 ವರ್ಷದ ಲಕ್ಷ್ಯ ಸೇನ್ ಈ ಹಂತದಲ್ಲಿಯೇ ತಮ್ಮ ಉತ್ಕೃಷ್ಟ ಆಟವನ್ನು ಪಣಕ್ಕೊಡ್ಡಿದರು. 13-10ರ ಮುನ್ನಡೆ ಗಳಿಸಿದರು. ತಿರುಗೇಟು ನೀಡಿದ ಶ್ರೀಕಾಂತ್ 16-16 ಹಂತದಲ್ಲಿ ಸಮಬಲ ಸಾಧಿಸಿದ್ದರು. ಆದರೆ ಇದರ ನಂತರ ಅವರಿಗೆ ಅದೃಷ್ಟ ಕೈಕೊಟ್ಟಿತು.

ಲಕ್ಷ್ಯ ಪಟಪಟನೆ ಅಂಕಗಳನ್ನು ಕಲೆ ಹಾಕುತ್ತ ಗೇಮ್ ತಮ್ಮದಾಗಿಸಿಕೊಂಡರು.

ಲಕ್ಷ್ಯ ಸೇನ್ ಸರ್ವ್ ಮಾಡಿದ ರೀತಿ

ಆದರೆ ಎರಡನೇ ಗೇಮ್‌ನಲ್ಲಿ 28 ವರ್ಷದ ಶ್ರೀಕಾಂತ್ ಕೌಶಲಪೂರ್ಣ ಆಟದೊಂದಿಗೆ ಲಕ್ಷ್ಯನಿಗೆ ಸವಾಲೊಡ್ಡಿದರು. ಎರಡು ಮತ್ತು ಮೂರನೇ ಗೇಮ್‌ಗಳಲ್ಲಿ ಶ್ರೀಕಾಂತ ಸಿಡಿಸಿದ ಸ್ಮ್ಯಾಷ್‌ಗಳಿಗೆ ಪ್ರತ್ಯುತ್ತರ ನೀಡಲು ಸೇನ್‌ಗೆ ಆಗಲಿಲ್ಲ.

ಉತ್ತರಾಖಂಡ ಮೂಲದ ಲಕ್ಷ್ಯ ಸೇನ್ ಬೆಂಗಳೂರಿನ ಅಂತರರಾಷ್ಟ್ರೀಯ ಕೋಚ್ ವಿಮಲ್ ಕುಮಾರ್, ಪ್ರಕಾಶ್ ಪಡುಕೋಣೆ ಅವರ ಬಳಿ ತರಬೇತಿ ಪಡೆದಿದ್ದಾರೆ.

ಶ್ರೀಕಾಂತ್ ಹೈದರಾಬಾದಿನ ಪುಲ್ಲೇಲ ಗೋಪಿಚಂದ್ ಅಕಾಡೆಮಿಯಲ್ಲಿ ತರಬೇತಿ ಪಡೆದಿದ್ದಾರೆ. ಭಾನುವಾರ ನಡೆಯುವ ಫೈನಲ್‌ನಲ್ಲಿ ಅವರು ಆಡಲಿದ್ದಾರೆ.

ಕಿದಂಬಿ ಶ್ರೀಕಾಂತ್ ಆಟದ ವೈಖರಿ– ಎಎಫ್‌ಪಿ ಚಿತ್ರ

ಭಾರತದ ಪ್ರಕಾಶ್ ಪಡುಕೋಣೆ ಮತ್ತು ಬಿ. ಸಾಯಿಪ್ರಣೀತ್ ಅವರು ಸೆಮಿಫೈನಲ್ ಪ್ರವೇಶಿಸಿ ಕಂಚು ಗೆಲ್ಲುವಲ್ಲಿ ಯಶಸ್ವಿಯಾಗಿದ್ದರು. ಇದೀಗ ಅವರ ಸಾಲಿಗೆ ಲಕ್ಷ್ಯ ಸೇನ್ ಕೂಡ ಸೇರಿದ್ದಾರೆ.

ಹೋದ ಬಾರಿ ಮಹಿಳೆಯರ ಸಿಂಗಲ್ಸ್‌ನಲ್ಲಿ ಚಿನ್ನ ಜಯಿಸಿದ್ದ ಪಿ.ವಿ. ಸಿಂಧು ಈ ಬಾರಿ ಎಂಟರ ಘಟ್ಟದಲ್ಲಿ ಸೋತರು.

ಆ್ಯಷಸ್: ಸ್ಟಾರ್ಕ್ ಬಿರುಗಾಳಿ; ಚದುರಿದ ರೂಟ್ ಬಳಗ

ಅಡಿಲೇಡ್ (ಎಪಿ): ಎಡಗೈ ವೇಗಿ ಮಿಚೆಲ್ ಸ್ಟಾರ್ಕ್ ಬಿರುಗಾಳಿ ವೇಗದ ಎಸೆತಗಳ ಮುಂದೆ ಇಂಗ್ಲೆಂಡ್ ತಂಡದ ಆಟ ನಡೆಯಲಿಲ್ಲ. ನಾಯಕ ಜೋ ರೂಟ್ ಮತ್ತು ಡೇವಿಡ್ ಮಲಾನ್ ಅವರ ಅರ್ಧಶತಕ ಗಳಿಸಿದರೂ ಮೊದಲ ಇನಿಂಗ್ಸ್‌ನಲ್ಲಿ ಬೃಹತ್ ಹಿನ್ನಡೆ ಅನುಭವಿಸಿತು.

ಅಡಿಲೇಡ್ ಓವಲ್ ಕ್ರೀಡಾಂಗಣದಲ್ಲಿ ಹೊನಲು ಬೆಳಕಿನಲ್ಲಿ ನಡೆಯುತ್ತಿರುವ ಆ್ಯಷಸ್ ಸರಣಿಯ ಎರಡನೇ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಆತಿಥೇಯರು 237 ರನ್‌ಗಳ ಭಾರಿ ಮುನ್ನಡೆ ಗಳಿಸಿದ್ದಾರೆ. ಮೊದಲು ಬ್ಯಾಟಿಂಗ್ ಮಾಡಿದ್ದ ಆಸ್ಟ್ರೇಲಿಯಾ 9 ವಿಕೆಟ್‌ಗಳಿಗೆ 473 ರನ್ ಗಳಿಸಿಡಿಕ್ಲೇರ್ ಮಾಡಿತ್ತು. ಅದಕ್ಕುತ್ತರವಾಗಿ ಪ್ರವಾಸಿ ಬಳಗವು 84.1 ಓವರ್‌ಗಳಲ್ಲಿ 236 ರನ್ ಗಳಿಸಿ ಆಲೌಟ್ ಆಯಿತು. ಇಂಗ್ಲೆಂಡ್ ತಂಡದ ನಾಲ್ವರು ಪ್ರಮುಖ ಬ್ಯಾಟ್ಸ್‌ಮನ್‌ಗಳ ವಿಕೆಟ್ ಉರುಳಿಸಿದ ಸ್ಟಾರ್ಕ್ ಮಿಂಚಿದರು.

ಎರಡನೇ ಇನಿಂಗ್ಸ್ ಆರಂಭಿಸಿರುವ ಆಸ್ಟ್ರೇಲಿಯಾ ತಂಡವು 17 ಓವರ್‌ಗಳಲ್ಲಿ 1 ವಿಕೆಟ್‌ಗೆ 45 ರನ್ ಗಳಿಸಿದೆ. ಮಾರ್ಕಸ್ ಹ್ಯಾರಿಸ್ (ಬ್ಯಾಟಿಂಗ್ 21) ಮತ್ತು ಮಿಚೆಲ್ ನೆಸರ್ (ಬ್ಯಾಟಿಂಗ್ 2) ಕ್ರೀಸ್‌ನಲ್ಲಿದ್ದಾರೆ. ತಂಡವು ಒಟ್ಟು 282 ರನ್‌ಗಳ ಮುನ್ನಡೆ ಗಳಿಸಿದೆ.

ಸ್ಟಾರ್ಕ್ ಅರ್ಧಶತಕ!: ಪಿಂಕ್ ಬಾಲ್ ಟೆಸ್ಟ್‌ಗಳಲ್ಲಿ ಅತ್ಯಂತ ಯಶಸ್ವಿ ಬೌಲರ್ ಆಗಿರುವ ಸ್ಟಾರ್ಕ್ ಶನಿವಾರ ಹೊಸ ದಾಖಲೆ ಬರೆದರು. ಹಗಲು-ರಾತ್ರಿ ಟೆಸ್ಟ್‌ಗಳಲ್ಲಿ 50 ವಿಕೆಟ್ ಗಳಿಸಿದ ಸಾಧನೆ ಮಾಡಿದರು. ಜೋಶ್ ಹ್ಯಾಜಲ್‌ವುಡ್ ಅವರಿಗಿಂತ ಸ್ಟಾರ್ಕ್ 18 ವಿಕೆಟ್‌ಗಳನ್ನು ಹೆಚ್ಚು ಗಳಿಸಿದ್ದಾರೆ.

ಈ ಪಂದ್ಯದಲ್ಲಿ ಅವರಿಗೆ ಕ್ಯಾಮರಾನ್ ಗ್ರೀನ್ (24ಕ್ಕೆ2) ಉತ್ತಮ ಜೊತೆ ನೀಡಿದರು. ಇದರಿಂದಾಗಿ ಇಂಗ್ಲೆಂಡ್ ತಂಡದ ಬ್ಯಾಟರ್‌ಗಳು ಪರದಾಡಿದರು.

ಇಂಗ್ಲೆಂಡ್ ತಂಡದ ಇನಿಂಗ್ಸ್‌ಗೆ ಸ್ಥಿರತೆ ಒದಗಿಸಲು ರೂಟ್ ಮತ್ತು ಮಲಾನ್ ಪ್ರಯತ್ನಿಸಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 138 ರನ್ ಗಳಿಸಿದರು. ಶುಕ್ರವಾರ ಸಂಜೆ 12 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿದ್ದ ತಂಡದಲ್ಲಿ ಆತ್ಮವಿಶ್ವಾಸ ತುಂಬುವಂತೆ ಆಡಿದರು. ಸ್ಟಾರ್ಕ್, ಜೇ ರಿಚರ್ಡ್ಸನ್, ನೇಥನ್ ಲಯನ್ ಮತ್ತು ಮಿಚೆಲ್ ನೆಸರ್ ಅವರ ಪರಿಣಾಮಕಾರಿ ದಾಳಿಯನ್ನು ದಿನದಾಟದ ಮೊದಲ ಅವಧಿಯಲ್ಲಿ ಎದುರಿಸಿ ನಿಂತಿದ್ದು ವಿಶೇಷ.

ಮಿಚೆಲ್ ಸ್ಟಾರ್ಕ್

ಆದರೆ, 46ನೇ ಓವರ್‌ನಲ್ಲಿ ಈ ರೂಟ್ ವಿಕೆಟ್ ಗಳಿಸುವ ಮೂಲಕ ಗ್ರೀನ್ ಜೊತೆಯಾಟ ಮುರಿದರು. ಇದಾಗಿ ಐದು ಓವರ್‌ಗಳ ನಂತರ ಮಲಾನ್ ವಿಕೆಟ್ ಕಬಳಿಸುವಲ್ಲಿ ಸ್ಟಾರ್ಕ್ ಸಫಲರಾದರು. ಜೋಸ್ ಬಟ್ಲರ್ ಮತ್ತು ಸ್ಟುವರ್ಟ್ ಬ್ರಾಡ್ ವಿಕೆಟ್‌ಗಳನ್ನೂ ತಮ್ಮ ಬುಟ್ಟಿಗೆ ಹಾಕಿಕೊಂಡರು. ಎರಡನೇ ದಿನದಾಟದಲ್ಲಿ ಅವರು ಆರಂಭಿಕ ಬ್ಯಾಟರ್ ರೋರಿ ಬರ್ನ್ಸ್ ವಿಕೆಟ್ ಕೂಡ ಗಳಿಸಿದ್ದರು.

ಸ್ಪಿನ್ನರ್ ಲಯನ್ ಕೂಡ ಮೂರು ವಿಕೆಟ್ ಕಬಳಿಸಿದರು.

ಸ್ಕೋರ್ ಕಾರ್ಡ್

ಆಸ್ಟ್ರೇಲಿಯಾ ಮೊದಲ ಇನಿಂಗ್ಸ್ 9ಕ್ಕೆ 473 ಡಿಕ್ಲೇರ್ಡ್ (150.4 ಓವರ್)
ಇಂಗ್ಲೆಂಡ್ ಮೊದಲ ಇನಿಂಗ್ಸ್ 236 (84.1 ಓವರ್‌ಗಳಲ್ಲಿ)
(ಶುಕ್ರವಾರ 8.4 ಓವರ್‌ಗಳಲ್ಲಿ 2 ವಿಕೆಟ್‌ಗೆ 17)
ಮಲಾನ್ ಸಿ ಸ್ಮಿತ್ ಬಿ ಸ್ಟಾರ್ಕ್ 80 (157ಎ, 4X10), ರೂಟ್ ಸಿ ಸ್ಮಿತ್ ಬಿ ಗ್ರೀನ್ 62 (116ಎ, 4X7), ಸ್ಟೋಕ್ಸ್ ಬಿ ಗ್ರೀನ್ 34 (98ಎ, 4X3, 6X1), ಪೋಪ್ ಸಿ ಲಾಬುಷೇನ್ ಬಿ ಲಯನ್ 5 (19ಎ, 4X1), ಬಟ್ಲರ್ ಸಿ ವಾರ್ನರ್ ಬಿ ಸ್ಟಾರ್ಕ್ 0 (15ಎ), ವೋಕ್ಸ್ ಬಿ ಲಯನ್ 24 (40ಎ, 4X5), ರಾಬಿನ್ಸನ್ ಎಲ್‌ಬಿಡಬ್ಲ್ಯು ಲಯನ್ 0 (7ಎ), ಬ್ರಾಡ್ ಸಿ ಹೆಡ್ ಬಿ ಸ್ಟಾರ್ಕ್ 9 (17ಎ, 6X1), ಆ್ಯಂಡರ್ಸನ್ ಔಟಾಗದೆ 5 (13ಎ, 4X1)
ಇತರೆ (ಲೆಗ್‌ಬೈ 6, ನೋಬಾಲ್ 1) 7
ವಿಕೆಟ್ ಪತನ: 3-150 (ಜೋ ರೂಟ್, 45.4), 4-157 (ಡೇವಿಡ್ ಮಲಾನ್, 51.5), 5-164 (ಒಲಿ ಪೋಪ್, 56.6), 6-169 (ಜೋಸ್ ಬಟ್ಲರ್, 61.5), 7-202 (ಕ್ರಿಸ್ ವೋಕ್ಸ್, 74.5), 8-204 (ಒಲಿ ರಾಬಿನ್ಸನ್, 76.4), 9-220 (ಬೆನ್ ಸ್ಟೋಕ್ಸ್, 79.3), 10-236 (ಸ್ಟುವರ್ಟ್ ಬ್ರಾಡ್, 84.1)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 16.1-6-37-4, ಜಾಯ್ ರಿಚರ್ಡ್ಸನ್ 19-4-78-0, ಮೈಕಲ್ ನೆಸರ್ 11-0-33-1, ನೇಥನ್ ಲಯನ್ 28-11-58-3, ಕ್ಯಾಮರೂನ್ ಗ್ರೀನ್ 10-3-24-2
ಆಸ್ಟ್ರೇಲಿಯಾ ಎರಡನೇ ಇನಿಂಗ್ಸ್ 1ಕ್ಕೆ 45 (17 ಓವರ್)
ವಾರ್ನರ್ ರನೌಟ್ (ಬ್ರಾಡ್/ಬಟ್ಲರ್) 13 (38ಎ, 4X1), ಮಾರ್ಕಸ್ ಬ್ಯಾಟಿಂಗ್ 21 (59ಎ, 4X3), ನೆಸರ್ ಬ್ಯಾಟಿಂಗ್ 2 (6ಎ))
ಇತರೆ (ಲೆಗ್‌ಬೈ 8, ನೋಬಾಲ್ 1) 9
ವಿಕೆಟ್ ಪತನ: 1-41 (ಡೇವಿಡ್ ವಾರ್ನರ್, 13.6)
ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 4-3-2-0, ಸ್ಟುವರ್ಟ್ ಬ್ರಾಡ್ 3-0-9-0, ಒಲಿ ರಾಬಿನ್ಸನ್ 4-1-12-0, ಕ್ರಿಸ್ ವೋಕ್ಸ್ 4-2-13-0, ಜೋ ರೂಟ್ 2-1-1-0

‘83’ ಪ್ರಚಾರ

ಕ್ರಿಕೆಟಿಗ ಕಪಿಲ್ ದೇವ್ ಜೀವನಾಧಾರಿತ ‘83’ ಬಾಲಿವುಡ್ ಸಿನೆಮಾದ ಕನ್ನಡ ಅವತರಣಿಕೆಯ ಪ್ರಚಾರದ ಅಂಗವಾಗಿ ಶನಿವಾರ ಬೆಂಗಳೂರಿನಲ್ಲಿ ನಡೆದ ಮಾಧ್ಯಮ ಸಂವಾದದಲ್ಲಿ ಬಾಲಿವುಡ್ ನಟ ರಣವೀರ್ ಸಿಂಗ್, ನಟ ಕಿಚ್ಚ ಸುದೀಪ್ ಮತ್ತು ಕಪಿಲ್ ದೇವ್ ಭಾಗವಹಿಸಿದ್ದರು

ಪ್ರಜಾವಾಣಿ ಚಿತ್ರ

ಬಿಸಿಸಿಐ ವೈದ್ಯಾಧಿಕಾರಿ ರಾಜೀನಾಮೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಮುಖ್ಯ ವೈದ್ಯಾಧಿಕಾರಿ ಅಭಿಜಿತ್ ಸಾಳ್ವಿ ವೈಯಕ್ತಿಕ ಕಾರಣಗಳಿಗಾಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಅವರು ಎರಡು ತಿಂಗಳುಗಳ ಹಿಂದೆಯೇ ರಾಜೀನಾಮೆ ಕೊಟ್ಟಿದ್ದರು. ನವೆಂಬರ್ 30ಕ್ಕೆ ಅವರ ಕಾರ್ಯಾವಧಿ ಮುಗಿದಿತ್ತು. ಆದರೆ, ಡಿಸೆಂಬರ್ 7ರಿಂದ ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಟೆಸ್ಟ್ ಪಂದ್ಯ ಇದ್ದ ಕಾರಣ ಕರ್ತವ್ಯದಲ್ಲಿ ಮುಂದುವರಿದ್ದರು.

‘ಕ್ರಿಕೆಟ್ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಲು ಅವಕಾಶ ನೀಡಿದ್ದಕ್ಕೆ ಬಿಸಿಸಿಐಗೆ ಕೃತಜ್ಞತೆಗಳು. 10 ವರ್ಷಗಳಿಂದ ಇಲ್ಲಿ ಕೆಲಸ ಮಾಡಿದ ಅನುಭವವು ಅಮೂಲ್ಯವಾದದ್ದು. ಕೋವಿಡ್ ಕಾಲಘಟ್ಟದಲ್ಲಿ ದಿನದ 24 ಗಂಟೆಯೂ ಕೆಲಸ ಮಾಡುವ ಒತ್ತಡವಿದೆ. ಕುಟುಂಬದೊಂದಿಗೆ ಕಾಲ ಕಳೆಯಲು ಸಮಯ ಸಿಕ್ಕಿಲ್ಲ. ಆದ್ದರಿಂದ ಈ ನಿರ್ಧಾರಕ್ಕೆ ಬಂದಿದ್ದೇನೆ’ ಎಂದು ಸಾಳ್ವಿ ಶನಿವಾರ ತಿಳಿಸಿದ್ದಾರೆ.

ಕ್ರಿಕೆಟ್: ರಾಹುಲ್ ಉಪನಾಯಕ

ನವದೆಹಲಿ (ಪಿಟಿಐ): ಇದೇ ತಿಂಗಳು ದಕ್ಷಿಣ ಆಫ್ರಿಕಾದಲ್ಲಿ ಆರಂಭವಾಗಲಿರುವ ಟೆಸ್ಟ್ ಸರಣಿಯಲ್ಲಿ ಆಡಲಿರುವ ಭಾರತ ತಂಡದ ಉಪನಾಯಕ ಸ್ಥಾನಕ್ಕೆ ಕೆ.ಎಲ್. ರಾಹುಲ್ ಅವರನ್ನು ನೇಮಕ ಮಾಡಲಾಗಿದೆ.

ಹೋದ ವಾರ ಪ್ರಕಟವಾಗಿದ್ದ ತಂಡದ ಪಟ್ಟಿಯಲ್ಲಿ ರೋಹಿತ್ ಶರ್ಮಾ ಅವರನ್ನು ಉಪನಾಯಕರನ್ನಾಗಿ ಮಾಡಲಾಗಿತ್ತು. ಆದರೆ ಅವರು ಗಾಯಗೊಂಡು ಸರಣಿಯಿಂದ ಹಿಂದೆ ಸರಿದಿದ್ದಾರೆ. ಆದ್ದರಿಂದ ರಾಹುಲ್ ಅವರನ್ನು ಉಪನಾಯಕರನ್ನಾಗಿ ನೇಮಕ ಮಾಡಲಾಗಿದೆ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಶನಿವಾರ ತಿಳಿಸಿದ್ದಾರೆ.

ಕೆ.ಎಲ್. ರಾಹುಲ್

29 ವರ್ಷದ ರಾಹುಲ್ 40 ಟೆಸ್ಟ್‌ಗಳನ್ನು ಆಡಿ 2321 ರನ್ ಗಳಿಸಿದ್ದಾರೆ.

‘ರಾಷ್ಟ್ರೀಯ ಕ್ರಿಕೆಟ್ ಆಯ್ಕೆ ಸಮಿತಿಯು ಟೆಸ್ಟ್ ಸರಣಿಯಲ್ಲಿ ಭಾರತ ತಂಡಕ್ಕೆ ರಾಹುಲ್ ಅವರನ್ನು ಉಪನಾಯಕರನ್ನಾಗಿ ನೇಮಕ ಮಾಡಿದೆ’ ಎಂದು ಶಾ ತಿಳಿಸಿದ್ದಾರೆ.

ಈಜು: ‘ಶ್ರೇಷ್ಠ ಸಮಯ’ ದಾಖಲಿಸಿದ ಶ್ರೀಹರಿ

ಅಬುಧಾಬಿ (ಪಿಟಿಐ): ಭಾರತದ ಶ್ರೀಹರಿ ನಟರಾಜ್ ಅವರು ಫಿನಾ ಶಾರ್ಟ್ ಕೋರ್ಸ್ ವಿಶ್ವ ಈಜು ಚಾಂಪಿಯನ್‌ಷಿಪ್‌ನಲ್ಲಿ ‘ಭಾರತದ ಶ್ರೇಷ್ಠ ಸಮಯ‘ ದಾಖಲಿಸಿದರು ಆದರೆ ಶನಿವಾರ ಇಲ್ಲಿ ನಡೆದ 50 ಮೀಟರ್ಸ್ ಬ್ಯಾಕ್‌ಸ್ಟ್ರೋಕ್ ವಿಭಾಗದ ಸೆಮಿಫೈನಲ್ ತಲುಪಲು ಅವರಿಗೆ ಸಾಧ್ಯವಾಗಲಿಲ್ಲ.

ಪುರುಷರ 50 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಕರ್ನಾಟಕದ ಶ್ರೀಹರಿ 24.40 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಒಟ್ಟಾರೆ ಹೀಟ್ಸ್‌ನಲ್ಲಿ 26ನೇ ಸ್ಥಾನ ಗಳಿಸಿದರು. ಈ ವಿಭಾಗದಲ್ಲಿ ಅಗ್ರ 16 ಮಂದಿ ಈಜುಪಟುಗಳು ಸೆಮಿಫೈನಲ್‌ನಲ್ಲಿ ಸ್ಥಾನ ಗಳಿಸಿದರು.

ಶ್ರೀಹರಿ ಅವರು ಕೂಟದಲ್ಲಿ ಎರಡನೇ ಬಾರಿ ‘ಭಾರತದ ಶ್ರೇಷ್ಠ ಸಮಯ‘ ದಾಖಲಿಸಿದರು. ಕೂಟದ ಮೊದಲ ದಿನ 100 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಅವರು ಈ ಸಾಧನೆ ಮಾಡಿದ್ದರು.



ಶ್ರೀಹರಿ ನಟರಾಜ್

ಐಎಸ್‌ಎಲ್: ಚೆನ್ನೈ ಜಯಭೇರಿ

ವಾಸ್ಕೊ: ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಚೆನ್ನೈಯಿನ್ ಎಫ್‌ಸಿ ಗೆಲುವಿನ ಲಯಕ್ಕೆ ಮರಳಿತು. ಶನಿವಾರ ನಡೆದ ಪಂದ್ಯದಲ್ಲಿ ತಂಡವು 2-1ರಿಂದ ಒಡಿಶಾ ಎಫ್‌ಸಿ ಯನ್ನು ಮಣಿಸಿತು.

ಈ ಗೆಲುವಿನೊಂದಿಗೆ ಚೆನ್ನೈಯಿನ್‌ಪಾಯಿಂಟ್ಸ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿತು. ವಿಜೇತ ತಂಡದ ಪರ ಜರ್ಮನ್‌ಪ್ರೀತ್ ಸಿಂಗ್ (23ನೇ ನಿಮಿಷ), ಮಿರ್ಲಾನ್ ಮುರ್ಜಾಯೆವ್ (63ನೇ ನಿಮಿಷ) ಗೋಲು ಗಳಿಸಿದರು. ಪಂದ್ಯದ ಕೊನೆಯ ನಿಮಿಷದಲ್ಲಿ ಜೇವಿಯರ್ ಹೆರ್ನಾಂಡೇಜ್ ಒಡಿಶಾ ಎಫ್‌ಸಿಗೆ ಗೋಲು ಗಳಿಸಿಕೊಟ್ಟರು.

ಮುಂಬೈ ಸಿಟಿಗೆ ಕೇರಳ ಸವಾಲು: ಹಾಲಿ ಚಾಂಪಿಯನ್ ಮುಂಬೈ ಸಿಟಿ ಎಫ್‌ಸಿ ತಂಡವು ಜಯದ ಸರಣಿ ಯನ್ನು ಮುಂದುವರಿಸುವ ಛಲದಲ್ಲಿದ್ದು, ಭಾನುವಾರ ಕೇರಳ ಬ್ಲಾಸ್ಟರ್ಸ್ ಸವಾಲು ಎದುರಿಸಲಿದೆ. ಮುಂಬೈ ಸದ್ಯ ಟೂರ್ನಿಯಲ್ಲಿ ಸತತ ನಾಲ್ಕು ಪಂದ್ಯಗಳಲ್ಲಿ ಜಯ ಗಳಿಸಿದೆ. ಕಳೆದ ಪಂದ್ಯದಲ್ಲಿ ಆ ತಂಡವು 1-0 ಯಿಂದ ಚೆನ್ನೈ ತಂಡಕ್ಕೆ ಸೋಲುಣಿಸಿತ್ತು.

ಪಾಯಿಂಟ್ಸ್ ಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿರುವ ಕೇರಳ ಬ್ಲಾಸ್ಟರ್ಸ್ ಇದುವರೆಗೆ ಕೇವಲ ಒಂದು ಪಂದ್ಯದಲ್ಲಿ ಜಯ ಸಾಧಿಸಿದೆ. ಈ ಪಂದ್ಯದ ಮೂಲಕ ಜಯದ ಲಯಕ್ಕೆ ಮರಳುವ ಯೋಚನೆಯಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಹಬಾಸ್ ಕೈಬಿಟ್ಟ ಎಟಿಕೆಎಂಬಿ

ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ತಂಡವು ಮುಖ್ಯ ಕೋಚ್ ಆಂಟೋನಿಯೊ ಹಬಾಸ್ ಅವರನ್ನು ಕೋಚ್ ಹುದ್ದೆಯಿಂದ ಕೈಬಿಟ್ಟಿದೆ.

ಸ್ಪೇನ್‌ನ ಹಬಾಸ್, ಐಎಸ್‌ಎಲ್‌ನಲ್ಲಿ ತಂಡವೊಂದಕ್ಕೆ ಎರಡು ಬಾರಿ ಪ್ರಶಸ್ತಿ ಗೆದ್ದುಕೊಟ್ಟ ಮೊದಲ ಕೋಚ್ ಆಗಿದ್ದಾರೆ. ಎಟಿಕೆಎಂಬಿ ತಂಡವು ಸತತ ನಾಲ್ಕು ಪಂದ್ಯಗಳಲ್ಲಿ ಗೆಲುವು ದಾಖಲಿಸಿಲ್ಲ. ಹೀಗಾಗಿ ಹಬಾಸ್ ಸ್ಥಾನಕ್ಕೆ ಕುತ್ತು ಬಂದಿದೆ.



ಆಂಟೋನಿಯೊ ಹಬಾಸ್

ಇಂಡಿಯನ್ ಪ್ರೀಮಿಯರ್ ಲೀಗ್ ಫ್ರ್ಯಾಂಚೈಸಿ

ಭಾರತ ತಂಡದ ಪರ ಗೌತಮ್ ಗಂಭೀರ್ ಅವರು 58 ಟೆಸ್ಟ್, 147 ಏಕದಿನ ಮತ್ತು 37 ಟಿ20 ಪಂದ್ಯಗಳನ್ನು ಆಡಿದ್ದಾರೆ.

ಲಖನೌ ಫ್ರ್ಯಾಂಚೈಸಿಗೆ ಗಂಭೀರ್ ಮೆಂಟರ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಗೌತಮ್ ಗಂಭೀರ್ ಅವರನ್ನು ಇಂಡಿಯನ್ ಪ್ರೀಮಿಯರ್ ಲೀಗ್ ನಲ್ಲಿ ಹೊಸದಾಗಿ ಸೇರ್ಪಡೆಯಾಗಿರುವ ಲಖನೌ ಫ್ರ್ಯಾಂಚೈಸಿಗೆ ಮಾರ್ಗದರ್ಶಕರನ್ನಾಗಿ ನೇಮಕ ಮಾಡಲಾಗಿದೆ.

ಗೌತಮ್ ಗಂಭೀರ್

ಸಂಸದರೂ ಆಗಿರುವ ಗಂಭೀರ್ ಕೆಲವು ವರ್ಷಗಳ ಹಿಂದೆ ಐಪಿಎಲ್ ಟೂರ್ನಿಯಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನಾಯಕರಾಗಿದ್ದರು. ಅವರ ನಾಯಕತ್ವದಲ್ಲಿ ತಂಡವು ಎರಡು ಬಾರಿ ಪ್ರಶಸ್ತಿ ಜಯಿಸಿತ್ತು.

‘ಈ ಉತ್ತಮ ಅವಕಾಶ ನೀಡಿದ್ದಕ್ಕಾಗಿ ಫ್ರ್ಯಾಂಚೈಸಿಯ ಮಾಲೀಕರಾದ ಗೊಯೆಂಕಾ ಅವರಿಗೆ ಧನ್ಯವಾದಗಳು. ಸ್ಪರ್ಧೆಯಲ್ಲಿ ಜಯಿಸುವ ಕಾವು ನನ್ನಲ್ಲಿ ಈಗಲೂ ಇದೆ. ಸದಾಕಾಲ ಜಯಕ್ಕಾಗಿ ತುಡಿಯುವ ಜಾಯಮಾನ ನನ್ನದು. ಉತ್ತರಪ್ರದೇಶದ ಘನತೆ ಮತ್ತು ಆತ್ಮಗೌರವವನ್ನು ವೃದ್ಧಿಸಲು ಮತ್ತೆ ಡ್ರೆಸ್ಸಿಂಗ್ ಕೋಣೆಯೊಳಗೆ ಕಾಲಿಡುತ್ತಿದ್ದೇನೆ’ ಎಂದು ಗಂಭೀರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಗೌತಮ್ ಅವರ ಸಾಧನೆಯ ದಾಖಲೆಗಳು ಅದ್ಭುತವಾಗಿವೆ. ಅವರ ಕ್ರಿಕೆಟ್ ಕೌಶಲ ಮತ್ತು ಚಿಂತನೆಗಳು ಅಮೂಲ್ಯವಾಗಿವೆ. ಅವರೊಂದಿಗೆ ಮುಂದಿನ ದಿನಗಳಲ್ಲಿ ಕಾರ್ಯನಿರ್ವಹಿಸಲು ಉತ್ಸುಕವಾಗಿದ್ದೇವೆ. ಅವರಿಗೆ ಸ್ವಾಗತ’ ಎಂದು ಫ್ರ್ಯಾಂಚೈಸಿಯ ಮಾಲೀಕರಾದ ಸಂಜೀವ್ ಗೊಯೆಂಕಾ ಹೇಳಿದ್ದಾರೆ.

40 ವರ್ಷದ ಗೌತಮ್ ಲಖನೌ ತಂಡವನ್ನು ಆಯ್ಕೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಲಿದ್ದಾರೆ. ಜಿಂಬಾಬ್ವೆಯ ಮಾಜಿ ಆಟಗಾರ ಆ್ಯಂಡಿ ಫ್ಲವರ್ ಅವರನ್ನು ಈಗಾಗಲೇ ಈ ತಂಡಕ್ಕೆ ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿದೆ. ಕನ್ನಡಿಗ ಕೆ.ಎಲ್. ರಾಹುಲ್ ನಾಯಕರಾಗುವ ಬಗ್ಗೆ ಮಾತುಗಳು ಕೇಳಿಬರುತ್ತಿವೆ.

ವೇಳಾಪಟ್ಟಿ ಸಮಿತಿಗೆ ರಘುರಾಮ್ ಭಟ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಪ್ರವಾಸ, ವೇಳಾಪಟ್ಟಿ ಮತ್ತು ತಾಂತ್ರಿಕ ಸಮಿತಿಯಲ್ಲಿ ಮಾಜಿ ಕ್ರಿಕೆಟಿಗ, ಕನ್ನಡಿಗ ರಘುರಾಮ್ ಭಟ್ ಅವರನ್ನು ಆಯ್ಕೆ ಮಾಡಲಾಗಿದೆ.

ರಘುರಾಮ್ ಭಟ್

ಅಂಪೈರ್ ಉಪಸಮಿತಿಯಲ್ಲಿ ಮಾಜಿ ಅಂತರರಾಷ್ಟ್ರೀಯ ಅಂಪೈರ್‌ಗಳಾದ ಸುಧೀರ್ ಅಸ್ನಾನಿ, ಅಮೀಶ್ ಸಾಹೆಬಾ ಮತ್ತು ಕೃಷ್ಣ ಹರಿಹರನ್ ನೇಮಕವಾಗಿದ್ದಾರೆ. ಇದೇ ಮೊದಲ ಬಾರಿಗೆ ರಚಿಸಲಾಗಿರುವ ಅಂಗವಿಕಲರ ಕ್ರಿಕೆಟ್ ಸಮಿತಿಗೆ ಕರ್ನಾಟಕದ ಮಹಾಂತೇಶ್ ಕಿವಡಸಣ್ಣವರ ಆಯ್ಕೆಯಾಗಿದ್ದಾರೆ.

ಪ್ರವಾಸ, ವೇಳಾಪಟ್ಟಿ-ತಾಂತ್ರಿಕ ಸಮಿತಿ: ರಘುರಾಮ್ ಭಟ್, ಅಮಿತಾಭ್ ವಿಜಯವರ್ಗಿಯಾ,, ಜಯೇಂದ್ರ ಸೆಹಗಲ್, ಪ್ರಬೀರ್ ಚಕ್ರವರ್ತಿ, ಹರಿನಾರಾಯಣ ಪೂಜಾರಿ
ಸೀನಿಯರ್ ಟೂರ್ನಮೆಂಟ್ ಸಮಿತಿ: ವಿಶಾಲ್ ಜಗೋಟಾ, ವಿಕಾಸ್ ಕಟ್ಯಾಲ್, ರಾಜೇಶ್ ಗಾರ್ಸೊಂದಿಯಾ, ಸುರೇಂದ್ರ ಶೆವಳೆ, ಲಾಲ್‌ರೊಥುಮಾ.
ಅಂಪೈರ್ ಸಮಿತಿ: ಅಮೀಶ್ ಸಾಹೆಬಾ, ಕೃಷ್ಣ ಹರಿಹರನ್, ಸುಧೀರ್ ಅಸ್ನಾನಿ
ಅಂಗವಿಕಲರ ಕ್ರಿಕೆಟ್ ಸಮಿತಿ: ಮಹಾಂತೇಶ ಕಿವಡಸಣ್ಣವರ್, ರವಿಕಾಂತ್ ಚೌಹಾಣ, ಸುಮಿತ್ ಜೈನ್.

ಮಂಡ್ಯ: 25ರಿಂದ ರ್‍ಯಾಪಿಡ್ ಚೆಸ್

ಬೆಂಗಳೂರು: ಮಂಡ್ಯ ಚೆಸ್ ಅಕಾಡೆಮಿ ಹಾಗು ಸ್ಮಾರ್ಟ್ ಕ್ವೀನ್ ಚೆಸ್ ಅಕಾಡೆಮಿ ಸಂಯುಕ್ತಾಶ್ರಯದಲ್ಲಿ ಅಖಿಲ ಭಾರತ ರ್‍ಯಾಪಿಡ್ ಮತ್ತು ಲೈಟ್ನಿಂಗ್ ಚೆಸ್ ಟೂರ್ನಿಯನ್ನು ಆಯೋಜಿಸಲಾಗಿದೆ.

ಅಖಿಲ ಭಾರತ ಚೆಸ್ ಸಂಸ್ಥೆ, ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ಹಾಗು ಮಂಡ್ಯ ಜಿಲ್ಲಾ ಚೆಸ್ ಸಂಸ್ಥೆ ಸಹಯೋಗದೊಂದಿಗೆ ಮಂಡ್ಯ ನಗರದ ಶ್ರೀನಿವಾಸಪುರ ಹತ್ತಿರವಿರುವ ಅಮರಾವತಿ ಹೋಟೆಲ್‌ನಲ್ಲಿ ಡಿಸೆಂಬರ್ 25 ಹಾಗು 26ರಂದು ಟೂರ್ನಿ ನಡೆಯಲಿದೆ.

ನೋಂದಾಯಿಸಲು ಕಡೆಯ ದಿನಾಂಕ ಡಿಸೆಂಬರ್ 22 ಆಗಿದೆ. ಹೆಚ್ಚಿನ ಮಾಹಿತಿಗೆ www.karnatakachess.com ಮತ್ತು ಎನ್. ಮಾಧುರಿ ಜೈನ್ (ಮೊಬೈಲ್ ಸಂಖ್ಯೆ 8050244338) ಅವರನ್ನು ಸಂಪರ್ಕಿಸಬೇಕು.

ವೇದಿಕೆ ಮೇಲೆ ಕುಸ್ತಿಪಟುವಿಗೆ ಅಧ್ಯಕ್ಷರಿಂದ ಕಪಾಳಮೋಕ್ಷ

ನವದೆಹಲಿ (ಪಿಟಿಐ): ರಾಂಚಿಯಲ್ಲಿ ನಡೆದ 15 ವರ್ಷದೊಳಗಿನವರ ಕುಸ್ತಿ ಚಾಂಪಿಯನ್‌ಷಿಪ್‌ನ ವೇದಿಕೆಯ ಮೇಲೆಯೇ ಕುಸ್ತಿಪಟುವೊಬ್ಬರಿಗೆ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಕಪಾಳಕ್ಕೆ ಹೊಡೆದರು. ಈ ವಿಷಯ ಈಗ ವಿವಾದಕ್ಕೆ ಕಾರಣವಾಗಿದೆ.

ಶುಕ್ರವಾರ ಸ್ಪರ್ಧೆ ನಡೆಯುತ್ತಿದ್ದ ಸಂದರ್ಭದಲ್ಲಿ ಉತ್ತರಪ್ರದೇಶದ ಕುಸ್ತಿಪಟುವನ್ನು ನಿಗದಿಗಿಂತಲೂ ಅಧಿಕ ವಯಸ್ಸಾಗಿದ್ದ ಕಾರಣಕ್ಕೆ ಅನರ್ಹಗೊಳಿಸಲಾಯಿತು. ಈ ಸಂದರ್ಭದಲ್ಲಿ ವೇದಿಕೆಯ ಮೇಲೆ ಕುಳಿತಿದ್ದ ಬ್ರಿಜ್ ಭೂಷಣ್ ಬಳಿ ತೆರಳಿದ ಕುಸ್ತಿಪಟು ಆಶಿಸ್ತಿನಿಂದ ವರ್ತಿಸಿದ. ಇದರಿಂದಾಗಿ ಅಸಮಾಧಾನಗೊಂಡ ಅಧ್ಯಕ್ಷರು ಪೈಲ್ವಾನನ ಕಪಾಳಮೋಕ್ಷ ಮಾಡಿ ವೇದಿಕೆಯಿಂದ ಕೆಳಗೆ ತಳ್ಳಿದರು.

ಈ ಕುಸ್ತಿಪಟುವು ಉತ್ತರಪ್ರದೇಶದ ಗೊಂಡಾದಲ್ಲಿರುವ ಬ್ರಿಜ್‌ಭೂಷಣ್ ಅವರ ಕುಸ್ತಿ ಆಖಾಡದಲ್ಲಿಯೇ ತರಬೇತಿ ಪಡೆಯುತ್ತಿದ್ದಾರೆ.

‘ಅಧ್ಯಕ್ಷರು ತನ್ನ ಪರ ವಹಿಸಬೇಕೆಂದು ಆ ಕುಸ್ತಿಪಟುವಿನ ಆಗ್ರಹವಾಗಿತ್ತು. ಜೂನಿಯರ್ ಪೈಲ್ವಾನ ಬ್ರಿಜ್ ಭೂಷಣ್ ಅವರ ಅಕಾಡೆಮಿಯ ವಿದ್ಯಾರ್ಥಿ. ಆದರೆ ವಯೋಮಿತಿ ನಿಯಮಕ್ಕೆ ಅನುಗುಣವಾಗಿ ಪರಿಶೀಲನೆ ನಡೆಸಿದಾಗ ಅನರ್ಹಗೊಂಡಿದ್ದಾರೆ. ವೇದಿಕೆ ಮೇಲೆ ಆತ ಅಸಭ್ಯವಾಗಿ ವರ್ತಿಸಲು ಆರಂಭಿಸಿದ್ದರಿಂದ ಅಧ್ಯಕ್ಷರು ಕಪಾಳಮೋಕ್ಸ ಮಾಡಿದ್ದಾರೆ’ ಎಂದು ಡಬ್ಲ್ಯುಎಫ್‌ಐ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ಅವರು ತಿಳಿಸಿದ್ದಾರೆ.

ಡಿಐಪಿಎಎಂ ಕಾರ್ಯದರ್ಶಿ ತುಹಿನ್ ಕಾಂತ್ ಪಾಂಡೆ

‘ಪವನ್ ಹನ್ಸ್ ಮಾರಾಟಕ್ಕೆ ಹಣಕಾಸು ಬಿಡ್ ಸಲ್ಲಿಕೆ’

ನವದೆಹಲಿ (ಪಿಟಿಐ): ‘ಪವನ್ ಹನ್ಸ್ ಕಂಪನಿಯಲ್ಲಿ ಕೇಂದ್ರ ಸರ್ಕಾರವು ಹೊಂದಿರುವ ಷೇರುಗಳನ್ನು ಮಾರಾಟ ಮಾಡುವ ಸಂಬಂಧ ಹಣಕಾಸು ಬಿಡ್‌ಗಳು ಸಲ್ಲಿಕೆ ಆಗಿವೆ. ಇದರಿಂದಾಗಿ ಷೇರು ವಿಕ್ರಯ ಪ್ರಕ್ರಿಯೆಯು ಅಂತಿಮ ಹಂತಕ್ಕೆ ತಲುಪಿದೆ’ ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣೆ ಇಲಾಖೆಯ (ಡಿಐಪಿಎಎಂ) ಕಾರ್ಯದರ್ಶಿ ತುಹಿನ್ ಕಾಂತ್ ಪಾಂಡೆ ಟ್ವೀಟ್ ಮಾಡಿದ್ದಾರೆ.

‘ಪವನ್ ಹನ್ಸ್ ಷೇರುವಿಕ್ರಯದ ಕುರಿತಾಗಿ ವಹಿವಾಟು ಸಲಹೆಗಾರರು ಹಣಕಾಸು ಬಿಡ್‌ಗಳನ್ನು ಸ್ವೀಕರಿಸಿದ್ದಾರೆ’ ಎಂದು ಅವರು ತಿಳಿಸಿದ್ದಾರೆ. ಆದರೆ, ಎಷ್ಟು ಬಿಡ್‌ಗಳು ಸಲ್ಲಿಕೆ ಆಗಿವೆ ಎನ್ನುವುದನ್ನು ಅವರು ಬಹಿರಂಗಪಡಿಸಿಲ್ಲ.

ಪವನ್ ಹನ್ಸ್‌ನಲ್ಲಿ ಕೇಂದ್ರ ಸರ್ಕಾರವು ಹೊಂದಿರುವ ಶೇ 51ರಷ್ಟು ಷೇರುಗಳನ್ನೂ ಮಾರಾಟ ಮಾಡಲಿದೆ. ಇನ್ನುಳಿದ ಶೇ 49ರಷ್ಟು ಷೇರುಗಳನ್ನು ಸರ್ಕಾರಿ ಸ್ವಾಮ್ಯದ ತೈಲ ಮತ್ತು ನೈಸರ್ಗಿಕ ಅನಿಲ ನಿಗಮವು (ಒಎನ್‌ಜಿಸಿ) ಹೊಂದಿದ್ದು, ಅದು ಸಹ ಅಷ್ಟೂ ಷೇರುಗಳನ್ನು ಮಾರಾಟ ಮಾಡಲಿದೆ.

ತುಹಿನ್ ಕಾಂತ್ ಪಾಂಡೆ

ಪವನ್ ಹನ್ಸ್ ಬಳಿ 40ಕ್ಕೂ ಅಧಿಕ ಹೆಲಿಕಾಪ್ಟರ್‌ಗಳಿವೆ. ಕಂಪನಿಯಲ್ಲಿ 900ಕ್ಕೂ ಅಧಿಕ ಸಿಬ್ಬಂದಿ ಇದ್ದು, ಇವರಲ್ಲಿ ಖಾಯಂ ಸಿಬ್ಬಂದಿಯ ಸಂಖ್ಯೆಯು ಅರ್ಧಕ್ಕಿಂತ ಕಡಿಮೆ ಇದೆ.

2019-20ರಲ್ಲಿ ಕಂಪನಿಯು ₹ 28 ಕೋಟಿಗಳಷ್ಟು ನಷ್ಟ ಅನುಭವಿಸಿದೆ. 2020-21ರಲ್ಲಿ ನಷ್ಟವು ₹ 69 ಕೋಟಿಗಳಷ್ಟಾಗಿದೆ.

ಪವನ್ ಹನ್ಸ್‌ನಲ್ಲಿನ ಷೇರುಗಳನ್ನು ಮಾರಾಟ ಮಾಡಲು ಕೇಂದ್ರ ಸರ್ಕಾರವು 2018ರಲ್ಲಿ ಬಿಡ್ ಕರೆದಿತ್ತು. ಆದರೆ ಒಎನ್‌ಜಿಸಿ ಸಹ ತಾನು ಹೊಂದಿರುವ ಶೇ 49ರಷ್ಟು ಷೇರುಗಳನ್ನು ಸರ್ಕಾರದೊಂದಿಗೆ ಮಾರಾಟ ಮಾಡಲು ಮುಂದಾಗಿದ್ದರಿಂದ ಬಿಡ್ ಪ್ರಕ್ರಿಯೆಯನ್ನು ಹಿಂಪಡೆಯಲಾಯಿತು. 2019ರಲ್ಲಿ ಮತ್ತೆ ಕಂಪನಿಯನ್ನು ಮಾರಾಟ ಮಾಡುವ ಪ್ರಯತ್ನ ನಡೆಸಿತಾದರೂ ಹೂಡಿಕೆದಾರರಿಂದ ಅದಕ್ಕೆ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಲಿಲ್ಲ. ಆ ಬಳಿಕ 2020ರಲ್ಲಿ ಕೇಂದ್ರ ಸರ್ಕಾರವು ಬಿಡ್ ನಿಯಮದಲ್ಲಿ ಕೆಲವೊಂದು ಬದಲಾವಣೆ ತಂದಿತು. ಹೂಡಿಕೆದಾರರಿಗೆ ಕನಿಷ್ಠ ನಿವ್ವಳ ಮೌಲ್ಯ ಮತ್ತು ಲಾಕ್ ಇನ್ ಅವಧಿಯಲ್ಲಿ ತಗ್ಗಿಸಲಾಯಿತು. ಬಿಡ್ ಪಡೆದವರು ಒಂದು ವರ್ಷದ ಬಳಿಕ ಆಸ್ತಿಗಳನ್ನು ಮಾರಾಟ ಮಾಡಲು ಅವಕಾಶವನ್ನೂ ನೀಡಲಾಯಿತು.

ಕೇಂದ್ರ ಸರ್ಕಾರವು 2021-22ನೇ ಹಣಕಾಸು ವರ್ಷದಲ್ಲಿ ಷೇರು ವಿಕ್ರಯದ ಮೂಲಕ ₹ 1.75 ಲಕ್ಷ ಕೋಟಿ ಸಂಗ್ರಹಿಸುವ ಗುರಿ ಇಟ್ಟುಕೊಂಡಿದೆ. ಪವನ್ ಹನ್ಸ್‌ನಲ್ಲಿ ಹೊಂದಿರುವ ಷೇರುಗಳ ಮಾರಾಟವೂ ಅದರ ಭಾಗವಾಗಿದೆ.

ನಾಳೆ ದೇಶದಾದ್ಯಂತ ಕೈಗಾರಿಕೆಗಳು ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಚ್ಚಾವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಪೀಣ್ಯ ಕೈಗಾರಿಕಾ ಸಂಘವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಇದೇ 20ರ ಬೆಳಿಗ್ಗೆ 11 ಗಂಟೆಗೆ ಪ್ರತಿಭಟನೆ ಹಮ್ಮಿಕೊಂಡಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಬಿ.ಮುರಳಿಕೃಷ್ಣ, ‘ಆರ್ಥಿಕ ಹಿನ್ನಡೆ, ಕೋವಿಡ್ ಸಾಂಕ್ರಾಮಿಕದಿಂದ ನೆಲ ಕಚ್ಚಿರುವ ಕಿರು, ಸಣ್ಣ ಮತ್ತು ಮಧ್ಯಮ ವಲಯದ ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳ ಬೆಲೆ ಏರಿಕೆ ದೊಡ್ಡ ಹೊಡೆತ ನೀಡಿದೆ. ಇದನ್ನು ವಿರೋಧಿಸಿ ಅಖಿಲ ಭಾರತ ಮಟ್ಟದಲ್ಲಿ ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದು, ರಾಜ್ಯದ ಎಲ್ಲಾ ಉದ್ಯಮಗಳನ್ನು ಒಂದು ದಿನದ ಮಟ್ಟಿಗೆ ಸ್ಥಗಿತಗೊಳಿಸಲು ಕರೆ ನೀಡಿದ್ದೇವೆ. ದೇಶದ ಆರ್ಥಿಕ ಭದ್ರತೆಗೆ, ಉದ್ಯೋಗ ಮತ್ತು ಜೀವನಕ್ಕೆ ಆಧಾರವಾಗಿರುವ ಈ ಉದ್ಯಮ ವಲಯವನ್ನು ರಕ್ಷಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಕ್ಷಣವೇ ಕ್ರಮ ಕೈಗೊಳ್ಳಬೇಕು’ ಎಂದು ಹೇಳಿದರು.

ಮುಖ್ಯಾಂಶಗಳು
- ಕಚ್ಚಾ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಪ್ರತಿಭಟನೆ
- ಉದ್ಯಮದ ರಕ್ಷಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಆಗ್ರಹ

ಭಾರತದಾದ್ಯಂತ ನಡೆಯಲಿರುವ ಪ್ರತಿಭಟನೆಯಲ್ಲಿ ಕಿರು, ಸಣ್ಣ ಮಧ್ಯಮ ವಲಯದ ಕೈಗಾರಿಕೆಗಳ ಉದ್ಯಮಗಳು ಒಂದು ದಿನದ ಮುಷ್ಕರ ಹೂಡಲಿವೆ. ಪ್ರತೀ ಜಿಲ್ಲೆಗಳಲ್ಲಿರುವ ಕೈಗಾರಿಕಾ ಉದ್ಯಮಗಳು ಆಯಾ ಜಿಲ್ಲೆಯ ಜಿಲ್ಲಾಧಿಕಾರಿ ಕಚೇರಿ ಎದುರು ಶಾಂತಿಯುತ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಿವೆ. ರಾಜಾಜಿನಗರ, ಬೊಮ್ಮಸಂದ್ರ, ಮಾಚೋಹಳ್ಳಿ, ಮೈಸೂರು ಇಂಡಸ್ಟ್ರೀಸ್ ಅಸೋಸಿಯೇಷನ್, ಕರ್ನಾಟಕ ಸ್ಟೇಟ್ ಪಾಲಿಮರ್ಸ್ ಇಂಡಸ್ಟ್ರೀಸ್ ಅಸೋಸಿಯೇಷನ್ ಮತ್ತು ವಿವಿಧ ಜಿಲ್ಲೆಗಳ ಇಂಡಸ್ಟ್ರೀಸ್ ಅಸೋಸಿಯೇಷನ್‌ಗಳು ಪೀಣ್ಯ ಕೈಗಾರಿಕಾ ಸಂಘದ ಜೊತೆ ಭಾಗಿಯಾಗಲಿವೆ ಎಂದರು.

ಕರಗಿತು ₹ 8.31 ಲಕ್ಷ ಕೋಟಿ ಸಂಪತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಷೇರುಪೇಟೆಗಳ ವಾರದ ವಹಿವಾಟು ನಕಾರಾತ್ಮಕವಾಗಿ ಅಂತ್ಯವಾಗಿದ್ದು, ಹೂಡಿಕೆದಾರರ ಸಂಪತ್ತು ಮೌಲ್ಯವು ₹ 8.31 ಲಕ್ಷ ಕೋಟಿಗಳಷ್ಟು ಕರಗಿದೆ. ಇದರಿಂದಾಗಿ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯವು ₹ 267.68 ಲಕ್ಷ ಕೋಟಿಗಳಿಂದ ₹ 259.37 ಲಕ್ಷ ಕೋಟಿಗಳಿಗೆ ಇಳಿಕೆ ಆಗಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ವಾರದಲ್ಲಿ 1,774 ಅಂಶಗಳಷ್ಟು ಕುಸಿತ ಕಂಡಿದ್ದರೆ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 526 ಅಂಶಗಳಷ್ಟು ಇಳಿಕೆ ಆಗಿದೆ.

ಓಮೈಕ್ರಾನ್ ಪ್ರಕರಣಗಳು ಹೆಚ್ಚಾಗುತ್ತಿರುವುದು, ಹಣದುಬ್ಬರ ಏರಿಕೆ, ವಿದೇಶಿ ಬಂಡವಾಳ ಹೊರಹರಿವಿನ ಪರಿಣಾಮಗಳಿಂದಾಗಿ ನಕಾರಾತ್ಮಕ ವಹಿವಾಟು ನಡೆಯುವಂತಾಗಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	510
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-48000
ಹಳತು	46000-53000
ಕುಂದಾಪುರ	
ಹಳೆಚಾಲಿ	49019-50781
ಹೊಸಚಾಲಿ	38509-42811
ಪುತ್ತೂರು	
ಕೋಕ	11000-26000
ಹೊಸತು	27500-45000
ಶಿರಸಿ	
ಬೆಟ್ಟೆ	40609-46918
ಬಿಳಿಗೋಟು	12199-44399
ಚಾಲಿ	42726-50561
ರಾಶಿ	47099-49699
ರಾಮನಗರ ರೇಷ್ಮೆ	
ಮಿಶ್ರತಳಿ	350-721
ದ್ವಿತಳಿ	400-950

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15400	15450	234.75ಸೆಂಟ್ಸ್
ಎಸಿ	---	6600	6450	
ಆರ್‌ಪಿ	---	6200	---	ಲಂಡನ್
ಆರ್‌ಸಿ	---	3750	---	2439 ಡಾಲರ್ಸ್

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹520
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹518

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1310)
ಸೋಯಾ (ರಿಫೈನ್ಡ್)	₹1188 (1188)

ಮುಂಬೈ ಧಾರಣೆ

ಶೇಂಗಾ

18-12-2021

ಜಾವಾ 70/80(ಹೊಸ)	10700-10750
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	10000-10050
ದಪ್ಪ ಗುಜರಾತ್(ಹೊಸ)	8600-8700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1320)
ಒಂದು ವಾರದ ಡೆಲಿವರಿ	1315 (1315)
ಸೋಯಾ ಕಚ್ಚಾ	1150 (1150)
ಪಾಮ್ ವಾರದ ಡೆಲಿವರಿ	1156 (1156)
ಸೂರ್ಯಕಾಂತಿ ಎಣ್ಣೆ ಕಚ್ಚಾ	1170 (1170)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,430 (48,650)
ಬೆಳ್ಳಿ ಕೆ.ಜಿ	61,650 (61,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವಿಜಯ್ ಹಜಾರೆ ಟ್ರೋಫಿ: ತಂಡಕ್ಕೆ ಮರಳಿದ ಪಡಿಕ್ಕಲ್, ಪ್ರಸಿದ್ಧ ಕೃಷ್ಣ, ಗೌತಮ್

ಪಾಂಡೆ ಬಳಗಕ್ಕೆ ರಾಜಸ್ಥಾನ ಸವಾಲು

ಜೈಪುರ (ಪಿಟಿಐ): ಮನೀಷ್ ಪಾಂಡೆ ನಾಯಕತ್ವದ ಕರ್ನಾಟಕ ತಂಡವು ಭಾನುವಾರ ಕೆ.ಎಲ್. ಸೈನಿ ಕ್ರೀಡಾಂಗಣದಲ್ಲಿ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ರಾಜಸ್ಥಾನ ತಂಡದ ಸವಾಲು ಎದುರಿಸಲಿದೆ.

ಭಾರತ ಎ ತಂಡದಲ್ಲಿ ಆಡಲು ತೆರಳಿದ್ದ ಆರಂಭಿಕ ಆಟಗಾರ ದೇವದತ್ತ ಪಡಿಕ್ಕಲ್, ಮಧ್ಯಮವೇಗಿ ಪ್ರಸಿದ್ಧ ಕೃಷ್ಣ ಮತ್ತು ಆಲ್‌ರೌಂಡರ್ ಕೃಷ್ಣಪ್ಪ ಗೌತಮ್ ತಂಡಕ್ಕೆ ಮರಳಿದ್ದಾರೆ. ಇದರಿಂದಾಗಿ ಪಾಂಡೆ ಆತ್ಮವಿಶ್ವಾಸ ವೃದ್ಧಿಸಿದೆ.

ಟೂರ್ನಿಯ 'ಇ' ಗುಂಪಿನಲ್ಲಿ 16 ಅಂಕಗಳೊಂದಿಗೆ ಮೊದಲ ಸ್ಥಾನದಲ್ಲಿರುವ ರಾಜಸ್ಥಾನ ತಂಡವು ಕರ್ನಾಟಕಕ್ಕೆ ಕಠಿಣ ಸವಾಲೊಡ್ಡುವ ಸಾಧ್ಯತೆ ಇದೆ. ಬಿ ಗುಂಪಿನಲ್ಲಿ ಕರ್ನಾಟಕ ತಂಡವು ತಮಿಳುನಾಡು ಮತ್ತು ಬಂಗಾಳ ತಂಡಗಳ ಎದುರು ಸೋತಿತ್ತು. ಬ್ಯಾಟಿಂಗ್‌ನಲ್ಲಿ ಆರ್. ಸಮರ್ಥ್, ನಾಯಕ ಪಾಂಡೆ ಮತ್ತು ವಿಕೆಟ್‌ಕೀಪರ್ ಶ್ರೀನಿವಾಸ್ ಶರತ್ ಉತ್ತಮ ಲಯದಲ್ಲಿದ್ದಾರೆ. ಪಡಿಕ್ಕಲ್ ಮರಳಿರುವುದರಿಂದ ರೋಹನ್ ಅಥವಾ ಸಿದ್ಧಾರ್ಥ್‌ಗೆ ವಿಶ್ರಾಂತಿ ನೀಡುವ ಸಾಧ್ಯತೆ ಇದೆ.

ಪ್ರಸಿದ್ಧ ಮತ್ತು ಗೌತಮ್‌ಗೆ ಸ್ಥಾನ ಒದಗಿಸಲು ಬೌಲಿಂಗ್ ವಿಭಾಗದಲ್ಲಿಯೂ ಬದಲಾ ವಣೆಯಾಗುವ ಸಾಧ್ಯತೆ ಇದೆ. ಇದರಿಂದಾಗಿ ಅನುಭವಿ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರಿಗೆ ಅವಕಾಶ ಸಿಗುವುದು ಅನುಮಾನ. ಆದರೆ ಅನುಭವಿ ಕರುಣ್ ನಾಯರ್ ಲಯಕ್ಕೆ ಮರಳಲು ಇನ್ನೂ ಪ್ರಯತ್ನಿಸುತ್ತಿರುವುದು ಮಧ್ಯಮಕ್ರಮಾಂಕದಲ್ಲಿ ಚಿಂತೆಯ ವಿಷಯವಾಗಿದೆ.

ದೀಪಕ್ ಹೂಡಾ ನಾಯಕತ್ವದ ರಾಜಸ್ಥಾನ ತಂಡವು ಅಭಿಜಿತ್ ತೋಮರ್ ಮತ್ತು ಶುಭಂ ಶರ್ಮಾ ಅವರ ಬ್ಯಾಟಿಂಗ್ ಮೇಲೆ ಹೆಚ್ಚು ಅವಲಂಬಿತವಾಗಿದೆ. ಐಪಿಎಲ್‌ನಲ್ಲಿ ಮಿಂಚಿರುವ ಸ್ಪಿನ್ನರ್ ರವಿ ಬಿಷ್ಣೋಯಿ, ಕಮಲೇಶ್ ನಾಗರಕೋಟಿ ಮತ್ತು ಖಲೀಲ್ ಅಹಮದ್ ತಂಡದ ಬೌಲಿಂಗ್ ವಿಭಾಗದ ಪ್ರಮುಖ ಶಕ್ತಿಯಾಗಿದ್ದಾರೆ.

ತಂಡಗಳು:ಕರ್ನಾಟಕ: ಮನೀಷ್ ಪಾಂಡೆ (ನಾಯಕ), ರೋಹನ್ ಕದಂ, ಆರ್. ಸಮರ್ಥ್, ಕರುಣ್ ನಾಯರ್, ಕೆ.ವಿ. ಸಿದ್ಧಾರ್ಥ್, ಅಭಿನವ್ ಮನೋಹರ್, ಶ್ರೀನಿವಾಸ್ ಶರತ್ (ವಿಕೆಟ್‌ಕೀಪರ್), ಬಿ.ಆರ್. ಶರತ್ (ವಿಕೆಟ್‌ಕೀಪರ್), ಜೆ. ಸುಚಿತ್, ಶ್ರೇಯಸ್ ಗೋಪಾಲ್, ಕೆ.ಸಿ. ಕಾರ್ಯಪ್ಪ, ರಿತೇಶ್ ಭಟ್ಕಳ್, ವಿದ್ಯಾಧರ್ ಪಾಟೀಲ. ವಿ. ಕೌಶಿಕ್, ಪ್ರತೀಕ್ ಜೈನ್, ಎಂ.ಬಿ. ದರ್ಶನ್, ವಿಜಯಕುಮಾರ್ ವೈಶಾಖ, ವೆಂಕಟೇಶ್ ಮುರಳಿಧರ್, ಡಿ. ನಿಶ್ಚಲ್.

ರಾಜಸ್ಥಾನ: ದೀಪಕ್ ಹೂಡಾ (ನಾಯಕ), ಖಲೀಲ್ ಅಹಮದ್, ಶಿವ ಚೌಹಾಣ್, ರಜತ್ ಚೌಧರಿ, ಶುಭಂ ಫರ್‌ವಾಲ್, ದೀಪಕ್ ಕರ್‌ವಾಸರ್, ಮಣೇಂದರ್ ನರೇಂದರ್ ಸಿಂಗ್, ರವಿ ಬಿಷ್ಣೋಯಿ, ಶುಭಂ ಶರ್ಮಾ, ಅಭಿಜಿತ್ ತೋಮರ್, ಮಹಿಪಾಲ್ ಲೊಮ್ರೊರ್, ಅರಾಫತ್ ಖಾನ್, ಅನಿಕೇತ್ ಚೌಧರಿ, ಚಂದ್ರಪಾಲ್ ಸಿಂಗ್, ಮೋಹಿತ್ ಜೈನ್, ಸಲ್ಮಾನ್ ಖಾನ್, ಕಮಲೇಶ್ ನಾಗರಕೋಟಿ, ಸಂಪ್ರೀತ್ ಜೋಶಿ, ಮಾನವ್ ಸುತಾರ್, ತನ್ವೀರ್ ಉಲ್ ಹಕ್.

ಆರ್. ಸಮರ್ಥ್ ಮತ್ತು ಮನೀಷ್ ಪಾಂಡೆ

ಇಂದಿನ ಪಂದ್ಯಗಳು	
ಕರ್ನಾಟಕ	ರಾಜಸ್ಥಾನ
ಕೆ.ಎಲ್. ಸೈನಿ ಕ್ರೀಡಾಂಗಣ	
ವಿದರ್ಭ	ತ್ರಿಪುರಾ
ಸವಾಯ್ ಮಾನಸಿಂಗ್ ಕ್ರೀಡಾಂಗಣ	
ಉತ್ತರಪ್ರದೇಶ	ಮಧ್ಯಪ್ರದೇಶ
ಜಯಪ್ರಿಯಾ ವಿದ್ಯಾಲಯ ಮೈದಾನ	
(ಎಲ್ಲ ಪಂದ್ಯಗಳೂ ಬೆಳಿಗ್ಗೆ 9ರಿಂದ ಆರಂಭ)	
ನೇರಪ್ರಸಾರ	ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಡಿಂಪಲ್ ಎಸ್. ಗೌಡ

ಸ್ಕೇಟಿಂಗ್: ಡಿಂಪಲ್‌ಗೆ ಕಂಚು

ಬೆಂಗಳೂರು: ಕರ್ನಾಟಕದ ಡಿಂಪಲ್ ಎಸ್. ಗೌಡ ಅವರು ರಾಷ್ಟ್ರೀಯ ಸ್ಪೀಡ್ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ. ದೆಹಲಿಯ ಜಿಆರ್ ಅಂತರರಾಷ್ಟ್ರೀಯ ಶಾಲೆಯಲ್ಲಿ ಈ ಚಾಂಪಿಯನ್‌ಷಿಪ್ ನಡೆದಿತ್ತು.

ಬೆಂಗಳೂರು ಫ್ಲೋರ್ಸ್ ಓನ್ ಕ್ಲಬ್‌ನ ಡಿಂಪಲ್, ಬೆಂಗಳೂರಿನ ಉಲ್ಲಾಳ ಮುಖ್ಯರಸ್ತೆಯ ವಿದ್ಯಾನಿಕೇತನ ಪಬ್ಲಿಕ್ ಶಾಲೆಯಲ್ಲಿ ಹತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಅವರಿಗೆ ಪ್ರತೀಕ್ ರಾಜ ಮತ್ತು ಕುಮಾರ್ ತರಬೇತಿ ನೀಡುತ್ತಿದ್ದಾರೆ.

ಮನ್‌ಪ್ರೀತ್ ಪಡೆಗೆ ಗೆಲುವಿನ ವಿಶ್ವಾಸ

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ: ಜಪಾನ್ ಎದುರಾಳಿ

ಢಾಕಾ (ಪಿಟಿಐ): ಸೆಮಿಫೈನಲ್‌ನಲ್ಲಿ ಸ್ಥಾನ ಖಚಿತಪಡಿಸಿಕೊಂಡಿರುವ ಭಾರತ ತಂಡವು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಭಾನುವಾರ ಜಪಾನ್ ಸವಾಲು ಎದುರಿಸಲಿದೆ. ರೌಂಡ್ ರಾಬಿನ್‌ನಲ್ಲಿ ತಂಡದ ಅಂತಿಮ ಪಂದ್ಯ ಇದಾಗಿದ್ದು, ಗೆಲುವಿನ ಭರವಸೆಯಲ್ಲಿ ಮನ್‌ಪ್ರೀತ್ ಬಳಗವಿದೆ.

ಟೂರ್ನಿಯಲ್ಲಿ ನಿಧಾನಗತಿಯ ಆರಂಭ ಮಾಡಿದ್ದ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಭಾರತ, ಬಳಿಕ ಪುಟಿದೆದ್ದಿತ್ತು. ಸತತ ಎರಡು ಗೆಲುವುಗಳ ಮೂಲಕ ಭರ್ಜರಿ ಲಯಕ್ಕೆ ಮರಳಿತ್ತು.

ಟೋಕಿಯೊ ಒಲಿಂಪಿಕ್ಸ್ ಬಳಿಕ ಮೊದಲ ಟೂರ್ನಿ ಆಡುತ್ತಿರುವ ತಂಡವು ಮೊದಲ ಪಂದ್ಯದಲ್ಲಿ 2–2ರಿಂದ ಕೊರಿಯಾದೊಂದಿಗೆ ಡ್ರಾ ಸಾಧಿಸಿತ್ತು. ಬಳಿಕ ಬಾಂಗ್ಲಾ ತಂಡವನ್ನು 9–0ಯಿಂದ ಪರಾಭವಗೊಳಿಸಿದರೆ, ಶುಕ್ರವಾರ ಪಾಕಿಸ್ತಾನ ತಂಡವನ್ನು 3–1ರಿಂದ ಮಣಿಸಿತ್ತು.

ಲಲಿತ್ ಉಪಾಧ್ಯಾಯ, ಆಕಾಶದೀಪ್ ಸಿಂಗ್ ಮತ್ತು ದಿಲ್‌ಪ್ರೀತ್ ಸಿಂಗ್ ಅವರನ್ನೊಳಗೊಂಡ ಫಾರ್ವರ್ಡ್ ಆಟಗಾರರ ಬಲ ಭಾರತ ತಂಡಕ್ಕಿದೆ. ಮಿಡ್‌ಫೀಲ್ಡ್‌ನಲ್ಲಿ ನಾಯಕ ಮನ್‌ಪ್ರೀತ್ ಸಿಂಗ್ ಮತ್ತು ಉಪನಾಯಕ ಹರ್ಮನ್‌ಪ್ರೀತ್ ಸಿಂಗ್ ತಮ್ಮ ಜವಾಬ್ದಾರಿಯನ್ನು ಉತ್ತಮವಾಗಿ ನಿರ್ವಹಿಸುತ್ತಿದ್ದಾರೆ. ಗೋಲ್‌ಕೀಪಿಂಗ್‌ನಲ್ಲಿ ಮಿಂಚುತ್ತಿರುವ ಸೂರಜ್ ಕರ್ಕೇರಾ ಎದುರಾಳಿ ತಂಡಗಳ ಹಲವು ಪ್ರಯತ್ನಗಳನ್ನು ವಿಫಲಗೊಳಿಸಿದ್ದಾರೆ.

ಇನ್ನೊಂದು ಪಂದ್ಯದಲ್ಲಿ ಪಾಕಿಸ್ತಾನ–ಬಾಂಗ್ಲಾದೇಶ ಸೆಣಸಲಿವೆ.

ಪಂದ್ಯ ಆರಂಭ: ಮಧ್ಯಾಹ್ನ 3.30

ಭಾರತ ಹಾಕಿ ತಂಡದ ಆಟಗಾರರು– ಎಎಫ್‌ಪಿ ಚಿತ್ರ

ಫುಟ್‌ಬಾಲ್: ಎಫ್‌ಸಿಬಿಯುಗೆ ಜಯ

ಬೆಂಗಳೂರು: ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ 3–0ಯಿಂದ ಥಾಂಕೊ ಸ್ಟೂಡೆಂಟ್ಸ್ ಯೂನಿಯನ್ ತಂಡವನ್ನು ಸೋಲಿಸಿತು. ಮ್ಯಾಜಿಸೆನ್ ಒಂದನೇ ಮತ್ತು 36ನೇ ನಿಮಿಷ ಗೋಲು ಗಳಿಸಿದರೆ, ಇನ್ನೊಂದು ಗೋಲು ಆಂಟೊನಿಯೊ (38ನೇ ನಿ.) ದಾಖಲಿಸಿದರು.

ಎಫ್‌ಸಿಬಿಯು ತಂಡದ ಥೊಕ್‌ಚೊಮ್ ಸಿಂಗ್ (ಎಡ) ಮತ್ತು ಥಾಂಕೊ ಸ್ಟೂಡೆಂಟ್ಸ್‌ನ ಆದಿತ್ಯ ನಡುವೆ ಚೆಂಡಿಗಾಗಿ ಪೈಪೋಟಿ– ಪ್ರಜಾವಾಣಿ ಚಿತ್ರ/ ಎಸ್.ಕೆ. ದಿನೇಶ್

ಮುಂಬೈ ರೇಸ್

ಲೆಗಾರ್ಡ್ ಗೆಲ್ಲುವ ನಿರೀಕ್ಷೆ

ಜರ್ವಾರಿ ಎಸ್.ಪೂನಾವಾಲ ಇಂಡಿಯನ್ ಟರ್ಫ್ ಇನ್ವಿಟೇಶನ್ ಕಪ್ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜೂಲಿಯೆಟ್ ಈ ರೇಸ್‌ನಲ್ಲಿ ಗೆಲ್ಲುವ ಫೇವರಿಟ್ ಎನಿಸಿದೆ. ಮಧ್ಯಾಹ್ನ 1.15ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಡಿಯರ್ ಲೇಡಿ 1, ಹಾಕ್ ಆಫ್ ದಿ ವಿಂಡ್ 3, ಓ ಹನ್ನಿ 8
2ನೇ ರೇಸ್: ಮಲ್ಟಿಫೆಸೆಟೆಡ್ 4, ಐರನ್ ಏಜ್ 3, ಸ್ಮಾಶಿಂಗ್ ಬ್ಲೂ 6
3ನೇ ರೇಸ್: ಕಾಸ್ಮಿಕ್ ರೇ 7, ರಾಂಬನ್‌ಕ್ಷಿಯಸ್ 8, ಬಾರ್ನ್ ಕ್ವೀನ್ 6
4ನೇ ರೇಸ್: ಅಶ್ವ ಬ್ರಾವೊ 1, ಸುಲ್ತಾನ್ ಸುಲೈಮಾನ್ 3, ವಿಕ್ಟೋರಿಯಸ್ ಸೆರ್ಮನ್ 4
5ನೇ ರೇಸ್: ಮಿರಾಕಲ್ 6, ಪೆಟ್ರೋನಿಯಾ 7, ಕ್ವೀನ್ ಓ ವಾರ್ 8
6ನೇ ರೇಸ್: ಲೆಗಾರ್ಡ್ 1, ಜೂಲಿಯೆಟ್ 5, ಪಾರಿಸಿಯನ್ 2
7ನೇ ರೇಸ್: ಮೈ ಒಪಿನಿಯನ್ 3, ಸಲಾಜರ್ 4, ಥಿಯಾನ್ 5.

ಉತ್ತಮ ಬೆಟ್: ಕಾಸ್ಮಿಕ್ ರೇ

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6